ಮನುಷ್ಯ ಜಾತಿ
ತಾನೊಂದೆ ವಲಂ

ಕನ್ನಡ ನಾಡಿನ ಚರಿತ್ರೆ

ಭಾಗ-ಒಂದು

ಡಾ. ಬಿ. ಎ. ಸಾಲೆತ್ತೂರೆ
ಡಾ. ದೇಸಾಯಿ ಪಾಂಡುರಂಗರಾಯರು

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು-೫೬೦೦೧೮

ಕನ್ನಡ ನಾಡಿನ ಚರಿತ್ರೆ

ಭಾಗ – ೧

ಡಾ. ಬಿ.ಎ. ಸಾಲೆತ್ತೂರೆ
ಡಾ. ದೇಸಾಯಿ ಪಾಂಡುರಂಗರಾಯರು

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

KANNADA NAADINA CHARITRE - BHAGA-1 **-** History of Kannada Nadu - ***part I*** by Dr. B.A. Saalethure, Dr. Desai Panduranga Rao and published by **Kannada Sahitya Parishattu,** Pampa Mahakavi Road, Chamarajapete, Bengaluru - 560018 Pages : vi + 128 Price : 90=00; **2015**

ಮುದ್ರಣದ ವರ್ಷ : ೨೦೧೫

ಪ್ರತಿಗಳು : ೧೦೦೦

ಬೆಲೆ : ತೊಂಬತ್ತು ರೂಪಾಯಿಗಳು

ಮುಖಪುಟ ವಿನ್ಯಾಸ : ಫ್ಲವರ್ ಗ್ರಾಫಿಕ್

ಮುದ್ರಣ : ಬಿ.ಎಂ.ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೧೮

ಅಧ್ಯಕ್ಷರ ನುಡಿ

ಕನ್ನಡ ಪುಸ್ತಕ ಪ್ರಕಾಶನೋದ್ಯಮ ಇಂದು ಹುಲುಸಾಗಿ ಬೆಳೆದಿದೆ. ವರ್ಷಕ್ಕೆ ಪ್ರಥಮಾವೃತ್ತಿಯ ಸುಮಾರು ಮೂರು ಸಾವಿರಕ್ಕೂ ಹೆಚ್ಚು ಪುಸ್ತಕಗಳು ಪ್ರಕಟವಾಗುತ್ತಿವೆ. ಅವಲ್ಲದೆ ಸಹಸ್ರಾರು ಮರುಮುದ್ರಣಗಳು ಹಾಗೂ ಲೆಕ್ಕಕ್ಕೆ ಬಾರದ ಇತರ ಸಾವಿರಾರು ಪುಸ್ತಕಗಳು ಪ್ರಕಟಣೆಯಾಗುತ್ತಿವೆ. ಈ ಉದ್ಯಮಕ್ಕೆ ಸಾರ್ವಜನಿಕ ಕ್ಷೇತ್ರದ ಕೊಡುಗೆಯೂ ಕಡಿಮೆಯಲ್ಲ. ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳು, ವಿವಿಧ ಅಕಾಡೆಮಿಗಳು, ಪುಸ್ತಕ ಪ್ರಾಧಿಕಾರ, ಸಾಹಿತ್ಯ ಪರಿಷತ್ತಿನಂಥ ಸಾರ್ವಜನಿಕ ಸಂಸ್ಥೆಗಳು ನಿರಂತರವಾಗಿ ಪುಸ್ತಕಗಳನ್ನು ಪ್ರಕಟಿಸುತ್ತಲಿವೆ. ಖಾಸಗಿ ಪ್ರಕಾಶನ ಸಂಸ್ಥೆಗಳಂತೂ ಪೈಪೋಟಿಯಿಂದಲೇ ಪುಸ್ತಕ ಪ್ರಕಾಶನದಲ್ಲಿ ತೊಡಗಿವೆ.

ಸಮಗ್ರ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆ ಎಂಬ ಹೆಗ್ಗಳಿಕೆಗೆ ಭಾಜನವಾಗಿರುವ, ೧೯೧೫ರಲ್ಲಿ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತು, ಶತಮಾನೋತ್ಸವದ ಹೊಸ್ತಿಲಲ್ಲಿದೆ. ಕಳೆದ ೯೯ ವರ್ಷಗಳಿಂದಲೂ ಕನ್ನಡ ಗ್ರಂಥಗಳ ಪ್ರಕಟಣೆಯನ್ನು ನಿರಂತರವಾಗಿ ಮಾಡುತ್ತಾ ಬಂದಿರುವ ಪರಿಷತ್ತು ಸುಮಾರು ಒಂದು ಸಾವಿರದ ನಾಲ್ಕುನೂರಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿರುತ್ತದೆ. ಸರಿಸುಮಾರು ಒಂದು ಶತಮಾನದಷ್ಟು ಕಾಲಾವಧಿಯ ನಿರಂತರತೆ ಹಾಗೂ ಕೃತಿಗಳ ಮೌಲಿಕತೆಯ ದೃಷ್ಟಿಯಿಂದ ಇದೊಂದು ಅಪೂರ್ವ ದಾಖಲೆಯಾಗಿದೆ. ಕನ್ನಡ ಪ್ರಕಟಣಾ ಚರಿತ್ರೆಯಲ್ಲಂತೂ ಅನನ್ಯವೇ ಸರಿ.

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮರುಮುದ್ರಣಗೊಳ್ಳುತ್ತಿರುವ ಮತ್ತು ಹೊಸದಾಗಿ ಮುದ್ರಿತವಾಗುತ್ತಿರುವ ವಿವಿಧ ಪ್ರಕಾರಗಳ ಪುಸ್ತಕಗಳನ್ನು ಸಹೃದಯರು ಮೆಚ್ಚಿ ಸ್ವೀಕರಿಸಲು ಯೋಗ್ಯವಾಗುವಂತೆ ಆಕರ್ಷಕ ವಿನ್ಯಾಸಗಳಲ್ಲಿ ಸಿದ್ಧಪಡಿಸಿದ ಮೇಲೆ ಅವುಗಳ ಮಾರಾಟದ ಪ್ರಮಾಣ ಹೆಚ್ಚುತ್ತಿದೆ. ಓದುಗರು ಬಯಸುವ ಪುಸ್ತಕಗಳನ್ನು ಅವರ ಕೈಗೆ ತಲುಪುವಂತೆ ಮಾಡುವುದೇ ಪುಸ್ತಕೋದ್ಯಮದ ಪ್ರಾಥಮಿಕ ಆಶಯ. ಈ ಉದ್ಯಮವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಕಾಲಕಾಲಕ್ಕೆ ಬದಲಾಗುತ್ತಿರುವ ಓದುಗರ ಅಭಿರುಚಿಗೆ ಸ್ಪಂದಿಸುತ್ತ, ಆ ಕ್ಷೇತ್ರದಲ್ಲಿ ಬಹುವೇಗವಾಗಿ ಸಾಗುತ್ತಿರುವ ಪ್ರಕಾಶಕರ ನಡುವೆ ಕನ್ನಡ ಅಕ್ಷರ ಸೇವೆ ಮಾಡುತ್ತಿದ್ದೇವೆಂದು ಭಾವಿಸಿ ಕನ್ನಡ ಸಾಹಿತ್ಯ ಪರಿಷತ್ತು ತಣ್ಣಗೆ, ನಿರುಮ್ಮಳವಾಗಿ ಇರುವ ಕಾಲ ಮುಗಿದುಹೋಗಿದೆ. ಹೊಸಕಾಲದ ಅಗತ್ಯಕ್ಕೆ ಅನುಗುಣವಾಗಿ ಬದಲಾಗುವುದು ಅನಿವಾರ್ಯವಾಗಿದೆ.

ಓದುಗರಿಂದ ಬೇಡಿಕೆ ಇರುವ ದೃಷ್ಟಿಯಿಂದ ಡಾ. ಬಿ.ಎ. ಸಾಲೆತ್ತೂರೆ ಮತ್ತು ಡಾ. ದೇಸಾಯಿ ಪಾಂಡುರಂಗರಾಯ ಅವರ 'ಕನ್ನಡ ನಾಡಿನ ಚರಿತ್ರೆ' ಮೊದಲನೆಯ ಭಾಗವನ್ನು ಪುನರ್ ಮುದ್ರಿಸಲಾಗುತ್ತಿದೆ.

ಈ ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿದ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿವರ್ಗಕ್ಕೆ ಹಾಗೂ ಈ ಕಾರ್ಯದಲ್ಲಿ ಸಹಕಾರ ನೀಡಿದ ಪ್ರಕಟಣಾ ಸಮಿತಿಯ ಎಲ್ಲಾ ಸದಸ್ಯರಿಗೆ ನನ್ನ ಕೃತಜ್ಞತೆಗಳು.

೧೭-೦೪-೨೦೧೫

ಪುಂಡಲೀಕ ಹಾಲಂಬಿ
ಅಧ್ಯಕ್ಷರು

ಪ್ರಕರಣ ೧ : ಸಾಮಾಜಿಕ ಪರಿಸ್ಥಿತಿ

೧. ಸಮಾಜದ ರಚನೆ ಮತ್ತು ಚಲನವಲನಗಳು, ೨.ಸಾಮಾಜಿಕ ಪರಿವರ್ತನೆಗಳು, ೩. ಸಾಮಾಜಿಕ ಸಂಘ ಸಹಕಾರ, ೪. ವಿದ್ಯಾವಂತಿಕೆ, ೫. ವಾಙ್ಮಯ ವಿಕಾಸ, ೬. ಕನ್ನಡ ನಾಗರಿಕತೆ, ೭. ಕನ್ನಡ ಸಂಸ್ಕೃತಿ, ೮.ಜನಜೀವನ.

ಪ್ರಕರಣ ೨ : ಆರ್ಥಿಕ ಪರಿಸ್ಥಿತಿ

೧. ಪ್ರಾಕೃತಿಕ ಸಂಪತ್ತು, ೨. ಕೃಷಿ, ೩. ಉದ್ಯೋಗಗಳು

೪. ವ್ಯಾಪಾರಾಭಿವೃದ್ಧಿ, ೫. ವ್ಯಾಪಾರ ಸಾಧನಗಳು

೬. ಆಯಾತ – ನಿರ್ಯಾತ, ೭. ನಾಣ್ಯ – ಚಲನ

೮. ಔದ್ಯೋಗಿಕ ಸಹಕಾರ ಸಂಘಟನೆ, ೯. ರಾಷ್ಟ್ರೀಯ ಧನ

೧೦. ಜನ ಸಂಖ್ಯೆ, ೧೧. ಆರ್ಥಿಕ ತರಗತಿ.

ಪರಿವಿಡಿ


ಕನ್ನಡನಾಡು

1

ಕನ್ನಡ ನಾಡಿನ ಚರಿತ್ರೆ

3

೧ನೆಯ ಅಧ್ಯಾಯ : ರಾಜಕೀಯ ಚರಿತ್ರೆ

ಪ್ರಕರಣ – ೧

೧. ತಿಳಿವಳಿಕೆಗೆ ಸಾಧನಗಳು

ನಮ್ಮ ಕರ್ನಾಟಕದಂತೆ ಸಂತತವಾದ ಮತ್ತು ಕೀರ್ತಿಯುತವಾದ ಚರಿತ್ರೆಯುಳ್ಳ ಪ್ರಾಂತಗಳು ಭರತಖಂಡದಲ್ಲಿ ಹಲವಿಲ್ಲ. ಆ ಚರಿತ್ರೆಯನ್ನು ನಮಗೆ ತಿಳಿಸುವ ಅನೇಕ ಆಧಾರಗಳಲ್ಲಿ ಪ್ರಾಚೀನ ಅವಶೇಷಗಳು, ಕಲ್ಲು, ತಾಮ್ರಪಟ, ಕಂಬ, ದೇವಾಲಯ ಮತ್ತು ಸಾರ್ವಜನಿಕ ಕಟ್ಟಡಗಳ ಗೋಡೆಗಳ ಮೇಲೆ ಕೊರೆದ ಶಾಸನಗಳು, ವಾಸ್ತುಶಿಲ್ಪದ ಸ್ಮಾರಕಗಳು, ಚಿನ್ನ ಬೆಳ್ಳಿ, ತಾಮ್ರದ ನಾಣ್ಯಗಳು ಪರಂಪರಾಗತವಾಗಿ ಬಂದ ವೃತ್ತಾಂತಗಳು ಹೊರ ದೇಶ ಪ್ರವಾಸಿಗಳ ಬರಹಗಳು ಮತ್ತು ಸಾಹಿತ್ಯ ಕೃತಿಗಳು – ಇವುಗಳು ಮುಖ್ಯವಾದವು. ಇವೆಲ್ಲದರ ನೆರವಿನಿಂದಲೇ ಕನ್ನಡ ನಾಡಿನ ಚರಿತ್ರೆಯನ್ನು ಬಹುಮಟ್ಟಿನ ನಿಷ್ಕರ್ಷೆಯಿಂದ ಬರೆಯಲು ಶಕ್ಯವಾಗಿರುವುದು.

ಇವುಗಳಲ್ಲಿ ಅತಿ ಹಳೆಯವೆಂದರೆ, ಕ್ರಿಪೂ. ಸಾವಿರಾರು ವರ್ಷಗಳ ಹಿಂದಿನ **ಪ್ರಾಚ್ಯ ಆಧಾರಗಳು**: ಹೊಸ ಶಿಲಾಯುಗ, ಪ್ರಾಚೀನ ಶಿಲಾಯುಗ, ಲೋಹ ಯುಗಗಳ ನಾಗರಿಕತೆಗಳೂ ಕುಬ್ಜರ ಕಾಲದ ಮೊದಮೊದಲ ಕಾಲಕ್ಕೂ ಸಂಬಂಧಿಸಿದವು. ಆಗ ದಕ್ಷಿಣ ಭರತಖಂಡದ ಮತ್ತು ಕರ್ನಾಟಕ ಭೂರಚನೆ ಕೂಡ ಈಗಿಗಿಂತ ಸ್ವಲ್ಪ ಬೇರೆಯಾಗಿ ಇದ್ದಿರಬಹುದು. ಸಿಕ್ಕಿರುವ ಹಲವು ಪ್ರಾಚ್ಯಾಧಾರಗಳಲ್ಲಿ ನಿಷ್ಕೃಷ್ಟತೆಯ ದೃಷ್ಟಿಯಿಂದ, ಮಡಕೆಗಳು, ಮಣ್ಣಿನ ಸಾಮಾನು, ಇಟ್ಟಿಗೆಗಳು ಮತ್ತು ಗಾರೆಯ ಕೆಲಸ – ಇವುಗಳಿಂದ ಪಡೆಯಬಹುದಾದ ತೀರ್ಮಾನ ಖಂಡಿತವಾದದ್ದು; ಹಿಂದಿನ ಕಾಲಕ್ಕೆ ಸಂಬಂಧಿಸಿದ ವಿವರಗಳನ್ನು ಕುರಿತು ಇವು ಬಹು ಖಚಿತವಾದ ಸಂಗತಿಗಳನ್ನು ತಿಳಿಸುವುವು. ಮುಖ್ಯತೆಯಲ್ಲಿ ಇವಕ್ಕೆ ಎರಡನೆಯದಾಗಿರುವುವು. ಮಣ್ಣಿನಿಂದ ಮಾಡಿದ ಆಯುಧ, ಉಪಕರಣಗಳು; ದಿಬ್ಬಗಳು; ತಾಮ್ರ, ಬೆಳ್ಳಿ, ಚಿನ್ನದ ಒಡವೆಗಳು; ಭಸ್ಮಸಂಚಯನದ ಭಾಂಡಗಳು; ಮನುಷ್ಯರ ಮತ್ತು ಪ್ರಾಣಿಗಳ ಆಕೃತಿ ಶಿಲ್ಪದ ಅವಶೇಷಗಳು – ಇವು ಚರಿತ್ರೆಯ ಪೂರ್ವಕಾಲದ ನಮ್ಮ ನಾಡಿನ ಕಥೆಯನ್ನು ರಚಿಸಲು ಅಗತ್ಯವಾಗುವ ವಿವರಗಳನ್ನೆಲ್ಲಾ ಬೇಕಾದಷ್ಟು ಒದಗಿಸುವುವು. ಹೀಗೆ ಮುಖ್ಯವಾದ ಅನೇಕ ಹೊಸ ಸಂಗತಿಗಳನ್ನು ತೋರಿಸಿದ ಪ್ರದೇಶ ಮೈಸೂರು ಸಂಸ್ಥಾನದಲ್ಲಿರುವ **ಚಂದ್ರವಳ್ಳಿ**. ಇದಕ್ಕೆ ಮೂರು ಸಾವಿರ ವರ್ಷಗಳಿಗೆ ಮೀರಿದ ಪ್ರಾಚೀನತೆ ಇದೆ ಎನ್ನುತ್ತಾರೆ.

ಮೇಲಿನ ಆಧಾರಗಳಿಗಿಂತ ಹೆಚ್ಚು ಸಂಖ್ಯೆಯ, ಆದರೆ ಸುಮಾರು ಈಚಿನವೆನ್ನಬಹುದಾದ ಆಧಾರಗಳು, **ಶಾಸನಗಳು** (ಅಥವಾ ಸ್ಮಾರಕ ಲೇಖನಗಳು,)

ಇವು ಹೇರಳವಾಗಿರುವುದು ಕರ್ನಾಟಕದ ಅದೃಷ್ಟ. ಕ್ರಿ.ಶ. ೫ನೆಯ ಶತಮಾನದಿಂದ ಈಚಿನ ಚರಿತ್ರೆಯ ವಿಷಯವಾಗಿಯಂತೂ ಇವು ಅತಿ ಮುಖ್ಯವಾದವು; ರಾಜಕೀಯ ಮತ್ತು ಸಾಮಾಜಿಕ ಚರಿತ್ರೆಯನ್ನು ತಿಳಿಯಬಯಸುವ ವಿದ್ಯಾರ್ಥಿಗಳಿಗೆ ಬಹಳ ಬೆಲೆಯುಳ್ಳವು. ಕನ್ನಡ ನಾಡಿನಲ್ಲಿರುವ ಅಸಂಖ್ಯಾತವಾದ ಶಿಲಾ ಮತ್ತು ತಾಮ್ರ ಶಾಸನಗಳಲ್ಲಿ ದೊರಕುವ ವೃತ್ತಾಂತ ಚಿತ್ತಾಕರ್ಷಕವಾಗಿ, ಸಂಪೂರ್ಣವಾಗಿ, ವಿಸ್ತಾರವಾಗಿ ಇದೆ. ಚರಿತ್ರೆಯ ಕಾಲಮಾನದ ದೃಷ್ಟಿಯಿಂದ ಅವು ಅತಿ ಸಣ್ಣ ಅಂಶದಲ್ಲಿ ಕೂಡ ಖಚಿತವಾದ ವಿವರಗಳನ್ನು ತಿಳಿಸುತ್ತವೆ. ಎಂದರೆ ಈ ಶಾಸನಾದಿಗಳ ಸಹಾಯದಿಂದಲೇ ಸಪ್ರಮಾಣವಾದ ತಳಹದಿಯ ಮೇಲೆ ಕರ್ನಾಟಕದ ಚರಿತ್ರೆಯನ್ನು ಸ್ಥಾಪಿಸಲು ಶಕ್ಯವಾದದ್ದು. ಶಿಲಾ ಮತ್ತು ತಾಮ್ರ ಶಾಸನದ ಈ ಪ್ರಮಾಣಗಳು ಹಲವು ಕರ್ನಾಟಕದಲ್ಲಿ ಎಲ್ಲ ಕಡೆಗಳಲ್ಲೂ ಹರಡಿ, ಸಿಕ್ಕಿವೆ; ಅಲ್ಲದೆ ಇವು ದೇಶದ ಚರಿತ್ರೆಯ ಎಲ್ಲ ಕಾಲ ಭಾಗಗಳಿಗೂ ಸಂಬಂಧಿಸಿದಂಥವು. ಈ ಆಧಾರಗಳಲ್ಲಿ ಅತಿ ಮುಂಚಿತವಾಗಿ, ಬ್ರಾಹ್ಮಿ ಲಿಪಿಯಲ್ಲಿ ಬರೆದ ಮೌರ್ಯ ಚಕ್ರವರ್ತಿ ಅಶೋಕನ ಪ್ರಖ್ಯಾತ ನಿಯಮಶಾಸನಗಳು ಸಿಕ್ಕಿರುವುದೂ ಚಿತ್ರದುರ್ಗ ಜಿಲ್ಲೆಯಲ್ಲಿಯೇ. ಆಳುವರಸರ ಆಡಳಿತದ ಭಾಷೆ ಪ್ರಾಕೃತವಾಗಿದ್ದಾಗ ಎರಡು ಮೂರು ಶತಮಾನಗಳ ಕಾಲ ಈ ಲಿಪಿ ಕರ್ನಾಟದಲ್ಲಿ ಸಾಮಾನ್ಯರ ಬಳಕೆಯಲ್ಲಿ ಇದ್ದಿರಬೇಕು; ಕ್ರಿ.ಶ. ೫ನೆಯ ಶತಮಾನಕ್ಕೆ ಬಂದಮೇಲೆ ಮಾತ್ರವೇ ನಮಗೆ ಸ್ವಲ್ಪ ಕನ್ನಡ, ಸ್ವಲ್ಪ ಸಂಸ್ಕೃತದಲ್ಲಿ ಬರೆದ ಮೊದಲ ಶಿಲಾಶಾಸನ ಸಿಕ್ಕಿರುವುದು. ಈ ಶಿಲಾಶಾಸನ ಮೈಸೂರು ಸಂಸ್ಥಾನದ ಬೇಲೂರು ಹೋಬಳಿ ಹಲ್ಮಿಡಿಯಲ್ಲಿ ಸಿಕ್ಕಿದ್ದು. ಅಲ್ಲಿಂದ ಈಚೆಗೆ ಶಿಲಾ ಮತ್ತು ತಾಮ್ರ ಶಾಸನಗಳು ಹೆಚ್ಚು ಸಾಮಾನ್ಯವಾಗುತ್ತ ಬಂದು ವಿಜಯನಗರದ ಹೊತ್ತಿಗೆ ಅತ್ಯಧಿಕ ಸಂಖ್ಯೆಯಾಗುವುವು.

ಇವಕ್ಕೆ ಸರಿಸಮವಾಗಿ ಕುತೂಹಲಜನಕವೂ ಬೆಲೆಯುಳ್ಳವೂ ಆಗಿರುವುದೆಂದರೆ ಕರ್ನಾಟಕದಲ್ಲಿ ದೊರೆತಿರುವ **ನಾಣ್ಯಗಳು**. ಅವು ಅನೇಕ ರಾಜಮನೆತನಗಳಿಗೆ ಸಂಬಂಧಿಸಿದುವು; ರೋಮನರ ಕಾಲದಿಂದ ಹಿಡಿದು ನಮ್ಮ ಕಾಲದವುಗಳವರೆಗೂ ಇವೆ. ಇತರ ಮೂಲಗಳಿಂದ ಸಂಗ್ರಹಿಸಿದ ಸಂಗತಿಗಳಿಗೆ ಇವು ಬಹುಮಟ್ಟಿನ ಸಹಾಯ ಪ್ರಮಾಣ ಒದಗಿಸುವುವು. ಈ ಬಗೆಯಲ್ಲಿ ಕೂಡ ಅತಿ ಪ್ರಾಚೀನವಾಗಿ, ಅತಿ ಬೆಲೆಯುಳ್ಳ ನಾಣ್ಯಗಳನ್ನು ಒದಗಿಸಿರುವುದು ಚಿತ್ರದುರ್ಗ ಜಿಲ್ಲೆಯೇ.

ಮರ, ಕಲ್ಲು, ಮಣ್ಣುಗಳಿಂದ ಕಟ್ಟಿದ ಕಟ್ಟಡಗಳೂ ಬಹು ಮುಖ್ಯವಾದುವೇ. ಅದರಲ್ಲಿಯೂ ಗೋಡೆ ಗೋಪುರಗಳಲ್ಲಿ ಕಂಡರಿಸಿ ಉಬ್ಬಿ ಕಾಣುವ **ಶಿಲ್ಪಕೃತಿ**ಗಳು ಜನದ ರಾಜಕೀಯ ಮತ್ತು ಸಾಮಾಜಿಕ ಘಟನೆಗಳಿಗೆ ಸಂಬಂಧಿಸಿದ ಸಂಗತಿಗಳನ್ನು ಚಿತ್ರಿಸುವುದಾಗಿದ್ದರಂತೂ ಮತ್ತೂ ಉತ್ತಮವಾದುವು. ವಾಸ್ತುಶಿಲ್ಪ ದೃಷ್ಟಿಯಿಂದ ಬಹಳ ಹೆಚ್ಚಿನ ಆಸಕ್ತಿ ಹುಟ್ಟಿಸುವ ಮುಖ್ಯ ಕೇಂದ್ರಗಳು ಎರಡು – ಮೈಸೂರು ಸಂಸ್ಥಾನದ ಹಳೆಯಬೀಡು ಮತ್ತು ಬಳ್ಳಾರಿ ಜಿಲ್ಲೆಯ ವಿಜಯನಗರ (ಹಂಪಿ). ಈ ಬಗೆಯ ವಾಸ್ತುಶಿಲ್ಪದ ಹಳೆಯುಳಿಕೆಗಳಲ್ಲಿ ಚರಿತ್ರೆಯ ದೃಷ್ಟಿಯಿಂದ

ಪ್ರಯೋಜನಕಾರಿಯಾಗಿರುವ, ಕಗ್ಗಲ್ಲಿನಲ್ಲಿ ಕೊರೆದ ವಿಗ್ರಹಗಳನ್ನೂ ಸೇರಿಸಬೇಕು. ಪ್ರಪಂಚದಲ್ಲೆಲ್ಲ ಒಂದೇ ಕಲ್ಲಿನಲ್ಲಿ ಕೆತ್ತಿ ಸ್ವತಂತ್ರವಾಗಿ ನಿಂತಿರುವ ಪ್ರತಿಮೆಗಳು ಮೂರೂ ಕರ್ನಾಟಕದಲ್ಲಿಯೇ ಇವೆ. ಮೂರೂ ಗೊಮ್ಮಟೇಶ್ವರ ವಿಗ್ರಹಗಳು; ಒಂದು ಶ್ರವಣಬೆಳ್ಗೊಳದ್ದು, ಒಂದು ಕಾರ್ಕಳದ್ದು, ಇನ್ನೊಂದು ವೇಣೂರಿನದು. ಶ್ರವಣಬೆಳ್ಗೊಳ ಹಾಸನ ಜಿಲ್ಲೆಯಲ್ಲಿದೆ. ಕಾರ್ಕಳ, ವೇಣೂರು ಎರಡೂ ದಕ್ಷಿಣ ಕನ್ನಡ ಜಿಲ್ಲೆಯ ಸ್ಥಳಗಳು.

ಪರಂಪರೆಯಾಗಿ ಬಂದ **ಜನವದಂತಿ** ಕೂಡ ಹೀಗೆಯೇ ಚರಿತ್ರೆಯ ಕೆಲಸಕ್ಕೆ ನೆರವಾಗುವುದು. ಕರ್ನಾಟಕಕ್ಕೆ ಸಂಬಂಧಿಸಿದ ಬೆಲೆಯುಳ್ಳ ಅನೇಕ ಸಂಗತಿಗಳಿರುವುದರಿಂದ, ಹಿಂದೂ ಇತಿಹಾಸ ಗ್ರಂಥಗಳು, ಪುರಾಣಗಳು, ಜೈನ ಸಂಪ್ರದಾಯದ ಕೃತಿಗಳು, ಬೌದ್ಧರ ಜಾತಕ ಕಥೆಗಳು, ಮಹಾವಂಶದಲ್ಲಿನಂಥ ಕಥನಗಳು ಹೀಗೆಯೇ ಉಪಯುಕ್ತವಾದುವು. ಪರಂಪರಾಗತವಾಗಿ ಬಂದ ಸಾಧನಗಳಲ್ಲಿ ಕರ್ನಾಟಕ **ಜನಪದಸಾಹಿತ್ಯ**ವನ್ನು ಸೇರಿಸಿಕೊಳ್ಳಬಹುದು. ಅದರ ಯೋಗ್ಯತೆ ಹಿರಿಮೆಗಳಿಗೆ ತಕ್ಕಷ್ಟು ಎಚ್ಚರಿಕೆಯಿಂದಲೂ, ಪರಿಶ್ರಮದಿಂದಲೂ ಈ ಭಾಗದಲ್ಲಿ ವ್ಯಾಸಂಗ ನಡೆದಿಲ್ಲ.

ಜನಪದ ಸಾಹಿತ್ಯಕ್ಕಿಂತ ಮುಖ್ಯವಾದ ಸಾಧನ, **ಸಾಹಿತ್ಯ**. ಇದು ಎರಡು ತೆರನಾಗಿದೆ. ಹೊರನಾಡಿನವರದು ಮತ್ತು ಒಳನಾಡಿನವರದು. ಮೊದಲನೆಯದರಲ್ಲಿ ಮೊದಮೊದಲು ಬಂದ ಗ್ರೀಕ್ ಪ್ರವಾಸಿಗಳ ಮತ್ತು ತೊಲೆಮಿ ಮುಂತಾದ ಭೂಗೋಳ ಶಾಸ್ತ್ರಜ್ಞರ ಬರವಣಿಗೆ; ೨ನೆಯ ಶತಮಾನದಲ್ಲಿಯೂ, ಈಚೆಗೆ ಬಂದ ಇತರರ ಬರಹ; ಚೀನ, ಅರೇಬಿಯಾ, ಪರ್ಶಿಯಾ, ಪೋರ್ಚುಗಲ್, ಸ್ಪೆಯಿನ್, ಹಾಲೆಂಡ್, ಫ್ರಾನ್ಸ್, ಇಂಗ್ಲೆಂಡ್ ದೇಶಗಳಿಂದ ಬಂದ ಪ್ರವಾಸಿಗಳು ಬರೆದ ಬರವಣಿಗೆ, ಈ ಹೊರ ಪ್ರಮಾಣಗಳು ಸಿಕ್ಕುತ್ತವೆ. ಒಳದೇಶದವರ ವರ್ಣನೆಗಳಲ್ಲಿ ಸಿಕ್ಕದಿರುವ ಉಪಯುಕ್ತ ವಿವರಗಳು ಈ ಬರಹಗಳಲ್ಲಿ ದೊರೆಯುವುವು. ಪ್ರಾಕೃತ, ಸಂಸ್ಕೃತ, ತಮಿಳು, ಕನ್ನಡ, ಪರ್ಶಿಯನ್ ಮತ್ತು ಅನೇಕ ಒಳಗಿನ ಸಾಹಿತ್ಯ ಪ್ರಮಾಣಗಳೂ ಇವೆ.

೨. ಪ್ರಾಚೀನತೆ

ಪುರಾತನ ಕಾಲದಿಂದ ಕರ್ನಾಟಕ ಒಂದು ಪ್ರತ್ಯೇಕ ರಾಜಕೀಯ ಮಂಡಲವಾಗಿದೆ. ಹಿಂದಿನ ಕರ್ನಾಟಕದ ಸಂಸ್ಕೃತಿ ಮೊಹಂಜೊದಾರೋ ಮತ್ತು ಹರಪ್ಪಾ ನಾಗರಿಕತೆಗಳಿಗೆ ಖಚಿತವಾಗಿ ಯಾವ ರೀತಿ ಸಂಬಂಧಿಸಿದೆ ಎಂದು ಹೇಳಲು ಇನ್ನೂ ಸಮಯ ಬಂದಿಲ್ಲ. ಆದರೂ ಈಗ ಚಂದ್ರವಳ್ಳಿಯಲ್ಲಿ ದೊರಕಿರುವ ಪ್ರಾಚೀನ ಶಿಲಾಯುಗದ ಮತ್ತು ತಾಮ್ರಯುಗದ ಆಧಾರಗಳಿಂದ ಸ್ಥೂಲದೃಷ್ಟಿಯಲ್ಲಿ ಮೊದಲು ಕಾಣುವುದಕ್ಕಿಂತ ಹೆಚ್ಚಿನ ಬಾಂಧವ್ಯ ಮೂಲಕರ್ನಾಟಕ ಚರಿತ್ರೆಗೂ ಮೊಹಂಜೊದಾರೋ – ಹರಪ್ಪಾ ಚರಿತ್ರೆಗಳಿಗೂ ಇದೆ ಎನ್ನಲು ಅವಕಾಶವಿದೆ.

ಮಹಾಭಾರತ ಕಾಲದಲ್ಲಿ ಕರ್ನಾಟಕದ ಐದು ಕುಲಗಳನ್ನು ನಕುಲನು ಗೆದ್ದನೆಂದು ಹೇಳಿದೆ. ಕರ್ನಾಟಕ ಚರಿತ್ರೆಯ ಮುಂದಿನ ಹೆಜ್ಜೆ ಮೌರ್ಯರ ಕಾಲಕ್ಕೆ

ಕಾಣಿಸುವುದು. ಅಶೋಕ ಮಹಾಚಕ್ರವರ್ತಿ ತನ್ನ ಚಿರಸ್ಮರಣೀಯವಾದ ಶಾಸನಗಳನ್ನು ಬ್ರಹ್ಮಗಿರಿ, ಸಿದ್ಧಾಪುರ, ಜಟಿಂಗ ರಾಮೇಶ್ವರ, ಮಾಸ್ಕಿ ಮತ್ತು ಇತರ ಪ್ರದೇಶಗಳಲ್ಲಿ ಕಲ್ಲಮೇಲೆ ಕೆತ್ತಿಸಿದನು. ಅವೆಲ್ಲ ಬಹುತರ ಪ್ರಾಚೀನ ಕರ್ನಾಟಕದ ಸೀಮೆಗಳಲ್ಲೆ ಇದ್ದವು. ಶಾತಕರ್ಣಿಗಳ ಕಾಲದ ಹೊತ್ತಿಗೆ ನಮ್ಮ ನಾಡಿನ ಚರಿತ್ರೆ ಇನ್ನೊಂದು ಹೆಜ್ಜೆ ನಡೆದಿರುವುದು. ಅವರಿಗೆ ಪಡುವಲ ರಕ್ಷಕರೆಂಬ ಬಿರುದಿತ್ತು. (ಸು.ಕ್ರಿ.ಪೂ. ೧೯೪). ಪ್ರಾಚೀನ ಕರ್ನಾಟಕದ ಬಹಳ ಹೆಚ್ಚು ಭಾಗ ಶಾತಕರ್ಣಿಯ ಚಕ್ರಾಧಿಪತ್ಯದಲ್ಲಿ ಇದ್ದಂತೆ ಕಾಣುತ್ತದೆ. ಕ್ರಿ.ಪೂ. ೨ನೆಯ ಶತಮಾನ ಕರ್ನಾಟಕಕ್ಕೆ ಒಂದು ಬಗೆಯ ಸ್ವತಂತ್ರ ಬದುಕಿದ್ದಿತು ಎಂದು ನಂಬಿಕೆಯಿಂದ ಹೇಳಬಹುದಾದ ಅತಿ ಮುಂಚಿನ ಕಾಲವಾಗಿರಬಹುದು. ಅಂದಿನಿಂದ ನಮ್ಮ ನಾಡು ಒಂದು ಪ್ರಧಾನಪ್ರಾಂತ ಎಂಬಷ್ಟು ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡು ಬಂದಿತು ಎಂದುದಕ್ಕೆ ಕ್ರಿ. ಶ. ೧ ಮತ್ತು ೨ನೆಯ ಶತಮಾನಗಳ ಗ್ರೀಕ್ ಭೂಗೋಳ ಶಾಸ್ತ್ರಜ್ಞರ ಬರವಣಿಗೆಗಳಲ್ಲಿಯೂ ಕ್ರಿ. ಶ. ೨ನೆಯ ಶತಮಾನದ ಗ್ರೀಕ್ ಕನ್ನಡ ಪ್ರಹಸದಲ್ಲಿಯೂ ದೊರೆಯುವ ನಿದರ್ಶನಗಳು ಸ್ಥಾಪಕವಾಗಿವೆ. ಹಾಗೆಯೇ ಸಂಘ ಯುಗವೆಂದು ಕರೆಯುವ ಪ್ರಾಚೀನ ತಮಿಳು ಗ್ರಂಥಗಳಲ್ಲಿಯೂ ಈ ಬಗೆಯ ಪ್ರಮಾಣ ದೊರೆಯುವುದು. ಅವುಗಳಲ್ಲಿ ಕಡಲಕರೆ ಪಟ್ಟಣಗಳಾದ ಮಂಗಳೂರಿನಂತಹ ಪಟ್ಟಣದ ಹೆಸರಲ್ಲದೆ ಒಳನಾಡಿನ ಪಟ್ಟಣಗಳಾದ ಪುನ್ನಾಡಿನಂತಹ ಹೆಸರುಗಳೂ ಹೇಳಿವೆ.

೩. 'ಕರ್ನಾಟಕ' ಪದದ ಅರ್ಥ

ಕರ್ನಾಟವೆಂಬ ಪದದ ನಿಷ್ಪತ್ತಿ ಹೇಗೆ ಎಂಬ ವಿಷಯದಲ್ಲಿ ಈಚೆಗೆ ಸ್ವಲ್ಪ ವಾದ ಉಂಟಾಗಿದೆ. ಕೆಲವರು ಕರ್ಣ + ಅಟ ಎಂದು ಅದನ್ನು ರೂಢಿಸಬೇಕು ಎಂದು ವಾದಿಸಿದರೆ ಇತರರು ಕರ್ನಾಟ ಎಂಬುದರಿಂದಲೇ – ಬಹುಶಃ ಕನ್ನಾಡು ಎಂಬುದರಿಂದಲೇ – ರೂಢಿಸಬೇಕೆಂದು ಹೇಳುತ್ತಾರೆ. ಸಂಸ್ಕೃತ ಮೂಲಗಳಿಂದಲೇ ಮಾತುಗಳ ನಿಷ್ಪತ್ತಿ ಬಯಸುವವರಿಗೆ ಕರ್ಣ + ಅಟ ಎಂಬ ರೂಪ ಎಷ್ಟೇ ಮೋಹಕವಾಗಿದ್ದರೂ ಆ ಮಾತಿಗೆ ಸಂಸ್ಕೃತವಲ್ಲದ ಮೂಲವೊಂದನ್ನು ಕಾಣಬೇಕೆನ್ನುವುದು ಸ್ವಾಭಾವಿಕ. ಮುಂಚಿನ ತಮಿಳು ಸಾಹಿತ್ಯದಲ್ಲಿರುವ ಪ್ರಮಾಣವನ್ನು ಶಾಸನಗಳಲ್ಲಿರುವದರೊಡನೆ ಹೋಲಿಸಿದರೆ ಇದಕ್ಕೆ ಸೂಚನೆ ದೊರೆಯುವುದು. ಶಿಲಪ್ಪದಿಕಾರಂ ಎಂಬ ತಮಿಳು ಮಹಾಕಾವ್ಯ ಕ್ರಿ.ಶ. ೨ನೆಯ ಶತಮಾನದವರೆಗಿನ ಯಾವುದೋ ಕಾಲಕ್ಕೆ ಸೇರಿದ್ದೆನ್ನುತ್ತಾರೆ. ಅದರಲ್ಲಿ ಕನ್ನಡರ್ ಎಂಬ ಮಾತಿದೆ. ಪಾಂಡ್ಯರ ದೊರೆ ಶಡೆಯನ್ ಪರಾಂತಕ (ಸು. ಕ್ರಿ.ಶ. ೭೭೦) ಎಂಬುವನ ವೇಳ್ವಿ ಕುಡಿ ಶಾಸನಗಳಲ್ಲಿ **ಕರ್ನಾಡಗನ್** ಎಂಬ ಮಾತಿದೆ. ಎರಡನ್ನೂ ಜೊತೆಯಾಗಿಟ್ಟು ಕೊಂಡು ಅದೇ ಕಾಲದಲ್ಲಿದ್ದ ತಮಿಳರ ಅಭಿಪ್ರಾಯವನ್ನು ಆಧಾರವಾಗಿ ತೆಗೆದುಕೊಂಡರೆ ಕರ್ನಾಡು ಅತಿ ಪ್ರಾಚೀನ ರೂಪ ಎಂದು ಖಂಡಿತವಾಗಿ ಹೇಳಲು

ಸಹಾಯವಾಗುತ್ತದೆ. **ಕರ್ನಾಡು** ಎಂಬ ಮಾತೇ ಶುದ್ಧ ದ್ರಾವಿಡ ಮೂಲದಿಂದ ಬಂದುದೆಂಬುದು, ಶಕ ೫೫೬ರ (ಕ್ರಿ.ಶ. ೬೩೪) ಗಂಗರಾಜ ಭೂವಿಕ್ರಮ ತಾಮ್ರ ಶಾಸನವನ್ನು ನೋಡಿದರೆ ತೆರೆದು ಕಾಣುವುದು. ಅದನ್ನು ಬಹುಮಟ್ಟಿಗೆ ಸಂಸ್ಕೃತದಲ್ಲಿ ಬರೆದಿದ್ದರೂ ಜನದ ನುಡಿಯನ್ನು ಅಲ್ಲಿ **ಕನ್ನಾಟಕ** ಎಂದು ಕರೆದಿದೆ. ಬಹುಶಃ ಆ ಮಾತಿನ ಅತಿ ಮೊದಲ ರೂಪ **ಕನ್ನಾಡು** ಇರಬೇಕು. ಹೆಸರುಗಳನ್ನೆಲ್ಲ ಸಂಸ್ಕೃತ ರೂಪಕ್ಕೆ ತಿರುಗಿಸುವ ಸರ್ವವ್ಯಾಪಕವಾದ ಆಗಿನ ಸಂಪ್ರದಾಯದ ಫಲವಾಗಿ ಆ ಮಾತನ್ನು ಕರ್ನಾಟ ಮತ್ತು ಕರ್ನಾಟಕವೆಂದು ತಿರುಗಿಸಿರಬೇಕು. ಆದ್ದರಿಂದಲೇ ಬಹುಶಃ ಕ್ರಿಶ. ೯೪೩ರ ಶಿಲಾಲೇಖವೊಂದರ ಸಂಸ್ಕೃತ ಭಾಗಗಳಲ್ಲಿ ಈ ಮಾತು **ಕರ್ಣಾಟ** ಎಂದಿರುವುದು. **ಕನ್ನಾಡು** ಅಥವಾ **ಕರ್ನಾಡು** ಎಂಬ ಪದದ ಮೂಲ ಅರ್ಥ "ಒಂದು ಮಹಾನಾಡು" ಅಥವಾ "ಒಂದು ಎತ್ತರವಾದ ನಾಡು" ಆಗಿದ್ದು, ಅದನ್ನು ಸಂಸ್ಕೃತಕ್ಕೆ ತಿರುಗಿಸಿದಾಗ ಅದು "ಮಹಾರಾಷ್ಟ್ರ"ವಾಗಿ ಆದುದು ಅಸಂಭವವಲ್ಲ. ಬಹುಶಃ ಇದೇ ಅರ್ಥದಲ್ಲಿಯೇ ಪಶ್ಚಿಮ ಚಾಲುಕ್ಯ ಚಕ್ರವರ್ತಿ ಎರಡನೆಯ ಪುಲಿಕೇಶಿಯ ವಿಸ್ತಾರವಾಥ ಚಕ್ರಾಧಿಪತ್ಯವನ್ನು ನಿರ್ದೇಶಿಸಲು ಅದನ್ನು ಉಪಯೋಗಿಸಿರುವುದು. ಆತನು (ಕ್ರಿ.ಶ. ೭ನೆಯ ಶತಮಾನ) ೯೯,೦೦೦ ಹಳ್ಳಿಗಳುಳ್ಳ ತ್ರಿಮಹಾರಾಷ್ಟ್ರಗಳಿಗೆ ಒಡೆಯನೆಂದು ಹೇಳಿದೆ. ಕ್ರಮವಾಗಿ ಮಹಾರಾಷ್ಟ್ರ ಎಂಬ ಹೆಸರು ಕರ್ನಾಟಕದ ಒಡಲಿನ ಉತ್ತರ ಭಾಗಗಳಿಗೂ, ಹೆಚ್ಚು ಪುರಾತನವಾದ ಕರ್ನಾಡು ಎಂಬ ಅಂಕಿತ, ದೇಶದ ಮಿಕ್ಕ ಭಾಗಕ್ಕೂ ಉಳಿದುಕೊಂಡಿರಬೇಕು.

೪. ಕರ್ನಾಟಕದ ವಿಸ್ತಾರ

ಕರ್ನಾಟಕ ಪದದ ಸರಿಯಾದ ನಿಷ್ಪತ್ತಿಯನ್ನೂ ಅರ್ಥವನ್ನೂ ಕಂಡುಹಿಡಿಯುವ ಪ್ರಯತ್ನದಲ್ಲಿ ಈಗ ನಮಗೆ ಯಾವ ತೊಂದರೆಯೇ ಇರಲಿ ಕ್ರಿ. ಶ. ೯ನೆಯ ಶತಮಾನದ ಪ್ರಖ್ಯಾತನಾದ ರಾಜಕವಿ ನೃಪತುಂಗನ ಪ್ರಕಾರವಾಗಿಯೂ ಕ್ರಿ.ಶ. ೧೯ನೆಯ ಶತಮಾನದ ನಂಜುಂಡಕವಿಯ ಪ್ರಕಾರವಾಗಿಯೂ ಗೋದಾವರಿಯಿಂದ ಕಾವೇರಿ ನದಿಯವರೆಗೂ ಕರ್ನಾಟ ಹಬ್ಬಿತ್ತು ಎಂಬುದು ನಿರ್ವಿವಾದ ಸಂಗತಿಯಾಗಿ ಕಾಣುತ್ತದೆ. **ಕವಿರಾಜಮಾರ್ಗ**ದಲ್ಲಿ ನೃಪತುಂಗನು ಗೋದಾವರಿಯಿಂದ ಕಾವೇರಿ ನದಿಯವರೆಗೂ ಇರುವ ನಾಡಿನಲ್ಲಿ ಕನ್ನಡ ಆಡುವರು, ವ್ಯವಸಾಯ ಮಾಡುವರು, ತಿರುಳು ಕನ್ನಡವನ್ನು ಕಿಸುವೊಳಲ್, ಪುಲಿಗೆರೆ, ಕೊಪಣ, ಒಂಕುಂದಗಳಲ್ಲಿ ಇರುವ ನಾಡಿನ ಭಾಗದಲ್ಲಿ ಆಡುತ್ತಿದ್ದರೆಂದು ಹೇಳಿರುವನು. ೧೬ನೆಯ ಶತಮಾನದಲ್ಲಿ ನಂಜುಂಡಕವಿ ತನ್ನ ಕುಮಾರರಾಮನ ಕಥೆಯನ್ನು ಬರೆದಾಗ ಕೂಡ, ಆಗ ಬಳಕೆಯಲ್ಲಿದ್ದ ತಿಳಿವಳಿಕೆಯಂತೆ ಈ ನಾಡಿನ ಉತ್ತರ ದಕ್ಷಿಣ ಮೇರೆಗಳು ಮೊದಲಿನವೇ ಆಗಿದ್ದವು. ಶಿಲಾ ಶಾಸನಗಳಲ್ಲಿಯೂ ತಾಮ್ರಶಾಸನಗಳಲ್ಲಿಯೂ ಕಾಣಬರುವ ಕೆಲವು ಸಂಗತಿಗಳಿಗೆ ಸಾಹಿತ್ಯದ ಪ್ರಮಾಣಗಳೂ ಸ್ಥಳದ ಹೆಸರುಗಳ ಪ್ರತ್ಯಯಗಳೂ ಪೋಷಣೆ ಕೊಡುವುವು. ಅವುಗಳಿಂದ ಪ್ರಾಚೀನ ಕರ್ನಾಟಕಕ್ಕೆ

ಉತ್ತರದ ಮೇರೆ ಎಂದು ರಾಜ ನೃಪತುಂಗನು ನುಡಿದದ್ದು ಸರಿ ಎಂದು ತೋರಿಬರುತ್ತದೆ. ಗೋದಾವರಿಯ ದಕ್ಷಿಣದ ಭೂಮಿ ಇಂದು ಬೊಂಬಾಯಿ ಪ್ರಾಂತ, ನಿಜಾಂಶಾಯಿ, ಮದ್ರಾಸ್ ಪ್ರಾಂತಗಳೆಂಬ ಮೂರು ರಾಜಕೀಯ ಮಂಡಲಗಳಿಗೆ ಹಂಚಿಹೋಗಿದೆ.[೧] ಪ್ರಾಚೀನ ಆಧಾರಗಳನ್ನು ನಿಷ್ಪಕ್ಷಪಾತವಾಗಿ ಪರಿಶೀಲಿಸಿದರೆ ಈ ಮೂರು ಪ್ರಾಂತಭಾಗಗಳು – ೧೬ನೆಯ ಶತಮಾನದಿಂದ ಈಚೆಗೆ ನಡೆದ ಪುನರ್ವ್ಯವಸ್ಥೆಗೆ ಮುಂಚೆ – ಸ್ವತಃ ಕರ್ನಾಟಕ ಭಾಗಗಳಾಗಿದ್ದವೆಂದು ಓದುಗರಿಗೆಲ್ಲ ಸ್ಥಿರಪಡುವುದು.

ಮೊದಲು ಮಧ್ಯಭಾಗವನ್ನು, ಎಂದರೆ ನಿಜಾಂಶಾಹಿಯ ಭಾಗವನ್ನು ತೆಗೆದುಕೊಳ್ಳೋಣ; ಈಗಿನ ನಿಜಾಂಶಾಹಿಯ ಅತಿ ಪಡುವಲ ಸ್ಥಾನದಿಂದ ಹಿಡಿದು, ಅತಿ ಮೂಡಲ ಸ್ಥಾನದವರೆಗೂ ನಾಡು ಕರ್ನಾಟಕವಾಗಿತ್ತು. ಈಗ ಔರಂಗಾಬಾದ್ ಜಿಲ್ಲೆಯೆಂದು ಕರೆಯುವ ನಿಜಾಂಶಾಹಿಯ ಅತಿ ಪಡುವಣ ಭಾಗದಲ್ಲಿ ಇರುವ ಪೈಠಣ ಎಂಬುದು ಕನ್ನಡ ನುಡಿಯ ಕೇಂದ್ರವೆಂದು ಕ್ರಿ.ಶ. ೮ನೆಯ ಶತಮಾನದ ಪ್ರದ್ಯೋತನಸೂರಿ ಎಂಬ ಜೈನ ಗ್ರಂಥಕಾರನು **ಕುವಲಯಮಾಲಾ** ಎಂಬ ತನ್ನ ಕೃತಿಯಲ್ಲಿ ಹೇಳುತ್ತಾನೆ. ಇದರಿಂದ ನೃಪತುಂಗ ಚರ್ಕವರ್ತಿಯ ಕಾಲಕ್ಕೆ ೨ ಶತಮಾನಗಳ ಹಿಂದೆ ಪೈಠಣದ ಸುತ್ತಲೂ ಇರುವ ಗೋದಾವರಿ ಪ್ರಾಂತದಲ್ಲಿ ಪರಮ ಪ್ರಭಾವವಾಗಿ ಕನ್ನಡ ಆಳುತ್ತಿತ್ತೆಂಬುದು ಗೊತ್ತಾಗುತ್ತದೆ. ನೈಜಾಂಶಾಹಿಯ ಅತಿ ಮೂಡಲ ಮೇರೆಗಳಿಗೆ ತಿರುಗಿದರೆ ನಾವು ವಾರಂಗಲ್ ಜಿಲ್ಲೆಗೆ ಬರುತ್ತೇವೆ. ಕ್ರಿ.ಶ. ೧೨ನೆಯ ಶತಮಾನದಲ್ಲಿ ವೀರಭದ್ರ ಮಹಾರಾಜ ಎಂಬ ಒಬ್ಬ ಕಾಕತೀಯ ರಾಜನು ಕಲ್ಲುಬರಗದ ಒಡೆಯನೆನಿಸಿಕೊಂಡಿದ್ದನು. ಆ ಪಟ್ಟಣಕ್ಕೆ 'ಕರ್ನಾಟಕ ರಾಜಧಾನಿ' ಎಂಬ ಹೆಸರಿತ್ತು.

ಇನ್ನು ಗೋದಾವರೀ ನದಿ ನೀರೊದಗಿಸುವ ಮದ್ರಾಸ್ ಪ್ರಾಂತದ (ಈಗ ಆಂಧ್ರ) ತೆಲುಗು ಜಿಲ್ಲೆಗಳಿಗೆ ಬರೋಣ. ಪ್ರಖ್ಯಾತವಾದ ವೆಂಗಿಮಂಡಲ ಇಲ್ಲಿದೆ. ರಾಜ ನೃಪತುಂಗನು ಆಳುವುದಕ್ಕೆ ೨ ಶತಮಾನಗಳಿಗೆ ಮುಂಚೆ ಅದು ಕನ್ನಡ ಪ್ರಭಾವಕ್ಕೆ ಒಳಪಟ್ಟಿತು. ವೆಂಗಿಮಂಡಲವನ್ನು ಕನ್ನಡ ಮಾಡಿದ ಶಕ್ತಿ ಪಶ್ಚಿಮ ಚಾಳುಕ್ಯರ ಚಕ್ರವರ್ತಿ ಎರಡನೆಯ ಪುಲಕೇಶಿಯದು. ಆತನು ಪಿಷ್ಟಪುರವನ್ನು (ಈಗಿನ ಪಿಠ್ಠಾಪುರ) ಕೈವಶ ಮಾಡಿಕೊಂಡ ಮೇಲೆ, ತನ್ನ ತಮ್ಮ ಕುಬ್ಜ ವಿಷ್ಣುವರ್ಧನನನ್ನು ವೆಂಗಿಯ ರಾಜಪ್ರತಿನಿಧಿಯಾಗಿ (ಕ್ರಿ.ಶ. ೬೧೫) ಪ್ರತಿಷ್ಠಿಸಿದನು. ಭಾರತದ ಕರ್ತೃವಾದ ಪ್ರಖ್ಯಾತ ಕನ್ನಡ ಕವಿ ಆದಿ ಪಂಪನು (ಕ್ರಿ.ಶ. ೯೪೧) ವೆಂಗಿಗೆ ಸೇರಿದವನು. ಕನ್ನಡದಲ್ಲಿ ಕೀರ್ತಿ ಪಡೆದ ಈತನ ಮಹಾಕಾವ್ಯವೇ ಕ್ರಿ.ಶ. ೧೦೨೨ರ ಸುಮಾರಿನಲ್ಲಿ ತೆಲುಗು ಕವಿ ನನ್ನಯ್ಯಭಟ್ಟನು ತೆಲುಗು ಭಾರತವನ್ನು ಬರೆಯುವಂತೆ ಮಾಡಿದ್ದು. ಈ ಪ್ರದೇಶ ಪೂರ್ತಿ ಕನ್ನಡವಾದದ್ದು ಮೂರನೆಯ

೧. ೧೯೫೬ರ ನವೆಂಬರ್ ೧ ರಂದು ಮೈಸೂರು ರಾಜ್ಯಕ್ಕೆ ಸೇರಿದುವು.

ಕೃಷ್ಣ ಅಕಾಲವರ್ಷ ಎಂಬ ರಾಷ್ಟ್ರಕೂಟ ಚಕ್ರವರ್ತಿಯ ಕಾಲದಲ್ಲಿ ಇರಬಹುದು. ಕ್ರಿ.ಶ. ೯೬೮ರಲ್ಲಿ ಆತನ ಪ್ರತಿನಿಧಿ ಶೂದ್ರಕಯ್ಯನು ಆಂಧ್ರಮಂಡಲದ ಮೇಲೆ ಮಾತ್ರವಲ್ಲದೆ, ಕದಂಬಳಿಗೆ ನಾಡಿನ ಮೇಲೆಯೂ ಅಧಿಕಾರ ಮಾಡುತ್ತಿದ್ದನು.

ತೆಲುಗು ದೇಶದ ಮೇಲೆ ತೆಲುಗರು ನಮ್ಮ ಅಧಿಕಾರವನ್ನು ಸ್ಥಾಪನೆ ಮಾಡಿದ ಮೇಲೆಯೂ ಗೋದಾವರೀ ಕೃಷ್ಣಾ ನದಿಗಳ ನೀರು ಹರಿಯುವ ಭೂಮಿಯಲ್ಲಿ ಕನ್ನಡ ಪ್ರಭಾವ ಹೇಗೆ ಸ್ಥಾಯಿಯಾಯಿತೆಂಬುದನ್ನು ಇನ್ನು ಕೆಲವು ಸಂಗತಿಗಳಿಂದ ತೋರಿಸಿದರೆ ಸಾಕು. ಪಶ್ಚಿಮ ಚಾಳುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಅನೇಕ ದಳವಾಯಿಗಳಲ್ಲಿ ಅನಂತಪಾಲನೊಬ್ಬನು. ಕ್ರಿ.ಶ. ೧೧೦೩–೪ರಲ್ಲಿ, ಈಗಿನ ಗೋದಾವರಿ ಜಿಲ್ಲೆಗೆ ಸೇರಿದ, ಈ ಪ್ರಾಂತಕ್ಕೆ ಆತನು ಅಧಿಕಾರಿಯಾದನು. ಕನ್ನಡ ಚಕ್ರವರ್ತಿಯ ಕನ್ನಡ ಸೇನಾಪತಿಯೊಬ್ಬನು ತಾನು ರಾಜಪ್ರತಿನಿಧಿಯಾಗಿ ಅಧಿಕಾರ ಮಾಡಿದ ಪ್ರಾಂತದಲ್ಲಿ ಕನ್ನಡ ಪ್ರಭಾವವನ್ನು ಸ್ಥಾಪಿಸದೆ ಇರಲಾರನು. ಕಳಚೂರ್ಯ ದೊರೆಯಾದ ರಾಜ ಸೋಯಿದೇವನೂ ಚೋಡಗಂಗ ಅನಂತವರ್ಮನೂ ಕ್ರಿ.ಶ. ೧೧೭೬ ಮತ್ತು ೧೧೯೯ರಲ್ಲಿ ಪ್ರಕಟಿಸಿದ ಶಿಲಾಶಾಸನಗಳು ನಮ್ಮ ಊಹೆ ಸರಿಯಾದುದೆಂದು ತಿಳಿಸುವುವು. ಈಗ ಕೃಷ್ಣಾ ಮತ್ತು ವಿಶಾಖಪಟ್ಟಣ ಜಿಲ್ಲೆಗಳೆಂದು ಹೆಸರಿರುವ ಪ್ರಾಂತದಲ್ಲೆಲ್ಲ ಕನ್ನಡ ಪ್ರಭಾವವಿದ್ದುದರಿಂದಲೇ ಈ ಶಾಸನಗಳನ್ನು ಕನ್ನಡದಲ್ಲಿ ಬರೆದಿರುವುದು.

ಗೋದಾವರೀ, ಕೃಷ್ಣಾ ನದಿಗಳ ನೀರು ಹರಿವ ಜಿಲ್ಲೆಗಳು ಪ್ರಾಚೀನ ಕಾಲಗಳಲ್ಲಿ ಸಂಪೂರ್ಣವಾಗಿ ಕನ್ನಡ ಪ್ರಭಾವಕ್ಕೆ ಒಳಪಟ್ಟಿದ್ದುವೆಂದು ತೃಪ್ತಿಕರ ಪ್ರಮಾಣಗಳಿಂದ ಅರಿತುಕೊಂಡಮೇಲೆ ಪೈಠಣದ ಪಶ್ಚಿಮಕ್ಕಿರುವ ಗೋದಾವರಿಯ ಮೂಲಕ್ಕೆ ಇನ್ನು ನಾವು ಹೋಗಬಹುದು. ಇದು ಬೊಂಬಾಯಿ ಆಧಿಪತ್ಯದಲ್ಲಿ ಮಹಾರಾಷ್ಟ್ರವೆಂದು ಕರೆಯುವ ನಾಡಿನ ಅತಿ ಉತ್ತರ ಭಾಗ. ಮರಾಠಿ ಮಾತನಾಡುವ ಜನರ ನಾಡಾಗಿ ಮಹಾರಾಷ್ಟ್ರ ಎಂಬುದೊಂದು ಕ್ರಿ.ಶ. ೧೫ನೆಯ ಶತಮಾನಕ್ಕೆ ಹಿಂದೆ ಇರಲೇ ಇಲ್ಲ. ಇಂದಿನ ಮಹಾರಾಷ್ಟ್ರದ ಉತ್ತರ ಭಾಗದಲ್ಲಿ ಇರುವ ಪುಣ್ಯಕ್ಷೇತ್ರ ನಾಸಿಕ. ಕ್ರಿ.ಶ. ೯ನೆಯ ಶತಮಾನದ ಮೊದಲ ಪಾದದಲ್ಲಿ ಇದು ರಾಷ್ಟ್ರಕೂಟರ ಮುಖ್ಯ ಪ್ರಾಂತ ಪಟ್ಟಣಗಳಲ್ಲಿ ಒಂದಾಗಿತ್ತು. ಈಗ ಮೋರ್ಖಂಡಿ ಎಂಬ ನಾಸಿಕ ಜಿಲ್ಲೆಯ ದುರ್ಗ ಹಿಂದೆ ಮಯೂರ್‌ಖಂಡಿ ಆಗಿತ್ತು. ರಾಷ್ಟ್ರಕೂಟ ಚಕ್ರವರ್ತಿಯಾದ ಮೂರನೆಯ ಪ್ರಭೂತವರ್ಷ ಗೋವಿಂದನು ಜಾಲಮಂಗಲ (ಈಗಿನ ಜಲಗಾಂ) ಹಳ್ಳಿಯನ್ನು ಕ್ರಿ.ಶ. ೮೧೨ರಲ್ಲಿ ಚಾಲುಕ್ಯ ರಾಜಕುಮಾರನಾದ ರಾಜಪ್ರತಿನಿಧಿ ವಿಮಲಾದಿತ್ಯನಿಗೆ ಇಲ್ಲಿಯೇ ಕೊಟ್ಟದ್ದು. ಪ್ರಪಂಚ ವಿಖ್ಯಾತವಾದ ಎಲ್ಲೋರಾ ಕೈಲಾಸ ದೇವಾಲಯವನ್ನು ರಾಷ್ಟ್ರಕೂಟ ಚಕ್ರವರ್ತಿ ಒಂದನೆಯ ಕೃಷ್ಣ ಅಕಾಲವರ್ಷನು ಕಟ್ಟಿದನೆಂಬುದು ಸುಪ್ರತಿಷ್ಠವಾದ ಸಂಗತಿ.

ನಾಡನ್ನು ಅಡ್ಡಲಾಗಿ ಸಂಚಾರ ಮಾಡಿ ಕಡಲಕರೆಗೆ ಹೋದರೆ ಸ್ಥಳಗಳ

ಹೆಸರುಗಳ ಪ್ರತ್ಯಯಗಳಲ್ಲಿ ಕನ್ನಡ ಪ್ರಭಾವವನ್ನು ತಪ್ಪದೆ ಗುರುತಿಸಬಹುದು. ಎರಡು ಉದಾಹರಣೆ ಸಾಕು. ಬೊಂಬಾಯಿ, ಬರೋಡ ಮತ್ತು ಸೆಂಟ್ರಲ್ ಇಂಡಿಯಾ ರೈಲ್ ದಾರಿಯಲ್ಲಿ (ಈಗ ವೆ. ರೈಲ್ವೆ) ಖಾಂಡಿವ್ಲಿ, ಬೋರಿವ್ಲಿ ಎಂಬ ಎರಡು ನಿಲ್ದಾಣಗಳಿವೆ. ಅವು ಖಂಡ + ವಳ್ಳಿ ಮತ್ತು ಬೋರಿ + ಹಳ್ಳಿ ಎಂಬ ಪದಗಳ ವಿಕಾರಗಳೆಂದು ಸ್ಪಷ್ಟವಾಗುತ್ತದೆ. ನಮ್ಮ ಕಾಲದಲ್ಲಿ ಹೀಗೆ ವಿಕೃತಿಗೊಂಡ ಇನ್ನೊಂದು ಕನ್ನಡ ಹೆಸರು ಲೋಣ + ವಳ್ಳಿ. ಈಗಲೂ ಸಾಮಾನ್ಯ ಜನರ ಬಾಯಲ್ಲಿ ಅದಕ್ಕೆ ಲಾನೋಳಿ ಎಂಬ ಹೆಸರಿದೆ. ಆದರೆ ಅದಕ್ಕೆ ಬಂದಿರುವ ಗತಿ ಲೋಣಾವ್ಲಾ. ನಾವು ಈ ರೀತಿ ಗುರುತು ಹೊಂದಿಸುವುದರಲ್ಲಿ ಯಾವ ತಪ್ಪೂ ಇಲ್ಲವೆಂಬುದಕ್ಕೆ ಇನ್ನೂ ಒಂದು ಸ್ಥಳದ ಹೆಸರನ್ನು ಕೊಡಬಹುದು. ಜಿ.ಐ.ಪಿ. ರೈಲ್ (ಈಗ. ಸೆಂ. ರೈಲ್ವೆ) ರಸ್ತೆಯಲ್ಲಿರುವ ಅದು ಕನ್ನಡ ರೂಪದಲ್ಲಿಯೇ ಉಳಿದುಕೊಂಡಿದೆ. ಇದಕ್ಕೆ ಮಲವ್ಳಿ ಎಂದು ಹೆಸರು. ಅದು ಮಲವ + ಹಳ್ಳಿ ಅಥವಾ, ಬಹುಶಃ ಮಲಪ + ಹಳ್ಳಿ ಎಂದಿರಬೇಕು.

ಮುಂಬಣಿ (ಈಗಿನ ಮುಂಬಯಿ), ಠಾಣ (ಸಂ. ಸ್ಥಾನಕ), ನಾಗೌನ್ (ಸಂ. ನಾಗಪುರ) ಸೋಪಾರ (ಈಗಿನ ಶೂರ್ಪಾರಕ), ಚೆಮುಳಿ (ಈಗಿನ ಕೊಲಾಬಾ ಜಿಲ್ಲೆಯ ಚಾಲ್) ಮುಂತಾದವು ಉತ್ತರ ಶಿಲಾಹಾರರ ರೇವು ಪಟ್ಟಣಗಳಾಗಿ ಇದ್ದವು. ಶಿಲಾಹಾರರು ಕನ್ನಡ ಸಾಮಂತರಾಜರ ಸಂತತಿ ಎಂಬುದರಲ್ಲಿ ಸಂದೇಹವಿಲ್ಲ.

ಇಂದಿನ ಮಹಾರಾಷ್ಟ್ರ ಹೃದಯಭಾಗವನ್ನೇ ಹೋಗಿ ನೋಡಿದರೆ ಮರಾಠ ಪ್ರಭಾವವಿರುವ ಬಹುತರ ಪ್ರತಿಯೊಂದು ಸ್ಥಳವೂ ಸ್ವತಃ ಒಂದು ಕನ್ನಡ ಕೇಂದ್ರವಾಗಿದ್ದುದೇ. ಕ್ರಿ.ಶ. ೮ನೆಯ ಶತಮಾನದಲ್ಲಿ ಹೀಗೆಯೇ **ಪುಣಕ** (ಈಗಿನ ಪೂನಾ) ಎಂಬುದು ರಾಷ್ಟ್ರಕೂಟರ ಕೈಯೊಳಗಿದ್ದ ಒಂದು ಜಿಲ್ಲೆಯ ಮುಖ್ಯ ಪಟ್ಟಣ. ಅದೇ ಶತಮಾನದ ಮೊದಲ ಪಾದದಲ್ಲಿ **ಆಳಂದಿ** ಎಂಬ ಹೆಸರಾಧ ಯಾತ್ರಾಸ್ಥಳ **ಆಲಂದಿತೀರ್ಥ** ಎಂಬ ಹೆಸರಿನಿಂದ ಕನ್ನಡಿಗರಿಗೆ ಆಗ್ಗೆಯೆ ತಿಳಿದಿತ್ತು. ಅದು ಆ ಕಾಲದ ಪಶ್ಚಿಮ ಚಾಳುಕ್ಯರ ಕಯ್ಯಲ್ಲಿತ್ತು. ಸುಪ್ರಸಿದ್ಧ ಯಾತ್ರಾಸ್ಥಳವಾದ **ಪಂಢರಪುರ** ಕ್ರಿ. ಶ. ೧೦೭೭–೮೮ರಲ್ಲಿ ಕರ್ನಾಟಕ ಮಹಾಮಂಡಲೇಶ್ವರ ಜೋಗಮರಸನ ಕಯ್ಯಲ್ಲಿತ್ತು. ಪೂನಾ ಪಟ್ಟಣದ ಈಶಾನ್ಯಕ್ಕೆ ಸುಮಾರು ೪೦ ಮೈಲಿ ದೂರದಲ್ಲಿ **ಘೊಡ್** ನದಿಯ ಮೇಲಿರುವ ಶಿರೂರ್ (ಸಿರಿಯೂರ್) ಕ್ರಿ.ಶ. ೮೬೬ರಲ್ಲಿ ಮೊದಲನೆಯ ಅಮೋಘವರ್ಷನು ದಾನಶಾಸನಮಾಡಿದ ಬೀಡಾಗಿತ್ತು. ಇಂದಿನ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿ ಬಹುಮಟ್ಟಿಗೆ ಎಲ್ಲಾ ಪ್ರಾಚೀನ ಪ್ರಪಂಚಕ್ಕೆ ಕನ್ನಡ ಕೇಂದ್ರಗಳಾಗಿಯೇ ತಿಳಿದಿದ್ದವು. ಹೇಗೆಂದರೆ ಫಲಟನ್ ಎಂಬುದು ಹಳೆಯ ಠಾಣವೇ ಹೊರತು ಬೇರೊಂದಲ್ಲ. ಹಳೆಯ ಠಾಣ ಎಂಬುದನ್ನು ನೀರಾಕಣಿವೆಯ ಜೊತೆಗೆ ಸೇರಿಸಿ ಚಾಳುಕ್ಯ ಚಕ್ರವರ್ತಿ ವಿನಯಾದಿತ್ಯನ ಅಧಿಕಾರದಲ್ಲಿತ್ತೆಂದು ಕ್ರಿ.ಶ. ೬೮೭ರ ಶಾಸನ ಒಂದರಲ್ಲಿ ಹೇಳಿದೆ. ಈಗಿನ **ಮುಧೋಳು** ಕರ್ನಾಟಕ ಚರಿತ್ರೆಯಲ್ಲಿ **ಮುದುವೊಳಲು** ಎಂದೇ ಯಾವಾಗಲೂ ಹೆಸರಾಗಿದ್ದುದು.

ಇದು ಕ್ರಿ.ಶ. ೧೦ನೆಯ ಶತಮಾನದಲ್ಲಿ ಬೆಳುಗಲಿ ಐನೂರು ಎಂಬ ದೊಡ್ಡ ಪ್ರಾಂತಕ್ಕೆ ಸೇರಿದ ಜಂಬುಖಂಡಿ ಎಪ್ಪತ್ತರ ಉಪಮಂಡಲವಾಗಿತ್ತು. **ಮೀರಿಂಜೆ** (ಈಗಿನ ಮೀರಜ್) ಮತ್ತು **ಕುಡಲದಾಮವಾಡ** (ಈಗಿನ ಕುರಂದವಾಡ್) ಇವನ್ನು ಕ್ರಿ.ಶ. ೧೨೨೪-೨೫ರಲ್ಲಿ ಕನ್ನಡ ಕೇಂದ್ರಗಳೆಂದು ಹೇಳಿದೆ.

ನಂಜುಂಡ ಕವಿಯೂ ನೃಪತುಂಗನೂ ನಿರ್ದೇಶಿಸಿರುವ ಕರ್ನಾಟಕ ದಕ್ಷಿಣ ಮೇರೆಗೆ ನೀಲಗಿರಿ, ಕೊಯಮತ್ತೂರು, ಸೇಲಂ ಜಿಲ್ಲೆಗಳನ್ನು ಸೇರಿಸಬಹುದು. ಅವು ಅನೇಕ ಶತಮಾನಗಳ ಕಾಲ ಕರ್ನಾಟಕ ರಾಜ್ಯಗಳ ಭಾಗಗಳಾಗಿದ್ದವು. ಆದರೆ ಒಬ್ಬಿಬ್ಬರ ಜಯಪ್ರಯತ್ನಗಳನ್ನು ಬಿಟ್ಟರೆ ದಕ್ಷಿಣದಲ್ಲಿ ನಾಗಪಟ್ಟಣದಿಂದ ಹಿಡಿದು ಉತ್ತರದಲ್ಲಿ ನೆಲ್ಲೂರಿನವರೆಗೂ ಇರುವ ಕಡಲಕರೆಯ ಭಾಗದ ಮೇಲೆ ತಮ್ಮ ಅಧಿಕಾರ ಸ್ಥಾಪಿಸಬೇಕೆಂದು ಕನ್ನಡ ಚಕ್ರವರ್ತಿಗಳು ಮಾಡಿದ ಪ್ರಯತ್ನ ನೆರವೇರಲಿಲ್ಲ. ಅವು ತಮಿಳುರಾಜರ ಕೈಯಲ್ಲಿಯೇ ತಪ್ಪದೆ ಉಳಿದುವೆಂದು ಒಪ್ಪಿಕೊಳ್ಳಬೇಕು. ಆದುದರಿಂದ ಕರ್ನಾಟಕ ಪೂರ್ವಮೇರೆ ಇಂದಿನ ಸೇಲಂ ಜಿಲ್ಲೆಯ ಮೂಡಲಗಡಿಯಿಂದ ಹಬ್ಬಿ ಪೂರ್ವಘಟ್ಟಗಳನ್ನು ಹೊಂದಿಕೊಂಡು ಆ ಪರ್ವತಪಂಕ್ತಿ ಕೃಷ್ಣಾ ಜಿಲ್ಲೆಯಲ್ಲಿ ಬೆರೆತುಹೋಗುವವರೆಗೂ ನೆಲಸಿತ್ತೆನ್ನಬಹುದು. ಪಶ್ಚಿಮ ತೀರದಲ್ಲಾದರೂ ಮೇಲೆ ಖಂಡಿವ್ಲಿಯಿಂದ ಹಿಡಿದು ತಮಿಳುನಾಡಿನಲ್ಲಿ ಚಂದ್ರಗಿರಿ ನದಿಯವರೆಗೂ ಇರುವ ಸಂಪೂರ್ಣ ಕಡಲಕರೆಯ ನಾಡು ಕರ್ನಾಟಕದ ಅಂಗವಾಗಿತ್ತು.

೫. ನಾಡಿನ ಭೂರಚನೆ, ಸನ್ನಿವೇಶಗಳು ಮತ್ತು ಕರ್ನಾಟಕ ಚರಿತ್ರೆಯ ಮೇಲೆ ಅವುಗಳ ಪ್ರಭಾವ

ಮೇಲೆ ವರ್ಣಿಸಿದ ವಿಸ್ತಾರವಾದ ಭೂರಚನೆ ಅದರ ಚರಿತ್ರೆಯ ಮೇಲೆ ಯಾವ ಪರಿಣಾಮ ಉಂಟು ಮಾಡಿದೆಯೆಂದು ಇನ್ನು ನೋಡಬೇಕಾಗಿದೆ. ಕಡಲಕರೆ, ಪರ್ವತಪಂಕ್ತಿ, ನದೀಮಂಡಲ ಮತ್ತು ಪ್ರಕೃತಿಸಂಪತ್ತು ಇವೆಲ್ಲ ಕರ್ನಾಟಕದ ಚರಿತ್ರೆಯನ್ನು ರೂಪುಗೊಳಿಸಿವೆ.

ಕರ್ನಾಟಕದ ಎಲ್ಲ ರೇವುಪಟ್ಟಣಗಳೂ ಪಶ್ಚಿಮಕ್ಕೆ ತೆರೆದಿವೆ ಎಂಬಂಶ ಅದಕ್ಕೆ ಅತಿಶಯ ಪ್ರಯೋಜನಕಾರಿಯಾಗಿರುವುದು. ಮೇಲೆ ಹೇಳಿದ ಕರ್ನಾಟಕದ ಅತಿ ಮುಖ್ಯ ರೇವುಪಟ್ಟಣಗಳಲ್ಲಿ ಕೆಲವು, ಗೋವಾ, ಬಸ್ರೂರ್, ಬಾರಕೂರು, ಮಂಗಳೂರು ಮುಂತಾದ ರೇವುಗಳೂ ಪ್ಲಿನಿ (ಕ್ರಿ.ಶ. ೨೩-೭೯), ತೊಲೆಮಿ(ಕ್ರಿ.ಶ. ೨ನೆಯ ಶತಮಾನದ ಮಧ್ಯಭಾಗ), ಕಾಸ್ಮಾಸ್ ಇಂಡಿಕೊಪ್ಲ್ಯೂಸ್ಟೀಸ್ (ಕ್ರಿ.ಶ. ೬ನೆಯ ಶತಮಾನದ ಮಧ್ಯಭಾಗ), ಮುಂತಾದ ಲೇಖಕರ ವರ್ಣನೆಗಳಿಂದಲೂ ಕ್ರಿ.ಶ. ೧೨ನೆಯ ಶತಮಾನದಲ್ಲಿ ಪ್ರವಾಸಕ್ಕಾಗಿ ಮೊದಲು ಬಂದ ಇದ್ರಿಸಿಯಂತಹ ಅರಬ್ಬೀ ಪ್ರಯಾಣಿಕರ ವರ್ಣನೆಗಳಲ್ಲಿಯೂ ವ್ಯಾಪಾರ ಕೇಂದ್ರಗಳೆಂದು ವರ್ಣಿತವಾಗಿವೆ. ಈ ರೇವುಪಟ್ಟಣಗಳ ಮೂಲಕವೇ ಪಶ್ಚಿಮದ ವ್ಯಾಪಾರವೂ

ನಾಗರಿಕತೆಯೂ ಕರ್ನಾಟಕದೊಳಕ್ಕೆ ಬಂದದ್ದು; ಕರ್ನಾಟಕದಿಂದ ಮುಂದೆ ಒಳದೇಶಕ್ಕೆ ಹೋಗುತ್ತಿದ್ದದ್ದು. ಈಜಿಪ್ಟಿನವರು, ಗ್ರೀಕರು, ರೋಮನರು, ಅರಬ್ಬಿಯವರು, ಕನ್ನಡಿಗರೊಡನೆ ಆಪ್ತವಾದ ವ್ಯಾಪಾರ ವ್ಯವಹಾರಗಳನ್ನೂ ಇಟ್ಟುಕೊಂಡಿದ್ದರು. ನಮ್ಮ ಜನಕ್ಕೂ ಗ್ರೀಕರಿಗೂ ಹತ್ತಿರ ಸಂಬಂಧವಿದ್ದಿತೆಂದು ಒಂದು ಗ್ರೀಕ್-ಕನ್ನಡ ಪ್ರಹಸನದಿಂದ ಸ್ಥಾಪಿತವಾಗುತ್ತದೆ. ದಕ್ಷಿಣ ಈಜಿಪ್ಟಿನಲ್ಲಿರುವ **ಆಕ್ಸಿರಿಂಕಸ್** ಎಂಬ ಕಡೆ ಸಿಕ್ಕಿದ ಗ್ರಂಥಖಂಡದಲ್ಲಿ ಕೆಳಗಿನ ಈ ಕತೆಯಿದೆ: – ರಾಜಕುಮಾರಿಯಾಗಿರಬಹುದಾದ ಒಬ್ಬ ಗ್ರೀಕ್ ಸುಂದರಿಯನ್ನು ಭರತಖಂಡದ ಅರಸನೊಬ್ಬನು ತನ್ನ ರಾಜಧಾನಿಗೆ ಹೊತ್ತುಕೊಂಡು ಬಂದನು. ಈ ಗ್ರೀಕ್ ಹೆಣ್ಣಿನ ಬಂಧುಗಳು ಈ ಪಟ್ಟಣಕ್ಕೆ ಬಂದು ಅರಸನಿಗೆ ಮಧುಪಾನ ಮಾಡಿಸಿ, ಆಕೆಯನ್ನು ಬಿಡಿಸಿಕೊಂಡು ತಮ್ಮ ದೇಶಕ್ಕೆ ಹಿಂದಕ್ಕೆ ಎತ್ತಿಕೊಂಡು ಹೋದರು. ಪ್ರಹಸನ ಗ್ರೀಕ್ ಭಾಷೆಯಲ್ಲಿ ಬರೆದದ್ದಾದರೂ ಅದರಲ್ಲಿ ಕನ್ನಡ ಮಾತುಗಳಿವೆ. ನಾಟಕದ ದೃಶ್ಯ ತುಳುವ ತೀರದ್ದು, ಅರಸನು ಆಳುಪರ ಒಡೆಯನೊಬ್ಬನು. ಆದರೆ ಗ್ರೀಕ್ ಸುಂದರಿ ಇಂಥವಳೇ ಎಂಬ ಗುರುತು ತಿಳಿಯದೆ ಇದೆ. ಪಾಶ್ಚಿಮಾತ್ಯ ಜನರೊಡನೆ ಕನ್ನಡಿಗರು ನಡೆಸಿದ ವ್ಯಾಪಾರ ವ್ಯವಹಾರಗಳಿಂದ ಕನ್ನಡಿಗರ ದೃಷ್ಟಿರಂಗ ವಿಶಾಲವಾಯಿತು. ಜೊತೆಗೆ ಅವರ ಧನಸಂಪತ್ತೂ ಹೆಚ್ಚಿತು.

ಎರಡನೆಯ ದೊಡ್ಡ ಪ್ರಯೋಜನ : ಉತ್ತರ ದಕ್ಷಿಣ ಭರತಖಂಡಗಳಿಗೆ ನಡೆವ ವ್ಯವಹಾರಕ್ಕೆ ಕರ್ನಾಟಕ ಹೆದ್ದಾರಿಯಾಗಿದೆ. ತಾಮ್ರಯುಗದ ಮತ್ತು ಆದಿಚರಿತ್ರ ಕಾಲಗಳ ಸಂಸ್ಕೃತಿ ಪ್ರವಾಹಗಳು ಕರ್ನಾಟಕದ ಮೂಲಕ ಹರಿದು ಚಂದ್ರವಳ್ಳಿಯಂತಹ ಕಡೆಗಳಲ್ಲಿ ಅಳಿಯದ ಪುರಾತನ ಅವಶೇಷಗಳನ್ನು ಉಳಿಸಿಹೋದುವು.

ಮೂರನೆಯ ಪ್ರಯೋಜನ: ಇಲ್ಲಿನ ಪರ್ವತ ಪಂಕ್ತಿಗಳು, ವಿಶೇಷವಾಗಿ ಕರ್ನಾಟಕದ ಪಡುಗಡೆಯ ಪಂಕ್ತಿಗೆ ಸಂಬಂಧಪಟ್ಟುದು. ಪಶ್ಚಿಮಘಟ್ಟದ ಪಂಕ್ತಿ ನಮ್ಮ ನಾಡಿನ ಬೆನ್ನುಮೂಳೆಯಾಗಿ ಇದ್ದುಕೊಂಡಿದೆ. ಈ ಪ್ರದೇಶದಿಂದ ಬೆಲೆಯುಳ್ಳ ಲೋಹಗಳು ಯಾವಾಗಲೂ ಸಿಕ್ಕಿರುವುವು. ನಮ್ಮ ಜನವರ್ಗದಲ್ಲಿನ ವೀರಯೋಧರೂ ರಾಜವಂಶಗಳು ಹಲವೂ ಹುಟ್ಟಿಬಂದಿರುವುದು ಈ ಪ್ರದೇಶದಿಂದಲೇ. ಭರತಖಂಡದ ಇತಿಹಾಸದಲ್ಲಿ ಕರ್ನಾಟಕಕ್ಕೆ ಮಹತ್ವವನ್ನು ತಂದ ವೀರಪುರುಷರೂ ವೀರಮಹಿಳೆಯರೂ ಮಲೆನಾಡಿನ ತೊಟ್ಟಿಲಿನಲ್ಲಿಯೆ ಹುಟ್ಟಿದರೆಂದು ಖಂಡಿತವಾಗಿ ಹೇಳಬಹುದು. ಆದರೆ ನಮ್ಮ ಜನದ ಮಲೆನಾಡ ಜೀವನದಿಂದ ಒಂದು ಕೊರತೆಯೂ ಉಂಟಾಯಿತು. ಕಡಲ ಜೀವನ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಶ್ನೆಗಳ ಮುಖ್ಯತೆ ಎಷ್ಟು ಎಂಬುದನ್ನು ಕಾಣದೆ ಕುರುಡರಾದರು ಈ ಜನ. ಇದರ ಫಲವಾಗಿ ನಮ್ಮ ಸಾಮ್ರಾಜ್ಯಗಳ ಆಯುಃಪ್ರಮಾಣ ಕಿರಿದಾಯಿತು.

ಕರ್ನಾಟಕದಲ್ಲಿನ ನದೀ ಮಂಡಲಗಳೂ ನಮ್ಮ ಜನದ ಅದೃಷ್ಟವನ್ನು ರೂಪುಗೊಳಿಸಿವೆ. ಈ ನದಿಗಳ ದಡದ ಮೇಲೆಯೇ ಕರ್ನಾಟಕದ ಅತಿ ಪ್ರಖ್ಯಾತ

ಪಟ್ಟಣಗಳಲ್ಲಿ ಹಲವು ಬೆಳೆದುವು. ಗೋದಾವರಿಯ ಮೇಲೆ ಪೈಠಣ, ತುಂಗಭದ್ರೆಯ ಮೇಲೆ ವಿಜಯನಗರ, ಕಾವೇರಿಯ ಮೇಲೆ ತಲಕಾಡು, ಶ್ರೀರಂಗಪಟ್ಟಣ – ಇವುಗಳ ಸುತ್ತಲೂ ಮತ್ತು ಸುಪ್ರಖ್ಯಾತವಾದ ಇತರ ಪಟ್ಟಣಗಳ ಸುತ್ತಲೂ ನಮ್ಮ ನಾಡಿನ ಚರಿತ್ರೆ ಕಟ್ಟಿ ನಿಲ್ಲುತ್ತದೆ. ಈ ನದಿಗಳಲ್ಲೆಲ್ಲ ಈಗ್ಗೂ ಆಕರ್ಷಕವಾಗಿರುವುದು ಕಾವೇರಿಯೊಂದೇ. ಹಿಂದಿನ ಕಾಲಗಳಲ್ಲಿ ಪುನ್ನಾಡಿನ ರಾಜಮನೆತನಗಳನ್ನು ಯಾವ ಎಚ್ಚರಿಕೆ, ಅಕ್ಕರೆಗಳಿಂದ ಪೋಷಿಸಿತೋ ಹಾಗೆಯೇ ಮೈಸೂರು ರಾಜ ಮನೆತನವನ್ನೂ ಕಾವೇರಿ ಪ್ರೀತಿಯಿಂದ ಪೋಷಿಸಿತು.

ಕಡೆಯದಾಗಿ ಈ ದೇಶದ ಚರಿತ್ರೆಯಲ್ಲಿ ಪ್ರಾಂತದ ಪ್ರಕೃತಿ ಸಂಪತ್ತು ಬಹು ದೊಡ್ಡ ಸತ್ವವಾಗಿದೆ. ಪ್ರಕೃತಿದೇವಿ ಕನ್ನಡಿಗರಿಗೆ ಯಾವಾಗಲೂ ವಿಪುಲ ಸಹಾಯವನ್ನೇ ಕೊಟ್ಟಿದ್ದಾಳೆ. ಈ ನಾಡಿನ ಗಡಿಯೊಳಗೆ ನಿರಂತರವಾಗಿ ಯುದ್ಧಗಳು ನಡೆದಿದ್ದರೂ ಆಗಾಗ್ಗೆ ಕ್ಷಾಮ ಡಾಮರಗಳು ಮುಟ್ಟಿಹೋಗಿದ್ದರೂ ಒಟ್ಟಿನಲ್ಲಿ ಕರ್ನಾಟಕ ಶಾಂತಿ ಸಮೃದ್ಧಿಗಳ ನಾಡಾಗಿಯೇ ಉಳಿದಿದೆ.

೬. ಕರ್ನಾಟಕದ ರಾಜಕೀಯ ಚರಿತ್ರೆಯ ಲಕ್ಷಣಗಳು

ಭರತಖಂಡದ ಇತರ ಭಾಗಗಳ ಇತಿಹಾಸಕ್ಕಿಂತ ಕರ್ನಾಟಕ ರಾಜಕೀಯ ಚರಿತ್ರೆಗೆ ಕೆಲವು ವಿಶೇಷ ಲಕ್ಷಣಗಳುಂಟು. ನಮ್ಮ ನಾಡಿನ ರಾಜಕೀಯದ ಮೊದಲ ಲಕ್ಷಣವೆಂದರೆ ಕರ್ನಾಟಕದ ಪ್ರತಿಭೆಯಲ್ಲಿ ಯಾವಾಗಲೂ ಕಂಡುಬಂದಿರುವ ಹೊಸ ಹೊಸ ಜೀವಶಕ್ತಿ. ಕರ್ನಾಟಕದ ಮೇಲೆಯೂ ನೆರೆ ಪ್ರದೇಶಗಳ ಮೇಲೆಯೂ ಬಹುಕಾಲ ಪರ್ಯಂತ ಆಳಿದ ಸಾಮ್ರಾಜ್ಯಗಳ ಸಂತತಿ ಹುಟ್ಟಿಕೊಂಡುದೇ ಇದನ್ನು ತೋರಿಸುವುದು. ಎರಡನೆಯದಾಗಿ ಮುಖ್ಯವಾಗಿ, ಕ್ರಿ.ಶ. ೧೪ನೆಯ ಶತಮಾನದಲ್ಲಿಯೂ ಬೇರೆ ಕಾಲಗಳಲ್ಲಿಯೂ – ಹಿಂದೂ ಧರ್ಮ ಮತ್ತು ಸಂಸ್ಕೃತಿ ನಾಶವಾಗುವ ಭೀತಿ ಇದ್ದ ಕಾಲದಲ್ಲಿ ಕರ್ನಾಟಕವೊಂದೇ ಅವುಗಳನ್ನು ಉಳಿಸಿಕೊಂಡಿದ್ದುದು. ಮೂರನೆಯದಾಗಿ ಭರತಖಂಡನ ಇತರ ಭಾಗಗಳಲ್ಲಿ ಸಾಧಾರಣವಾಗಿ ಕಾಣಿಸದ ರೀತಿಯಲ್ಲಿ ಹಿಂದೂ ರಾಜಕೀಯ ಜ್ಞಾನ ಕರ್ನಾಟಕದಲ್ಲಿ ಮರಳಿ ಮರಳಿ ತೋರಿಕೊಂಡಿತು, ದೇಶವನ್ನು ಒಡೆದು ವಿಭಾಗ ಮಾಡುವ ಪ್ರಭಾವಗಳನ್ನು ಒಂದು ಕೇಂದ್ರದಲ್ಲಿ ಕೂಡಿಸುವ ಶಕ್ತಿಗಳೇ ಕರ್ನಾಟಕದ ರಾಜಕೀಯ ರಚನೆಯಲ್ಲಿ ಹೇಗೆ ಸಂತತವಾಗಿ ಗೆದ್ದವು ಎಂಬುದು ಇದಕ್ಕೆ ಸಾಕ್ಷಿ. ಇದಕ್ಕೆ ಹತ್ತಿರದಲ್ಲಿ ಸಂಬಂಧಪಟ್ಟಂತೆ ಇರುವ ಮುಂದಿನ ಲಕ್ಷಣ, ಅಕ್ಕಪಕ್ಕದಲ್ಲಿದ್ದ ದೊಡ್ಡ ಪಾಳೆಯಪಟ್ಟುಗಳ ವ್ಯಕ್ತಿತ್ವವನ್ನು ನಾಶಮಾಡದೆ ದೊಡ್ಡ ಚಕ್ರಾಧಿಪತ್ಯಗಳು ಸಮರಸವಾಗಿ ಅಭಿವೃದ್ಧಿಗೊಂಡದ್ದು. ಎಂದರೆ ಪ್ರತ್ಯೇಕವಾದ ರಾಜಕೀಯ ಜೀವನ ರಚನೆ, ಸಾಮ್ರಾಜ್ಯಗಳ ಆಶೋತ್ತರಗಳಿಗೆ ವಿರೋಧವಿಲ್ಲದೆ ಹೇಗೆ ಬೆಳೆದುಕೊಂಡಿತು ಎಂಬುದು ಕರ್ನಾಟಕದಲ್ಲಿ ಅಡಿಗಡಿಗೆ ಕಾಣುವ ವ್ಯಕ್ತಿಗುಣ. ಐದನೆಯದಾಗಿ, ಇಲ್ಲಿ ನಡೆದ ರಾಜಕೀಯ ಪರೀಕ್ಷಾ ಪ್ರಯತ್ನಗಳನ್ನು ಬಹುತರ ಈ ನಾಡಿನ ಮಕ್ಕಳೇ

ಮಾಡಿದರು. ಅವರು ಒಂದುಗೂಡಿ ಪಟ್ಟ ಶ್ರಮಸಾಹಸಗಳಿಂದಲೇ ನಮ್ಮ ನಾಡು ಅತಿಶಯವಾದ ಪ್ರಭಾವಕ್ಕೂ ಕೀರ್ತಿಗೂ ಹಲವು ವೇಳೆ ಏರಿ ಬೆಳೆದದ್ದು. ಕಡೆಯದಾಗಿ, ಅತಿಮುಂಚಿನ ಕಾಲದಿಂದ ನಮ್ಮ ಕಾಲದವರೆಗೂ ಕರ್ನಾಟಕವನ್ನು ಆಳಿರುವ ನಾನಾ ಚಕ್ರಾಧಿಪತ್ಯಗಳ ರಾಜ್ಯ ರಚನೆಯೂ, ಆಡಳಿತ ಯಂತ್ರವೂ ಕಣ್ಣಿಗೆ ಕಾಣುವಂತೆ ಒಂದೇ ಸಂಗತಿಯಲ್ಲಿ ಬೆಳೆದು ಬಂದಿರುವುದು. ಎಂದರೆ ಕರ್ನಾಟಕದಲ್ಲಿ ಕಾಣಿಸಿಕೊಂಡಿರುವ ಅನೇಕ ರಾಜ್ಯಗಳು ಅಲ್ಲೊಂದು, ಇಲ್ಲೊಂದು ಬೇರೆ ಬೇರೆಯಾಗಿ ಹುಟ್ಟಿ ಚೆದುರಿದ್ದ ರಾಜ್ಯಸೃಷ್ಟಿಗಳಲ್ಲ. ಒಂದಕ್ಕೊಂದು ಸಂಬಂಧವಿಲ್ಲದೆ ಅಭಿವೃದ್ಧಿಗೊಂಡುವೂ ಬಿದ್ದವೂ ಅಲ್ಲ. ಅವು ಒಂದು ದೊಡ್ಡ ರಚನಾ ವ್ಯವಸ್ಥೆಗೆ ಒಳಪಟ್ಟಿದ್ದ ಅಂಶಮಂಡಲಗಳು. ಅವುಗಳಲ್ಲಿ ಪ್ರತಿಯೊಂದೂ ಪರಂಪರೆಯಲ್ಲಿ ತಮ್ಮವರಿಗೆ ಬಂದ ಉದಾರ ಸಂಪ್ರದಾಯವನ್ನು ಉಳಿಸಿಕೊಳ್ಳುವುದಕ್ಕೂ ಪೋಷಿಸಿ ಬೆಳೆಸುವುದಕ್ಕೂ ಪೌರುಷದಿಂದ ಪ್ರಯತ್ನ ಮಾಡಿದುವು. ಈ ದೃಷ್ಟಿಯಿಂದ ನೋಡಿದರೆ ಕರ್ನಾಟಕ ಚರಿತ್ರೆ ನಿಜವಾಗಿ ಧೀರರಾದ, ಯತ್ನಶೀಲರಾದ, ವೀರಚೈತನ್ಯಯುತರಾದ,– ನಿರಂತರ ಪ್ರಯತ್ನ ಮಾಡಿ, ಸಾಹಸಪೂರ್ಣವಾಗಿ ಹಲವೇಳೆ ಜಯಪೂರ್ಣವಾಗಿ– ದೇಶದ ಗೌರವವನ್ನೂ ಬಿಡುಗಡೆಯ ಬಾವುಟವನ್ನೂ ಎತ್ತಿಹಿಡಿದ ಜನರ ಕಥೆಯಾಗಿದೆ.

ಪ್ರಕರಣ ೨

(ರಾಜಕೀಯ ಸ್ಥಿತಿಯನ್ನು ಭದ್ರತೆಗೆ ತರುವ ಮೊದಲ ಪ್ರಯತ್ನಗಳು: ಕ್ರಿ. ಪೂ. ೩ನೆಯ ಶತಮಾನದಿಂದ ಕ್ರಿ.ಶ. ೩ನೆಯ ಶತಮಾನದವರೆಗೆ)

ಸಾಮ್ರಾಜ್ಯಶಾಹಿಯ ಮನೆತನಗಳು

೧. ಮೌರ್ಯರು

ಕನ್ನಡಿಗರ ರಾಜಕೀಯ ವ್ಯವಸ್ಥೆ ಮಹಾಭಾರತದ ಕಾಲದಲ್ಲಿ ಬಣಗಳ ರಚನೆಯನ್ನು ಅನುಸರಿಸಿತ್ತು. ಅದು ಕ್ರಿಸ್ತಶಕಾರಂಭಕ್ಕೆ ಕೆಲವು ಶತಮಾನಗಳ ಹಿಂದೆ ಸುವ್ಯವಸ್ಥಿತವಾದ ಅರಸೊತ್ತಿಗೆಗೆ ಎಡೆಮಾಡಿಕೊಟ್ಟಿತು. ನಂದರು ಕನ್ನಡ ನಾಡನ್ನು ಆಳುತ್ತಿದ್ದರೆಂದು ಈಚಿನ ಒಂದು ಶಾಸನ ತಿಳಿಸುವುದರಿಂದ ಈ ಮಾರ್ಪಾಟು ನಂದರ ಕಾಲ್ಲದಲ್ಲಾಯಿತೋ ಅಥವಾ ಅದಕ್ಕಿಂತ ಪೂರ್ವದಲ್ಲಿಯೇ ಆಯಿತೋ ನಿಷ್ಕರ್ಷೆಯಾಗಿ ಈಗ ಹೇಳಲು ಸಾಧ್ಯವಿಲ್ಲ. ತರುವಾಯ, ಕ್ರಿ.ಪೂ. ೩ನೆಯ ಶತಮಾನದ ಪೂರ್ವಾರ್ಧದಿಂದ ನಾಲ್ಕು ಶತಮಾನಗಳ ಕಾಲ ಕನ್ನಡನಾಡನ್ನು ಮೌರ್ಯರು ಆಳಿದರಷ್ಟೆ. ಈ ಕಾಲದಲ್ಲಿ ನಮ್ಮ ನಾಡು ತನ್ನದೇ ಆದ ಒಂದು ರಾಜ್ಯಾಂಗವನ್ನು ರೂಪಿಸಿಕೊಳ್ಳಲು ಬಹಳ ಶ್ರದ್ಧೆಯಿಂದ ಪ್ರಯತ್ನಗಳನ್ನು ನಡೆಸಿತು. ಇದರಲ್ಲಿ ಮತ್ತೊಂದು ಸಾಮ್ರಾಜ್ಯಶಾಹಿ ಮನೆತನದ – ಶಾತವಾಹನರ – ಸಹಾಯವನ್ನು ಮೊದಲು ಪಡೆಯಿತು. ಶಾತವಾಹನರ ತರುವಾಯ ನಾಡು ವಿಭಕ್ತವಾಗಿ ಪ್ರತ್ಯೇಕ ಪ್ರತ್ಯೇಕ ಪ್ರಾಂತಗಳಾಗುವ ಸೂಚನೆ ಬರುತ್ತಿದ್ದಾಗ ಕದಂಬರು, ಬಾಣರು, ಆಳುಪರು, ನಳರು, ಸೇಂದ್ರಕರು ಮತ್ತು ಪುನ್ನಾಟರು ನಾಡು ವಿಭಕ್ತವಾಗದಂತೆ ತಡೆದು ಅರಸೊತ್ತಿಗೆಗೆ ಶಾಶ್ವತವಾದ ತಳಹದಿಯನ್ನು ಹಾಕಿದರು. ಈ ರಾಜ್ಯಗಳ ಚರಿತ್ರೆಯನ್ನು ವಿವರಿಸುವಾಗ ಮೇಲೆ ಹೇಳಿದ ಕರ್ನಾಟಕದ ರಾಜಕೀಯ ಜೀವನ ನಮ್ಮ ದೃಷ್ಟಿಗೆ ಬೀಳುತ್ತದೆ.

ಬೃಹದ್ಭಾರತದ ರಾಜಕೀಯ ಪ್ರಭಾವಕ್ಕೆ ಕನ್ನಡ ನಾಡು ಸಿಕ್ಕುವಂತೆ ಮಾಡಿದ ಕೀರ್ತಿ ಮೌರ್ಯರಿಗೆ ಸಲ್ಲುತ್ತದೆ. ನಮ್ಮ ನಾಡು ಮೌರ್ಯ ಚಕ್ರಾಧಿಪತ್ಯದ ಒಂದು ಭಾಗವಾಗಿದ್ದಿರಬಹುದು. ಮೊಳಕಾಲ್ಮೂರು ತಾಲ್ಲೂಕಿನಲ್ಲಿಯೂ ಇತರ ಕಡೆಗಳಲ್ಲಿಯೂ ಅಶೋಕನ ಶಾಸನಗಳು ದೊರೆತಿರುವುದನ್ನು ನೋಡಿದರೆ ಹಿಂದಿನ ಮೈಸೂರು ಸಂಸ್ಥಾನದ ಉತ್ತರ ಭಾಗ ಮೌರ್ಯ ಚಕ್ರಾಧಿಪತ್ಯದಲ್ಲಿ ಸೇರಿದ್ದಿತೆಂದು ಊಹಿಸಬೇಕಾಗುತ್ತದೆ. ಅಶೋಕನ ಈ ಶಾಸನಗಳು ಕರ್ನಾಟಕದ ರಾಜಕೀಯ ಸ್ಥಿತಿಯ ವಿಚಾರದಲ್ಲಿ ಯಾವುದೊಂದು ತಿಳಿವಳಿಕೆಯನ್ನೂ ಕೊಡುವುದಿಲ್ಲ. ಆ

ಪ್ರಖ್ಯಾತ ಚಕ್ರವರ್ತಿ ಉಚ್ಚ ನೀಚಗಳೆಂಬ ಭೇದಭಾವವಿಲ್ಲದೆ ತನ್ನ ಎಲ್ಲ ಪ್ರಜೆಗಳ ವಿಚಾರದಲ್ಲೂ, ಹಾಗೆಯೇ ತನ್ನ ಸಾಮ್ರಾಜ್ಯದ ಹೊರಗಿದ್ದ ಮಾನವಕೋಟಿಗಳ ವಿಚಾರದಲ್ಲೂ, ಅಭೂತಪೂರ್ವವಾದ ವಿಶ್ವಪ್ರೇಮವನ್ನು ಸೂಸಿ ಇಹಪರ ಸೌಖ್ಯ ಶ್ರೇಯಸ್ಸಾಧನೆಗೆ ಅವರು ಹೇಗೆ ನಡೆದುಕೊಳ್ಳಬೇಕೆಂಬುದನ್ನು ಕೆಲವು ಸ್ಥಳೀಯ ಪ್ರಭೇದಗಳಿಂದ ಕೂಡಿದ ಮಾಗಧಿ ಭಾಷೆಯಲ್ಲಿ ವಿವರಿಸಿ, ಅವುಗಳನ್ನೆಲ್ಲ ಪ್ರಜೆಗಳಲ್ಲಿ ಹರಡುವಂತೆ ತನ್ನ ಕೈಕೆಳಗಿನ ಅಧಿಕಾರಿಗಳಿಗೆ ಕೊಟ್ಟ ನಿರೂಪಗಳೇ ಆ ಶಾಸನಗಳು. ಮೈಸೂರಿನ ವಾಯುವ್ಯಕ್ಕಿರುವ ಬನವಾಸಿಯೂ ಮೈಸೂರಿನ ಸುತ್ತಮುತ್ತಣ ನಾಡೂ ಬೌದ್ಧ ಪ್ರಪಂಚದಲ್ಲಿ ಬಹಳ ಮಹತ್ವದ ಸ್ಥಾನಗಳಾಗಿದ್ದುವೆಂದು ಈಚಿನ ಬೌದ್ಧ ಕಥನಗಳಿಂದ ನಮಗೆ ತಿಳಿದು ಬಂದಿದೆ. ಮೌರ್ಯರ ಪ್ರಭುತ್ವ ಅಶೋಕ ಚಕ್ರವರ್ತಿಯ ಅನಂತರವೂ ಕೆಲವು ಶತಮಾನಗಳವರೆಗೆ ಕರ್ನಾಟಕದ ಕೆಲವು ಭಾಗಗಳಲ್ಲಿ ನಡೆದುಕೊಂಡು ಬಂದಿತ್ತು. ಪಾಟಲೀಪುತ್ರದ ಚಕ್ರವರ್ತಿ ಮನೆತನಕ್ಕೆ ಸಂಬಂಧಿಸಿದ ಮೌರ್ಯರ ಒಂದು ಶಾಖೆಯವರು, ಚಾಳುಕ್ಯರ ಇಮ್ಮಡಿ ಪುಲಿಕೇಶಿ ತಲೆಯೆತ್ತುವವರೆಗೂ ಕರ್ನಾಟಕದ ಉತ್ತರ ಭಾಗದಲ್ಲಿ ಒಂದು ವಿಶಾಲ ಪ್ರಾಂತವನ್ನು ಆಳುತ್ತಲೇ ಬಂದರು. ಇಮ್ಮಡಿ ಪುಲಿಕೇಶಿ ತಲೆಯೆತ್ತಿದ ತರುವಾಯ ಆತನು ಆ ಶಾಖೆಯವರನ್ನು ಅಡಗಿಸಿ ಸ್ವತಂತ್ರ ರಾಜ್ಯ ಸ್ಥಾಪನೆ ಮಾಡಿದನು. ಮೌರ್ಯರಾದರೋ ಕ್ರಿ.ಶ. ೯ನೆಯ ಶತಮಾನದವರೆಗೂ ಅಲ್ಲಲ್ಲಿ ಮಾಂಡಲೀಕರಾಗಿ ಉಳಿದುಕೊಂಡು ಬಂದರು. ಆದರೆ ಅವರ ಹೆಸರುಗಳಾಗಲಿ, ಅವರು ಆಳಿದ ಪಾಳೆಯಪಟ್ಟುಗಳಾಗಲೀ ಯಾವ ಗುರುತನ್ನೂ ಬಿಟ್ಟುಹೋಗಿಲ್ಲ. ಪಶ್ಚಿಮ ಕರಾವಳಿಯಲ್ಲಿದ್ದ 'ಪುರಿ' ಎಂಬುದು (ಇದು ಯಾವ ಊರೆಂಬುದನ್ನು ಇನ್ನೂ ಗುರುತಿಸಲಾಗಿಲ್ಲ) ಕಾಲಕ್ರಮದಲ್ಲಿ ಶಿಲಹಾರ ವಂಶದ ಉತ್ತರ ಶಾಖೆಯ ದೊರೆಗಳ ರಾಜಧಾನಿಯಾಯಿತೆಂಬುದು ಮಾತ್ರ ನಮಗೆ ಗೊತ್ತಿದೆ.

೨. ಶಾತವಾಹನರು

ಮೌರ್ಯರು ಕರ್ನಾಟಕವನ್ನು ಅಖಿಲ ಭಾರತದ ರಾಜಕೀಯ ಪ್ರಭಾವಕ್ಕೆ ಮಾತ್ರ ಒಳಗಾಗಿಸಿದರು. ಅವರ ತರುವಾಯ ಕರ್ನಾಟಕದಲ್ಲಿ ಆಳಿದ ಶಾತವಾಹನರು ಕನ್ನಡ ನಾಡನ್ನು ಭಾರತದ ಒಂದು ಪ್ರಬಲ ಜನಾಂಗವನ್ನಾಗಿ ಮಾಡಿ ಹಾಗೆಯೇ ಶಾಶ್ವತವಾಗಿ ನಡೆದುಬರುವಂತೆ ಶಕ್ತಿಯನ್ನು ತುಂಬಿದರು. ಮೌರ್ಯರು ನಮ್ಮ ಚರಿತ್ರೆಯ ಸೂತ್ರವನ್ನು ಮೈಸೂರಿನ ಉತ್ತರ ಭಾಗದಲ್ಲಿ ಬಿಟ್ಟುಹೋದರು. ಶಾತವಾಹನರು ಅದನ್ನು ಅದೇ ಪ್ರಾಂತದ ವಾಯವ್ಯಕ್ಕೆ ಕೊಂಡೊಯ್ದರು. ಮೌರ್ಯರು ಪ್ರಾಕೃತ ಭಾಷೆಯನ್ನು ಸರ್ಕಾರದ ಭಾಷೆಯನ್ನಾಗಿ ಉಪಯೋಗಿಸುತ್ತ ಬಂದರಲ್ಲದೆ ಪಾಟಲೀಪುತ್ರದ ಚಕ್ರವರ್ತಿಗಳು ತಮ್ಮ ಶಾಸನಗಳಲ್ಲಿ ಬಳಸುತ್ತಿದ್ದ ವ್ಯವಹಾರ ಪದಗಳನ್ನು ಆಚರಣೆಗೆ ತಂದರು. ಅಶೋಕನ ಶಾಸನಗಳು "ಹೀಗೆ ದೇವನಾಂಪ್ರಿಯನು ಆಜ್ಞೆ ಮಾಡುತ್ತಾನೆ" ಅಥವಾ "ದೇವನಾಂಪ್ರಿಯ ಹೇಳುತ್ತಾನೆ"

ಎಂಬ ಪ್ರಸಿದ್ಧ ವಾಕ್ಯಗಳಿಂದ ಆರಂಭವಾಗುವುವೋ ಹಾಗೆಯೇ, ಆಮೇಲಾಮೇಲೆ ತಲೆದೋರಿದ ಶಾತವಾಹನರ ಶಾಸನಗಳೂ ಕೂಡ ಮಹಾವಲಭಮ್ ರಜ್ಜುಕರಿಗೆ ಆಜ್ಞಾರೂಪಕವಾಗಿ ಆರಂಭವಾಗುತ್ತವೆ. ಕೊನೆಯದಾಗಿ ಶಾತವಾಹನರ ನಾಣ್ಯಗಳೂ ಶಾಸನಗಳೂ ಇತರ ಕಡೆಗಳಲ್ಲಿ ದೊರೆತಿರುವುದಲ್ಲದೆ ಅಶೋಕನ ಶಾಸನಗಳು ಸಿಕ್ಕಿರುವ ಚಿತ್ರದುರ್ಗ ಜಿಲ್ಲೆಯಲ್ಲಿಯೂ ದೊರೆತಿವೆ. ಕರ್ನಾಟಕದಲ್ಲಿ ಮೌರ್ಯರ ತರುವಾಯ ಹೀಗೆ ಶಾತವಾಹನರ ಪ್ರಭುತ್ವ ಎಡೆಬಿಡದೆ ಮುಂದುವರಿದದ್ದನ್ನು ನಾವು ನೋಡುತ್ತೇವೆ.

ಶಾತವಾಹನರಿಗೆ ಶಾತಕರ್ಣಿಗಳೆಂದೂ ಶಾಲಿವಾಹನರೆಂದೂ ಇತರ ಹೆಸರುಗಳಿದ್ದವು. ಶಾತಕರ್ಣಿ ಎಂಬುದು ಚುಟುಸಂತತಿಗೆ ಸೇರಿದ ಮಾಂಡಲಿಕರ ವಂಶನಾಮವಾಗಿಯೂ ಇದ್ದಿತು. ಶಾತವಾಹನರು ವಿದೇಶೀಯರಾದ ಆಂಧ್ರಭೃತ್ಯರೆಂದು ಕೆಲವರು ಪಂಡಿತರು ಸರಿಯಾದ ಆಧಾರಗಳಿಲ್ಲದೆ ಹೇಳಿದ್ದಾರೆ. ಶಾತವಾಹನರ ಚರಿತ್ರೆ ಇನ್ನೂ ಕೇವಲ ಊಹೆಯಾಗಿಯೇ ಇದೆ. ಶಾತವಾಹನರಲ್ಲಿ ಕೆಲವರ ಹೆಸರುಗಳು ನಮಗೆ ದೊರೆತಿದ್ದರೂ ಅವರವರಿಗಿದ್ದ ಸಂಬಂಧಗಳನ್ನು ತಿಳಿಯಲು ನಮಗೆ ಹೆಚ್ಚು ಆಧಾರಗಳಿಲ್ಲ. ಶಾತವಾಹನರಲ್ಲಿ ಮೊದಲ ಮನೆತನದವರೆಂದೂ ಆಮೇಲಿನ ಮನೆತನದವರೆಂದೂ ಎರಡು ಸಂತತಿಗಳಿದ್ದವೆಂದು ಊಹಿಸಲಾಗಿದೆ. ಮೊದಲ ಸಂತತಿಯವರಲ್ಲಿ ಶಾತವಾಹನ ಅಥವಾ ಶಾಲಿವಾಹನ ಎಂಬಾತನೇ ಅತ್ಯಂತ ಪ್ರಖ್ಯಾತನೆಂದು ನಿಸ್ಸಂದೇಹವಾಗಿ ಹೇಳಬಹುದು. ಆತನ ಕಾಲ ಕ್ರಿ. ಪೂ. ೧೬೮ ಎಂದು ಚರಿತ್ರಕಾರರು ಅಭಿಪ್ರಾಯಪಡುತ್ತಾರೆ. ಆತನ ರಾಜಧಾನಿ ಪೈಠಣ.

ಶಾಲಿವಾಹನನ ಅನಂತರ ಬಹುಕಾಲದವರೆಗೆ ಒಂದು ಅಜ್ಞಾತಯುಗ ಕಂಡು ಬರುತ್ತದೆ. ಆಮೇಲಿನ ಶಾತವಾಹನರ ಮನೆತನದವರಲ್ಲಿ ಗೌತಮೀಪುತ್ರ ವಿಳಿವಾಯ ಕುರನೆಂಬುವನು ಕನ್ನಡ ನಾಡಿನ ಚರಿತ್ರೆಗೆ ಸಂಬಂಧಪಟ್ಟವರಲ್ಲಿ ಮೊದಲಿಗನು. ಈತನ ನಾಣ್ಯಗಳು ಕೊಲ್ಲಾಪುರದಲ್ಲಿ ದೊರೆತಿವೆ. ಈತನ ತರುವಾಯ ಪಟ್ಟಕ್ಕೆ ಬಂದವನು ಗೌತಮೀಪುತ್ರ ಶಾತಕರ್ಣಿ. ಈತನು ತನ್ನ ಆಳ್ವಿಕೆಯ ೧೮ನೆಯ ಸಂವತ್ಸರದಲ್ಲಿ (ಕ್ರಿ.ಶ. ೧೨೪) ಪಶ್ಚಿಮ ಕ್ಷತ್ರಪ ನಹಪಾನನನ್ನು ಸೋಲಿಸಿ ವಿಜಯಲಕ್ಷ್ಮಿಯನ್ನು ಕೈಹಿಡಿದನು. ಗೌತಮೀಪುತ್ರನು ನಿಜವಾಗಿಯೂ ಪ್ರತಾಪಶಾಲಿಯಾದ ಚಕ್ರವರ್ತಿ. ಆತನ ಚಕ್ರಾಧಿಪತ್ಯ ಬಹು ವಿಸ್ತಾರವಾಗಿದ್ದು ಈಗಿನ ಗುಜರಾತ ಪ್ರಾಂತವನ್ನೂ ಮಾಳವ, ಮಧ್ಯ ಇಂಡಿಯ, ಬಿರಾರ್ ಮತ್ತು ಉತ್ತರ ಕೊಂಕಣದ ಭಾಗಗಳನ್ನೂ, ನಾಸಿಕಕ್ಕೆ ಉತ್ತರದಲ್ಲಿರುವ ಬೊಂಬಾಯಿ ಆಧಿಪತ್ಯದ ಭಾಗಗಳನ್ನೂ ಒಳಗೊಂಡಿತ್ತು.

ಗೌತಮೀಪುತ್ರ ಶಾತಕರ್ಣಿಯಲ್ಲಿ ನಮಗೆ ಆಸಕ್ತಿ ಇರುವುದು, ಆತನ ಚಕ್ರಾಧಿಪತ್ಯ ಬಹು ವಿಸ್ತಾರವಾಗಿತ್ತೆಂಬ ಕಾರಣದಿಂದಲ್ಲ. ಈ ಶಾತಕರ್ಣಿಯ ಮೊದಲಿನ

ವಂಶದವರಿಗೂ ಕರ್ನಾಟಕಕ್ಕೂ ನಿಕಟ ಸಂಬಂಧವಿರುವುದರಿಂದ ನಮಗೆ ಈತನ ವಿಚಾರದಲ್ಲಿ ಹೆಚ್ಚು ಆಸಕ್ತಿ. ನಾವು ಹಿಂದೆ ಕಂಡಂತೆ ಶಾತವಾಹನನ ರಾಜಧಾನಿ ಅಚ್ಚ ಕನ್ನಡದ ಕೇಂದ್ರವಾದ ಪೈಠಣ. ಶಾತವಾಹನನು ಕುಂತಳಾಧೀಶ್ವರನೆಂದು ಹಿಂದುಗಳು ಸಂಪ್ರದಾಯವಾಗಿ ಹೇಳುತ್ತ ಬಂದಿದ್ದಾರೆ. ತಾಳಗುಂದದಲ್ಲಿ ದೊರೆತ ಒಂದು ಶಾಸನ, ಶಾತವಾಹನನು ಅಲ್ಲಿ ಶಿವನನ್ನು ಆರಾಧಿಸಿದನೆಂದೂ ತಿಳಿಸುತ್ತದೆ. ಅದು ಕದಂಬರ ದೊರೆಯಾದ, ಸುಮಾರು ಕ್ರಿ.ಶ. ೪೫೦ರಲ್ಲಿದ್ದ ಶಾಂತಿವರ್ಮನ ಕಾಲದ್ದು. ಕ್ರಿ.ಶ. ೯ನೆಯ ಶತಮಾನದಲ್ಲಿ ರಾಜಶೇಖರನು ತನ್ನ ಕಾವ್ಯಮೀಮಾಂಸದಲ್ಲಿ ಶಾತವಾಹನನು ಕುಂತಳಾಧೀಶ್ವರನೆಂದು ಹೇಳಿರುವುದನ್ನು ನೋಡಿದರೆ ಶಾತವಾಹನನಿಗೂ ಕರ್ನಾಟಕದ ಅತ್ಯಂತ ಪ್ರಸಿದ್ಧವಾದ ಒಳನಾಡುಗಳಲ್ಲಿ ಒಂದಾದ ಕುಂತಳನಾಡಿಗೂ ಇದ್ದ ನಿಕಟ ಸಂಬಂಧ ಹೇಗೆ ಪ್ರಖ್ಯಾತವಾಗಿತ್ತೆಂಬುದು ತಿಳಿಯುತ್ತದೆ.

೩. ಮಾಂಡಲಿಕರು : ಚುಟುಗಳು (ಕದಂಬರು), ಬಾಣರು, ಆಳುಪರು, ಸೇಂದ್ರಕರು, ನಳರು ಮತ್ತು ಪುನ್ನಾಡ ದೊರೆಗಳು

೧. ಚುಟುಗಳು: ಪ್ರಖ್ಯಾತನಾದ ಶಾತಕರ್ಣಿಯ ಕಾಲದಲ್ಲಿ ಕರ್ನಾಟಕದ ರಾಜಕೀಯ ಪ್ರಾಮುಖ್ಯತೆಗೆ ಉತ್ತರ ಕರ್ನಾಟಕ, ಅದರಲ್ಲಿಯೂ ಮುಖ್ಯವಾಗಿ ಪೈಠಣನಗರ ಕೇಂದ್ರವಾಗಿತ್ತು. ಸುಮಾರು ೨ನೆಯ ಶತಮಾನದ ಮಧ್ಯಭಾಗದಲ್ಲಿ ಕನ್ನಡನಾಡಿನ ಆಗ್ನೇಯ ಭಾಗ, ಮುಖ್ಯವಾಗಿ ಬನವಾಸಿ, ರಾಜಕೀಯ ಕೇಂದ್ರವಾಗಿ ಪರಿಣಮಿಸಿ, ಆರು ಶತಮಾನಗಳ ಕಾಲ ಕನ್ನಡ ನಾಡಿನ ರಾಜಕೀಯ ಜೀವನರಂಗದಲ್ಲಿ ಸೂತ್ರಧಾರಿಯಾಗಿತ್ತು. ಏಕೆಂದರೆ ಈ ಕಾಲದಲ್ಲಿ ಕನ್ನಡ ನಾಡಿನ ಆಡಳಿತದ ನಿರ್ವಹಣ ಭಾರ ಎರಡನೆಯ ಮನೆತನದ ಶಾತವಾಹನ ಮಾಂಡಲಿಕರಲ್ಲಿ ಬಹಳ ಪ್ರಸಿದ್ಧರಾದ ಚುಟುವಂಶದವರ ಮೇಲೆ ಬಿತ್ತು. ಇವರು ಆಮೇಲಿನ ಶಾತಕರ್ಣಿ ಮನೆತನದವರೆಂದೇ ಸಾಮಾನ್ಯವಾಗಿ ಊಹಿಸಲಾಗಿದೆ. ಕರ್ನಾಟಕದ ಇತಿಹಾಸದಲ್ಲಿ ಅವರು ಸಕಾಲಕ್ಕೆ ತಲೆದೋರಿದರೆಂದು ಹೇಳಬೇಕು. ಏಕೆಂದರೆ ಆಮೇಲಿನ ಶಾತವಾಹನ ಚಕ್ರಾಧಿಪತ್ಯ ಒಡೆದು ಹೋದದ್ದು ಕರ್ನಾಟಕವೂ ಒಡೆದುಹೋಗುವುದರ ಬಾಹ್ಯ ಲಕ್ಷಣವಾಗಿತ್ತು. ಇಂತಹ ವಿಷಮ ಸಂದರ್ಭದಲ್ಲಿ ಚುಟು ಕುಲದವರು ಬನವಾಸಿಯಲ್ಲಿ ತಲೆಯೆತ್ತಿದರು. ಅವರು ಕರ್ನಾಟಕದ ರಾಜಕೀಯದಲ್ಲಿ ಪ್ರಾಣಪ್ರತಿಷ್ಠೆ ಮಾಡಿದ್ದಲ್ಲದೆ, ಅದಕ್ಕೆ ನಿಷ್ಪೃಷ್ಟ ರೂಪವನ್ನು ಕೊಟ್ಟರು ಮತ್ತು ತಮ್ಮ ಹಿಂದೆಯೇ ಬಂದ ಕದಂಬರಿಗೆ ಕನ್ನಡ ನಾಡಿನ ಪೂರ್ವಾರ್ಜಿತ ಸಂಸ್ಕೃತ ನಿಧಿಯನ್ನು ವಹಿಸಿಕೊಟ್ಟು, ನಮ್ಮ ಚರಿತ್ರೆಯಲ್ಲಿ ವಿಚ್ಛಿತ್ತಿಯುಂಟಾಗದಂತೆ ಸಹಾಯ ಮಾಡಿದರು.

ಆದರೆ ಚುಟುಗಳ ವಿಷಯದಲ್ಲಿ ನಮಗೆ ಹೆಚ್ಚು ಏನೂ ತಿಳಿದಿಲ್ಲ. ಅವರ ನಾಣ್ಯಗಳೂ ಶಾಸನಗಳೂ ಕನ್‌ಹೇರಿಯಲ್ಲಿಯೂ ಕಾರವಾರದಲ್ಲಿಯೂ ಶಿವಮೊಗ್ಗ ಜಿಲ್ಲೆಯ ಮಳವಳ್ಳಿಯಲ್ಲಿಯೂ ಬನವಾಸಿಯಲ್ಲಿಯೂ ದೊರೆತಿವೆ. ಮಳವಳ್ಳಿಯಲ್ಲಿ ದೊರೆತ ಶಾಸನಗಳಿಂದಲೇ ಹೀಗೆ ಕರ್ನಾಟಕದ ಚರಿತ್ರೆ ವಿಚ್ಛಿನ್ನವಾಗದೆ

ಮುಂದುವರಿಯಿತೆಂದು ತಿಳಿಯಲು ಸಾಧ್ಯವಾಗಿರುವುದು. ಈ ಶಾಸನ (ಸುಮಾರು ಕ್ರಿ.ಶ. ೧೫೦) ಹಾರೀತ ಪುತ್ರ ವಿಸ್ಣುಕಡ್ಡ ಚುಟುಕುಲ ಶಾತಕರ್ಣಿಯದು. ಆತನು ಚುಟುವಂಶದ ಕೊನೆಯ ದೊರೆಯೇ ಅಥವಾ ಅವನ ಬೆನ್ನು ಹಿಂದಿನವನೊ ಆಗಿದ್ದಿರಬಹುದೆಂದು ತೋರುತ್ತದೆ. ಆತನಿಗೆ ವೈಜಯಂತೀ (ಬನವಾಸಿ) ಪುರವರಾಧೀಶ್ವರ ಎಂಬ ಬಿರುದಿತ್ತು. ಚುಟುವಂಶದವರಿಗೂ ಕದಂಬರಿಗೂ ಇದ್ದ ಅತಿ ಸಮೀಪ ಸಂಬಂಧವನ್ನು ಮುಂದೆ ನಾವು ಕಾಣುತ್ತೇವೆ.

ಕರ್ನಾಟಕದ ರಾಜಕೀಯ ಐಕಮತ್ಯವನ್ನು ಕಾಪಾಡಿಕೊಂಡು ಬರುವುದಕ್ಕೆ ಚುಟುಗಳು ಸಹಾಯ ಮಾಡಿದಂತೆಯೇ ಪುರಾತನರಾದ ಇತರ ಕೆಲವು ವಂಶದವರೂ ಸಹಾಯ ಮಾಡಿದ್ದಾರೆ. ಇಲ್ಲಿ ಅವರು ಮಾಡಿದ ಕೆಲಸಗಳನ್ನು ತಿಳಿಸಬಹುದಾಗಿದೆ. ಈ ವಂಶಗಳಲ್ಲಿ ಬಹಳ ಮುಖ್ಯರಾದವರು ಬಾಣರು, ಕದಂಬರು, ಆಳುಪರು, ಸೇಂದ್ರಕರು, ನಳರು ಮತ್ತು ಪುನ್ನಾಡ ದೊರೆಗಳು. ಈ ಸಂದರ್ಭದಲ್ಲಿ ತನ್ನ ಭಾಗಕ್ಕೆ ಬಂದ ಕರ್ತವ್ಯವನ್ನು ನೆರವೇರಿಸಿದ ಗಂಗರೆಂಬ ಇನ್ನೊಂದು ಮನೆತನವೂ ಇದೆ. ಆದರೆ ಇವರ ವಿಚಾರವನ್ನು ಮುಂದಿನ ಪ್ರಕರಣದಲ್ಲಿ ವಿವರಿಸುತ್ತೇವೆ. ಚುಟುಗಳೂ ಅವರ ನಂತರ ಕದಂಬರೂ ಈಗಿನ ಮೈಸೂರು ಪೂರ್ವಭಾಗಗಳಲ್ಲಿ ಬಾಣರು ಒಡಕುಗಳನ್ನು ತಡೆದು ನಾಡನ್ನು ಒಟ್ಟುಗೂಡಿಸುತ್ತಿದ್ದರು. ದಕ್ಷಿಣದಲ್ಲಿಯೂ ಮಧ್ಯದಲ್ಲಿಯೂ ಗಂಗರಸರು, ಆಗ್ನೇಯದಲ್ಲಿ ಪುನ್ನಾಟರು, ಪಶ್ಚಿಮದಲ್ಲಿ (ಷಿಕಾರಿಪುರ ತಾಲ್ಲೂಕಿನಲ್ಲಿ) ಸೇಂದ್ರಕರು, ಆಗ್ನೇಯದ ತುತ್ತತುದಿಯ, ದೂರದ ತುಳುವ ನಾಡಿನಲ್ಲಿ ಆಳುಪರು – ಇವರೆಲ್ಲ ಮಾಡಿದ ಸಾಹಸಕಾರ್ಯಗಳು ಇದೇ ಧ್ಯೇಯಸಾಧನೆಯ ಲಕ್ಷಣಗಳನ್ನು ತೋರಿಸುತ್ತವೆ. ಕದಂಬರಂತೆಯೂ ಗಂಗರಂತೆಯೂ ಈ ಇತರ ರಾಜಮನೆತನದವರು ಪ್ರಮುಖರಲ್ಲದಿದ್ದರೂ ಈ ಸಣ್ಣಮಟ್ಟ ಸಂತತಿಯವರಿಂದ ಕನ್ನಡದ ಅರಸೊತ್ತಿಗೆ ಕ್ಷಿಪ್ರದಲ್ಲಿಯೇ ತಲೆಯೆತ್ತುವಂತಾಯಿತು.

೨. ಬಾಣರು: ಬಾಣರು ಅಥವಾ ಮಹಾವಲಿಗಳು ತಾವು ದಾನವ ಚಕ್ರವರ್ತಿಯಾದ ಬಲಿಯ ವಂಶಸ್ಥರೆಂದು ಹೇಳಿಕೊಂಡಿದ್ದಾರೆ. ಬಲಿಚಕ್ರವರ್ತಿಯ ಹಿರಿಯ ಮಗನಾದ ಬಾಣಾಸುರನು ತನ್ನ ಸಾವಿರ ತೋಳುಗಳಿಂದ ಶಿವನನ್ನಾರಾಧಿಸಿ ವರವನ್ನು ಪಡೆದು, ಆ ಪರಮೇಶ್ವರನನ್ನು ತನ್ನ ಅರಮನೆಯ ದ್ವಾರಪಾಲಕನನ್ನಾಗಿ ಮಾಡಿಕೊಂಡನೆಂದು ಪುರಾಣದ ಕಥೆಗಳಿವೆ. ಬಾಣರ ರಾಜ್ಯ ಕ್ರಿ. ಶ. ೧–೨ನೆಯ ಶತಮಾನಗಳಿಂದ ಕ್ರಿ.ಶ. ೧೦ನೆಯ ಶತಮಾನದ ಆದಿಭಾಗದವರೆಗೆ ಅಸ್ತಿತ್ವದಲ್ಲಿತ್ತು. ಈಗಿನ ಕರ್ನಾಟಕದ ಕೋಲಾರ ಜಿಲ್ಲೆ, ಕಡಪ (ಆಂಧ್ರಪ್ರದೇಶ), ತಿರುವಲ್ಲಮ್ (ಉತ್ತರ ಆರ್ಕಾಟು ಜಿಲ್ಲೆ), ವನಪುರ (ಇದಾವುದೋ ಗೊತ್ತಿಲ್ಲ) ಮತ್ತು ಮಹಾಬಲಿಪುರ – ಇವೆಲ್ಲ ಬಾಣರ ರಾಜ್ಯದಲ್ಲಿ ಸೇರಿತ್ತು.

ಬಾಣರಿಗೂ ಕದಂಬರಿಗೂ, ಹಾಗೆಯೇ ಬಾಣರಿಗೂ ಮೊದಮೊದಲಿನ ಚೋಳರಿಗೂ ಇದ್ದ ನಿಕಟ ಸಂಬಂಧವನ್ನು ನೋಡಿದರೆ ಬಾಣರು ನಿಜವಾಗಿಯೂ

ಪ್ರಖ್ಯಾತ ವಂಶದವರಾಗಿದ್ದರೆಂದು ಹೇಳಬೇಕಾಗುತ್ತದೆ. ಬಾಣವಂಶದ ಐತಿಹಾಸಿಕ ಪುರುಷರಲ್ಲಿ, ಮೊದಲನೆಯ ನಂದಿವರ್ಮನು ರಾಜ್ಯಾಭಿಷಿಕ್ತನಾಗಿದ್ದನೆಂದು ಅವನ ಶಾಸನಗಳಿಂದ ನಮಗೆ ತಿಳಿದುಬರುತ್ತದೆ. ಇವನ ತರುವಾಯ ಸರ್ವಜೀವದಯಾಪರನೆಂದು ಕೀರ್ತಿಪಡೆದ ಮಲ್ಲಿದೇವನಂದಿವರ್ಮನು ಪಟ್ಟಕ್ಕೆ ಬಂದನು. (ಕ್ರಿ.ಶ. ೩೩೮). ದಯೆಯಲ್ಲಿ ಆತನು ಬೋಧಿಸತ್ವನಂತೆ ಇದ್ದನೆಂದು ಪ್ರಖ್ಯಾತನಾಗಿದ್ದಾನೆ.

ಬಾಣವಿದ್ಯಾಧರನೆಂಬ ಈಚಿನ ಬಾಣವಂಶದ ದೊರೆಗೂ ಗಂಗರಾಜನಾದ ಇಮ್ಮಡಿ ಶಿವಮಾರನ ಕುಮಾರಿ ಕುಂದಾದೇವಿಗೂ ವಿವಾಹವಾಗಿ ಬಾಣರಾಜ್ಯಕ್ಕೆ ಈ ಸಂಬಂಧದಿಂದ ಗಂಗರಾಜ್ಯದ ಬೆಂಬಲ ಒದಗಿಬಂತು. ಆದರೂ ಕಟ್ಟಕಡೆಯಲ್ಲಿ ಬಾಣರಾಜ್ಯ ಮುರಿದು ಬೀಳುವುದು ಅನಿವಾರ್ಯವಾಯಿತು. ಏಳನೆಯ ಶತಮಾನದಲ್ಲಿ ಪಶ್ಚಿಮ ಚಾಳುಕ್ಯರೂ ಎಂಟನೆಯ ಶತಮಾನದಲ್ಲಿ ಗಂಗರಸರೂ ಒಂಭತ್ತನೆಯ ಶತಮಾನದ ಆದಿಭಾಗದಲ್ಲಿ ಚೋಳರೂ ಬಾಣರ ಮೇಲೆ ದಂಡೆತ್ತಿ ಬಂದು ಅವರನ್ನು ಬಲವಾಗಿ ಸೋಲಿಸುತ್ತ ಬಂದುದರಿಂದ ಹತ್ತನೆಯ ಶತಮಾನದ ಆದಿಭಾಗದಲ್ಲಿ ಅವರು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡರು. ಆದರೆ ಇತರ ರಾಜಮನೆತನಗಳ ಹೆಸರುಗಳು ಉಳಿದುಕೊಂಡು ಬಂದಂತೆಯೇ ಕ್ರಿ.ಶ. ೧೫ನೆಯ ಶತಮಾನದ ಅಂತ್ಯದವರೆಗೂ 'ಬಾಣ' ಎಂಬ ಹೆಸರೂ ಉಳಿದುಕೊಂಡು ಬಂತು.

೩. ಆಳುಪರು: ಬಾಣರು ಮೈಸೂರು ಸಂಸ್ಥಾನದ ಪೂರ್ವ ಪ್ರಾಂತಗಳಲ್ಲಿಯೂ ತಮಿಳುನಾಡಿನ ಕೆಲವು ಭಾಗಗಳಲ್ಲಿಯೂ ಪ್ರಭುತ್ವ ಮಾಡುತ್ತಿದ್ದಾಗ ಪಶ್ಚಿಮ ಕರ್ನಾಟಕದ ಬಹು ವಿಸ್ತಾರವಾದ ಭಾಗದಲ್ಲಿ, ಪಶ್ಚಿಮ ಕರಾವಳಿಗೆ ಸೇರಿದ ಪ್ರಾಂತವೊಂದನ್ನು ಆಳುಪರು ಆಳುತ್ತಿದ್ದರು. ಈ ದೊರೆಗಳು ಬಹಳ ಪ್ರಾಚೀನರು. ಅವರು ರಾಜ್ಯಭಾರ ಮಾಡಿದ ದೀರ್ಘವಾದ ಕಾಲದಿಂದ ತೀರ್ಮಾನಿಸುವುದಾದರೆ, ಕನ್ನಡ ನಾಡಿನ ಮಾಂಡಲೀಕರಲ್ಲಿ ಅವರು ಬಹಳ ಪ್ರಖ್ಯಾತರೆಂದು ಹೇಳಬೇಕಾಗುತ್ತದೆ. ಏಕೆಂದರೆ ತುಳುವ ನಾಡು (ಈಗಿನ ದಕ್ಷಿಣ ಕನ್ನಡ), ಹೈವನಾಡು (ಈಗಿನ ಉತ್ತರ ಕನ್ನಡ), ಕೊಂಕಣ ಮತ್ತು ಪಶ್ಚಿಮ ಘಟ್ಟಗಳ ಮೇಲಿನ ಕೆಲವು ಪ್ರಾಂತಗಳು – ಇವುಗಳ ಮೇಲೆಲ್ಲ ಕ್ರಿ.ಶ. ಸುಮಾರು ೧ನೆಯ ಶತಮಾನದಿಂದ ಹಿಡಿದು ಅವಿಚ್ಛಿನ್ನವಾಗಿ ೧೫ ಶತಮಾನಗಳ ಕಾಲ ಅವರು ರಾಜ್ಯಭಾರ ನಡೆಸಿದ್ದಾರೆ. ಆನಂತರ ಅವರು ಸಣ್ಣ ಪುಟ್ಟ ಪಾಳೆಯಗಾರರಾಗಿ ಪರಿಣಾಮ ಹೊಂದಿದರು.

ಅವರ ನಾಡಿಗೆ ಆಳ್ವಖೇಡ ೬೦೦೦ ಎಂಬ ಹೆಸರಿತ್ತು. ಅವರ ರಾಜಧಾನಿ ತುಳುವನಾಡಿನ ಉದಯಾವರ. ಗ್ರೀಕರ ಭೂಗೋಳ ಶಾಸ್ತ್ರಜ್ಞನಾದ ತೊಲೆಮಿ ಈ ರಾಜ್ಯವನ್ನು ಓಲ್ಮೈಖೋರ ಎಂದು ಕರೆದಿದ್ದಾನೆ. ಆದರೆ ಮೊದಲಿನ ಆಳುಪರ ವಿಷಯವಾಗಿ ನಮಗೆ ಹೆಚ್ಚು ಸಂಗತಿಗಳು ತಿಳಿದಿಲ್ಲ. ನಮಗೆ ದೊರೆಯುವ ಮೊದಲನೆಯ ಐತಿಹಾಸಿಕ ಪುರುಷನಾದರೋ ಕ್ರಿ.ಶ. ೪೫೦ರಲ್ಲಿದ್ದ ದೊರೆಯಾದ

ಆಳುಪ. ಕ್ರಿ.ಶ. ೬೭೫ರಿಂದ ೭೦೦ ರವರೆಗೆ ಆಳಿದ ದೊರೆಯಾದ ಚಿತ್ರವಾಹನನು ಆಳುಪರಲ್ಲಿ ಪ್ರಖ್ಯಾತನು. ಇವನ ಕಾಲದಲ್ಲಿ ಕದಂಬ ಮಂಡಲದ ಒಂದು ಭಾಗ ಆಳುಪರ ಪ್ರಭುತ್ವಕ್ಕೆ ಒಳಪಟ್ಟಿತ್ತು. ಇದಲ್ಲದೆ ಚಿತ್ರವಾಹನನು ಪಶ್ಚಿಮ ಚಾಲುಕ್ಯ ಚಕ್ರವರ್ತಿಯಾದ ವಿನಯಾದಿತ್ಯನಿಗೆ (ಕಾಲ ಕ್ರಿ.ಶ. ೬೮೦-೬೯೬) ಮಾಂಡಲಿಕನಾಗಿಯೂ ಆತನ ಸಂಧಿವಿಗ್ರಹಿಯಾಗಿಯೂ ಇದ್ದನೆಂದು ತಿಳಿಯುತ್ತದೆ,

ಈ ವಂಶದ ಪ್ರಖ್ಯಾತ ರಾಜರುಗಳಲ್ಲಿ ಕವಿ ಭುಜಬಲ ಆಳುಪೇಂದ್ರ ಎಂಬುವನೊಬ್ಬನು. ಈತನು ಕ್ರಿ.ಶ. ೧೧೧೩ ರಿಂದ ೧೧೫೫ರವರೆಗೆ ಆಳಿದನು. ಈ ದೀರ್ಘವಾದ ರಾಜ್ಯಭಾರ ಕಾಲದಲ್ಲಿ ದೇಶದಲ್ಲೆಲ್ಲ ಶಾಂತಿಯೂ ಸುಭಿಕ್ಷವೂ ನೆಲಸಿದ್ದುವಲ್ಲದೆ ಪಲಿಪಟನಾಯಕನೆಂಬ ಒಬ್ಬ ಮಹಾತ್ಮನು ಜನಿಸಿದನು. ಈ ಮಹಾತ್ಮನ ದಾನ ಧರ್ಮಗಳೂ ದಯೆಯೂ ಗಾದೆಗಳಾಗಿ ಪರಿಣಮಿಸಿ ತುಳುವನಾಡಿನ ಜನರು ಇಂದಿಗೂ ಅವುಗಳನ್ನು ಕೃತಜ್ಞತೆಯಿಂದ ಸ್ಮರಿಸುತ್ತಿದ್ದಾರೆ.

ವಿಜಯನಗರ ರಾಜ್ಯ ಸ್ಥಾಪಿತವಾದ ಕಾಲದಲ್ಲಿ ಆಳ್ವಖೇಡ ೬೦೦೦ ಸೀಮೆಯನ್ನು ವೀರಕುಲಶೇಖರದೇವನು ಆಳುತ್ತಿದ್ದನು. ವಿಜಯನಗರ ರಾಜ್ಯ ಸ್ಥಾಪಕರು ಕ್ರಿ.ಶ. ೧೩೪೬ರಲ್ಲಿ ಶೃಂಗೇರಿಗೆ ಹೋಗಿ ಭಾರತಿ ತೀರ್ಥರಿಗೆ ಭಕ್ತಿ ಕಾಣಿಕೆಯನ್ನು ಸಲ್ಲಿಸಿದರು. ಅದೇ ವರ್ಷದಲ್ಲಿ ವೀರಕುಲಶೇಖರದೇವನೂ ಶೃಂಗೇರಿಗೆ ಹೋಗಿ ಅದೇ ಗುರುಗಳಿಗೆ ತನ್ನ ಭಕ್ತಿ ಕಾಣಿಕೆಯನ್ನು ಸಲ್ಲಿಸಿಬಂದದ್ದು ಒಂದು ಸ್ವಾರಸ್ಯವಾದ ವಿಷಯ. ವಿಜಯನಗರ ಸ್ಥಾಪಕರು ಶೃಂಗೇರಿಯ ಜಗದ್ಗುರುಗಳ ಸೇವಕರಿಗೆ ದತ್ತಿಗಳನ್ನು ಕೊಟ್ಟ ದಾನಶಾಸನದ ಕೆಳಗಡೆಯಲ್ಲಿಯೇ ತಾನೂ ಅವರಿಗೆ ದತ್ತಿಗಳನ್ನು ಕೊಟ್ಟು ವೀರಕುಲಶೇಖರದೇವನು ಶಾಸನ ಬರೆಯಿಸಿದನು. ಹೀಗೆ ಕನ್ನಡನಾಡಿನ ಚರಿತ್ರೆಯಲ್ಲಿ ತುಳುವರೂ ವಿಜಯನಗರದವರೂ ಒಂದಾಗಿ ಹೊಸ ಪ್ರಕರಣವನ್ನು ಆರಂಭಿಸಿದರೆಂದು ವೀರಕುಲಶೇಖರನು ಬಹಿರಂಗವಾಗಿ ಸಾರಿರುವನು. ಈ ಹೊಸ ವಿಜಯನಗರದ ದೊರೆಗಳ ಮೇಲಾಳಿಕೆಯನ್ನು ಒಪ್ಪಿಕೊಂಡ ಆಳುಪರಲ್ಲಿ ವೀರಕುಲಶೇಖರದೇವನೇ ಮೊದಲಿಗನು.

ವಿಜಯನಗರ ಸಾಮ್ರಾಜ್ಯ ಬೆಳೆದು ಪ್ರಬಲವಾಗುತ್ತಿದ್ದಾಗ ತುಳುವನಾಡಿನಲ್ಲಿ ಆಳುಪರು ಸ್ವತಂತ್ರವಾಗಿರುವುದು ಸಾಧ್ಯವಾಗದ ವಿಷಯ. ಆಳುಪರ ಸ್ವಾತಂತ್ರ್ಯ ಶೀಘ್ರದಲ್ಲಿಯೇ ಕೊನೆಗೊಂಡಿತು. ಈ ಮನೆತನದ ಕೊನೆಯ ದೊರೆಯಾದ ಮುಮ್ಮಡಿ ವೀರಕುಲಶೇಖರದೇವನು ವಿಜಯನಗರ ಚಕ್ರವರ್ತಿಗಳ ಆಜ್ಞಾಧಾರಕನಾಗಿ ಕ್ರಿ.ಶ. ೧೪೪೧ರಿಂದ ೧೪೪೪ರ ವರೆಗೆ ತುಳವನಾಡನ್ನಾಳಿದನು.

೪. ಸೇಂದ್ರಕರು: ಆಳುಪರಂತೆಯೇ ಇವರು ನಾಗವಂಶಕ್ಕೆ ಸೇರಿದವರಾಗಿಯೂ ಪ್ರಾಚೀನ ಮನೆತನದವರಾಗಿಯೂ ಇದ್ದರು. ಪ್ರಖ್ಯಾತನಾದ ಕದಂಬರ ಮಯೂರವರ್ಮನು ಜಯಿಸಿದವರಲ್ಲಿ ಸೇಂದ್ರಕರೂ ಒಬ್ಬರಾಗಿದ್ದರೆಂದು ತಿಳಿಯುತ್ತದೆ. ಆಳುಪರ ಐತಿಹಾಸಿಕ ವೃತ್ತಗಳಲ್ಲಿ ಇವರ ಹೆಸರುಗಳು ಬರುವುದರಿಂದ

ಈ ಎರಡು ಮನೆತನಗಳಿಗೂ ನಿಕಟ ಸಂಬಂಧವಿದ್ದಿರಬೇಕೆಂದು ತೋರುತ್ತದೆ. ಅವರ ರಾಜ್ಯ ಹೆಚ್ಚಾಗಿ ನಾಗರಖಂಡದಲ್ಲಿಯೂ ಜಡಗೂರು (ಶಿವಮೊಗ್ಗ ಜಿಲ್ಲೆಯ ಈಗಿನ ಜೆಡ್ಡ) ಪ್ರಾಂತದಲ್ಲಿಯೂ ಹರಡಿತ್ತು. ಅವರು ಕೆಲವು ಕಾಲ ಕರ್ನೂಲು ಪ್ರಾಂತವನ್ನು ಆಳಿದಂತೆ ತೋರುತ್ತದೆ. ಅವರ ಧ್ವಜದಲ್ಲಿ ಗಜ ಲಾಂಛನವಿತ್ತು. ಅವರು ಕ್ರಿ.ಶ. ೨೪೮-೯ರಲ್ಲಿ ಆರಂಭವಾದ ತ್ರೈಕೂಟಕ ಶಕವನ್ನು ಉಪಯೋಗಿಸುತ್ತಿದ್ದರು.

ಈ ಮನೆತನದ ಅತ್ಯಂತ ಪ್ರಾಚೀನರಲ್ಲಿ ಬಾಣಶಕ್ತಿ ಎಂಬವನೊಬ್ಬನು. ತುಳುವನಾಡಿನ ಒಂದು ಶಾಸನದಲ್ಲಿ ಅವನ ಹೆಸರು ದೊರೆಯುವುದರಿಂದ ಅವನು ನಾಗರಖಂಡದ ಮೂಲ ಸೇಂದ್ರಕ ವಂಶದವನಾಗಿರಬಹುದು. ಪಶ್ಚಿಮ ಚಾಳುಕ್ಯರು ತಲೆಯೆತ್ತಿದಾಗ ಸೇಂದ್ರಕರು ಅವರ ಮಾಂಡಲಿಕರಾದರು. ಇಮ್ಮಡಿ ಪುಲಿಕೇಶಿಯ ಕಾಲದಲ್ಲಿ (ಕ್ರಿ.ಶ. ೬೦೯-೬೪೨) ಶ್ರೀ ವಲ್ಲಭಸೇನ ನಂದರಾಜ ಎಂಬವನು ಸೇಂದ್ರಕರಲ್ಲಿದ್ದನು. ಇವನು ಆ ಪುಲಿಕೇಶಿಯ ಸೋದರಮಾವನು. ಪಶ್ಚಿಮ ಚಾಳುಕ್ಯ ಚಕ್ರವರ್ತಿಯಾದ ಮೊದಲನೆಯ ವಿಕ್ರಮಾದಿತ್ಯನ ಕಾಲದಲ್ಲಿ (ಸುಮಾರು ಕ್ರಿ.ಶ. ೬೬೪) ಸೇಂದ್ರಕರಲ್ಲಿ ದೇವಶಕ್ತಿ ಎಂಬ ರಾಜನಿದ್ದನು.

ಸೇಂದ್ರಕ ವಂಶದವರು ಮಾಂಡಲಿಕರಾದರೂ ಕನ್ನಡ ನಾಡಿನ ಚರಿತ್ರೆಯಲ್ಲಿ ಅವರು ಮುಖ್ಯರಾಗಿರುವುದಕ್ಕೆ ಒಂದು ಕಾರಣವಿದೆ. ಗುಜರಾತ್ ಪ್ರಾಂತದಲ್ಲಿ ಪಶ್ಚಿಮ ಚಾಳುಕ್ಯರ ಮೊದಲನೇ ಶಾಖೆ ನೆಲಸಿದ್ದಿತಷ್ಟೆ. ಆ ಶಾಖೆ ವಿಜಯವರ್ಮನಲ್ಲಿ ಕೊನೆಗೊಂಡಿತು. ಅವನ ತರುವಾಯ ಪಶ್ಚಿಮ ಚಾಳುಕ್ಯರ ಇನ್ನೊಂದು ಶಾಖೆಯವರು ಗುಜರಾತನ್ನು ಆಕ್ರಮಿಸಿ ರಾಜ್ಯಸ್ಥಾಪನೆ ಮಾಡುವವರೆಗೂ ಮಧ್ಯಕಾಲದಲ್ಲಿ ಸೇಂದ್ರಕರು ಗುಜರಾತನ್ನು ಆಳುತ್ತಿದ್ದರು. ಈ ಸೇಂದ್ರಕರಲ್ಲಿ ಪೃಥ್ವೀವಲ್ಲಭ ನಿಕುಂಭಲ್ಲಶಕ್ತಿ ಎಂಬುವನು ಪ್ರಸಿದ್ಧನಾಗಿ ಕ್ರಿ.ಶ. ೬೬೫ರಲ್ಲಿ ಆಳುತ್ತಿದ್ದನು. ಬರೋಡ ಸಂಸ್ಥಾನದಲ್ಲಿರುವ ಬಗುಮ್ರಾ (ಈಗಿನ ಗುಜರಾತ್ ಪ್ರಾಂತ್ಯ) ಈತನ ರಾಜಧಾನಿಯಾಗಿತ್ತು. ಮೂಲ ಸೇಂದ್ರಕ ವಂಶದವರು, ಕ್ರಿ.ಶ. ೮ನೆಯ ಶತಮಾನದ ಮಧ್ಯದವರೆಗೂ ಪ್ರಭುತ್ವ ಮಾಡುತ್ತಿದ್ದು ಅನಂತರ ನಮ್ಮ ದೃಷ್ಟಿಗೆ ಬೀಳದೆ ಅದೃಶ್ಯರಾಗುತ್ತಾರೆ.

೫. ನಳರು: ಕನ್ನಡ ನಾಡಿನ ಸಣ್ಣ ರಾಜಮನೆತನಗಳಲ್ಲಿ ಹೆಚ್ಚು ಪ್ರಖ್ಯಾತಿಗೆ ಬಂದವರು ಇನ್ನೊಬ್ಬರಿದ್ದಾರೆ. ಅವರೇ ನಳರು. ಅವರ ರಾಜ್ಯ ಈಗಿನ ಬಳ್ಳಾರಿ ಮತ್ತು ಕರ್ನೂಲು ಜಿಲ್ಲೆಗಳಾಗಿದ್ದುವು. ಅವರು ಅತ್ಯತ್ಪ್ರಾಯ ಸ್ಥಿತಿಯಲ್ಲಿದ್ದಾಗ ಬಸ್ತಾರ್ ಸಂಸ್ಥಾನದವರೆಗೂ ರಾಜ್ಯವನ್ನು ವಿಸ್ತರಿಸಿ ಅದನ್ನೆಲ್ಲ ಆಳುತ್ತಿದ್ದರೆಂದು ತೋರುತ್ತದೆ. ಹೀಗೆ ರಾಜ್ಯ ವಿಸ್ತಾರ ಮಾಡುವ ಯುದ್ಧೋದ್ಯೋಗದಲ್ಲಿ ವಾಕಾಟಕರೊಡನೆ ಘರ್ಷಣೆಯುಂಟಾಗಿ ಅವರ ದೊರೆಯಾದ ಇಮ್ಮಡಿ ಪೃಥ್ವೀಸೇನನು (ಸುಮಾರು ಕ್ರಿ.ಶ. ೪೭೫-೪೮೫) ನಳರನ್ನು ಸೋಲಿಸಿದನು. ರಾಜಧಾನಿಯಾದ ಪುಸ್ಕರೀ ಎಂಬುದೂ ಆ ಪೃಥ್ವೀಸೇನನಿಂದ ಧ್ವಂಸವಾಗಿ ಹೋಯಿತು.

ಉಳಿದುದನ್ನಿಟ್ಟುಕೊಂಡು ಬಾಳುತ್ತಿದ್ದಾಗ ಪಶ್ಚಿಮ ಚಾಳುಕ್ಯರ ಇಮ್ಮಡಿ ಪುಲಿಕೇಶಿ ದಂಡೆತ್ತಿ ಬಂದು ನಳರನ್ನು ನಿರ್ನಾಮ ಮಾಡಿಬಿಟ್ಟನು. ನಳವಾಡ ವಿಷಯ ಎಂಬ ಅವರ ಸೀಮೆ ಚಾಲುಕ್ಯ ಚಕ್ರಾಧಿಪತ್ಯದಲ್ಲಿ ಸೇರಿಹೋಯಿತು. ಚಾಳುಕ್ಯರ ಆರನೆಯ ವಿಕ್ರಮಾದಿತ್ಯನು ಪುನಃ ನಳವಾಡ ವಿಷಯದ ಮೇಲೆ ದಂಡೆತ್ತಿ ಬಂದು ಅದನ್ನು ಧ್ವಂಸ ಮಾಡಿದನೆಂದು ಶಾಸನಗಳಿಂದ ತಿಳಿಯುವುದರಿಂದ ನಳರು ತಲೆಯೆತ್ತಲಾಗಲಿಲ್ಲ. ಕನ್ನಡನಾಡಿನ ಮಧ್ಯ ಮತ್ತು ಪಶ್ಚಿಮ ಭಾಗಗಳ ಚರಿತ್ರೆಯಲ್ಲಿ ಭಾಗವಹಿಸಿ, ಕಡೆಗೆ ಈ ರೀತಿ ಹನ್ನೊಂದನೆಯ ಶತಮಾನದಲ್ಲಿ ಅವರು ಅದೃಶ್ಯರಾದರು.

೬. ಪುನ್ನಾಡ ದೊರೆಗಳು: ಪುನ್ನಾಡ ದೊರೆಗಳು ಸಣ್ಣ ರಾಜಮನೆತನಕ್ಕೆ ಸೇರಿದವರಾದರೂ ಆ ಮನೆತನ ಬಹಳ ಪ್ರಾಚೀನವೂ ಪ್ರಭಾವವುಳ್ಳದ್ದೂ ಆಗಿದ್ದಿತು. ಅವರ ರಾಜ್ಯದ ಹೆಸರನ್ನು ಗ್ರೀಕರ ಭೂಗೋಳಶಾಸ್ತ್ರಜ್ಞನಾದ ತೋಲೆಮಿ ಹೇಳಿದ್ದಾನೆ. ಈಗಿನ ಮೈಸೂರು ಪಟ್ಟಣಕ್ಕೆ ದಕ್ಷಿಣದಲ್ಲಿ ಆ ರಾಜ್ಯವಿತ್ತು. ಆಳುಪರ ನಾಡಿನಂತೆಯೇ ಇದು ೬,೦೦೦ ನಾಡಾಗಿದ್ದಿತು. ಅದರ ರಾಜಧಾನಿ ಕಪಿನೀ ನದಿಯ ತೀರದಲ್ಲಿರುವ ಕೀರ್ತಿಪುರ (ಹೆಗ್ಗಡದೇವನ ಕೋಟೆ ತಾಲ್ಲೂಕಿನ ಈಗಿನ ಕಿತ್ತೂರು). ಪ್ರಸಿದ್ಧ ಜೈನಗುರುವಾದ ಭದ್ರಬಾಹು ಉತ್ತರ ಹಿಂದುಸ್ಥಾನದಿಂದ ಹೊರಟು ಇದೇ ಪುನ್ನಾಡಿಗೆ ವಲಸೆ ಬಂದನೆಂದು ಪ್ರತೀತಿಯಿದೆ.

ಪುನ್ನಾಡ ದೊರೆಗಳು ತಾಮ್ರ – ಕಾಶ್ಯಪ ಕುಲಕ್ಕೆ ಸೇರಿದವರು. ಸುಮಾರು ಕ್ರಿ.ಶ. ೨೦೦ರಲ್ಲಿದ್ದ ವಿಷ್ಣುದಾಸನೇ ನಮಗೆ ತಿಳಿದಮಟ್ಟಿಗೆ ಅವರಲ್ಲಿ ಮೊದಲನೆಯ ದೊರೆ. ಕ್ರಿ.ಶ. ೨೮೦ರಲ್ಲಿ ಅವರ ನಾಡನ್ನು ಕದಂಬರ ಮಯೂರವರ್ಮನು ಜಯಿಸಿದನು. ಹೀಗೆ ಪುನ್ನಾಟರು ಕದಂಬರ ಸಾಮಂತರಾದರು. ಗಂಗರಿಗೂ ಪುನ್ನಾಟರಿಗೂ ವಂಶಸಂಬಂಧ ಬೆಳೆಯುವುದಕ್ಕೆ ಪುನ್ನಾಟರ ಪ್ರಾಚೀನತೆಯೇ ಮುಖ್ಯ ಕಾರಣ. ಕ್ರಿ.ಶ. ೪೩೯–೯೧ರವರೆಗೆ ಆಳಿದ ಗಂಗರಾಜನಾದ ಅವಿನೀತನು ಪುನ್ನಾಡ ದೊರೆಯಾದ ಸ್ಕಂದವರ್ಮನ ಮಗಳನ್ನು ಮದುವೆಯಾಗಿದ್ದನು. ಪುನ್ನಾಡ ಸೀಮೆಯೂ ಕ್ರಮ ಕ್ರಮವಾಗಿ ಗಂಗರಾಜ್ಯದಲ್ಲಿ ಸೇರಿಹೋಗಿ ಕಡೆಗೆ ಅದೃಶ್ಯವಾಯಿತು. 'ಪುನ್ನಾಡು' ಎಂಬ ಹೆಸರು ಮಾತ್ರ 'ಹದಿನಾಡು' ಸೀಮೆ ಎಂಬುದರಲ್ಲಿ ಇನ್ನೂ ಉಳಿದುಕೊಂಡು ಬಂದಿದೆ. ಈ ಹದಿನಾಡು ಸೀಮೆಯನ್ನೇ ಮೈಸೂರು ದೊರೆಗಳಲ್ಲಿ ಪ್ರಖ್ಯಾತರಾದ ಕಂಠೀರವ ನರಸರಾಜ ಒಡೆಯರು ಪಿತ್ರಾರ್ಜಿತವಾದ ಪಾಳೆಯಪಟ್ಟಾಗಿ ಪಡೆದದ್ದು. ಹೀಗೆ ಆಧುನಿಕ ಮೈಸೂರಿಗೂ ಪುನ್ನಾಡಿಗೂ ಇತಿಹಾಸ ಸಂಬಂಧ ಬೆಳೆದು ಬಂದಿದೆ.

ಪ್ರಕರಣ ೩

ಕರ್ನಾಟಕ ಅರಸೊತ್ತಿಗೆ ತಲೆಯೆತ್ತಿದ್ದು

ಕದಂಬರು ಮತ್ತು ಗಂಗರು

ಕ್ರಿ.ಶ. ೩ನೆಯ ಶತಮಾನದಿಂದ ಕ್ರಿ.ಶ. ೧೧ನೆಯ ಶತಮಾನದವರೆಗೆ

೧. ಕದಂಬರು

ಇದುವರೆಗೂ ನಾವು ಹೇಳಿದ ಚಿಕ್ಕ ಚಿಕ್ಕ ರಾಜಮನೆತನಗಳು ತಮತಮಗೆ ತೋರಿದ ರೀತಿಯಲ್ಲಿ ಕರ್ನಾಟಕದ ಅರಸೊತ್ತಿಗೆಯ ಭಾವನೆಯನ್ನು ಜನತೆಯಲ್ಲಿ ಭದ್ರವಾಗಿ ಬೇರೂರಿಸಿದ್ದರು. ಆದರೆ ಈ ಅರಸೊತ್ತಿಗೆ ಅತ್ಯುನ್ನತ ಶಿಖರಕ್ಕೆ ಏರಿಸಿದ ಕೀರ್ತಿ ಮೊದಲು ಕದಂಬರಿಗೂ ಆಮೇಲೆ ಗಂಗರಿಗೂ ಸಲ್ಲತಕ್ಕದ್ದಾಗಿದೆ. ನಾವು ಹಿಂದೆ ತಿಳಿಸಿರುವಂತೆ ಚುಟುಗಳು ಆಮೇಲೆ ಶಾತವಾಹನರೊಡನೆ ಸಂಬಂಧ ಪಡೆದಿದ್ದಂತೆಯೇ ಕದಂಬರೊಡನೆಯೂ ಸಂಬಂಧ ಪಡೆದಿದ್ದರು. ಮೊದಲನೆಯದಾಗಿ, ಆದಿ ಕದಂಬರು ಚುಟುಗಳಂತೆಯೇ ತಮ್ಮನ್ನು ಹಾರಿತಪುತ್ರರೆಂದು ಕರೆದುಕೊಳ್ಳುತ್ತಿದ್ದರು. ಎರಡನೆಯದಾಗಿ, ಚುಟುಗಳೂ ಕದಂಬರೂ ಮಾನವ್ಯ ಗೋತ್ರಕ್ಕೆ ಸೇರಿದವರು. ಇವರಿಬ್ಬರೂ ತಮ್ಮ ರಾಜಧಾನಿಯಾದ ವೈಜಯಂತೀಪುರದ (ಬನವಾಸಿ) ಹೆಸರಿನಲ್ಲಿ ತಮ್ಮನ್ನು ವೈಜಯಂತೀಪುರವರಾಧೀಶ್ವರರೆಂದು ಕರೆದುಕೊಳ್ಳುತ್ತಿದ್ದರು. ಇವರಿಬ್ಬರ ಶಾಸನಗಳೂ ಪ್ರಾರಂಭದಲ್ಲಿ ಮಟ್ಟಪಟ್ಟಿಯ (ಬಹುಶಃ ಮಳವಳ್ಳಿ) ದೇವರನ್ನು ಸ್ತೋತ್ರ ಮಾಡುತ್ತವೆ. ಕೊನೆಯದಾಗಿ ಇವರಿಬ್ಬರ ಭಾಷೆಯೂ ಪ್ರಾಕೃತವೇ ಆಗಿತ್ತು.

ಚುಟುಗಳ ತರುವಾಯ ಕದಂಬರು ಸುಮಾರು ಕ್ರಿ.ಶ. ೩ನೆಯ ಶತಮಾನದ ಮಧ್ಯಭಾಗದಲ್ಲಿ ಕನ್ನಡ ನಾಡನ್ನು ಆಳತೊಡಗಿದರೆಂಬುದು ನಿಷ್ಕರ್ಷೆಯಾಗಿ ತಿಳಿದಿದೆ. ಆದರೆ ಕದಂಬರ ಮೂಲದ ವಿಚಾರ ಮಾತ್ರ ನಮಗೆ ನಿಷ್ಕರ್ಷೆಯಾಗಿ ತಿಳಿದಿಲ್ಲ. ಮುಕ್ಕಣ್ಣ ಅಥವಾ ತ್ರಿನೇತ್ರ ಅಥವಾ ಜಯಂತ ತ್ರಿಲೋಚನ ಎಂಬುವನು ಕದಂಬರ ಮೂಲಪುರುಷನೆಂದು ಈಚಿನ ಒಂದು ಶಾಸನ ತಿಳಿಸುತ್ತದೆ. ಮಯೂರವರ್ಮನು ಕದಂಬರ ಮೂಲಪುರುಷನೆಂದು ಮತ್ತೊಂದು ಶಾಸನ ತಿಳಿಸುತ್ತದೆ. ಇದು ಹೇಗಾದರೂ ಇರಲಿ, ಕದಂಬರು ಅಚ್ಚ ಕನ್ನಡನಾಡಿನವರೆಂಬುದೂ ಬಹುಶಃ ಬನವಾಸಿಯ ಸ್ಥಳದವರೆಂಬುದೂ ನಿಶ್ಚಯವಾದ ಮಾತು. ಅವರ ಮುದ್ರೆಯಲ್ಲಿ ಸಿಂಹ, ಧ್ವಜದಲ್ಲಿ ವಾನರ ಇವೆ. ಅವರ ಕುಲದೇವರು ಬನವಾಸಿಯ ಮಧುಕೇಶ್ವರ. ಮೊದಲಲ್ಲಿ ಅವರು ಮೈಸೂರಿನ ವಾಯುವ್ಯ ಪ್ರಾಂತವನ್ನು ಆಳುತ್ತಿದ್ದರು.

ಅವರಲ್ಲಿ ಮೊದಲಿನ ಇತಿಹಾಸ ಪುರುಷನು ಕ್ರಿ.ಶ. ೨೮೦ರಲ್ಲಿದ್ದ

ಮಯೂರವರ್ಮನು. ಹೆಸರಾದರೋ ಅವನನ್ನು ಬ್ರಾಹ್ಮಣನೆಂದು ಸೂಚಿಸುತ್ತದೆ. ಸಾಹಸ ಕಾರ್ಯಗಳಾದರೋ ಈ ಯುಗದ ಅತಿ ಪ್ರಖ್ಯಾತ ಯೋಧರಲ್ಲಿ ಒಬ್ಬನೆಂದು ಅವನನ್ನು ತೋರಿಸುತ್ತವೆ. ಈಚಿನ ಒಂದು ಶಾಸನದಿಂದ ಈತನ ವಿಚಾರದಲ್ಲಿ ಮುಂದೆ ಹೇಳುವ ಮುಖ್ಯ ಸಂಗತಿಗಳು ತಿಳಿಯುತ್ತವೆ. ಮಯೂರವರ್ಮನು ವೇದಾಧ್ಯಯನವನ್ನು ಸಂಪೂರ್ಣಗೊಳಿಸುವುದಕ್ಕಾಗಿ ತನ್ನ ಗುರುವಿನೊಡನೆ (ಮದ್ರಾಸಿನ ಸಮೀಪದಲ್ಲಿರುವ) ಪಲ್ಲವರ ರಾಜಧಾನಿಯಾದ ಕಾಂಚೀಪಟ್ಟಣಕ್ಕೆ ಹೋದನು. ಅಲ್ಲಿ ಪಲ್ಲವ ರಾಜಕುಮಾರಿಯ ಗುರುವಿಗೂ ಈತನಿಗೂ ಬಲವತ್ತರವಾದ ಜಗಳವುಂಟಾಯಿತು. ಇದರಿಂದ ಮಯೂರವರ್ಮನಿಗೂ ಪಲ್ಲವರಿಗೂ ಘೋರವಾದ ಯುದ್ಧ ಕೈಗಟ್ಟಿ ಅದರಲ್ಲಿ ಪಲ್ಲವರು ಸೋತುಹೋದರು. ಅನಂತರ ಮಯೂರವರ್ಮನು ಕರ್ನೂಲು ಜಿಲ್ಲೆಯಲ್ಲಿರುವ ಶ್ರೀ ಪರ್ವತಕ್ಕೆ ದಂಡೆತ್ತಿಹೋಗಿ ಬಾಣರನ್ನೂ ಇತರ ದೊರೆಗಳನ್ನೂ ಜಯಿಸಿದನು. ಆತನು ತ್ರೈಕೂಟದೇಶ, ಅಭೀರರು, ಪಲ್ಲವರು, ಪಾರಿಯಾತ್ರ, ಶಕಸ್ಥಾನ, ಸಯಿಂದ್ರಕ, ಪುನ್ನಾಟ ಮತ್ತು ಮೌಖರಿಗಳ ಮೇಲೆಲ್ಲ ದಿಗ್ವಿಜಯ ಮಾಡಿದನೆಂದು ಚಂದ್ರವಳ್ಳಿಯ ಶಿಲಾಶಾಸನದಿಂದ ನಮಗೆ ತಿಳಿಯುತ್ತದೆ. ದಕ್ಷಿಣದಲ್ಲಿ ಶಿವಮೊಗ್ಗ ಜಿಲ್ಲೆಯಿಂದ ಹಿಡಿದು ಕಾಂಚೀಪಟ್ಟಣದವರೆಗೆ, ಉತ್ತರದಲ್ಲಿ ಮಾಳವದಿಂದ ಹಿಡಿದು ಗಯಾ ಕ್ಷೇತ್ರದವರೆಗೂ ವ್ಯಾಪಿಸಿದ್ದ ವಿಸ್ತಾರವಾದ ತನ್ನ ಚಕ್ರಾಧಿಪತ್ಯವನ್ನು ಮಯೂರವರ್ಮನು ಪ್ರತಾಪದಿಂದ ಆಳಿದನಲ್ಲದೆ ಸಾರ್ವಭೌಮತ್ವದ ಗುರುತಾಗಿ ಅಶ್ವಮೇಧ ಯಾಗವನ್ನು ಮಾಡಿದನು. ಆತನ ಮರಿಮಗನಾದ ಕಾಕುತ್ಸ್ಥವರ್ಮನು ಮುತ್ತಾತನಂತೆಯೇ ಪ್ರತಾಪಶಾಲಿಯಾಗಿದ್ದನು. ಕಾಕುತ್ಸ್ಥವರ್ಮನ ಹೆಣ್ಣುಮಕ್ಕಳು ಗುಪ್ತವಂಶದ ಮತ್ತು ಇತರ ಪ್ರಖ್ಯಾತ ವಂಶದ ದೊರೆಗಳ ರಾಣಿಯರಾಗಿದ್ದರು. ಆತನು ತನ್ನ ಪ್ರಜೆಗಳ ಕ್ಷೇಮಾಭ್ಯುದಯಗಳಲ್ಲಿ ನಿರತನಾಗಿ ಹಲವು ಪ್ರಜೋಪಕಾರಕವಾದ ಕೆಲಸಗಳನ್ನು ಮಾಡಿದನು. ಪುರಾತನವಾದ ತಾಳಗುಂದದ ಪ್ರಣವೇಶ್ವರ ದೇವಾಲಯಕ್ಕೆ ದೊಡ್ಡದೊಂದು ಕಲ್ಯಾಣಿಯನ್ನು ಕಟ್ಟಿಸಿದುದೂ ಇದಕ್ಕೆ ಸಾಕ್ಷಿಯಾಗಿದೆ.

ಕಾಕುತ್ಸ್ಥವರ್ಮನ ಮೊಮ್ಮಗ ಮೃಗೇಶವರ್ಮ (ಸುಮಾರು ಕ್ರಿ.ಶ.೪೫೦). ಈತನ ಕೈಕಯಿ ರಾಜಕುಮಾರಿಯಾದ ಪ್ರಭಾವತಿಯನ್ನು ಮದುವೆಯಾಗಿದ್ದನು. ಕದಂಬರ ರಾಜ್ಯ ಅಚ್ಚಳಿಯದಂತೆ ಮೃಗೇಶವರ್ಮನು ಚೆನ್ನಾಗಿ ಕಾಪಾಡಿಕೊಂಡು ಬಂದನು. ಆತನು ನಿಷ್ಪಕ್ಷಪಾತವಾಗಿ ರಾಜ್ಯಭಾರ ನಡೆಸಿದನೆಂದೂ ಹಿಂದುಗಳ ಮತ್ತು ಜೈನರ ಸಾಹಿತ್ಯಗಳಿಗೂ ಮತಗಳಿಗೂ ಸರ್ವಸಮವಾಗಿ ಆಶ್ರಯ ನೀಡಿದನೆಂದೂ ಕೀರ್ತಿ ಪಡೆದಿದ್ದಾನೆ.

ಮೊದಲಿನ ಕದಂಬ ವಂಶದ ಅರಸರು ಇನ್ನೂ ಒಂದು ಶತಮಾನ ಕಾಲ ರಾಜ್ಯಭಾರ ಮಾಡಿದರು. ಅವರಲ್ಲಿ ಸುಮಾರು ಕ್ರಿ.ಶ. ೬೦೦ರಲ್ಲಿದ್ದ ಮಧುವರ್ಮನೇ ಕೊನೆಯವನೆಂದು ಕೆಲವರು ಹೇಳುತ್ತಾರೆ. ಮೊದಲಿನ ಕದಂಬವಂಶ ಇಲ್ಲಿಗೆ ಕೊನೆಗೊಂಡಿತೆಂದೇ ಹೇಳಬೇಕು. ಏಳನೆಯ ಶತಮಾನದಿಂದ ಹತ್ತನೆಯ

ಶತಮಾನದವರೆಗೆ ಕದಂಬರು ನಮ್ಮ ನಾಡಿನ ಚರಿತ್ರೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದಂತೆ ಕಾಣುವುದಿಲ್ಲ. ಇದಕ್ಕೆ ಹಲವು ಕಾರಣಗಳಿರಬಹುದು. ಮುಖ್ಯವಾದುವು ಯಾವುವೆಂದರೆ: ಮೊದಲನೆಯದಾಗಿ, ಮಯೂರವರ್ಮನಂಥ ಪ್ರತಾಪಶಾಲಿಗಳು ಮೂಲ ಕದಂಬ ವಂಶದಲ್ಲಿ ಆಮೇಲೆ ತಲೆದೋರಲಿಲ್ಲ. ಎರಡನೆಯದಾಗಿ, ಇದು ಗಂಗರಸರ ಉಚ್ಛ್ರಾಯ ಕಾಲವಾಗಿತ್ತು. ಅವರು ನಾವು ಮುಂದೆ ವಿವರಿಸಿದಂತೆ ಕನ್ನಡ ನಾಡಿನಲ್ಲಿ ತಮ್ಮ ಪ್ರಭಾವವನ್ನು ಬಲವತ್ತರವಾಗಿ ಬೀರಿದರು. ಕೊನೆಯದಾಗಿ, ೭–೧೦ ಈ ಮೂರು ಶತಮಾನಗಳಲ್ಲಿ ಹಲವು ಸಣ್ಣ ರಾಜಮನೆತನಗಳು ತಲೆಯೆತ್ತಿ, ಅದರಲ್ಲೂ ಮುಖ್ಯವಾಗಿ ಕದಂಬರ ಶತ್ರುಗಳಾದ ಪಲ್ಲವರು ತಲೆಯೆತ್ತಿ ರಾಜ್ಯಗಳನ್ನು ಕಟ್ಟಿಕೊಂಡರು. ಆದುದರಿಂದ ಕದಂಬರು ಈ ಮೂರು ಶತಮಾನಗಳ ಕಾಲದಲ್ಲಿ ಪ್ರಮುಖರಾಗಿರದೆ, ಹಿಂದೆ ಬಿದ್ದಿರುತ್ತಾರೆ.

ಆದರೆ ೧೦ ರಿಂದ ೧೪ನೆಯ ಶತಮಾನಗಳವರೆಗೂ ಕದಂಬರು ಹಲವು ಪ್ರಾಂತಗಳಲ್ಲಿ ಕಾಣಿಸಿಕೊಳ್ಳುತ್ತಲೇ ಇರುತ್ತಾರೆ. ಈ ಕಾಲದ ಪ್ರಾಮುಖ್ಯತೆಯನ್ನೂ ಈ ಕಾಲದಲ್ಲಿ ಕನ್ನಡನಾಡಿನ ಹಲವು ಭಾಗಗಳಲ್ಲಿ ಆಳುತ್ತಿದ್ದ ಮಾಂಡಲಿಕ ಮನೆತನಗಳ ಹೆಸರುಗಳನ್ನೂ ಹೇಳಬೇಕಾಗಿದೆ. ಮೊದಲಿನ ಕದಂಬ ವಂಶದ ಖ್ಯಾತಿಯನ್ನು ಮುಂದುವರೆಸಿದ, ಈ ಕಾಲದ ಮೂರು ಮುಖ್ಯ ಕದಂಬ ಶಾಖೆಗಳನ್ನು ಬೇರೊಂದು ಸಂದರ್ಭದಲ್ಲಿ ಹೇಳುತ್ತೇವೆ. ವಿಜಯನಗರ ರಾಜ್ಯ ತಲೆಯೆತ್ತುವವರೆಗೂ ಮೊದಲಿನ ಕದಂಬ ಶಾಖೆಯ ಪ್ರತಿನಿಧಿಗಳು ಇದ್ದೇ ಇದ್ದರು. ಆದುದರಿಂದ ಮಯೂರವರ್ಮನಿಂದ ಆರಂಭವಾಗಿ ಒಂದು ಸಾವಿರ ವರ್ಷಗಳ ಕಾಲ ಕರ್ನಾಟಕದ ಹಲವು ಭಾಗಗಳಲ್ಲಿ ಕದಂಬ ವಂಶದವರು ರಾಜ್ಯಭಾರ ಮಾಡುತ್ತಿದ್ದರೆಂಬುದು ಸ್ಪಷ್ಟವಾಗಿದೆ.

೨. ಗಂಗರು

ಕದಂಬರು ಶಾತವಾಹನರ ಹಿಂದೆಯೇ ಕನ್ನಡದ ಇತಿಹಾಶ ಮತ್ತು ಸಂಸ್ಕೃತಿಗಳನ್ನು ಮೈಸೂರಿನ ವಾಯುವ್ಯ ಪ್ರಾಂತದಲ್ಲಿ ಮುಂದುವರಿಸಲು ಬಂದರಷ್ಟೆ. ಮೈಸೂರಿನ ಮಧ್ಯಭಾಗದಲ್ಲಿಯೂ ದಕ್ಷಿಣದಲ್ಲಿಯೂ ಈ ಇತಿಹಾಸ ಮತ್ತು ಸಂಸ್ಕೃತಿಗಳನ್ನು ಸ್ವತಃ ಶಾತಕರ್ಣಿಗಳೋ ಅಥವಾ ಅವರ ಮಾಂಡಲಿಕರಲ್ಲಿ ಕೆಲವರು ಯಾರೋ – (ಅವರ ಹೆಸರುಗಳು ತಿಳಿದಿಲ್ಲ) ಆಗಲೇ ಗಂಗರ ಮಡಿಲಿನಲ್ಲಿ ಹಾಕಿದ್ದರು. ಕರ್ನಾಟಕದ ಅರಸೊತ್ತಿಗೆಯನ್ನು ಅಭೂತವಾದ ಉನ್ನತ ಶಿಖರಕ್ಕೇರಿಸಲು ಕದಂಬರೊಡನೆ ಗಂಗರೂ ಸ್ಪರ್ಧಿಸಿದರು. ಕದಂಬರ ಕಾಲದಲ್ಲಿ ಕರ್ನಾಟಕ ಅರಸೊತ್ತಿಗೆ ಕರ್ನಾಟಕದಲ್ಲೆಲ್ಲ ಮಹಾ ವೈಭವವನ್ನು ಪಡೆದದ್ದಲ್ಲದೆ ಅಖಿಲ ಭಾರತದ ರಾಜಕೀಯ ಜೀವನದ ಸೆರಗನ್ನೂ ಸಹ ಹಿಡಿಯಲು ಪ್ರಯತ್ನಿಸಿತು. ಕದಂಬರು ಯಾವುದನ್ನು ಸ್ವಲ್ಪ ರೀತಿಯಲ್ಲಿ ನಮ್ರವಾಗಿ ಪ್ರಾರಂಭಿಸಿದರೋ ಅದನ್ನು ಗಂಗರು ಬಹಳ ಹುರುಪಿನಿಂದ ಮುಂದುವರಿಸಿದರು. ಚುಟುಗಳು ಬೆಳೆಸಿದ್ದ ಸಂಸ್ಕೃತಿಯನ್ನು ಕದಂಬರು

ತಮ್ಮ ಸೀಮೆಯಲ್ಲೆಲ್ಲ ಹರಡಿ ಅದನ್ನು ಕಾಪಾಡಿಕೊಂಡು ಬಂದರು. ಹೆಚ್ಚಾಗಿ ಶಾತಕರ್ಣಿಗಳಿಂದಲೂ ಅಲ್ಪಸ್ವಲ್ಪವಾಗಿ ಮೌರ್ಯರಿಂದಲೂ ಕನ್ನಡನಾಡಿಗೆ ಬಂದ ಸಂಸ್ಕೃತಿ ಮತ್ತು ಇತಿಹಾಸಗಳನ್ನು ಮುಂದುವರಿಸುವ ಕರ್ತವ್ಯಭಾರ ಗಂಗರ ಮೇಲೆ ಬಿತ್ತು. ಇವರ ಕಾಲದಲ್ಲಿ ಕರ್ನಾಟಕದ ಮತ್ತು ಭಾರತದ ಅದೃಷ್ಟಭಾಗ್ಯಗಳು ಪರಸ್ಪರ ಮಿಳಿತವಾದವು. ಹೀಗೆ ಕರ್ನಾಟಕದ ಅರಸೊತ್ತಿಗೆಯನ್ನು ಅತ್ಯುನ್ನತ ಪದವಿಗೇರಿಸಿದ ಕೀರ್ತಿ ಕದಂಬರಿಗೂ ಗಂಗರಿಗೂ ಒಟ್ಟಿಗೆ ಸಲ್ಲತಕ್ಕದ್ದಾಗಿದೆ. ಈ ಅತ್ಯುನ್ನತ ಪದವಿಯನ್ನು ಅದು ಸರಿ ಸುಮಾರು ಹದಿಮೂರು ಶತಮಾನಗಳ ಕಾಲ ಕಾಪಾಡಿಕೊಂಡು ಬಂದಿತು.

ಗಂಗರು ನಿಸ್ಸಂದೇಹವಾಗಿಯೂ ಬಹು ಪ್ರಾಚೀನ ವಂಶಕ್ಕೆ ಸೇರಿದವರು. ಪುರಾಣದ ಕಥೆಯೊಂದು ಅವರ ಸಂಬಂಧವನ್ನು ಉತ್ತರದಲ್ಲಿರುವ ಗಂಗಾನದಿಯೊಡನೆ ಹೇಳುತ್ತದೆ. ಆದರೆ ಅವರ ಐತಿಹಾಸಿಕ ಪುರುಷರು ನಮ್ಮ ದೃಷ್ಟಿಗೆ ಬಿದ್ದಾಗ ಅವರೆಲ್ಲ ಕನ್ನಡ ತಾಯಿಯ ಮಕ್ಕಳಾಗಿಯೇ ಕಾಣುತ್ತಾರೆ. ಗಂಗರಲ್ಲಿ ಮೊತ್ತಮೊದಲನೆಯ ಐತಿಹಾಸಿಕ ಪುರುಷರು ಮಾಧವ ಮತ್ತು ದಡಿಗ. ಇವರ ತಂದೆ ಪದ್ಮನಾಭ. ಇವರು ಕಡಪ ಜಿಲ್ಲೆಯ ಗಂಗಪೇರೂರು ಎಂಬ ಊರಿನ ಸಂಬಂಧ ಪಡೆದಿದ್ದಾರೆ. ಇವರ ರಾಜಕೀಯ ಪ್ರಾಮುಖ್ಯ ಜೈನರ ಗುರುವಾದ ಸಿಂಹನಂದಿಯ ಕಾಲಕ್ಕೆ ಹೋಗುತ್ತದೆ. ಸಿಂಹನಂದಿ ಈ ಸಹೋದರರ ಬೋಧಾಗುರುವಾಗಿಯೂ ಇದ್ದನು. ಮಾಧವನು ಮೊದಲನೆಯ ಕೊಂಗುಣಿವರ್ಮ ಮಹಾರಾಜನಾಗಿ ಸುಮಾರು ಕ್ರಿ.ಶ. ೨೫೦ರಲ್ಲಿ ಆಳಿದನು. ಜೈನಗುರುವಾದ ಸಿಂಹನಂದಿಯ ಸಹಾಯದಿಂದ ಸ್ಥಾಪಿಸಿದ ರಾಜ್ಯವೇ ಮುಂದೆ ಗಂಗವಾಡಿ ೯೬೦೦೦ ಎಂದು ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. ಇದರ ರಾಜಧಾನಿ ಮೊದಲು ಕುವಲಾಲಪುರ (ಕೋಲಾರ)ವಾಗಿದ್ದು ಆಮೇಲೆ ನಾಲ್ಕನೆಯ ಶತಮಾನದ ಆದಿಭಾಗದಲ್ಲಿ, ಕೊಂಗುಣಿವರ್ಮನ ಮೊಮ್ಮಗನಾದ ಹರಿವರ್ಮನ ಕಾಲದಲ್ಲಿ ಕಾವೇರಿ ತೀರದಲ್ಲಿರುವ ತಲಕಾಡಿಗೆ ವರ್ಗವಾಯಿತು. ಮೊದಲಿನ ಗಂಗರಸರು ಜೈನಮತದವರಾಗಿದ್ದರು. ಆದರೆ ಹರಿವರ್ಮನ ಮಗನಾದ ವಿಷ್ಣುಗೋಪನ ಕಾಲದಲ್ಲಿ ಅವರು ವೈಷ್ಣವ ಮತಾವಲಂಬಿಗಳಾದರು. ವಿಷ್ಣುಗೋಪನ ಮೊಮ್ಮಗನೇ ಅವಿನೀತ. ಈತನು ಕ್ರಿ.ಶ. ೪೭೫ರಲ್ಲಿದ್ದನು. ಅವಿನೀತನು ಬಹಳ ವಿದ್ಯಾವಂತನಾಗಿಯೂ, ನ್ಯಾಯ ಪಕ್ಷಪಾತಿಯಾಗಿಯೂ ಉದಾರಿಯಾಗಿಯೂ ಇದ್ದನು. ಹಿಂದೂ ಮತದಲ್ಲಿದ್ದುದ್ದಕ್ಕಿಂತ ಜೈನ ಮತದಲ್ಲಿಯೇ ಈತನಿಗೆ ಹೆಚ್ಚು ವಿಶ್ವಾಸವಿತ್ತು. ಪುನ್ನಾಡಿನ ದೊರೆಯಾದ ಸ್ಕಂದವರ್ಮನ ಮಗಳನ್ನು ಈತನು ಮದುವೆಯಾಗಿದ್ದನು. ಇದನ್ನು ಹಿಂದೆಯೇ ತಿಳಿಸಿದ್ದೇವೆ. ಇವರ ಮಗ ದುರ್ವಿನೀತ. ಈತನ ಕಾಲ ಸುಮಾರು ಕ್ರಿ.ಶ. ೪೮೨. ತಂದೆಯಂತೆಯೇ ದುರ್ವಿನೀತ ವಿದ್ಯಾವಂತನಾಗಿದ್ದನು. ಈತನು ಭಾರವಿಯ **ಕಿರಾತಾರ್ಜುನೀಯ**ದ ಹದಿನೈದನೆಯ ಸರ್ಗಕ್ಕೆ ವ್ಯಾಖ್ಯಾನ ಬರೆದನೆಂದು ಪ್ರತೀತಿ ಇದೆ. ದುರ್ವಿನೀತನು ಪಲ್ಲವರ ರಾಜ್ಯವನ್ನು ಒತ್ತರಿಸಿ ತನ್ನ ರಾಜ್ಯವನ್ನು

ವಿಸ್ತಾರಗೊಳಿಸಿದನು. ಹೀಗೆ ಪಲ್ಲವರ ರಾಜ್ಯವನ್ನು ಆಕ್ರಮಣ ಮಾಡುವ ಸಂಪ್ರದಾಯ ದುರ್ವಿನೀತನ ಅನಂತರವೂ ನಡೆದುಬಂತು. ಕ್ರಿ.ಶ. ೬೭೦ರಲ್ಲಿದ್ದ ಭೂವಿಕ್ರಮನೆಂಬ ಗಂಗರಸನು ವಿಳಂದವೆಂಬ ಸ್ಥಳದಲ್ಲಿ ಪಲ್ಲವರನ್ನು ಸಂಪೂರ್ಣವಾಗಿ ಸೋಲಿಸಿ ದಿಕ್ಕಾಪಾಲಾಗಿ ಅವರನ್ನು ಚದುರಿಸಿದನು. ಶ್ರೀ ಪುರುಷನ ಕಾಲದಲ್ಲಿ (ಕ್ರಿ.ಶ. ೭೨೬-೮೦೧) ಗಂಗರಾಜ್ಯ ಉಚ್ಛ್ರಾಯದ ಅತ್ಯುನ್ನತ ಶಿಖರವನ್ನು ಮುಟ್ಟಿತು. ಈತನು ಮಾನ್ಯಪುರವನ್ನು (ನೆಲಮಂಗಲ ತಾಲ್ಲೂಕಿನ ಈಗಿನ ಮನ್ನೆ) ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ಶ್ರೀ ಪುರುಷನು ತನ್ನ ಮುತ್ತಾತನಂತೆಯೇ ಪಲ್ಲವ ವಿರೋಧದ ರಾಜಕೀಯ ಧೋರಣೆಯನ್ನೇ ಅನುಸರಿಸಿ ವಿಳರ್ದೆ ಎಂಬ ಸ್ಥಳದಲ್ಲಿ ಪಲ್ಲವರನ್ನು ಧ್ವಂಸಮಾಡಿದನು.

ಶ್ರೀ ಪುರುಷನ ತರುವಾಯ ಪಟ್ಟಕ್ಕೆ ಬಂದ ಅವನ ಮಗನಾದ ಸೈಗೊಟ್ಟ ಶಿವಮಾರನ ಕಾಲದಲ್ಲಿ ಗಂಗರಾಜ್ಯಕ್ಕೆ ವಿಪತ್ಪರಂಪರೆಗಳು ಬಂದೊದಗಿದವು. ಒಂದು ಶತಮಾನಕ್ಕೆ ಹಿಂದೆಯೇ - ಎಂದರೆ ೬-೭ನೆಯ ಶತಮಾನಗಳಲ್ಲಿ ಗಂಗರು ಪೂರ್ವದಲ್ಲಿಯೂ ದಕ್ಷಿಣದಲ್ಲಿಯೂ ಪಲ್ಲವರ ಹುಟ್ಟಡಗಿಸುತ್ತಿದ್ದಾಗ ಪಶ್ಚಿಮ ಚಾಲುಕ್ಯರು ಗಂಗವಾಡಿಯ ವಾಯುವ್ಯದಲ್ಲಿ ದಾಳಿ ನಡೆಸುತ್ತಿದ್ದರು. ರಾಷ್ಟ್ರಕೂಟರು ಶ್ರೀಪುರುಷನ ಕಾಲದಲ್ಲಿಯೇ ದಂಗೆಯೆದ್ದಿದ್ದರು. ಆ ರಾಷ್ಟ್ರಕೂಟರು ಕ್ರಿ.ಶ. ೮ನೆಯ ಶತಮಾನದಲ್ಲಿ ಬಹಳ ಪ್ರಬಲರಾಗಿ ಸೈಗೊಟ್ಟ ಶಿವಮಾರನ ಮೇಲೆ ದಂಡೆತ್ತಿ ಬಂದು ಅವನನ್ನು ಕೈಸೆರೆ ಹಿಡಿದರು. ಮುಂದೆ ಬಂದ ಮೊದಲನೆಯ ನೀತಿಮಾರ್ಗನೆಂಬ ಗಂಗರಸನು ರಾಷ್ಟ್ರಕೂಟರನ್ನು ಕೋಲಾರ ಜಿಲ್ಲೆಯ ಉತ್ತರದಲ್ಲಿರುವ ರಾಜರಾಮುಡು ಎಂಬ ಸ್ಥಳದಲ್ಲಿ ಬಲವಾಗಿ ಸೋಲಿಸಿ ಗಂಗರಾಜ್ಯದ ಕೀರ್ತಿ ಪ್ರತಿಷ್ಠೆಗಳನ್ನು ಪುನಃ ಅದಕ್ಕೆ ಸಂಪಾದಿಸಿಕೊಟ್ಟನು. ಆದರೂ ಗಂಗರಸರ ದಿನಗಳು ಮುಗಿಯುತ್ತ ಬಂದುವೆಂದೇ ಹೇಳಬೇಕಾಗಿದೆ. ಗಂಗರಾಷ್ಟ್ರಕ್ಕೆ ಕೊನೆಕೊನೆಯ ಪೆಟ್ಟುಗಳು ಹತ್ತು ಮತ್ತು ಹನ್ನೊಂದನೆಯ ಶತಮಾನಗಳಲ್ಲಿ ಚೋಳರ ಕಡೆಯಿಂದ ಬಿದ್ದುವು. ಚೋಳರಲ್ಲಿ ಪ್ರಖ್ಯಾತರಾದ ರಾಜರಾಜದೇವನೂ (ಕ್ರಿ.ಶ. ೯೯೭) ಅವನ ಮಗನಾದ ರಾಜೇಂದ್ರಚೋಳನೂ ಕರ್ನಾಟಕವನ್ನು ಪ್ರವೇಶಿಸಿ, ಕ್ರಿ.ಶ. ೧೦೦೪ರಲ್ಲಿ ತಲಕಾಡನ್ನು ಹಿಡಿದು ಗಂಗರನ್ನು ನಿರ್ಮೂಲ ಮಾಡಿದನು. ಇದರ ನಂತರ ಗಂಗರು ಕ್ರಿ.ಶ. ೧೬ನೆಯ ಶತಮಾನದವರೆಗೆ ಪಾಳೆಯಗಾರರಾಗಿ ಅಲ್ಲಲ್ಲಿ ಕಾಣಿಸಿಕೊಳ್ಳುತ್ತ ಕಟ್ಟಕಡೆಗೆ ವಿಜಯನಗರ ಸಾಮ್ರಾಜ್ಯದಲ್ಲಿ ಸೇರಿಹೋದರು.

ಮೂಲ ಗಂಗವಂಶದ ಒಂದು ಶಾಖೆ ಕ್ರಿ.ಶ. ೬ನೆಯ ಶತಮಾನದಲ್ಲಿ ಕಳಿಂಗ ರಾಜ್ಯದಲ್ಲಿ ನೆಲೆಸಿತ್ತು. ಈ ಶಾಖೆ ಕ್ರಿ.ಶ. ೧೬ನೆಯ ಶತಮಾನದ ಮಧ್ಯಭಾಗದವರೆಗೆ ರಾಜ್ಯವಾಳುತ್ತ ಬಂದು ಕಡೆಗೆ ಮಹಮದೀಯರಿಂದ ಪರಾಜಯಹೊಂದಿತು. ಹೀಗೆ ಒಂದು ಶಾಖೆಯನ್ನು ಕಳಿಂಗದಲ್ಲಿಯೂ ಮತ್ತೊಂದು ಶಾಖೆಯನ್ನು

ನೇಪಾಳದಲ್ಲಿಯೂ (ಕ್ರಿ.ಶ. ೮೮೯) ಗಂಗರು ಸ್ಥಾಪಿಸಿ, ಭರತ ಖಂಡದಲ್ಲೆಲ್ಲ ವ್ಯಾಪಿಸಿದ ಪ್ರಬಲ ಜನಾಂಗವೆಂಬ ಕೀರ್ತಿಯನ್ನೂ ಪ್ರತಿಷ್ಠೆಯನ್ನೂ ಕರ್ನಾಟಕಕ್ಕೆ ನಿಜವಾಗಿಯೂ ಸಂಪಾದಿಸಿಕೊಟ್ಟರು.

೩. ಮಹಾ ಸಾಮಂತರಾಜರು

ಈಗ ಕರ್ನಾಟಕದ ಸಾಮ್ರಾಜ್ಯ ಮನೆತನಗಳ ಮತ್ತು ಅವುಗಳಿಗೂ ಸಾಮಂತ ರಾಜರಿಗೂ ಇದ್ದ ಸಂಬಂಧಗಳ ಪ್ರಶ್ನೆಗೆ ಬರುತ್ತೇವೆ. ಮೊದಮೊದಲು ರಾಜರುಗಳಲ್ಲಿ ಕದಂಬವಂಶದ ಮಯೂರವರ್ಮನು ಪಲ್ಲವರು, ಅಭೀರರು, ತ್ರೈಕೂಟರು ಮತ್ತು ಮೌಖರಿಗಳೊಡನೆ ಸಂಬಂಧವಿಟ್ಟುಕೊಂಡಿದ್ದನೆಂದು ಆಗಲೇ ನೋಡಿದ್ದೇವೆ. ಕದಂಬರಾಜ ಕಾಕುತ್ಸ್ಥನ ಆಳಿಕೆಯವರೆಗೆ ಕನ್ನಡಿಗರಿಗೂ ಹೊರಗಿನವರಿಗೂ ಇದ್ದ ಸಂಬಂಧ ಹೆಚ್ಚು ಗಾಢವಾಗಿಯೇ ಇತ್ತು. ಈ ಕಾಕುತ್ಸ್ಥನು ಆಗಲೇ ಹೇಳಿರುವಂತೆ ಗುಪ್ತ ಚಕ್ರವರ್ತಿಗೂ (ಬಹುಶಃ, ಸಮುದ್ರಗುಪ್ತನಿಗೆ) ಇತರ ಅಧಿಪತಿಗಳಿಗೂ ತನ್ನ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಟ್ಟನು. ಕರ್ನಾಟಕ ರಾಜರ ಮೇಲ್ಮೆಗೆ ಮತ್ತೊಂದು ನಿದರ್ಶನವಾಗಿ ಕದಂಬರಾಜ ಒಂದನೆಯ ಕೃಷ್ಣವರ್ಮನು ಉತ್ತರದ ಕೈಕೇಯಿ ರಾಜನ ಮಗಳೊಬ್ಬಳನ್ನು ಮದುವೆಯಾದುದನ್ನು ಹೇಳಬಹುದು. ಹೀಗೆ ಕದಂಬರು ಉತ್ತರ ಹಿಂದೂಸ್ಥಾನದ ದೃಷ್ಟಿಯಲ್ಲಿ ಕರ್ನಾಟಕಕ್ಕೆ ಗಣ್ಯತೆ ಗಳಿಸಿಕೊಟ್ಟರೆಂಬುದು ಸ್ಪಷ್ಟವಾಗಿದೆ. ಇದು ಸಾಮಾನ್ಯ ವಿಷಯವಲ್ಲ.

ಆದರೆ, ಕರ್ನಾಟಕ ರಾಜಕೀಯವನ್ನು ಮತ್ತೂ ಮೇಲುಮಟ್ಟಕ್ಕೆ ಎತ್ತಿದವರು ಗಂಗರು ಎಂದು ಮತ್ತೊಮ್ಮೆ ಹೇಳಬೇಕಾಗಿದೆ. ಅವರು ಕಳಿಂಗವನ್ನು ಗೆದ್ದುದೂ ನೇಪಾಳದಲ್ಲಿ ಶಾಖೆಯನ್ನು ಸ್ಥಾಪಿಸಿದುದೂ ಈ ಕಾರ್ಯಕ್ರಮದಲ್ಲಿ ಸಾಹಸ ಪ್ರಯತ್ನಗಳಾಗಿವೆ. ಸುಮಾರು ಅದೇ ಕಾಲದಲ್ಲಿ ಗಂಗರು ಸಿಂಧೂರಾಜರ ಸಂಬಂಧ ಬೆಳಸಿ ಕರ್ನಾಟಕದ ಚರಿತ್ರೆಗೂ ಉತ್ತರ ಚರಿತ್ರೆಗೂ ಸಂಪರ್ಕವೇರ್ಪಡಿಸಿದರು. ಗಂಗರಾಜ ದುರ್ವಿನೀತನ ಮಗ ಮುಷ್ಕರನಿಗೆ (ಮೊಕ್ಕರ) ಸಿಂಧೂರಾಜನ ಮಗಳನ್ನು ತಂದಿತ್ತು, ಕರ್ನಾಟಕವನ್ನು ಅಖಿಲ ಭಾರತದಲ್ಲಿ ಗಣ್ಯರಾಜ್ಯವನ್ನಾಗಿ ಮಾಡಬೇಕೆಂದು ಗಂಗರಿಗೆ ಉದ್ದಕ್ಕೂ ಇದ್ದ ಗಾಢ ಅಭಿಲಾಷೆಯನ್ನು ಗಂಗರಾಜ ಬೂತುಗನ (ಕ್ರಿ.ಶ. ೯೩೮-೫೩) ಸಾಹಸದಲ್ಲಿ ಕಾಣಬಹುದು. ಇವನು ಚಿತ್ರಕೂಟರ ಮೇಲೆ ದಾಳಿಯಿಟ್ಟು, ಸಪ್ತಮಾಳವವನ್ನು ಗೆದ್ದು, ಗಡಿಕಂಬಗಳನ್ನು ನಟ್ಟು ಆ ನಾಡಿಗೆ ಮಾಳವಗಂಗ ಎಂದು ಹೆಸರು ಕೊಟ್ಟನು. ಈ ಬೂತುಗನ ಮಗನೂ ಕೊನೆಯ ಬಲಿಷ್ಠ ಗಂಗರಾಜರಲ್ಲೊಬ್ಬನೂ ಆದ ಮಾರಸಿಂಹನ (ಕ್ರಿ.ಶ. ೯೬೧-೭೪) ಆಳಿಕೆಯಲ್ಲಿ ಕರ್ನಾಟಕ ಅಖಿಲ ಭರತಖಂಡದ ರಾಜಕೀಯದಲ್ಲಿ ಪ್ರಮುಖ ಸ್ಥಾನ ಪಡೆಯಲು ಪ್ರಯತ್ನಪಟ್ಟಿತು. ಈ ಮಾರಸಿಂಹನು ತನ್ನ ಮಿತ್ರರಾಜನಾದ ರಾಷ್ಟ್ರಕೂಟರ ಕನ್ನರನ (ಮೂರನೆಯ ಕೃಷ್ಣ ಅಕಾಲವರ್ಷನ) ಪರವಾಗಿ ಗುಜರಾತಿನ ಮೇಲೆ ದಂಡೆತ್ತಿ


ಹೋದನು. ಹೀಗೆ, ಗಂಗರು ಕನ್ನಡದ ಪ್ರಭಾವವನ್ನು ಕರ್ನಾಟಕದ ಗಡಿಯ ಹೊರಗೂ ವಿಸ್ತರಿಸುವುದನ್ನು ತಮ್ಮ ರಾಜಕೀಯದಲ್ಲಿ ಉದ್ದಕ್ಕೂ ಒಂದು ವಿಶಿಷ್ಟ ಲಕ್ಷಣವಾಗಿ ಮಾಡಿಕೊಂಡಿದ್ದರು.


ನಮ್ಮ ನಾಡಿನ ಚರಿತ್ರೆಯ ಈ ವಿಶಿಷ್ಟ ಲಕ್ಷಣವನ್ನು ಕುರಿತು ಹೇಳುವಲ್ಲಿ ಕರ್ನಾಟಕ ರಾಜರಿಗೂ ನೆರೆಹೊರೆಯ ರಾಜರು ಮತ್ತು ಸಾಮಂತ ರಾಜರಿಗೂ ಇದ್ದ ಸಂಬಂಧವನ್ನು ವಿವರಿಸಬೇಕಾಗಿದೆ. ಇವರಲ್ಲಿ ಮುಖ್ಯರಾದವರು ಪಲ್ಲವರು ಮತ್ತು ನೊಳಂಬರು.

ಪಲ್ಲವರು: ಪುರಾತನ ವಂಶದವರಾದ ಪಲ್ಲವರು ಮೂಡಲ ಕರೆನಾಡಿನಲ್ಲಿ ಪ್ರಸಿದ್ಧಿಗೆ ಬಂದರು. ಈ ವಂಶದ ಮೂಲದ ವಿಷಯ ಇನ್ನೂ ಅನಿಶ್ಚಿತವಾಗಿಯೇ ಇದೆ. ಕ್ರಿ.ಶ. ಮೂರನೆಯ ಶತಮಾನಕ್ಕೆ ಮೊದಲೇ ಇವರು ಮುಂದೆ ಬಂದಿರಬೇಕೆಂದು ಮಾತ್ರ ಹೇಳಬಹುದು. ಈ ಕಾಲದ ಅವರ ಚರಿತ್ರೆಯಲ್ಲಿ ಪ್ರಸಿದ್ಧವಾದ ಕಂಚಿ ಉಲ್ಲೇಖವಾಗಿದ್ದರೂ ಅವರ ರಾಜಧಾನಿ ವೆಂಗಿ ಆಗಿತ್ತು. ಆಗಲೇ ಹೇಳಿರುವಂತೆ ಕದಂಬರಾಜ ಮಯೂರವರ್ಮನು ವೇದಾಭ್ಯಾಸ ಮಾಡಿದ್ದೂ ಪಲ್ಲವರನ್ನು ಸೋಲಿಸಿದ್ದೂ ಕಂಚಿಯಲ್ಲಿ. ಮುಂದೆ ಎರಡು ಶತಮಾನಗಳು ಕಳೆದ ಮೇಲೆ ಕದಂಬರಾಜ ಕೃಷ್ಣವರ್ಮನನ್ನು ಸೋಲಿಸಿ ಪಲ್ಲವರು ತಮ್ಮ ಗತಪ್ರಾಮುಖ್ಯತೆಯನ್ನು ಮರುಗಳಿಸಿದರು. ಈ ಶತಮಾನದ ಕೊನೆಗೆ ಗಂಗರಾಜ ದುರ್ವಿನೀತನು ಪಲ್ಲವರಾಜ ಕಾಡುವೆಟ್ಟಿಯನ್ನು ಯುದ್ಧದಲ್ಲಿ ಸೆರೆಹಿಡಿದು ಪಲ್ಲವರನ್ನು ಸೋಲಿಸಿದನು. ಪಲ್ಲವರಿಗೆ ಮತ್ತೆ ದುರ್ವಿನೀತನ ಮೊಮ್ಮಗ ಭೂವಿಕ್ರಮನ (೭ನೆಯ ಶತಮಾನ) ಕೈಯಲ್ಲಿ ತಲೆಯೆತ್ತದ ಸೋಲಾಯಿತು. ೮ನೆಯ ಶತಮಾನದಲ್ಲಿ ಗಂಗರಾಜ ಶ್ರೀ ಪುರುಷನು ಪಲ್ಲವರಾಜ ಕಾಡುವೆಟ್ಟಿಯ ಪೆರ್ಮಾನಡಿ ಎಂಬ ವಿಶಿಷ್ಟ ಬಿರುದನ್ನು ಕಿತ್ತುಕೊಂಡು ತಾನಿಟ್ಟುಕೊಂಡಾಗ ಮತ್ತೊಮ್ಮೆ ಪಲ್ಲವರಿಗೆ ಅವಮಾನಕರವಾದ ಸೋಲಾಯಿತು. ಈ ೮ನೆಯ ಶತಮಾನದಲ್ಲಿ ಮತ್ತೊಂದು ಕರ್ನಾಟಕ ರಾಜಮನೆತನದವರಾದ ಪಶ್ಚಿಮ ಚಾಳುಕ್ಯರ ಕೈಯಿಂದ ಪಲ್ಲವರು ಸೋತುಹೋದರು. ಈ ಚಾಲುಕ್ಯ ರಾಜ ವಿಕ್ರಮಾದಿತ್ಯ ಸತ್ಯಾಶ್ರಯನು ಸುಮಾರು ಕ್ರಿ.ಶ. ೭೩೩ರಲ್ಲಿ ಪಲ್ಲವರನ್ನು ಮುರಿದು ಹಾಕಿದನು. ಆದರೆ ಕರ್ನಾಟಕ ರಾಜರು ಯಾರೂ ಅವರನ್ನು ನಿರ್ಮೂಲ ಮಾಡಲಿಲ್ಲ. ೯ನೆಯ ಶತಮಾನದ ಮೊದಲ ಕಾಲದಲ್ಲಿ ಪಲ್ಲವರಾಜ ನಂದಿವರ್ಮನು ಗಂಗರಾಜ ಎರಡನೆಯ ಶಿವಮಾರನ ರಾಜ್ಯಾಭಿಷೇಕದಲ್ಲಿ ನೆರವಾದದ್ದೂ, ಪಲ್ಲವರು ತಮ್ಮ ಪ್ರಧಾನ ಸಂತತಿಯ ಗಣ್ಯತೆ ಕಳೆದುಕೊಂಡಿದ್ದರೂ ಪ್ರಮುಖ ಸಾಮಂತರಾಜಮನೆತನ ಒಂದಾದ ನೊಳಂಬ ಸಂತತಿಯನ್ನು ಕರ್ನಾಟಕದ ಪಾಲು ಮಾಡಿದ್ದೂ ಈ ಕಾರಣದಿಂದಲೇ.

ನೊಳಂಬರು: ನೊಳಂಬರು ಪಲ್ಲವ ವಂಶದಿಂದ ಬಂದವರು. ಅವರ ಪ್ರಾಂತವಾದ ನೊಳಂಬವಾಡಿ ೩೨,೦೦೦ ಸಾಮಾನ್ಯವಾಗಿ ಈಗಿನ ಚಿತ್ರದುರ್ಗ

ಜಿಲ್ಲೆಯ ಪ್ರಾಂತವನ್ನೊಳಗೊಂಡಿತ್ತು. ಕೊಲವೊಮ್ಮೆ ಮೂಡಲಲ್ಲಿ ಶ್ರೀನಿವಾಸಪುರದವರೆಗೂ ಹಬ್ಬಿತ್ತು.




ರಾಷ್ಟ್ರಕೂಟ ಸಾಮ್ರಾಜ್ಯ
ಮುಮ್ಮಡಿ ಗೋವಿಂದನ ಕಾಲ
ಕ್ರಿ. ೮೧೪
ಅಜಂತ
ಎಲ್ಲೋರ
ಮಾನ್ಯಖೇಟ
ಕಳಿಂಗ
ವೆಂಗಿಪುರ
ಬನವಾಸಿ
ಗಂಗವಾಡಿ
ತಲಕಾಡು
ಕಂಚಿ
ತಂಜಾವೂರು

ಅವರ ಮೊಮ್ಮೊದಲ ರಾಜನಿಗೆ ಮಂಗಳ ಅಥವಾ ನೊಳಂಬಾಧಿರಾಜ ಎಂದು ಹೆಸರು. ಅವನು ಈಶ್ವರ ವಂಶದವನು. ನೊಳಂಬರು ಹಲವು ಏಳುಬೀಳುಗಳನ್ನು ಕಂಡರು. ಮೊದಲ ಮಂಗಳನ ಮಗ ಸಿಂಗಪೋತನ ಕಾಲದಲ್ಲಿ ಅವರು ಗಂಗರಾಜ ಶಿವಮಾರಸೈಗೊಟ್ಟನ ಕೈಕೆಳಗಿದ್ದರು. ರಾಷ್ಟ್ರಕೂಟರು ಶಿವಮಾರನನ್ನು ಸೆರೆಯಿಟ್ಟು ಕರ್ನಾಟಕ ರಾಜ್ಯಾಧಿಪತ್ಯವನ್ನು ತಮ್ಮ ಕೈಗೆ ಕೊಂಡಾಗ ನೊಳಂಬರು ರಾಷ್ಟ್ರಕೂಟರ ಕೈಕೆಳಗೆ ಬಂದರು. ಆದರೂ ನೊಳಂಬರು ಗಂಗರ ಪರವಾಗಿಯೇ ಇದ್ದು, ಗಂಗರಾಜ ನೀತಿಮಾರ್ಗನ ಆಶ್ರಯದಲ್ಲಿ ನೊಳಂಬಾಧಿರಾಜ ಪೊಳಲ್‌ಚೋರನು ಗಂಗವಾಡಿ ೬,೦೦೦ವನ್ನು ಆಳಿದನು. ೯ನೆಯ ಶತಮಾನದ ಕೊನೆಯ ಕಾಲದಲ್ಲಿ ನೊಳಂಬರು ಗಂಗರೊಡನೆ ಜಗಳ ಮಾಡಿಕೊಂಡು, ಕ್ರಿ.ಶ. ಸುಮಾರು ೮೮೦ರಲ್ಲಿ ಕದಂಬರೊಡನೆ ಮದುವೆ ಸಂಬಂಧ ಬೆಳೆಸಿದರು.

೧೦ನೆಯ ಶತಮಾನದ ಮಧ್ಯದಲ್ಲಿ (ಕ್ರಿ.ಶ. ೯೬೯) ನನ್ನಿ ನೊಳಂಬನ ಆಳಿಕೆಯಲ್ಲಿ ನೊಳಂಬರು ಸ್ವತಂತ್ರ ರಾಜ್ಯಭಾರ ಮಾಡಿದರು. ಆದರೂ, ಗಂಗರು ಅವರ ಪರಮವೈರಿಗಳಾಗಿಯೇ ಇದ್ದರು. ಕೊನೆಗೆ, ಗಂಗರಾಜ ಮಾರಸಿಂಹನು ನೊಳಂಬರನ್ನು ತೊಡೆದುಹಾಕಿದ್ದೇ ಅಲ್ಲದೆ, ರಕ್ಕಸಗಂಗನು ನೊಳಂಬ ಪ್ರಾಂತವನ್ನು ಗಂಗ ರಾಜ್ಯಕ್ಕೆ ಸೇರಿಸಿಕೊಂಡುಬಿಟ್ಟನು.

ಆದರೂ ತರುವಾಯದಲ್ಲೂ ನೊಳಂಬರು ತಮ್ಮ ಪರಾಧೀನ ಪದವಿಯನ್ನಾದರೂ ಉಳಿಸಿಕೊಂಡು ಬಂದರು. ೧೦ನೆಯ ಶತಮಾನದ ಕೊನೆಯಲ್ಲೂ ೧೧ನೆಯ ಶತಮಾನದ ಮೊದಲಲ್ಲೂ ನೊಳಂಬರು ಕರ್ನಾಟಕದ ಹಲವು ಭಾಗಗಳನ್ನು ಗೆದ್ದುಕೊಂಡಿದ್ದ ಚೋಳರಾಜ ರಾಜರಾಜನ ಪ್ರತಿನಿಧಿಗಳಾಗಿ ಆಳಿದರು. ಪಶ್ಚಿಮ ಚಾಳುಕ್ಯರು ಚೋಳರನ್ನು ಗೆದ್ದಾಗ, ನೊಳಂಬರು ಚಾಲುಕ್ಯರ ಕಡೆಗೆ ಸೇರಿಕೊಂಡರು. ೧೧ನೆಯ ಶತಮಾನದ ಮಧ್ಯದವರೆಗೆ ಅವರು ಕಂಪಲಿಯಲ್ಲೂ ಉಚ್ಚಂಗಿಯಲ್ಲೂ ಆಳುತ್ತಿದ್ದರು. ಆದರೆ ೧೦ನೆಯ ಶತಮಾನದ ಕೊನೆಯಲ್ಲಿ ಉಚ್ಚಂಗಿಯ ಪಾಂಡ್ಯರು ನೊಳಂಬವಾಡಿ ೩೨,೦೦೦ ಪ್ರಾಂತವನ್ನು ವಶಮಾಡಿಕೊಂಡಾಗ ನೊಳಂಬರು ಈ ಪಾಂಡ್ಯರಲ್ಲಿ ಐಕ್ಯವಾಗಿ ಹೋದರು. ಈ ಪಾಂಡ್ಯರನ್ನು ಕುರಿತು ಮುಂದೆ ಈ ಅಧ್ಯಾಯದಲ್ಲಿ ಕೊಂಚಮಟ್ಟಿಗೆ ಹೇಳಲಾಗುತ್ತದೆ.

ನೊಳಂಬರೊಡನೆ ಯಾವುದೋ ಸಂಬಂಧವಿದ್ದ ಗಂಗಪಲ್ಲವ ಎಂಬ ಒಂದು ಪಲ್ಲವಶಾಖೆ ಮೈಸೂರು ಸಂಸ್ಥಾನದ ಮುಳಬಾಗಿಲು ತಾಲ್ಲೂಕಿನಲ್ಲಿ ಪ್ರಸಿದ್ಧಿಗೆ ಬಂದಿತು. ಆದರೂ ಅವರ ಮುಖ್ಯ ಪ್ರಾಂತಗಳು ಉತ್ತರ ಆರ್ಕಾಟು, ತಂಜಾವೂರು, ತಿರುಚಿನಾಪಲ್ಲಿ ಜಿಲ್ಲೆಗಳಲ್ಲಿದ್ದವು. ಇವರು ೯ನೆಯ ಶತಮಾನದ ಮಧ್ಯದಲ್ಲಿ ಕಾಣಿಸಿಕೊಂಡರು. ಆದರೆ ಕರ್ನಾಟಕದ ಚರಿತ್ರೆಯಲ್ಲಿ ಹೆಸರು ನೆಡಲಿಲ್ಲ.

ಪ್ರಕರಣ ೪

ಕರ್ನಾಟಕ ಸಾಮ್ರಾಜ್ಯದ ಬೆಳವಣಿಗೆ

ಕ್ರಿ.ಶ. ೬ನೆಯ ಶತಮಾನದಿಂದ ಕ್ರಿ.ಶ. ೧೪ನೆಯ ಶತಮಾನದವರೆಗೆ

೬ನೆಯ ಶತಮಾನದ ಮಧ್ಯದಿಂದ ೧೪ನೆಯ ಶತಮಾನದ ಮೊದಲ ಪಾದದವರೆಗೆ ಕರ್ನಾಟಕ ಸಾಮ್ರಾಜ್ಯ ಕ್ರಮವಾಗಿ ಬೆಳೆದು ಹಬ್ಬಿತು. ಈ ಕಾಲದಲ್ಲಿ ಬಾದಾಮಿಯ ಪಶ್ಚಿಮ ಚಾಳುಕ್ಯರು, ರಾಷ್ಟ್ರಕೂಟರು, ಕಲ್ಯಾಣಿಯ ಪಶ್ಚಿಮ ಚಾಳುಕ್ಯರು, ಯಾದವರು, ಹೊಯ್ಸಳರು ಒಬ್ಬರಾದಮೇಲೆ ಒಬ್ಬರು ಕರ್ನಾಟಕದ ಬಲವನ್ನೂ ಪ್ರಭಾವವನ್ನೂ ತಮ್ಮ ಗಡಿಯೊಳಗೆ ಮಾತ್ರವಲ್ಲದೆ, ಇಡಿಯ ಭರತಖಂಡದಲ್ಲೇ ಹೆಚ್ಚಿಸಿದರು. ಆದ್ದರಿಂದ ಈ ನಿಡುಗಾಲ ಹಲವು ಬಗೆಯಲ್ಲಿ ಮುಖ್ಯವಾದದ್ದು. ಮೊದಲನೆಯದಾಗಿ, ಇದು ಕರ್ನಾಟಕದಲ್ಲಿ ಸಂತತವಾದ ರಾಜಕೀಯ ಚಟುವಟಿಕೆಯ ಕಾಲ. ಎರಡನೆಯದಾಗಿ, ಕರ್ನಾಟಕದ ಅರಸರು ಕರ್ನಾಟಕದ ಹೆಸರನ್ನು ತಮ್ಮ ಗಡಿಯಿಂದಾಚೆ ಹೊರನಾಡಿನಲ್ಲಿ ನೆಡಲು ಮೇಲಿಂದಮೇಲೆ ಪ್ರಯತ್ನ ನಡೆಸಿದ್ದು ಈ ಕಾಲದಲ್ಲೆ. ಕೊನೆಯದಾಗಿ, ಕರ್ನಾಟಕದ ಅಧಿರಾಜರ ಕೈಕೆಳಗೆ ಸಾಮಂತ ದೊರೆಗಳು ತಮ್ಮ ಅಧಿರಾಜರಂತೆಯೇ ನಾಡಿನ ಕೇಂದ್ರಮುಖವಾದ ಬಲಗಳನ್ನೆಲ್ಲಾ ಒಟ್ಟುಗೂಡಿಸಿದ್ದೂ ಆಗಲೆ.

೧. ಬಾದಾಮಿಯ ಪಶ್ಚಿಮ ಚಾಳುಕ್ಯರು (ಕ್ರಿ.ಶ. ೫೭೮–೭೫೭)

ಈ ದೊಡ್ಡ ಅರಸು ಮನೆತನ ಕ್ರಿ.ಶ. ೫ರಿಂದ ೮ನೆಯ ಶತಮಾನದವರೆಗೂ ಮತ್ತೆ ೧೦ನೆಯ ಶತಮಾನದ ಕೊನೆಯಿಂದ ೧೨ನೆಯ ಶತಮಾನದವರೆಗೂ ಏಳಿಗೆಯಲ್ಲಿತ್ತು. ಈ ಮನೆತನದ ಚರಿತ್ರೆಗೆ ಬರುವಲ್ಲಿ, ಕರ್ನಾಟಕದ ಒಂದು ನಿಷ್ಕೃಷ್ಟವೂ ಪ್ರಖ್ಯಾತವೂ ಆದ ಚರಿತ್ರಭಾಗವನ್ನು ಮುಟ್ಟುತ್ತೇವೆ. ಚಾಳುಕ್ಯರು ಸರಿ ಸುಮಾರು ಇಡಿಯ ಬೊಂಬಾಯಿ ಆಧಿಪತ್ಯವನ್ನೂ ಹೈದರಾಬಾದು ಪ್ರಾಂತ್ಯವನ್ನೂ ಮೈಸೂರಿನ ವಾಯುವ್ಯ ಪ್ರಾಂತ್ಯಗಳನ್ನೂ ಆಳಿದರು. ಅವರ ಮೊದಮೊದಲ ಹೆಸರು ಚಳ್ಕ್ಯ. ೭–೮ನೆಯ ಶತಮಾನಗಳ ಹೊತ್ತಿಗೆ ಚಾಳುಕ್ಯ ಎಂಬ ಹೆಸರು ಬಳಕೆಗೆ ಬಂದಿತ್ತು.

ಉಳಿದ ಅರಸು ಮನೆತನಗಳ ವಿಷಯದಲ್ಲಿ ಹೇಳುವಂತೆಯೆ ಈ ಮನೆತನವೂ ಉತ್ತರದಿಂದ ಬಂತೆಂದು ಸಂಪ್ರದಾಯವಾಗಿ ಬಂದ ನಂಬಿಕೆಯೊಂದುಂಟು. ಆದರೆ ಚಾಳುಕ್ಯರು ಹುಟ್ಟುನಾಡಿಗರೆನ್ನುವುದಕ್ಕೆ ಹಲವು ನಿದರ್ಶನಗಳಿವೆ. ಕದಂಬರಂತೆ

ಇವರೂ ಮಾನವ್ಯ ಗೋತ್ರದವರೆಂದೂ ಹಾರೀತಿಪುತ್ರರೆಂದೂ ಯುದ್ಧದೇವತೆಯಾದ ಕಾರ್ತಿಕೇಯನ ಸಂಬಂಧದವರೆಂದೂ ಹೇಳುವುದುಂಟು. ಇವರು ನಾರಾಯಣನ (ವಿಷ್ಣುವಿನ) ಪ್ರಸಾದ ಪಡೆದು ವರಾಹ ಲಾಂಛನವಿಟ್ಟುಕೊಂಡಿದ್ದರೆನ್ನುತ್ತಾರೆ.

೫ನೆಯ ಶತಮಾನದಲ್ಲಿ ಈ ದೊರೆಗಳು ಪ್ರಾಮುಖ್ಯತೆಗೆ ಬಂದಂತೆ ಕಾಣುತ್ತದೆ. ಚಾರಿತ್ರಿಕವಾಗಿ ಸಿಕ್ಕುವ ಮೊದಲ ಹೆಸರು ಒಂದನೆಯ ಜಯಸಿಂಹನದು. ಇವನು ದಕ್ಷಿಣದಲ್ಲಿ ರಾಷ್ಟ್ರಕೂಟರನ್ನು ಸೋಲಿಸಿದನೆಂದು ಹೇಳುತ್ತಾರೆ. ಇವನ ವಿಷಯವಾದ ದಾಖಲೆಗಳೇನೂ ಸಿಕ್ಕಿಲ್ಲ. ಇವನು ಪಲ್ಲವರಿಂದ ಸೋತು ಕೊಲೆಯಾದನೆಂದು ತರುವಾಯದ ಶಾಸನಗಳಲ್ಲಿ ಹೇಳಿದೆ. ಇವನ ಮೊಮ್ಮಗ ಒಂದನೆಯ ಪುಲಿಕೇಶಿ (ಕ್ರಿ.ಶ. ೫೫೦) ಪಲ್ಲವರನ್ನು ವಾತಾಪಿ (ಬಾದಾಮಿ)ಯಿಂದ ಓಡಿಸಿ, ಮತ್ತೆ ಅದನ್ನು ಚಾಳುಕ್ಯದುರ್ಗವನ್ನಾಗಿ ಮಾಡಿ ಪಶ್ಚಿಮ ಚಾಳುಕ್ಯರ ಭಾಗ್ಯವನ್ನು ಮರುಗಳಿಸಿದನು. ಪಶ್ಚಿಮ ಚಾಳುಕ್ಯರನ್ನು ನೆಲೆಗೊಳಿಸಿದ ಕೀರ್ತಿ ಈ ದೊರೆಗೆ ಸೇರಿದ್ದೆನ್ನಬಹುದು. ೬ನೆಯ ಶತಮಾನದ ಮಧ್ಯದ ವೇಳೆಗೆ ಚಾಲುಕ್ಯ ರಾಜ್ಯ ಕೀಮ್ ನದಿಯವರೆಗೆ (ಮಾಹಿಯವರೆಗೆ ಇದ್ದರೂ ಇರಬಹುದು) ಇಡಿಯ ಬೊಂಬಾಯಿ ಆಧಿಪತ್ಯವನ್ನು ಒಳಗೊಂಡಿತ್ತು. ಈ ಭಾಗ ಪಲ್ಲವರ ದಾಳಿಯ ಕೊಂಚಕಾಲದ ಹೊರತು (ಕ್ರಿ.ಶ. ೬೪೨–೫೫), ೭೫೭ರವರೆಗೆ ಅವರ ಅಧೀನದಲ್ಲಿತ್ತು.

ಒಂದನೆಯ ಪುಲಿಕೇಶಿಗೆ ಇಬ್ಬರು ಮಕ್ಕಳಿದ್ದು ಇಬ್ಬರೂ ಒಬ್ಬರ ತರುವಾಯ ಒಬ್ಬರು ಪ್ರವರ್ಧಮಾನ ಚಾಳುಕ್ಯ ರಾಜ್ಯವನ್ನು ಆಳಿದರು. ಹಿರಿಯ ಮಗ ಒಂದನೆಯ ಕೀರ್ತಿವರ್ಮನು (ಕ್ರಿ.ಶ. ೫೬೬–೯೮) ನಳರನ್ನೂ ಕೊಂಕಣದ ಮೌರ್ಯರನ್ನೂ ಕದಂಬರನ್ನೂ ಇನ್ನೂ ಹಲವು ದೊರೆಗಳನ್ನೂ ಸೋಲಿಸಿ ಅಡಗಿಸಿದ್ದನು. ಅಣ್ಣನನ್ನು ಮೀರಿಸಿದ್ದ ತಮ್ಮ ಮಂಗಳೇಶನು (ಕ್ರಿ.ಶ. ೫೯೮) ಕಟಚುರಿಯ (ಕಳಚುರಿಯ) ರಾಜನನ್ನು ಸೋಲಿಸಿದ್ದಲ್ಲದೆ ರೇವತಿ ದ್ವೀಪವನ್ನೂ ಗೆದ್ದುಕೊಂಡನು.

ಮಂಗಳೇಶನ ಮರಣಾನಂತರ ಕೀರ್ತಿವರ್ಮನ ಮಕ್ಕಳಿಗೂ ಮಂಗಳೇಶನ ಮಕ್ಕಳಿಗೂ ರಾಜ್ಯಕ್ಕಾಗಿ ಅಂತಃಕಲಹ ಹುಟ್ಟಿ ಹೋರಾಟವಾಗಿ, ಕೊನೆಗೆ ಕೀರ್ತಿವರ್ಮನ ಮಗ ಎರಡನೆಯ ಪುಲಿಕೇಶಿ ಜಯಶಾಲಿಯಾದನು. ಇವನ ಆಳ್ವಿಕೆಯಲ್ಲಿ (ಕ್ರಿ.ಶ. ೬೦೯–೪೨) ಪಶ್ಚಿಮ ಚಾಲುಕ್ಯರ ಉಚ್ಛ್ರಾಯದ ಶಿಖರವನ್ನೂ ಅವನತಿಯನ್ನೂ ಕಾಣುತ್ತೇವೆ. ಇವನು ದಾಳಿಯಿಟ್ಟು ಬಂದ ಆಪ್ಪಾಯಿಕ ಮತ್ತು ಗೋವಿಂದರನ್ನು ಓಡಿಸಿ ಕದಂಬರ ರಾಜಧಾನಿ ಬನವಾಸಿಯನ್ನು ಗೆದ್ದುಕೊಂಡನು; ತುಳುವದ ಆಳುಪರನ್ನೂ ಗಂಗರನ್ನೂ ಮೌರ್ಯರನ್ನೂ ಬಹು ದೂರದ ಲಾಟ ಮಾಳವ ಗೂರ್ಜರರನ್ನೂ ತನ್ನ ಕೈಕೆಳಗೆ ತಂದನು. ಅವನ ಸಾಹಸದ ಕಳಸವೆಂದರೆ, ಕನೂಜಿನ ಹರ್ಷವರ್ಧನ ಚಕ್ರವರ್ತಿಯನ್ನು ಸೋಲಿಸಿದ್ದು (ಕ್ರಿ.ಶ. ೬೧೨). ಈ ಜಯದಿಂದ ಅವನಿಗೆ ಸತ್ಯಾಶ್ರಯನೆಂಬ ಬಿರುದೂ ೯೯,೦೦೦ ಹಳ್ಳಿಯೊಳಗೊಂಡ ಮೂರು ಮಹಾರಾಷ್ಟ್ರಗಳ ಅಧಿಪತಿತ್ವವೂ ಲಭಿಸಿತು. ಪುಲಿಕೇಶಿಯ ಜಯ ಇಲ್ಲಿಗೇ

ನಿಲ್ಲಲಿಲ್ಲ. ಕೋಸಲರನ್ನೂ ಕಳಿಂಗರನ್ನೂ ಅಡಗಿಸಿದನು. ಪಿಷ್ಠಪುರವನ್ನು (ಈಗಿನ ಪಿಟ್ಠಾಪುರ) ಹಾಳೆಬ್ಬಿಸಿದನು; ಪಲ್ಲವರಾಜ ಒಂದನೆಯ ಮಹೇಂದ್ರವರ್ಮನನ್ನು ಸೋಲಿಸಿದನು; ಕಾವೇರಿಯನ್ನು ದಾಟಿ ಚೋಳ, ಕೇರಳ, ಪಾಂಡ್ಯರನ್ನು ಮಿತ್ರರನ್ನಾಗಿ ಮಾಡಿದನು. ಇವನ ಈ ವಿಜಯ ವೈಭವದ ಕಾಲ ಕ್ರಿ.ಶ. ೬೦೯ರಿಂದ ೬೧೨ರವರೆಗೆ ನಡೆಯಿತು.

ಎರಡನೆಯ ಪುಲಿಕೇಶಿ ಪಲ್ಲವರನ್ನು ಎರಡು ಸಲ ಸೋಲಿಸಿದರೂ, ಕೊನೆಗೆ ಅವರ ಕೈಯಲ್ಲೇ ಮಡಿದನು. ಪಲ್ಲವರಾಜ ಒಂದನೆಯ ನರಸಿಂಹವರ್ಮನು ಪರಿಯಾತ ಎಂಬಲ್ಲಿ ಪಶ್ಚಿಮ ಚಾಳುಕ್ಯರನ್ನು ಪೂರ್ತಿ ಸೋಲಿಸಿದನು. ನರಿಸಿಂಹವರ್ಮನ ತಂದೆ ಮಹೇಂದ್ರವರ್ಮನನ್ನು ಪುಲಿಕೇಶಿ ಸೋಲಿಸಿದ್ದಕ್ಕೆ ಮಗ ತೀರಿಸಿದ ಮುಯ್ಯಿ ಇದು. ಪಲ್ಲವ ದೊರೆ ಬಾದಾಮಿಗೆ ದಾಳಿಯಿಟ್ಟು ಅದನ್ನು ಹಾಳೆಬ್ಬಿಸಿ, ತಮಿಳರಿಗೆ ಗೆಲವುಗಳಿಸಿ, ಕರ್ನಾಟಕ ಅರಸರಿಗೂ ತಮಿಳು ಅರಸರಿಗೂ ಇದ್ದ ಸಂಬಂಧವನ್ನು ಕೊನೆಗಾಣಿಸಿದಂತೆ ತೋರಿತು. ಹೀಗೆ ಎರಡನೆಯ ಪುಲಿಕೇಶಿಯ ಆಳಿಕೆ ಪೂರ್ಣ ವಿಘಾತದಲ್ಲಿ ಕೊನೆಗೊಂಡಿತು.

ಆದರೂ ಕರ್ನಾಟಕದ ಚರಿತ್ರೆಯ ದೃಷ್ಟಿಯಿಂದ ಈ ಆಳಿಕೆ ಹಲವು ಬಗೆಯಲ್ಲಿ ತಲೆನೆಲೆಯನ್ನು ಪಡೆದಿದೆ. ಮೊದಲನೆಯದಾಗಿ, ಪುಲಿಕೇಶಿ ವೆಂಗಿಯಲ್ಲಿ ತನ್ನ ತಮ್ಮ ಒಂದನೆಯ ಕುಬ್ಜ ವಿಷ್ಣುವರ್ಧನನಿಗೆ ಪಟ್ಟಕಟ್ಟಿ ಪೂರ್ವ ಚಾಳುಕ್ಯ ಶಾಖೆಯನ್ನು ಸ್ಥಾಪಿಸಿದನು. (ಕ್ರಿ.ಶ. ೬೩೨). ಈ ಪೂರ್ವ ಚಾಳುಕ್ಯ ಶಾಖೆ ೧೧ನೆಯ ಶತಮಾನದಲ್ಲಿ ಚೋಳರೊಡನೆ ಐಕ್ಯವಾಗುವವರೆಗೂ ಆಳಿತು.

ಎರಡನೆಯದಾಗಿ, ಚೀಣಾ ಯಾತ್ರಿಕ ಹಿಯೂನ್‌ತ್ಸಾಂಗ್ ಭರತಖಂಡಕ್ಕೆ ಬಂದದ್ದು ಈ ಪುಲಿಕೇಶಿಯ ಕಾಲದಲ್ಲಿ. ಈ ಯಾತ್ರಿಕನು ನಮ್ಮ ದೇಶದಲ್ಲಿ ಕ್ರಿ. ಶ. ೬೨೯–೪೫ರ ವರೆಗೆ ಸಂಚಾರ ಮಾಡಿದನು. ಇವನು ಕೊಡುವ ಕರ್ನಾಟಕದ ವಿಶ್ವದ ವರ್ಣನೆಯನ್ನು ನೋಡಿದರೆ, ಇವನು ನಮ್ಮ ನಾಡಿನ ಹಲವು ಭಾಗಗಳನ್ನು ಕಣ್ಣಾರೆ ಕಂಡಿರಬೇಕೆಂದು ತೋರುತ್ತದೆ. ಉತ್ತರ ಕರ್ನಾಟಕವನ್ನು ಇವನು ಮಹಾರಾಷ್ಟ್ರ ಎಂದು ಸರಿಯಾಗಿ ಕರೆದಿರುತ್ತಾನೆ. ಪುಲಿಕೇಶಿಯ ರಾಜಧಾನಿಯ ಮತ್ತು ಕನ್ನಡಿಗರ ವಿವರ ವರ್ಣನೆ ನಮಗೆ ಬಹಳ ಬೆಲೆಯುಳ್ಳದ್ದು. ಇದರಿಂದ ಪಶ್ಚಿಮ ಚಾಳುಕ್ಯ ದೊರೆಯ ಕೈಯಲ್ಲಿ ನಮ್ಮ ನಾಡು ಒಳ್ಳೆಯ ಆಳಿಕೆ ಕಂಡು ಹಿರಿಯೇಳಿಗೆಯಲ್ಲಿತ್ತೆಂದು ಹೇಳಬಹುದು.

ಮೂರನೆಯದಾಗಿ, ಈ ಪುಲಿಕೇಶಿಯ ಕಾಲದಲ್ಲಿ ಕರ್ನಾಟಕ ಅಂತರರಾಷ್ಟ್ರೀಯ ಪ್ರಾಮುಖ್ಯತೆಗೂ ಬಂದಿತ್ತು. ಎರಡನೆಯ ಪುಲಿಕೇಶಿಗೂ ಪರ್ಷಿಯದ ಎರಡನೆಯ ಖುಸ್ರೂ ದೊರೆಗೂ ಪತ್ರವ್ಯವಹಾರ ನಡೆಯುತ್ತಿತ್ತು. ಪರಸ್ಪರ ಮರ್ಯಾದೆ ಬಹುಮಾನಗಳನ್ನು ಕಳಿಸಿಕೊಡುತ್ತಿದ್ದರು. ಇದು ಈ ಅಂಶಗಳನ್ನು ಬರೆದಿಟ್ಟಿರುವ ಒಂದು ಅರಬ ದಾಖಲೆಯಿಂದಲೇ ಅಲ್ಲದೆ ಅಜಂತದಲ್ಲಿಯ ಒಂದು ಚಿತ್ರದಿಂದಲೂ

– ಹಿಂದೂ ದೊರೆಗೆ ಪರ್ಷಿಯಾ ದೊರೆಯ ಓಲೆ ಸಲ್ಲಿಸುವ ಚಿತ್ರ – ಸ್ಪಷ್ಟವಾಗುತ್ತದೆ.

ಎರಡನೆಯ ಪುಲಿಕೇಶಿಯ ತರುವಾಯ ಪಶ್ಚಿಮ ಚಾಳುಕ್ಯರಿಗೆ ಇಳಿಗಾಲ ಮೊದಲಾಯಿತು. ಅವನ ಮಗ ಒಂದನೆಯ ವಿಕ್ರಮಾದಿತ್ಯ (ಕ್ರಿ.ಶ. ೬೫೫–೮೦) ಎರಡನೆಯ ಮಹೇಂದ್ರವರ್ಮನ ಆಳಿಕೆಯಲ್ಲೂ ನಂದಿಪೋತರಾಯನ (ಈಶ್ವರ ಪೋತರಾಯನ) ಆಳಿಕೆಯಲ್ಲೂ ಪಲ್ಲವರನ್ನು ತೀರ ಸೋಲಿಸಿ ಕಂಚಿಗೆ ಮುತ್ತಿಗೆ ಹಾಕಿ ಪಶ್ಚಿಮ ಚಾಳುಕ್ಯರ ಪ್ರಾಬಲ್ಯವನ್ನು ಮತ್ತೆ ಗಳಿಸಿದನು. ಮುತ್ತಿಗೆ ಹಾಕಿದರೂ ಆ ಪ್ರಖ್ಯಾತ ಪಟ್ಟಣವನ್ನು ಸುಟ್ಟು ಹಾಳುಮಾಡದೆ ಕನ್ನಡರಸರಿಗೆ ಸಹಜವಾದ ಕರುಣೆಯನ್ನು ತೋರಿಸಿ, ಅದರ ದೊರೆಯನ್ನು ಮಾತ್ರ ಸೋಲಿಸಿ ಅವಮಾನ ಮಾಡಿದನು. ತರುವಾಯ ವಿಕ್ರಮಾದಿತ್ಯನು ಚೋಳ, ಪಾಂಡ್ಯ, ಕೇರಳ ರಾಜರನ್ನೂ ಕಳಭ್ರರನ್ನೂ ಅಡಗಿಸಿದನು. ಈ ಜಯಗಳೆಲ್ಲವೂ ಕ್ರಿ. ಶ. ೬೭೧ರಲ್ಲಿ ಲಭಿಸಿರಬಹುದು.

ಕ್ರಿ.ಶ. ೭೩೩–೩೪ರಲ್ಲಿ ಪಟ್ಟಕ್ಕೆ ಬಂದ ಎರಡನೆಯ ವಿಕ್ರಮಾದಿತ್ಯನ ಕಾಲಕ್ಕೆ ಪಶ್ಚಿಮ ಚಾಳುಕ್ಯರ ಚರಿತ್ರೆಯಲ್ಲಿ ಮತ್ತೊಂದು ಘಟ್ಟ ಮುಟ್ಟುತ್ತೇವೆ. ಈ ದೊರೆ ತನ್ನ ಹಿಂದಿನವರ ಪಲ್ಲವ ವಿರೋಧ ನೀತಿಯನ್ನೇ ಪಾಲಿಸಿಕೊಂಡು ಬಂದನು. ಅಲ್ಲದೆ ಕರ್ನಾಟಕ ಅರಸರ ಪ್ರಾಶಸ್ತ್ಯವನ್ನು ಹೆಚ್ಚಿಸಿದನು. ಇವನೂ ಪಲ್ಲವ ದೊರೆ ನಂದಿವರ್ಮನನ್ನು ಕಂಚಿಯನ್ನು ಹಾಳುಮಾಡದೆ ಉಳಿಸಿದನು. ಇವನು ಪಾಂಡ್ಯ, ಚೋಳ, ಕಳಭ್ರರನ್ನು ಧ್ವಂಸ ಮಾಡಿದನೆಂದು ಹೇಳುತ್ತಾರೆ. ಈ ವಿಕ್ರಮಾದಿತ್ಯನು ಕಳಚುರಿಯ ಮನೆತನದ ಹೈಹಯ ರಾಜಕುಮಾರಿಯಾದ ಲೋಕಮಹಾದೇವಿಯನ್ನು ಮದುವೆ ಮಾಡಿಕೊಂಡನು. ಇವನ ಸಾಮಂತನೂ ಲಾಟದಲ್ಲಿ ಚಾಳುಕ್ಯರ ಪ್ರತಿನಿಧಿಯೂ ಆದ ಅವನಿಜನಾಶ್ರಯ ಪುಲಿಕೇಶಿ ಎಂಬುವನು ಆ ಪ್ರಾಂತದಲ್ಲಿ ತನ್ನ ಸ್ವಾಮಿಯ ವಿಜಯಪಂಥವನ್ನೇ ಮುನ್ನಡೆಸಿ ಜಯದ ಮೇಲೆ ಜಯ ಪಡೆದು, ಸೌರಾಷ್ಟ್ರವನ್ನು ಮುತ್ತಿ ಬಂದಿದ್ದ ತಾಜಿಕ (ಅರಬ)ರನ್ನೂ ಸೋಲಿಸಿ ಅವರು ದಕ್ಷಿಣಕ್ಕೆ ಬರುವುದನ್ನು ತಡೆಗಟ್ಟಿದನು. ಹೀಗೆ, ಒಟ್ಟು ದಕ್ಷಿಣಭಾರತದ ಮಾನವನ್ನೇ ಕಾದ ಕೀರ್ತಿ ಚಾಳುಕ್ಯ ದೊರೆಯದು.

ಎರಡನೆಯ ವಿಕ್ರಮಾದಿತ್ಯನ ತರುವಾಯ ಅವನ ಮಗ ಎರಡನೆಯ ಕೀರ್ತಿವರ್ಮನು ಪಟ್ಟಕ್ಕೆ ಬಂದು (ಕ್ರಿ.ಶ. ೭೪೬–೫೭) ಪಲ್ಲವರನ್ನು ಪೂರ್ತಿ ಸೋಲಿಸಿದನು. ಬಾದಾಮಿಯ ಪಶ್ಚಿಮ ಚಾಳುಕ್ಯರು ಪಡೆದ ಕೊನೆಯ ಜಯ ಇದು. ಈ ಚಾಳುಕ್ಯರು ಆಗ್ನೇಯದಲ್ಲಿ ಜಯಶಾಲಿಗಳಾದರೂ ವಾಯುವ್ಯದಲ್ಲಿ ಅವರ ಶತ್ರುಗಳಾದ ರಾಷ್ಟ್ರಕೂಟರು ಒತ್ತಿಕೊಂಡು ಬಂದು, ಕ್ರಿ.ಶ. ೭೫೪ರಲ್ಲಿ ರಾಷ್ಟ್ರಕೂಟ ದೊರೆ ದಂತಿದುರ್ಗನು ಎರಡನೆಯ ಕೀರ್ತಿವರ್ಮನನ್ನು ಸೋಲಿಸಿ ಬಾದಾಮಿಯ ಪಶ್ಚಿಮ ಚಾಳುಕ್ಯ ರಾಜ್ಯಭಾರದ ಅವನತಿಯನ್ನು ತಂದನು. ರಾಷ್ಟ್ರಕೂಟರ ಈ ಜಯ ಮತ್ತೊಂದು ಕರ್ನಾಟಕ ಅರಸು ಮನೆತನದ ಮೇಲೆ ಗೆದ್ದುದಾದರೂ ಅದು ಕರ್ನಾಟಕ ವಿಜಯವೆಂದೇ ಹೇಳಬೇಕು.

೨. ರಾಷ್ಟ್ರಕೂಟರು (೭೫೭?–೯೭೩)

ರಾಷ್ಟ್ರಕೂಟರು ತಲೆದೋರಿ ಹಬ್ಬಿ ಏಳಿಗೆಗೆ ಬಂದು ಕಣ್ಮರೆಯಾದದ್ದು ಕನ್ನಡ ನಾಡಿನ ಚರಿತ್ರೆಯಲ್ಲಿ ಪ್ರಖ್ಯಾತವೂ ವೈಭವಪೂರ್ಣವೂ ಆದ ಒಳ್ಳೆಯ ಹುರುಪಿನ ಪ್ರಕರಣವಾಗಿದೆ. ಇವರು ಆರ್ಯೇತರರೆಂದು ತೋರುತ್ತದೆ. ಇವರ ತವರು ನಾಡು ಲಟ್ಟನೂರು (ಉಸ್ಮಾನಬಾದ್ ಜಿಲ್ಲೆಯ ಈಗಿನ ಲಾಟೂರು) ಆಗಿದ್ದಿರಬಹುದು. ಇವರಿಗೂ ಅಶೋಕನ ಶಾಸನಗಳಲ್ಲಿ ಬರುವ ರಥಿಕರಿಗೂ ಸಂಬಂಧವೇನಾದರೂ ಉಂಟೆ ಎಂಬುದು ಕೇವಲ ಊಹೆಯ ವಿಷಯ. ಇವರ ಶಾಸನಗಳಲ್ಲಿ ದೊಡ್ಡ ನೇಗಿಲ ಲಾಂಛನವಿರುವುದರಿಂದಲೂ ಕ್ರಿ.ಶ. ೯೪೫ನೆಯ ವರ್ಷದ ಪೂರ್ವ ಚಾಳುಕ್ಯರ ಕೊಡುಗೆಯೊಂದರಲ್ಲಿ ಇವರನ್ನು ಕೃಷಿಕರ (ಕುಟುಂಬಿಗಳ) ಜೊತೆಯಲ್ಲಿ ಸೇರಿಸಿರುವುದರಿಂದಲೂ ಇವರು ಮೊದಲು ಕೃಷಿಕರಾಗಿದ್ದರೆಂದೂ ಕ್ರಿಪೂ. ૩ನೆಯ ಶತಮಾನದ ಆಂಧ್ರಭೃತ್ಯರ ಕೈಕೆಳಗೆ ಸಣ್ಣ ಪುಟ್ಟ ಅಧಿಕಾರಿಗಳಾಗಿದ್ದರೆಂದು ಕೆಲವು ವಿದ್ವಾಂಸರು ಹೇಳುವುದು ತಪ್ಪೆಂದೂ ಇಟ್ಟುಕೊಳ್ಳುವುದು ಸರಿಯೆಂದು ತೋರುತ್ತದೆ. ಇವರ ಲಾಂಛನದಲ್ಲಿ ದೊಡ್ಡ ನೇಗಿಲ ಜೊತೆಗೆ ಗರುಡ ಚಿಹ್ನೆಯೂ ಇದೆ. ಇವರ ಪ್ರಾಂತಕ್ಕೆ ಸಾಮಾನ್ಯವಾಗಿ ರಟ್ಟವಾಡಿ ಏಳೂವರೆ ಲಕ್ಷ ಎಂದು ಹೆಸರು. ಇವರ ಮೊದಮೊದಲ ರಾಜಧಾನಿ ಮಯೂರಖಂಡಿ (ನಾಸಿಕ ಜಿಲ್ಲೆಯ ಈಗಿನ ಮೋರ್‌ಖಂಡಿ); ತರುವಾಯದ ರಾಜಧಾನಿ ಮಾನ್ಯಖೇಟ (ಗುಲ್ಬರ್ಗದ ಬಳಿಯ ಈಗಿನ ಮಾಲ್ಕೇಡ್).

ರಾಷ್ಟ್ರಕೂಟರ ಮನೆತನದಲ್ಲಿ ಬರಿಯ ಪೌರಾಣಿಕ ಹೆಸರುಗಳನ್ನು ಬಿಟ್ಟು, ಮೊತ್ತಮೊದಲ ಚರಿತ್ರವ್ಯಕ್ತಿಯಾಗಿ ತೋರುವ ದಂತಿವರ್ಮ ಅಥವಾ ಒಂದನೆಯ ದಂತಿದುರ್ಗನನ್ನು ಹೇಳಬಹುದು. ಎರಡನೆಯ ದಂತಿದುರ್ಗನ ಕಾಲಕ್ಕೆ (ಕ್ರಿ.ಶ. ೭೫೪) ರಾಷ್ಟ್ರಕೂಟರ ಏಳಿಗೆಯ ಮೊದಲ ಮೆಟ್ಟಲನ್ನು ಹತ್ತುತ್ತೇವೆ. ನಿಜವಾಗಿ, ಈ ಎರಡನೆಯ ದಂತಿದುರ್ಗನೇ ರಾಷ್ಟ್ರಕೂಟರ ಹಿರಿಮೆಯ ಸ್ಥಾಪಕನೆನ್ನಬಹುದು. ಪಶ್ಚಿಮ ಚಾಳುಕ್ಯರ ಎರಡನೆಯ ಕೀರ್ತಿವರ್ಮನನ್ನು ಸೋಲಿಸಿ ಅವನ ಬಲ ಮುರಿದವನೂ ಇವನೇ. ಉತ್ತರದಲ್ಲಿ ಮಾಹೀ ಮತ್ತು ನರ್ಮದಾ ನದಿಗಳವರೆಗೂ, ಪೂರ್ವದಲ್ಲಿ ಮಹಾನದಿ, ದಕ್ಷಿಣದಲ್ಲಿ ಕಂಚಿಯವರೆಗೂ ಇವನು ಪಡೆದ ಹಲವು ಜಯಗಳು ಇವನ ಆಳಿಕೆಯಲ್ಲಿ ಕರ್ನಾಟಕದ ರಾಜಕೀಯದಲ್ಲಿ ಒಂದು ಹೊಸ ಹುರುಪು ಮೂಡಿತೆಂಬುದನ್ನು ತೋರಿಸುತ್ತವೆ. ಹೀಗೆ ಇವನು ಹಲವು ಗೆಲುವುಗಳನ್ನು ಗಳಿಸಿದ್ದರೂ ತನ್ನ ಆಳಿಕೆಯ ಕೊನೆಕೊನೆಗೆ ಜನದ ಅನಾದರಣೆಗೆ ಪಾತ್ರನಾಗಿ ರಾಜ್ಯಚ್ಯುತನಾಗಿ, ಇವನ ಚಿಕ್ಕಪ್ಪ ಒಂದನೆಯ ಕೃಷ್ಣನು ಪಟ್ಟಕ್ಕೆ ಬಂದನು. ಈ ಕೃಷ್ಣನ ಮಹಾ ಸಾಧನೆ ಎಂದರೆ, ಏಲಾಪುರದ (ಈಗಿನ ಎಲ್ಲೋರ) ಪ್ರಸಿದ್ಧ ಕೈಲಾಸ ದೇವಾಲಯವನ್ನು ಕೆತ್ತಿಸಿದ್ದು.

ಈ ವೇಳೆಗೆ ರಾಷ್ಟ್ರಕೂಟರ ಬಲ ಪ್ರಬಲಿಸಿಕೊಂಡು ಗಂಗರಾಜ್ಯವನ್ನು ತನ್ನೊಳಕ್ಕೆ

ಹೀರಿಕೊಂಡುಬಿಟ್ಟಿತು. ಪ್ರಭೂತವರ್ಷ ಮೂರನೆಯ ಗೋವಿಂದನ ಆಳಿಕೆಯಲ್ಲಿ ಗೂರ್ಜರರನ್ನೂ ವಿಂಧ್ಯಪ್ರಾಂತದ ಹಲವು ಕಿರುದೊರೆಗಳನ್ನೂ ನೆಲಮಟ್ಟ ಸೋಲಿಸಿ ರಾಷ್ಟ್ರಕೂಟರು ಮತ್ತಷ್ಟು ಕೀರ್ತಿ ಗಳಿಸಿದರು. ಮೊದಮೊದಲ ರಾಜರ ದಾಳಿನೀತಿ ಕ್ರಮವಾಗಿ ಬಾಂಧವ್ಯ ನೀತಿಗೆ ಎಡೆಗೊಟ್ಟು ಒಂದನೆಯ ಅಮೋಘವರ್ಷ ನೃಪತುಂಗನು (ಕ್ರಿ. ಶ. ೮೧೫-೭೭) ತನ್ನ ಮಗಳನ್ನು ಗಂಗ ಯುವರಾಜ ಭೂತುಗನಿಗೆ ಮದುವೆ ಮಾಡಿಕೊಟ್ಟನು.

ರಾಷ್ಟ್ರಕೂಟರ ರಾಜಕೀಯ ಪ್ರಭಾವ ಪರಮಾವಧಿಯನ್ನು ಮುಟ್ಟಿದ್ದು ೩ನೆಯ ಕೃಷ್ಣನ ಕಾಲದಲ್ಲಿ (ಕ್ರಿ.ಶ. ೯೩೯-೬೮). ಈಗ ರಾಷ್ಟ್ರಕೂಟರ ಕೈ ದಕ್ಷಿಣದಲ್ಲಿ ತಂಜಾವೂರಿನವರೆಗೂ ಉತ್ತರದಲ್ಲಿ ಬುಂಡಲ್‌ಖಂಡಿನವರೆಗೂ ಚಾಚಿತ್ತು. ಆದರೆ, ಇವರ ಇಳಿತದ ಮೊದಲ ಮೆಟ್ಟಲೂ ಆಯಿತು. ರಾಷ್ಟ್ರಕೂಟರ ಅವನತಿಯನ್ನು ದೂರೀಕರಿಸುವುದಕ್ಕೆ ಗಂಗರಾಜ ಮಾರಸಿಂಹನು ಮಾಡಿದ ದುರ್ಬಲ ಪ್ರಯತ್ನಗಳೆಲ್ಲ ನಿಷ್ಫಲವಾಗಿ ಅಳಿವು ಬಳಿಸಾರುತ್ತಾ ಬಂತು. ಕ್ರಿ. ಶ. ೯೭೩ರಲ್ಲಿ ಪಶ್ಚಿಮ ಚಾಳುಕ್ಯರ ತೈಲನು ರಾಷ್ಟ್ರಕೂಟರ ಕಕ್ಕ (ಕಕ್ಕಲ)ನನ್ನು ಕೊಂದುಹಾಕಿದಾಗ, ರಾಷ್ಟ್ರಕೂಟರು ಬಿದ್ದರು. ರಾಷ್ಟ್ರಕೂಟರ ಕೊನೆಯ ದೊರೆ ಇಂದ್ರನು ಶ್ರವಣಬೆಳಗೊಳದಲ್ಲಿ ಕ್ರಿ.ಶ. ೯೮೨ರಲ್ಲಿ ಜೈನಧರ್ಮಾನುಸಾರವಾಗಿ ಸಲ್ಲೇಖನವ್ರತ ಹಿಡಿದು ಬಾಳು ಮುಗಿಸಿದನು. ಎಂಟು ವರ್ಷಕ್ಕೆ ಹಿಂದೆಯೇ ಇವನ ಮಿತ್ರ ಗಂಗರಾಜ ಮಾರಸಿಂಹನೂ ಇದೇ ರೀತಿ ಬಂಕಾಪುರದಲ್ಲಿ ಪರಲೋಕವ್ಯೆದಿದ್ದನು.

ನಮ್ಮ ನಾಡಿನ ಚರಿತ್ರೆಯಲ್ಲಿ ರಾಷ್ಟ್ರಕೂಟರ ತಲೆಮೆ ಎಂದರೆ – ಇವರ ದಾಳಿನೀತಿ ಕರ್ನಾಟಕದ ಗಡಿಯೊತ್ತಿ ಸಾಮ್ರಾಜ್ಯ ಸಾಧನೆಯಲ್ಲಿ ಮೊದಲ ಮೆಟ್ಟಲಾದದ್ದು. ಭರತಖಂಡದ ದೊರೆಗಳಲ್ಲಿ ಬಹು ದೊಡ್ಡ ದೊರೆಗಳೆಂದು ಗಣನೆಯಾಗಿದ್ದವರು ಇವರು ಮಾತ್ರ. ಅರಬರು ಇವರ ವಿಷಯದಲ್ಲಿ ಬಹು ಉಚ್ಚ ಅಭಿಪ್ರಾಯವನ್ನು ಇಟ್ಟುಕೊಂಡಿದ್ದರು; ಇವರನ್ನು ಬಲ್ಲರು (ವಲ್ಲಭರು, ಬಲ್ಲಹರು ಎಂಬುದರ ಅಪಭ್ರಂಶ) ಎಂದು ಕರೆಯುತ್ತಿದ್ದರು. ಸಿಂಧೂ ಪ್ರಾಂತದ ಮೂಲೆಗೆ ಕೂಡ ರಾಷ್ಟ್ರಕೂಟರು ಒತ್ತಿಬಂದಿದ್ದರೆಂದು ಅರಬರು ಹೇಳುತ್ತಾರೆ.

ಆದರೆ, ಇಷ್ಟರಿಂದಲೇ ರಾಷ್ಟ್ರಕೂಟ ಮನೆತನ ಕರ್ನಾಟಕ ರಾಜಸಂತತಿಯಲ್ಲಿ ಅತ್ಯಂತ ದೊಡ್ಡದೆಂದು ಹೇಳುವುದಕ್ಕಿಲ್ಲ. ಇವರ ಕಾಲದಲ್ಲಿ ಕರ್ನಾಟಕ ಸಾಮ್ರಾಜ್ಯ ತನ್ನ ತಲೆನೆಲೆಯನ್ನು ಇನ್ನೂ ಏರಿರಲಿಲ್ಲ. ಮೊದಲನೆಯದಾಗಿ, ತೆಂಕು, ಬಡಗುಗಳಲ್ಲಿ ಅವರ ಗೆಲುವುಗಳೆಲ್ಲ ತಾತ್ಕಾಲಿಕ ಪ್ರೇರಣೆಯಿಂದ ಕೈಗೊಂಡ, ಒಂದಕ್ಕೊಂದು ಸಂಬಂಧವಿಲ್ಲದ ಮುತ್ತಿಗೆಗಳ ಫಲವಾಗಿದ್ದುವೇ ಹೊರತು, ಪೂರ್ವಾಲೋಚನೆಯಿಂದ ಉದ್ದೇಶಪೂರ್ವಕವಾಗಿ ಹೂಡಿದ ಕ್ರಮವಾದ ದಾಳಿನೀತಿಯವಾಗಿರಲಿಲ್ಲ. ಎರಡನೆಯದಾಗಿ, ರಾಷ್ಟ್ರಕೂಟರು ಸರ್ವದಾ ಎದುರಿಸಬೇಕಾದ ಪ್ರಬಲ ಶತ್ರುಗಳು ಯಾರೂ ಇರಲಿಲ್ಲವಾಗಿ ಇವರು ದೀರ್ಘದಾರ್ಢ್ಯವನ್ನು ಗಳಿಸಲಿಲ್ಲ.

ಮೂರನೆಯದಾಗಿ ರಾಷ್ಟ್ರಕೂಟರಿಗೆ ಒಂದು ಉದ್ದೇಶವಾಗಲಿ ಧ್ಯೇಯವಾಗಲಿ ಇರಲಿಲ್ಲ. ಎಂದರೆ ರಾಷ್ಟ್ರಕೂಟ ಸಾಮ್ರಾಜ್ಯ ಒಂದು ನಿರ್ದಿಷ್ಟ ನೀತಿಯ ಫಲವಾಗಿ ರೂಪುಗೊಳ್ಳದೆ ಇತರ ರಾಜಕೀಯ ಗೊಂದಲಗಳ ಪರಿಣಾಮವಾಗಿ ಹುಟ್ಟಿಕೊಂಡು ಬೆಳೆದಿತ್ತು. ಇದರಿಂದ ಅದು ಜನಕ್ಕೆ ಯಾವ ದೊಡ್ಡ ಸಂದೇಶವನ್ನೂ ಸಾರದೆ ಅಳಿದು ಹೋಯಿತು. ಕೊನೆಯದಾಗಿ ಶತಮಾನಗಳ ತರುವಾಯ ನಮ್ಮ ಮತ್ತೊಂದು ದೊಡ್ಡ ಅರಸು ಮನೆತನ ನಮ್ಮ ನಾಡಿನ ಗೌರವ ಘನತೆಗಳನ್ನು – ಯುರೋಪಿನ ಜನಾಂಗಗಳಲ್ಲಿ ಕೂಡ ಎತ್ತಿ ಹಿಡಿಯಲು ಮಾಡಿದಂತೆ ರಾಷ್ಟ್ರಕೂಟರು ಅಂಥಾ ಪ್ರಯತ್ನವನ್ನೇನೂ ಮಾಡಲಿಲ್ಲ.

೩. ಕಲ್ಯಾಣಿಯ ಪಶ್ಚಿಮ ಚಾಳುಕ್ಯರು (ಕ್ರಿ.ಶ. ೯೭೩–೧೧೮೯)

ಪಶ್ಚಿಮ ಚಾಳುಕ್ಯರು ಎರಡು ಶತಮಾನಗಳು ಮೂಲೆಗುಂಪಾಗಿದ್ದು ಮತ್ತೆ ತೈಲಪನ ಕಾಲದಲ್ಲಿ ಕನ್ನಡ ನಾಡಿನಲ್ಲಿ ಒಂದು ಪ್ರಬಲಶಕ್ತಿಯಾದರು. ಈ ಕಾಲದಲ್ಲಿ (ಕ್ರಿ.ಶ. ೯೭೩–೧೧೮೯) ಚಾಳುಕ್ಯರು ಆಗಲೇ ಗಂಗರನ್ನು ನಿರ್ಮೂಲ ಮಾಡಿದ್ದ ಚೋಳರೊಡನೆ ಎದುರಾಟಕ್ಕೆ ನಿಂತರು. ಈ ಪಶ್ಚಿಮ ಚಾಳುಕ್ಯರ ವಂಶದ ಬಹುಪ್ರಸಿದ್ಧ ದೊರೆ ಆರನೆಯ ವಿಕ್ರಮಾದಿತ್ಯ ಅಥವಾ ವಿಕ್ರಮಾಂಕ. ಇವನು ಹಿಂದಿನ ಶಕಗಣನೆಯನ್ನು ಬದಿಗಿರಿಸಿ ತನ್ನ ರಾಜ್ಯಾರಂಭದಂದಿನಿಂದ ಚಾಳುಕ್ಯವಿಕ್ರಮ ಗಣನೆಯನ್ನು ಪ್ರಚಾರಕ್ಕೆ ತಂದನು. ಇವನ ಆಳಿಕೆ ಚೋಳರ, ಲಾಟರ ಮತ್ತು ಉಚ್ಚಂಗಿಯ ಪಾಂಡ್ಯರ ಮೇಲೆ ಪಡೆದ ಹಲವು ಜಯಗಳಿಂದ ಪ್ರಸಿದ್ಧವಾಗಿದೆ. ಇತರ ಅರಸುಗಳ ವಿಷಯದಲ್ಲಿಯಂತೆಯೇ ಇವನ ವಿಷಯದಲ್ಲೂ ಏರಿಳಿತಗಳೆರಡೂ ಕಾಣಬರುತ್ತವೆ. ಇವನ ಕಾಲದಲ್ಲಿ ತುದಿನೆಲೆ ಮುಟ್ಟಿದ ಪಶ್ಚಿಮ ಚಾಳುಕ್ಯರಾಜ್ಯ ಇವನ ಕಾಲದಲ್ಲೇ ಇಳಿಮುಖಕ್ಕೂ ಇಟ್ಟುಕೊಂಡಿತು. ಈ ಕಾಲಕ್ಕೆ ಎರಡು ಪ್ರಬಲ ರಾಜಮನೆತನಗಳು ತಲೆದೋರಿದವು – ಹೊಯ್ಸಳರು ಮತ್ತು ಕಳಚುರಿಯರು. ಹೊಯ್ಸಳರು ಬಲುಬೇಗ ಕನ್ನೆಗಾಲದಲ್ಲಿ ವಿಕ್ರಮಾಂಕನನ್ನು ಸೋಲಿಸಿದರು. ಕಳಚುರಿಯರು ಅವನ ಮೊಮ್ಮಗ ನೂರ್ಮಡಿ ತೈಲನನ್ನು ಬನವಾಸಿಗೆ ಅಟ್ಟಿದರು. ಚಾಳುಕ್ಯರು ತಮ್ಮ ಗತಭಾಗ್ಯವನ್ನು ಮರುಗಳಿಸಲು ಕ್ರಿ.ಶ. ೧೧೮೩ರಲ್ಲಿ ಅಸಾಧ್ಯ ಪ್ರಯತ್ನಗಳನ್ನು ನಡೆಸಿದರು. ಆದರೆ, ಉತ್ತರದಿಂದ ಮತ್ತೊಂದು ಕರ್ನಾಟಕ ಮನೆತನ – ಯಾದವವಂಶ – ಒಂದು ಪ್ರಬಲಿಸಿಕೊಂಡಿತು. ಈ ಯಾದವರೂ ದಕ್ಷಿಣದಲ್ಲಿ ಹೊಯ್ಸಳರೂ ಒಮ್ಮೆ ಪ್ರಬಲವಾಗಿದ್ದ ಪಶ್ಚಿಮ ಚಾಳುಕ್ಯ ಸಾಮ್ರಾಜ್ಯದಿಂದ ದೊಡ್ಡ ದೊಡ್ಡ ಭಾಗಗಳನ್ನು ಹಿಡಿದುಕೊಂಡು ಬಿಟ್ಟರು. (ಕ್ರಿ.ಶ. ೧೧೮೯); ಕೊನೆಗೆ ಆ ಪ್ರಸಿದ್ಧ ಮನೆತನದ ಹೆಸರನ್ನು ಕೂಡ ತೊಡೆದುಹಾಕಿಬಿಟ್ಟರು.

೪. ಕ್ರಿ.ಶ. ೧೦ನೆಯ ಶತಮಾನದ ಪ್ರಾಮುಖ್ಯತೆ

ಮೇಲಾಳಿಕೆಗಾಗಿ ಯಾದವರಿಗೂ ಹೊಯ್ಸಳರಿಗೂ ನಡೆದ ಹೋರಾಟದ ಚರಿತ್ರೆಯನ್ನು ಹೇಳುವ ಮೊದಲು ಹತ್ತನೆಯ ಶತಮಾನದ ಕೆಲವು ವಿಶೇಷ

ಲಕ್ಷಣಗಳನ್ನು ಹೇಳಬಹುದು. ಈ ಶತಮಾನ ರಾಷ್ಟ್ರಕೂಟರ ಪತನವನ್ನೂ ಕರ್ನಾಟಕದ ಹಲವು ಅರಸು ಮನೆತನಗಳ ಅವನತಿಯನ್ನೂ ಕಂಡಿತು. ಪಶ್ಚಿಮ ಚಾಳುಕ್ಯರು ರಾಷ್ಟ್ರಕೂಟರನ್ನು ಮುರಿದು ತಮ್ಮ ಮೇಲಾಳಿಕೆ ಗಳಿಸಿಕೊಂಡರು. ಚೋಳ, ಪಲ್ಲವರನ್ನು ಪೂರ್ವ ಚಾಳುಕ್ಯರನ್ನೂ ಅಡಗಿಸಿ ಗಂಗರನ್ನು ಉರುಳಿಸಿದರು. ನೊಳಂಬರು ಬಾಣರನ್ನು ಸ್ವಾಧೀನಪಡಿಸಿಕೊಂಡು, ನೊಳಂಬವಾಡಿ ಪ್ರಾಂತ ಕಟ್ಟಿದರು. ಕದಂಬರು ಹಲವು ಅವಸ್ಥೆಗಳನ್ನು ಅನುಭವಿಸಿ ಕೊನೆಗೆ ಬಯಲ್‌ನಾಡು(ಕ್ರಿ.ಶ. ೧೦–೧೨ನೆಯ ಶತಮಾನ). ಮಂಜರಾಬಾದು (ಕ್ರಿ.ಶ. ೧೧ನೆಯ ಶತಮಾನ), ಹಾನುಗಲ್ಲು ಮತ್ತು ಗೋವಾ (ಕ್ರಿ.ಶ. ೧೦–೧೩ನೆಯ ಶತಮಾನ), ಮೊಳಕಾಲ್ಮುರುವಿನ ಬಳಿಯ ಉಂಕೆ (ಕ್ರಿ.ಶ. ೧೧–೧೨ನೆಯ ಶತಮಾನ) ನಾಗರಖಂಡ (ಕ್ರಿ.ಶ. ೧೨ನೆಯ ಶತಮಾನ), ಬನವಾಸಿ ೧೨,೦೦೦ (ಕ್ರಿ.ಶ. ೧೦–೧೩ನೆಯ ಶತಮಾನ), ಈ ಪ್ರಾಂತಗಳಲ್ಲಿ ಆಳಿದರು. ಈ ಚಿಕ್ಕಪುಟ್ಟ ರಾಜ್ಯಗಳು ಹುಟ್ಟಿಕೊಂಡು ತಮ್ಮ ತಮ್ಮ ಪ್ರಾಂತಗಳನ್ನು ಕಟ್ಟುತ್ತಿರುವಾಗ ಕರ್ನಾಟಕದ ಉತ್ತರ ಮತ್ತು ಮಧ್ಯಭಾಗಗಳಲ್ಲಿ ಮೂರು ದೊಡ್ಡ ಮನೆತನಗಳು ತಲೆದೋರಿದವು – ಯಾದವರು, ಕಳಚುರಿಯರು ಮತ್ತು ಹೊಯ್ಸಳರು.

೫. ಯಾದವರು(ಕ್ರಿ.ಶ. ೧೧೮೯–೧೩೧೨)

ಯಾದವರು ಒಂದು ರೀತಿಯಲ್ಲಿ ಹೊಯ್ಸಳರಿಗೆ ಸಂಬಂಧಪಟ್ಟವರು. ಇಬ್ಬರಿಗೂ ಒಂದೇ ವಂಶ ಬಿರುದುಗಳಿವೆ – **ಯಾದವ ನಾರಾಯಣ** ಮತ್ತು **ದ್ವಾರಾವತೀ ಪುರವರಾಧೀಶ್ವರ**. ಇವರಿಬ್ಬರಿಗೂ ಇದ್ದ ಸಂತತ ವೈರಕ್ಕೆ ಈ ಸಂಬಂಧವೂ ಒಂದು ಕಾರಣವಿರಬಹುದು. ಯಾದವರು (ಅಥವಾ ಸೇಉಣರು) ಖಾಂದೇಶದಿಂದ ಬಂದವರೆಂದೂ, ಮೊದಲು ಕಳಚುರಿಯರನ್ನು ಎದುರಿಸಿ ಅವರನ್ನು ಸೋಲಿಸಿ, ತರುವಾಯ ಹೊಯ್ಸಳರನ್ನು ಮೇಲೆ ಹಾಕಿಕೊಂಡು ಅವರಿಂದ ಅಳಿದರೆಂದೂ ವಿದ್ವಾಂಸರೂ ಅಭಿಪ್ರಾಯಪಟ್ಟಿದ್ದರು. ಆದರೆ, ಸೇಉಣರು ಕೋಲಾರ ಪ್ರಾಂತದಿಂದ ೮ನೆಯ ಶತಮಾನದಲ್ಲಿ ಸೆಗುಣವಂಶದಿಂದ ಬಂದ ಒಂದು ಚಿಕ್ಕರಸು ಶಾಖೆಯುವರೆಂದೂ ಅವರು ಉತ್ತರಾಭಿಮುಖವಾಗಿ ರಾಜ್ಯಾಸೆಯಿಂದ ಹೊರಟರೆಂದೂ, ನಮಗೆ ಈಗ ತಿಳಿಯದಿರುವ ಕೆಲವು ಕಾರಣಗಳಿಂದ ತಮ್ಮ ತವರು ನಾಡಿನ ಕಡೆಗೇ ೧೨ನೆಯ ಶತಮಾನದ ಕೊನೆಯಲ್ಲಿ ಹಿಂದಿರುಗಿದರೆಂದೂ ಅಭಿಪ್ರಾಯಪಡುವುದಕ್ಕೆ ಒಳ್ಳೆಯ ಆಧಾರಗಳಿವೆ.

ಸೇಉಣರನ್ನು ಕುರಿತ ಮೊದಲ ಅಭಿಪ್ರಾಯಗಳು ಬಲುಮಟ್ಟಿಗೆ ಹೇಮಾದ್ರಿಯ **ವ್ರತಖಂಡ**ದಿಂದ ಬಂದುವು. ಅದರಲ್ಲಿ ಈ ರೀತಿ ಹೇಳಿದೆ: ಯಾದವರು ಕೃಷ್ಣನಿಂದ ಸುಭಾನುವಿನ ಮೂಲಕ ಬಂದವರು; ಇವರ ಎರಡನೆಯ ಮಗನ ಹೆಸರು ದೃಢಪ್ರಹಾರ; ಇವನು ದಕ್ಷಿಣಾಧಿಪತಿಯಾದನು. ಇವನ ವಂಶದವರು ಮಧ್ಯ ಇಂಡಿಯಾದ ಸೇಉಣ ಪ್ರಾಂತದಲ್ಲಿ (ಈಗಿನ ಖಾಂದೇಶ) ಆಳಿದರು. ಈ ಗ್ರಂಥದಲ್ಲಿ ಹಲವು ಅರಸರ ಹೆಸರುಗಳನ್ನೂ ಹೇಳಿದೆ.

ಭಿಲ್ಲಮನ ಕಾಲಕ್ಕೆ (ಕ್ರಿ.ಶ. ೧೧೮೭–೯೧) ಬಂದರೇಯೆ ನಮಗೆ ಗಟ್ಟಿ ತಳಹದಿ ಸಿಕ್ಕುವುದು. ಇವನು ಯಾದವಗಿರಿ ರಾಜಧಾನಿಯನ್ನು ಸ್ಥಾಪಿಸಿದನೆಂದು ಹೇಳುತ್ತಾರೆ. ಇದಕ್ಕೆ ಮೊದಲು ಸೇಉಣರ ರಾಜಧಾನಿ ಸಿಂಧಿನೇರ (ನಾಸಿಕ ಜಿಲ್ಲೆಯಲ್ಲಿಯ ಈಗಿನ ಸಿನ್ನಾರ್) ಮೊದಲಾದ ಎಡೆಗಳಲ್ಲಿತ್ತು. ಸೇಉಣರು ಗಂಗರ, ರಾಷ್ಟ್ರಕೂಟರ ಮತ್ತು ಚಾಳುಕ್ಯರ ಸಾಮಂತರಾಗಿದ್ದು ಕ್ರಮವಾಗಿ ಮುಂದೆ ಬಂದು ತಲೆಯೆತ್ತಿಕೊಂಡಿದ್ದರು. ಆದರೆ, ಭಿಲ್ಲಮನ ಕಾಲದಲ್ಲಿ ಹೊಯ್ಸಳರಿಂದ ಪೆಟ್ಟು ತಿಂದರು. ಗದಗಿನ ಬಳಿಯ ಸೊರಟೂರಿನ ಕಾಳಗದಲ್ಲಿ ಭಿಲ್ಲಮನು ಮುರಿದುಬಿದ್ದನು (ಕ್ರಿ.ಶ. ಸು. ೧೧೯೦). ಸೇಉಣರು ಈ ಬೀಳಿನಿಂದ ಮತ್ತೆ ಚೇತರಿಸಿಕೊಂಡು ಏಳಲಿಲ್ಲ. ೮೦ ವರ್ಷಗಳ ತರುವಾಯ ಮಹಾದೇವ ದೊರೆಯ (೧೨೬೦–೭೧) ಸೇನಾಧಿಪತಿಯಾದ ಸಾಳುವ ತಿಕ್ಕಮನು ಹೊಯ್ಸಳರ ಮೇಲೆ ಹಲವು ಜಯಗಳನ್ನು ಪಡೆದದ್ದುಂಟು. ಆದರೆ ಮಹಾದೇವ ದೊರೆ ಓಟಕಿತ್ತು ಸೇಉಣರ ಕೆಲಸ ಕೆಟ್ಟುಹೋಯಿತು.

ರಾಮಚಂದ್ರದೇವನ ಆಳಿಕೆಯಲ್ಲಿ (ಕ್ರಿ.ಶ. ೧೨೭೧–೧೩೦೯) ಸೇಉಣರ ರಾಜಧಾನಿ ದಾವಣಗೆರೆಯ ಬಳಿಯ ಬೆಟ್ಟೂರು ಆಯಿತು. ಮತ್ತೊಮ್ಮೆ ಸೇನಾಪತಿ ತಿಕ್ಕಮನು ಹೊಯ್ಸಳರ ಮೇಲೆ ದಂಡೆತ್ತಿ ನಡೆದು ದೋರಸಮುದ್ರವನ್ನು ಮುತ್ತಿದನು. ಆದರೆ, ಬೆಳವಾಡಿಯ ಯುದ್ಧದಲ್ಲಿ (ಕ್ರಿ.ಶ. ೧೨೭೬) ಇವನಿಗೆ ಪೂರಾ ಸೋಲಾಯಿತು. ಈ ಹೊತ್ತಿಗೆ, ದಕ್ಷಿಣದಲ್ಲಿ ಮೊದಲೇ ಇದ್ದ ಹೊಯ್ಸಳರ ಜೊತೆಗೆ ಉತ್ತರದಲ್ಲಿಯೂ ಪ್ರಬಲ ಶತ್ರುಗಳು ಕಾಣಿಸಿಕೊಂಡರು. ಮುಸ್ಲಿಮರು ಸೇಉಣರ ಆಳಿಕೆಯನ್ನು ಕ್ರಿ.ಶ. ೧೩೧೮ರಲ್ಲಿ ಕೊನೆಗಾಣಿಸಿಬಿಟ್ಟರು. ಮಹಮದ್ ತುಘಲಕ್ ದೇವಗಿರಿಯನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡು ಅದಕ್ಕೆ ದೌಲತಾಬಾದ್ ಎಂದು ಹೆಸರು ಕೊಟ್ಟನು.

೬. ಕಳಚುರಿಯರು (ಕ್ರಿ.ಶ. ೧೧೫೬–೧೧೮೩)

ಪಶ್ಚಿಮ ದಖನ್ನಿನಲ್ಲಿ ಸೇಉಣ ರಾಜ್ಯ ವಿಸ್ತಾರವಾಗಲು ಕಳಚುರಿಯರು ಬಲಿಯಾದರೆಂಬುದನ್ನು ಮೇಲೆ ಹೇಳಿದ್ದೇವೆ. ಕಳಚುರಿಯರ ವಿಚಾರವಾಗಿಯೂ ಕರ್ನಾಟಕದ ಚರಿತ್ರೆಯಲ್ಲಿ ಅವರ ಸ್ಥಾನದ ವಿಷಯವಾಗಿಯೂ ಕೆಲವು ಮಾತು ಹೇಳಬಹುದು.

ಕಳಚುರಿಯರು, ಇಲ್ಲವೆ ಕಳಭುರಿಯರು, ಹೈಹಯ ವಂಶದವರು. ಅವರ ಮೊದಮೊದಲಿನ ದೊರೆಗಳು ಕಾಲಂಜರ, ಹಹಳ (ಬುಂದಲಖಂಡದಲ್ಲಿನ ಚೇದಿ) ಇವುಗಳ ಸಂಬಂಧವಿಟ್ಟುಕೊಂಡಿದ್ದರು. ಇಲ್ಲಿ ವಿಚಾರ ಅಪ್ರಕೃತ; ಏಕೆಂದರೆ, ಕಳಚುರಿಯರ ವಿಚಾರವನ್ನು ಭಿಲ್ಲಮನಿಂದ ಮಾತ್ರ ಎತ್ತಿಕೊಳ್ಳುತ್ತೇವೆ.

ಈ ದೊರೆ ಮೊದಲು ಪಶ್ಚಿಮ ಚಾಳುಕ್ಯರ ಚಕ್ರವರ್ತಿ ೩ನೆಯ ತೈಲನ

ಮುಖ್ಯ ಸೇನಾನಿಯಾಗಿದ್ದನು. ಕ್ರಿ. ಶ. ೧೧೫೬–೧೧೬೨ ವರ್ಷಗಳ ಅವಧಿಯಲ್ಲಿ ಈತನು ಪಶ್ಚಿಮ ಚಾಳುಕ್ಯರ ಅಧಿಕಾರವನ್ನು ಹಾಳುಮಾಡಿ, ಅವರ ರಾಜ್ಯವನ್ನು ಆಕ್ರಮಿಸಿಕೊಳ್ಳುವ ಕಾರ್ಯವನ್ನು ಸಾಧಿಸಿದನು. ಈ ರಾಜ್ಯಾಕ್ರಮಣವೊಂದಕ್ಕೇ ಅಲ್ಲ, ಬಿಜ್ಜಳ ದೊರೆಯ ಆಳಿಕೆಗೆ ಹೆಸರಾಗಿರುವುದು; ಅವನ ಆಳಿಕೆಯಲ್ಲಿ ನಡೆದ ಮಹತ್ವದ ಸಂಗತಿಯೆಂದರೆ, ಭರತಖಂಡದಲ್ಲಿ ಅತ್ಯಂತ ಪ್ರಸಿದ್ಧ ಪುರುಷರಲ್ಲಿ ಒಬ್ಬನಾದ, ಕಡೆಗೆ ವೀರಶೈವ ಸುಧಾರಕನೆನಿಸಿದ ಬಸವನು ಅಧಿಕಾರ ಪದವಿಗೆ ಏರಿದ್ದು.

ಬಿಜ್ಜಳನ ಅನಂತರ ಅವನ ಮಗನಾದ ರಾಯಮುರಾರಿ ಸೋಯಿದೇವನು ಕ್ರಿ.ಶ. ೧೧೬೭–೧೧೭೬ರವರೆಗೆ ಆಳಿದನು. ತರುವಾಯ ಕಳಚುರಿಯರು ಬಹು ಬೇಗನೆ ಅಧಃಪತನ ಹೊಂದಿದರು. ಅವನ ತಮ್ಮ ಸಂಕಮನು ಲಾಳರು (ಲಾಟರು), ಚೋಳರು, ಗೂರ್ಜರರು – ಇವರುಗಳಿಂದ ಕಪ್ಪ ಎತ್ತಿದನೆಂದು ಹೇಳಿದೆ. ಆದರೆ ಅವು ಬರಿಯ ಜಂಭದ ಮಾತಾಗಿದ್ದವು. ಅಷ್ಟು ಹೊತ್ತಿಗಾಗಲೆ ಅವರು ಕ್ಷೀಣದೆಸೆಗೆ ಸರ್ರನೆ ಇಳಿಯುತ್ತಿದ್ದರು. ಸಂಕಮನ ತಮ್ಮ ಆಹವಮಲ್ಲನ ಕಾಲಕ್ಕೆ (ಕ್ರಿ.ಶ. ೧೧೮೧–೧೧೮೩) ಅವರ ಆಳಿಕೆ ಕೊನೆಗೊಂಡಿತು. ಬೊಮ್ಮ (ಬ್ರಹ್ಮ) ಎಂಬ ಸಣ್ಣ ದೊರೆ ಕಳಚುರಿಯರನ್ನು ನಾಶಮಾಡಿ ಚಾಳುಕ್ಯರನ್ನು (ಕ್ರಿ.ಶ. ೧೧೮೩), ಮತ್ತೆ ಅವರ ರಾಜ್ಯದಲ್ಲಿ ನಿಲ್ಲಿಸಿದನೆಂದು ಹೇಳಲಾಗಿದೆ. ಆದರೆ ಚಾಳುಕ್ಯರ ಈ ಪುನರ್ ಪ್ರತಿಷ್ಠಾಪನೆ ಸಿದ್ಧಿಸಲೇ ಇಲ್ಲ. ಏಕೆಂದರೆ, ಹೊಯ್ಸಳರು ಪ್ರಬಲರಾಗಿ ನಾಡಿನ ಎಲ್ಲ ಅಸಮರ್ಥ ದೊರೆಗಳನ್ನೂ ಬ್ರಹ್ಮನನ್ನೂ ಸಹ ಹೇಳ ಹೆಸರಿಲ್ಲದಂತೆ ನಿರ್ಮೂಲಮಾಡಿ, ಒಂದು ಹೊಸ ಯುಗವನ್ನೇ ಮೊದಲು ಮಾಡಿದರು.

೭. ಹೊಯ್ಸಳರು (ಸು. ಕ್ರಿ.ಶ.೧೦೦೦–ಕ್ರಿ.ಶ.೧೩೪೬)

ಹೊಯ್ಸಳರು ಇದೇ ನಾಡಿನವರು; ಅವರು ಸೊಸೆವೂರಿನಿಂದ (ಷಿಕಾರಿಪುರ ತಾಲ್ಲೂಕಿನಲ್ಲಿ, ಈಗಿನ ಅಂಗಡಿ) ಬಂದವರೆಂದು ಹೇಳುವುದು ಸರಿಯೆ. ಅದು ಅವರ ಮೊತ್ತ ಮೊದಲಿನ ಮುಖ್ಯ ಪಟ್ಟಣವಾಗಿತ್ತೆಂದು ತೋರುತ್ತದೆ. ಆಮೇಲಿನ ಉಲ್ಲೇಖನಗಳು ಅವರನ್ನು **ಯಾದವ ಕುಲಾಂಬರ ದ್ಯುಮಣಿ** ಎಂದು ಉಲ್ಲೇಖಿಸಿ, ಅವರು ಯದುವಿನ ವಂಶಕ್ಕೆ ಸೇರಿದವರೆಂದು ಹೇಳಿ, ಅವರು ಸದ್ವಂಶೀಯರೆಂದು ಹೊಗಳಿವೆ. ಆದರೆ, ಅವರ ಬಿರುದುಗಳಲ್ಲಿ ಒಂದಾದ, ಅವರ ಹಸ್ತಾಕ್ಷರವೂ ಆಗಿದ್ದ **ಮಲೆಪರೊಳ್ ಗಂಡ** ಎಂಬ ಬಿರುದು ಅವರು ಕರ್ನಾಟಕದ ಮಲೆನಾಡಿನಲ್ಲಿ, ಮಲೆನಾಡ ಅರಸರ ಕುಲದಲ್ಲಿ ಹುಟ್ಟಿದವರೆಂಬ ಅಂಶವನ್ನು ಸೂಚಿಸುತ್ತದೆ.

ಹೊಯ್ಸಳ ವಂಶವೃಕ್ಷದಲ್ಲಿ ಮೊತ್ತಮೊದಲಿನ ಹೆಸರು ಪೊಯ್ಸಳ; ವಂಶದ ಮೂಲಪುರುಷನವನು. ಆದರೆ ಅವನ ವಿಚಾರವಾಗಿ ಯಾವ ಉಲ್ಲೇಖನವೂ ದೊರೆತಿಲ್ಲ. ಅವನ ತರುವಾಯ ಬಂದವನು ೧ನೆಯ ವಿನಯಾದಿತ್ಯನೆಂದು ತೋರುತ್ತದೆ (ಕ್ರಿ. ಶ. ೧೦೦೨). ೨ನೇ ವಿನಯಾದಿತ್ಯನ

ಕಾಲದಲ್ಲಿಯೇ ಹೊಯ್ಸಳರು ತಮ್ಮ ಪರಾಕ್ರಮವನ್ನು ತೋರಿದ್ದು. ಅವರು ಪಶ್ಚಿಮ ಚಾಳುಕ್ಯರ ಅಧೀನರಾಗಿದ್ದರೂ, ಎರಡನೆಯ ವಿನಯಾದಿತ್ಯನು ಕೊಂಕಣ, ಆಳ್ವಖೇಡ, ಬಯಲ್‌ನಾಡು, ತಳಕಾಡು, ಸಾವಿಮಲೆ – ಇವುಗಳ ನಡುವಣ ಪ್ರಾಂತವನ್ನು ತನ್ನ ಸ್ವಂತ ರಾಜ್ಯವಾಗಿ ಮಾಡಿಕೊಂಡನು.

ಅವನಿಗೆ ಮೂವರು ಗಂಡುಮಕ್ಕಳು. ೧ನೆಯ ಬಲ್ಲಾಳ, ವಿಷ್ಣುವರ್ಧನ, ಉದಯಾದಿತ್ಯ. ಇವರಲ್ಲಿ ಹಿರಿಯವನಾದ ೧ನೆಯ ಬಲ್ಲಾಳನು ೬ ವರ್ಷ ಕಾಲ ಮಾತ್ರ ರಾಜ್ಯವಾಳಿದನು. (ಕ್ರಿ.ಶ. ೧೧೦೦–೧೧೦೬). ಅವನ ಅಲ್ಪ ಆಳಿಕೆಯಲ್ಲಿ ಎತ್ತಿ ಹೇಳಬಹುದಾದ ಸಂಗತಿ ಒಂದೆ: ಅವನೂ ಅವನ ತಮ್ಮಂದಿರಿಬ್ಬರೂ ದೋರಸಮುದ್ರದ ಮೇಲೆ ದಂಡೆತ್ತಿ ಬಂದ ಶಾಂತರ ರಾಜ ಜಗದೇವನನ್ನು ಪರಾಕ್ರಮದಿಂದ ಎದುರಿಸಿ, ಹಿಮ್ಮೆಟ್ಟಿಸಿದರು.

೧ನೆಯ ಬಲ್ಲಾಳನ ತರುವಾಯ ಅವನ ತಮ್ಮ ಬಿಟ್ಟಿದೇವನು (ವಿಷ್ಣುವರ್ಧನ) ಪಟ್ಟಕ್ಕೆ ಬಂದನು. ಕರ್ನಾಟಕದ ದೊರೆಗಳಲ್ಲಿ ಅತ್ಯಂತ ಹೆಸರಾದವರಲ್ಲಿ ಇವನೊಬ್ಬನು. ಇವನು ಎಂದು ಪಟ್ಟಕ್ಕೆ ಬಂದನೆಂಬುದು ಖಚಿತವಾಗಿ ತಿಳಿಯದು; ಕ್ರಿ.ಶ. ೧೧೧೧ರಿಂದ ೧೧೪೧ರವರೆಗೆ ರಾಜ್ಯವಾಳಿದನು. ಅವನು ತನ್ನ ಆಳಿಕೆಯ ೩೦ ವರ್ಷಗಳಲ್ಲಿ ಹೊಯ್ಸಳ ರಾಜ್ಯವನ್ನು ಎಷ್ಟು ಭದ್ರವಾಗಿ ನೆಲೆಗೊಳಿಸಿದ್ದನೆಂದರೆ, ಅದು ಮುಂದೆ ೨೦೦ ವರ್ಷಗಳವರೆಗೆ ಕದಲಲಿಲ್ಲ. ಅವನ ಪೂರ್ವಿಕರಂತೆ ಬಿಟ್ಟಿದೇವನೂ ಆಳಿಕೆಯ ಮುಂಚಿನ ಭಾಗದಲ್ಲಿ ಜೈನನಾಗಿದ್ದನು. ಆಮೇಲೆ ಹಿರಿಯ ಆಚಾರ್ಯರಾದ ರಾಮಾನುಜರ ಪ್ರಭಾವದ ಫಲವಾಗಿ, ಅವನು ವೈಷ್ಣವ ಮತವನ್ನು ಅಪ್ಪಿ, ವಿಷ್ಣುವರ್ಧನನೆಂಬ ಹೆಸರಿಟ್ಟುಕೊಂಡನು. ಆದರೂ, ಕಡೆಯವರೆಗೂ ಅವನು ಜೈನಮತಕ್ಕೆ ಆಶ್ರಯದಾತನಾಗಿದ್ದನು.

ಬಿಟ್ಟಿದೇವನ ಮತಪರಿವರ್ತನೆಗಿಂತ ಹೆಚ್ಚಾಗಿ ಅವನ ಮಹಾ ಸೇನಾಧಿಪತಿಗಳು ರಾಜ್ಯ ವಿಸ್ತರಣಕ್ಕಾಗಿ ಮಾಡಿದ ಪ್ರಶಂಸನೀಯವಾದ ದಂಡಯಾತ್ರೆಗಳು ಆಸಕ್ತಿ ಹುಟ್ಟಿಸುವಂಥವಾಗಿವೆ. ಅವರ ಮೊತ್ತಮೊದಲನೆಯ ಹಾಗೂ ಅಸಾಧಾರಣವಾದ ಕಾರ್ಯಸಾಧನೆಯೆಂದರೆ ಚೋಳರನ್ನು ಗಂಗ ರಾಜಧಾನಿಯಾದ ತಳಕಾಡಿನಿಂದ ಓಡಿಸಿದ್ದು. ನಿಜವಾಗಿಯೂ, ಹೊಯ್ಸಳರು ಗಂಗ ರಾಜಧಾನಿಯಿಂದ ತಮಿಳರನ್ನು ಓಡಿಸುವವರೆಗೂ ತಾವು ಅಧಿರಾಜರೆಂದು ಹೇಳಿಕೊಳ್ಳುವಂತಿರಲಿಲ್ಲ. ಈ ಗೆಲುವಾದ ಮೇಲೆ, ವಿಷ್ಣುವರ್ಧನನ ಸೇನಾಧಿಪತಿಗಳು ಕೊಂಗು, ನಂಗಲಿ, ಗಂಗವಾಡಿ, ಬನವಾಸಿ, ಹಾನುಗಲ್, ಹುಲಿಗೆರೆ, ಹಲಸಿಗೆ ಮತ್ತು ಬೆಳವಲ ಇವುಗಳನ್ನು– ಎಂದರೆ ಮಲಬಾರಿನ ಉತ್ತರ ಗಡಿ ಸೀಮೆಯಿಂದ ನಿಜಾಮ (ಈಗಿನ ಆಂಧ್ರ) ರಾಜ್ಯದ ದಕ್ಷಿಣ ಸೀಮೆಯವರೆಗೆ ಹರಡಿದ್ದ ರಾಜ್ಯವನ್ನು – ಅವನಿಗಾಗಿ ಸಂಪಾದಿಸಿಕೊಟ್ಟರು.

ವಿಷ್ಣುವರ್ಧನ ದೊರೆಯ ಈ ತುಂಬು ಚಟುವಟಿಕೆಯ ಆಳಿಕೆಯಾದ ಮೇಲೆ ಅವನ ಮಗನಾದ ೧ನೆಯ ನರಸಿಂಹ (ಕ್ರಿ.ಶ. ೧೧೪೧–೧೧೭೩) ರಾಜ್ಯವಾಳಿದನು. ಶಾಂತಿಯಿಂದ ಕೂಡಿದ ಅವನ ಕಾಲವೆಲ್ಲ ವಿಷಯಲೋಲುಪತೆಯಲ್ಲಿ ಕಳೆಯಿತು. ಆದರೆ, ನರಸಿಂಹನ ಮಗನಾದ ೧ನೆಯ ವೀರಬಲ್ಲಾಳನೆಂದು ಹೆಸರಾದ ಎರಡನೆಯ ಬಲ್ಲಾಳನು ಪಟ್ಟಕ್ಕೆ ಬಂದಾಗ, ವಿಷ್ಣುವರ್ಧನನ ಕಾಲವೇ ಮತ್ತೆ ಬಂದಂತಾಯಿತು. ಏಕೆಂದರೆ, ವೀರಬಲ್ಲಾಳನ ಪರಾಕ್ರಮ ಉತ್ತರದಲ್ಲೂ ದಕ್ಷಿಣದಲ್ಲೂ ಹಬ್ಬಿ, ಪ್ರಸಿದ್ಧವಾದ ಉಚ್ಚಂಗಿ ದುರ್ಗವನ್ನು ಹಿಡಿದು, ಸಂಕಮದೇವನ ಕೈಕೆಳಗಿನ ಕಳಚೂರಿಯರ ಸೈನ್ಯವನ್ನು ಸೋಲಿಸಿ, ದಕ್ಷಿಣ ಕೊಡಗಿನಲ್ಲಿದ್ದ ಚಂಗಾಳ್ವರ ಪಾಳುಪರೆ ಎಂಬ ಕೋಟೆಯನ್ನು ನಾಶಮಾಡಿ, ಬಿಲ್ಲಣ ದೊರೆಯೆ ಕೈಕೆಳಗಿನ ದೊಡ್ಡ ಸೇಉಣರ ಸೈನ್ಯವನ್ನು ಸೊರಟೂರಿನ ಬಳಿ ಪುಡಿಪುಡಿಮಾಡಿ, ಮೈಸೂರು ಪ್ರಾಂತದ ಉತ್ತರ ಭಾಗದಲ್ಲಿನ ಹಲವಾರು ದುರ್ಗಗಳನ್ನು ವಶಮಾಡಿಕೊಂಡಿತು. ಈ ಜೈತ್ರಯಾತ್ರೆ ಕ್ರಿ.ಶ. ೧೧೭೩ರಿಂದ ೧೧೯೦ರವರೆಗೂ ನಡೆಯಿತು; ವೀರ ಬಲ್ಲಾಳನು ತನ್ನ ಬದುಕಿನ ಉಳಿದ ಮೂವತ್ತು ವರ್ಷಗಳ ಕಾಲ ಶಾಂತಿಯಿಂದಲೂ ವಿವೇಕದಿಂದಲೂ ರಾಜ್ಯವಾಳಿದನು.

ಅವನ ತರುವಾಯ ರಾಜ್ಯವಾಳಿದವರ ಕಾಲದಲ್ಲೂ ೧೨೫೪ರವರೆಗೆ ಹೊಯ್ಸಳ ವಂಶದ ಭಾಗ್ಯ ಬೆಳೆಯುತ್ತಲೇ ಹೋಯಿತು; ಆಮೇಲೆ ಹೊಯ್‌ಸಳ ಚಕ್ರಾಧಿಪತ್ಯ ಸೋಮೇಶ್ವರನ ಮಕ್ಕಳು ೩ನೆಯ ನರಸಿಂಹ ಮತ್ತು ರಾಮನಾಥ ಇವರಿಬ್ಬರಿಗೆ ಹಂಚಿಕೆಯಾಯಿತು. ನರಸಿಂಹನಿಗೆ ವಂಶಪಾರಂಪರ್ಯವಾಗಿ ಬಂದ ಪ್ರಾಂತವೂ ರಾಮನಾಥನಿಗೆ ಕೋಲಾರ ಮತ್ತು ತಮಿಳು ಜಿಲ್ಲೆಗಳೂ ದೊರೆತವು. ರಾಮನಾಥನು ತಿರುಚಿನಾಪಲ್ಲಿಯಲ್ಲಿನ ಕಣ್ಣಾನೂರನ್ನು ತನ್ನ ರಾಜಧಾನಿಯಾಗಿ ಗೊತ್ತುಮಾಡಿಕೊಂಡನು. ಈ ರಾಜ್ಯ ವಿಭಾಗದಿಂದ ದೇಶದಲ್ಲಿ ಹೊಯ್‌ಸಳರ ಪರಾಕ್ರಮಕ್ಕೇನೂ ಚ್ಯುತಿ ಬರಲಿಲ್ಲ. ನರಸಿಂಹ ದೊರೆ ಸಾಳುವ ತಿಕ್ಕಮನ ಕೈಕೆಳಗಿನ ಸೇಉಣ ಸೈನ್ಯವನ್ನು ಬೆಳವಾಡಿಯ ಬಳಿ (ಕ್ರಿ.ಶ. ೧೨೭೬) ಸೋಲಿಸಿದ್ದೇ ಇದಕ್ಕೆ ನಿದರ್ಶನವಾಗಿದೆ.

ಆದರೆ, ಮೇಲಿನ ಗೆಲವು, ನಂದುವುದರಲ್ಲಿದ್ದ ಕರ್ನಾಟಕದ ಮಹಾಜ್ಯೋತಿಯ ಕಡೆಮಿನುಗಾಗಿತ್ತು. ಕ್ರಿ.ಶ. ೧೩೦೧ರಲ್ಲಿ ೩ನೆಯ ವೀರಬಲ್ಲಾಳನು ಸಿಂಹಾಸನಕ್ಕೆ ಬಂದನು. ಅವನು ಅನೇಕ ದೃಷ್ಟಿಗಳಿಂದ ಕರ್ನಾಟಕದ ಅತ್ಯಂತ ಪ್ರಮುಖರಾಜರಲ್ಲಿ ಒಬ್ಬನಾಗಿದ್ದನು. ಆದರೆ, ಉತ್ತರದಲ್ಲಿ ಸೇಉಣರನ್ನು ಸದೆಬಡಿವ ಶತ್ರುಗಳೇ ಈಗ ಹೊಯ್‌ಸಳರ ಕಡೆ ತಿರುಗಿ, ಅವರನ್ನು ಹಾಳುಮಾಡಿದರು. ಅವರು ಯಾರೆಂದರೆ ಮುಸಲ್ಮಾನರು; ಅವರು ಕ್ರಿ.ಶ. ೧೨೧೦ರಿಂದ ೧೩೪೨ರವರೆಗೆ ಎಡಬಿಡದೆ ಹೊಯ್‌ಸಳ ರಾಜ್ಯಕ್ಕೆ ಏಟಿನ ಮೇಲೆ ಏಟು ಕೊಟ್ಟರು. ಶೂರನಾದ ಹೊಯ್‌ಸಳ ದೊರೆ ಅನೇಕ ಸಲ ಅವರ ಮೇಲೆ ಬಿದ್ದು ಕಾದಾಡಿದನು. ಶತ್ರುಗಳು ಅವನ ಮಗನನ್ನು ದೆಹಲಿಗೆ ಸೆರೆ ಹಿಡಿದುಕೊಂಡು ಹೋಗಿ, ದೋರಸಮುದ್ರವನ್ನು ಎರಡು ಸಲ ಮುತ್ತಿ ನಾಶ ಮಾಡಿದರೂ ಕೂಡ ಅವನ ಕುಗ್ಗದ ಕೆಚ್ಚು ಕರ್ನಾಟಕ ಸ್ವಾತಂತ್ರ್ಯ

ಧ್ವಜವನ್ನು ಹಾರಿಸಿ ಮೆರೆಸುತ್ತಿತ್ತು. ೩ನೆಯ ವೀರಬಲ್ಲಾಳನು ಸಾಧ್ಯವಾದಂತೆಲ್ಲ ರಾಜಧಾನಿಯನ್ನು ಬದಲಾಯಿಸುತ್ತಲೇ ಇದ್ದು ಕಡೆಗೆ ೧೩೪೨ರಲ್ಲಿ ತಿರುಚನಾಪಲ್ಲಿಯನ್ನು ಸೇರಿ, ಅಲ್ಲಿ ಮಹಮ್ಮದೀಯರನ್ನು ಎದುರಿಸಿ ಕಾದಾಡುತ್ತ ಮಡಿದನು. ಅವನು ಸಾಯುವುದಕ್ಕೆ ಮೊದಲೆ ಕ್ರಿ.ಶ. ೧೩೪೦ರಲ್ಲಿ ವಿರೂಪಾಕ್ಷ ಬಲ್ಲಾಳನಿಗೆ ರಾಜ್ಯಾಭಿಷೇಕ ಮಾಡಿದ್ದನು. ಆದರೆ ಆ ದೊರೆ ನಾಲ್ಕು ವರ್ಷ ಕಾಲ ಮಾತ್ರ (ಕ್ರಿ.ಶ. ೧೩೪೨-೧೩೪೬) ರಾಜ್ಯವಾಳಿದನು. ಕರ್ನಾಟಕದ ಅತ್ಯಂತ ಕೆಚ್ಚಿನ ಅರಸು ಮನೆತನಗಳಲ್ಲಿ ಒಂದಾದ ಹೊಯ್‌ಸಳ ಮನೆತನ ಈ ರೀತಿ ಕಣ್ಮರೆಯಾಯಿತು. ಆದರೆ ಅದಕ್ಕೆ ಮುಂಚೆಯೆ ಈ ಮನೆತನ ತನ್ನ ಗುಣಸಂಪತ್ತಿನ ಪಾರಂಪರ್ಯವನ್ನು ಸಂಬಂಧಿಗಳಾದ ಮುಂದಿನ ಪೀಳಿಗೆಯೊಂದಕ್ಕೆ ಆಗಲೆ ಧಾರೆಯೆರೆದು ಕೊಟ್ಟಿತ್ತು. ಅವರ ವಿಚಾರವಾಗಿ ಮುಂದೆ ಹೇಳಿದೆ.

ಅವರ ವಿಚಾರ ಹೇಳುವ ಮುನ್ನ, ನಮ್ಮ ನಾಡಿನ ಚರಿತ್ರೆಯನ್ನು ಹೊಯ್‌ಸಳರ ಕಾಲದ ಮುಖ್ಯತೆಯನ್ನು ಗಮನಿಸುವುದು ಒಳ್ಳೆಯದು. ಮೊದಲನೆಯದಾಗಿ, ಹೊಯ್‌ಸಳರು ಹನ್ನೆರಡನೆಯ ಶತಮಾನದ ವಿಚ್ಛೇದಕ ಶಕ್ತಿಗಳನ್ನು ತಡೆಗಟ್ಟಿದರು. ಈ ಕೆಲಸದಲ್ಲಿ ಅವರು ತಮ್ಮ ಹಿಂದಿನ ಕರ್ನಾಟಕದ ದೊರೆಗಳ ಹಾದಿಯನ್ನೇ ಅನುಸರಿಸಿದ್ದರು. ಆದರೆ ಹೀಗೆ ಮಾಡುವಲ್ಲಿ ಅವರು ನಾಡಿನ ಮುಂದಾಳುತನವನ್ನು ಪಡೆಯುವುದರಲ್ಲಿ ತಮ್ಮೊಡನೆ ಸೆಣಸುತ್ತಿದ್ದ ಸೇಉಣರೊಡನೆ ಬಲವಾದ ಹೋರಾಟಕ್ಕೆ ನಿಲ್ಲಬೇಕಾಯಿತು. ಈ ಹೊಯ್‌ಸಳ ಸೇಉಣ ಹೋರಾಟವೇ ಕರ್ನಾಟಕ ಸಾರ್ವಭೌಮತ್ವದ ವಿನಾಶದ ಮೊದಲ ಮೆಟ್ಟಲಾಯಿತು. ಹೊಯ್‌ಸಳ ಸಾಮ್ರಾಜ್ಯ ನರಸಿಂಹನಿಗೂ ರಾಮನಾಥನಿಗೂ ವಿಭಾಗವಾದದ್ದು ಅದನ್ನು ಒಳಗೊಳಗೇ ಕೊರೆದು ತಿನ್ನುತ್ತಿದ್ದ ಒಳಕಲಹವನ್ನು ಹೊರಕ್ಕೆ ವ್ಯಕ್ತಪಡಿಸಿತು. ಆದರೆ, ಇದರ ಜೊತೆಗೇ, ಕಡೆಯ ದೊರೆಯಾದ ೩ನೆಯ ಬಲ್ಲಾಳನು ಮಹಮ್ಮದೀಯರೆದುರು ಕಾದಿದ ಕಾಳಗಗಳು, ಕರ್ನಾಟಕ ಸಾರ್ವಭೌಮತ್ವ ತಾತ್ಕಾಲಿಕವಾಗಿ ಮುಸುಳಿ ಹೋಗಿದ್ದರೂ ಮತ್ತೊಮ್ಮೆ ರಾಜಕೀಯ ಪುನರುಜ್ಜೀವನದ ಪ್ರಯತ್ನ ಮಾಡಿ ನಾಡಿನ ಗೌರವವನ್ನು ನಾಡಿನ ಕೆಚ್ಚೆದೆಯ ಕುವರರ ಕಯ್ಯಲ್ಲಿ ಒಪ್ಪಿಸುವವರೆಗೂ ನಂದಿಹೋಗುವ ಹಾಗಿಲ್ಲ – ಎಂಬುದನ್ನು ಸಿದ್ಧಮಾಡಿ ತೋರಿಸಿದುವು. ಹೊಯ್‌ಸಳರು ಸುಮಾರು ಅರ್ಧಶತಮಾನದವರೆಗೂ ಮಹಮ್ಮದೀಯರನ್ನು ತಡೆಗಟ್ಟಿದರು; ಇಡಿಯ ಭರತಖಂಡದ ಇನ್ನು ಯಾವ ರಾಜವಂಶವೂ ಈ ಕೆಲಸವನ್ನು ಸಾಧಿಸಿರಲಿಲ್ಲ. ವೀರ ವಿರೂಪಾಕ್ಷ ಬಲ್ಲಾಳನು ಸತ್ತ ವರುಷವೇ ಉದಿಸಿದ ವೈಭವಪೂರ್ಣವಾದ ವಿಜಯನಗರ ಸಾಮ್ರಾಜ್ಯ ಸೂರ್ಯನ ಮುಂಬೆಳಗಾಗಿತ್ತು ಹೊಯ್‌ಸಳ ಸಾಮ್ರಾಜ್ಯ.

೮. ಮಹಾಸಾಮಂತರಾಜರು

ಕರ್ನಾಟಕದ ಬೇರೆ ಬೇರೆ ಪ್ರಾಂತಗಳಲ್ಲಿ ರಾಜ್ಯಭಕ್ತಿ ಮತ್ತು ತಾಯ್ನಾಡಿಗೆ

ಸಲ್ಲಬೇಕಾದ ಕರ್ತವ್ಯ – ಈ ಭಾವನೆಗಳನ್ನು ಬಲಿಸಿ ನೆಲೆಗೊಳಿಸುವ ಉದ್ಯಮದಲ್ಲಿ ಹಲವು ಸಾಮಂತರಾಜರು ನೆರವಾಗದಿದ್ದರೆ ಹೊಯ್‌ಸಳರು ತಮ್ಮ ಮಹೋದ್ದೇಶವನ್ನು ನೆರವೇರಿಸಲು ಸಾಧ್ಯವಾಗುತ್ತಿರಲಿಲ್ಲ. ಕಾಲದೃಷ್ಟಿಯಿಂದ ಈ ಪ್ರಮುಖ ಸಾಮಂತರಾಜರ ವಿಚಾರವನ್ನು ಮೇಲೆ ಹೇಳಿದ ಬೇರೆ ಬೇರೆ ಪ್ರಧಾನ ರಾಜವಂಶಗಳ ಚರಿತ್ರೆಯೊಡನೆಯೆ ಹೇಳಬಹುದಾಗಿತ್ತು; ಆದರೂ ಕೂಡ, ಈಗ ಅವರ ಚರಿತ್ರೆಗೆ ತಿರುಗೋಣ. ಈ ಸಾಮಂತರಾಜರಲ್ಲಿ ಅತ್ಯಂತ ಪ್ರಮುಖರಾದವರೆಂದರೆ – ಶಿಲಹಾರರು, ರಟ್ಟರು, ಹಾನುಗಲ್ ಮತ್ತು ಗೋವಾದ ಕದಂಬರು, ಸಿಂದರು, ಶಾಂತರರು, ಚಂಗಾಳ್ವರು, ಕೊಂಗಾಳ್ವರು, ಸೇನವಾರರು ಮತ್ತು ಪಾಂಡ್ಯರು.

೧. ಶಿಲಹಾರರು

ಕರ್ನಾಟಕದ ಅತ್ಯಂತ ಹಳೆಯ ಸಾಮಂತ ವಂಶದವರು ಇವರು. ಇವರಲ್ಲಿ ಕಡೆಗೆ ನಾಲ್ಕು ಶಾಖೆಗಳಾದರೂ ಇದ್ದುವು: ಕೊಂಕಣ ಪ್ರಾಂತದಲ್ಲಿ ಎರಡು, ಘಟ್ಟದ ಮೇಲೆ ಒಂದು, ಕೊಪಣದಲ್ಲಿ ಒಂದು. ಆದರೆ ಇಲ್ಲಿ ಮೂರು ಶಾಖೆಗಳ ವಿಷಯ ಮಾತ್ರ ಪ್ರಸಕ್ತ; ಆ ಮೂರು ಶಾಖೆಗಳು: ತಗರಶಾಖೆ, ಥಾಣಶಾಖೆ ಮತ್ತು ಕರ್ಹಾಡ ಶಾಖೆ.

ತಗರ ಶಾಖೆ: ಶಿಲಹಾರರು ವಿದ್ಯಾಧರರಲ್ಲಿ ಒಬ್ಬನಾದ ಜೀಮೂತವಾಹನನು ತಮ್ಮ ವಂಶದ ಮೂಲಪುರುಷನೆಂದು ಸಾಮಾನ್ಯವಾಗಿ ಹೇಳಿಕೊಳ್ಳುತ್ತಿದ್ದರು. ಮೊದಲನೆಯ ಶಾಖೆ ತಗರ ಪುರಾಧೀಶ್ವರರೆಂದು ಕರೆದುಕೊಂಡಿತು. ಕೊಂಕಣದ ದಕ್ಷಿಣ ಶಾಖೆಯೇ ನಾಲ್ಕು ಶಾಖೆಗಳಲ್ಲಿ ಬಹು ಹಳೆಯದೆಂಬ ಅಭಿಪ್ರಾಯವಿದೆ. ಇವರ ಮೊತ್ತಮೊದಲನೆಯ ಐತಿಹಾಸಿಕ ವ್ಯಕ್ತಿ ಸನಪುಲ್ಲ (ಸು. ಕ್ರಿ.ಶ. ೭೮೩). ಚಂದ್ರಪುರಿ (ಗೋವಾದಲ್ಲಿ ಈಗಿನ ಚಂದೋರ್), ಚೆಮುಲ್ಯ (ಈಗಿನ ಚೌಲ್) ಮತ್ತು ಕೊಲಾಬ ಜಿಲ್ಲೆ ಪೂರ್ತಿ – ಇವಿಷ್ಟು ಈ ಶಾಖೆಗೆ ಸೇರಿದ್ದುವು. ಈ ಶಾಖೆಯ ಕಡೆಯ ಅರಸು, ಪಶ್ಚಿಮ ಚಾಳುಕ್ಯ ರಾಜನಾದ ಇರುವಬೆಡಂಗ ಸತ್ಯಾಶ್ರಯನ ಸಾಮಂತನಾದ ರಟ್ಟರಾಜ (ಕ್ರಿ.ಶ. ೧೦೦೮).

ಥಾಣದ ಉತ್ತರಶಾಖೆ: ರಟ್ಟರಾಜನೊಂದಿಗೆ ಕೊನೆಗೊಂಡ ದಕ್ಷಿಣ ಶಿಲಹಾರರಾದಮೇಲೆ ಉತ್ತರ ಶಿಲಹಾರರು ಬಂದರು; ಅವರ ಮೊತ್ತ ಮೊದಲನೆಯ ವ್ಯಕ್ತಿ ೧ನೆಯ ಕಪರ್ದಿನ್. ಉತ್ತರ ಶಿಲಹಾರರು ಕೊಂಕಣ ಪ್ರಾಂತವನ್ನೆಲ್ಲ ಆಳುತ್ತಿದ್ದರು; ಅವರ ಅಧಿಪತ್ಯ ಬೊಂಬಾಯಿನವರೆಗೂ ಹಬ್ಬಿತ್ತು; ಬಹುಶಃ ಅದು ಉತ್ತರದಲ್ಲಿ ಮಾಹಿ ನದಿಯವರೆಗೂ ಹಬ್ಬಿದ್ದಿರಬಹುದು, ಅವರ ರಾಜಧಾನಿ ಪಡುವಲ ಕರೆಯಲ್ಲಿ ಪುರಿ (ಈಗ ಯಾವುದೋ ಗೊತ್ತಿಲ್ಲ) ಎಂಬುದು. ಈ ವಂಶ ೧ನೆಯ ಕಪರ್ದಿನ್ ಅವನಿಂದ ಮೊದಲಾಗಿರುವುದಾದರೂ, ಅವನ ತರುವಾಯ ಬಂದ ಮಹಾಸಾಮಂತ ಪುಲ್ಲಶಕ್ತಿಯಿಂದ ಹಿಡಿದು ಮುಂದಕ್ಕೆ ಮಾತ್ರ ಈ ವಂಶದ ವಿಚಾರವಾಗಿ ಕೆಲವು ಖಚಿತವಾದ ವಿವರಗಳು ತಿಳಿಯಬಹುದು. ಅವನು ಬೌದ್ಧನಾಗಿದ್ದಂತೆ ತೋರುತ್ತದೆ.

ಅವನ ಕಾಲದಿಂದ ಮುಂದಕ್ಕೆ ಸ್ಥಾನಕ (ಬೊಂಬಾಯಿ ಬಳಿಯ ಈಗಿನ ಥಾಣ) ಉತ್ತರ ಶಿಲಹಾರರ ಪ್ರಮುಖ ರಾಜಧಾನಿಗಳಲ್ಲಿ ಒಂದಾಗಿ ಕಂಡುಬರುತ್ತದೆ. ಮಹಾ ಮಂಡಲೇಶ್ವರನಾದ ಮುಮ್ಮಣಿ ಅಥವಾ ಮಾಮ್ವಣಿ (ಕ್ರಿ.ಶ. ೧೦೫೯) ಈ ವಂಶದವನು; ಇವನಿಂದಲೆ ಮುಂಬಯಿ (ಬೊಂಬಾಯಿ)ಗೆ ಅದರ ಹೆಸರು ಬಂದಿರುವುದು. ಇವನ ಆಳಿಕೆಯಾದ ಮೇಲೆ ಉತ್ತರ ಶಿಲಹಾರರಿಗೂ ಕರ್ಹಾಡ ಶಾಖೆಗೂ ಒಳಕಲಹವುಂಟಾಯಿತು; ಇದರಿಂದ ಶಿಲಹಾರ ದೊರೆಯನ್ನು (ಇವನ ಹೆಸರು ಮಾಮ್ವಣಿ) ಕೊಂದು, ಗೋಪಕಪಟ್ಟಣವನ್ನು (ಈಗಿನ ಗೋವ) ತಮ್ಮ ರಾಜಧಾನಿಯಾಗಿ ಮಾಡಿಕೊಳ್ಳಲು ಗೋವದ ಕದಂಬರಿಗೆ ಅವಕಾಶ ದೊರೆಯಿತು. ಕರ್ಹಾಡ್ ಶಿಲಹಾರರ ಸ್ಥಾನಕ ಶಿಲಹಾರರ ಕಳೆದು ಹೋದ ಭಾಗ್ಯವನ್ನು ಮತ್ತೆ ಸಂಪಾದಿಸಲು ಪ್ರಯತ್ನಪಟ್ಟರು. ಉತ್ತರ ಶಿಲಹಾರರಲ್ಲಿ ಪ್ರಖ್ಯಾತಿಹೊಂದಿದ ಕಡೆಯ ದೊರೆ ಅಪರಾದಿತ್ಯ (ಕ್ರಿ.ಶ. ೧೧೮೭); ಅವನು ಸ್ವಲ್ಪಮಟ್ಟಿಗೆ ಸ್ವತಂತ್ರವಾದ ರಾಜ್ಯಭಾರ ನಡೆಸುತ್ತಿದ್ದನು; ಅದೇ ಕಾಲಕ್ಕೆ ಪಶ್ಚಿಮ ಚಾಳುಕ್ಯರು ಇಳಿತಹೊಂದುತ್ತಿದ್ದುದೇ ಇದಕ್ಕೆ ಕಾರಣ.

ಕರ್ಹಾಡ ಶಾಖೆ: ಇವರು ಘಟ್ಟದ ಮೇಲಿದ್ದ ಶಿಲಹಾರರು; ಇವರ ಆಧಿಪತ್ಯ ಸತಾರ ಜಿಲ್ಲೆಯ ದಕ್ಷಿಣ ಭಾಗಗಳ ಮೇಲೂ, ಬೆಳಗಾಂ ಜಿಲ್ಲೆಯ ಉತ್ತರ ಭಾಗದ ಕೊನೆ ಕೊನೆಯಲ್ಲೂ, ಮತ್ತು ಸರಿಸುಮಾರು ಈಗಿನ ಕೊಲ್ಲಾಪುರ ಸಂಸ್ಥಾನದ ಮೇಲೆಲ್ಲ ಹಬ್ಬಿತ್ತು. ಈ ಕರ್ಹಾಡ ಶಿಲಹಾರರ ಚರಿತ್ರೆಯಲ್ಲಿ ವಿಶೇಷವಾದ ಗಮನಾರ್ಹವಾದ ಸಂಗತಿಯೆಂದರೆ, ಅವನ ಪ್ರಸಿದ್ಧ ದುರ್ಗಗಳೆಲ್ಲವೂ ಆಮೇಲೆ ಮಹಾರಾಷ್ಟ್ರರ ಪ್ರಭಾವ ನೆಲೆಸಿದ್ದ ಕೇಂದ್ರಗಳಾಗಿ ಹೆಸರು ಹೊಂದಿದವು. ಹೀಗೆ, ಕನ್ನಡ ದುರ್ಗಗಳಾದ ಪನ್ಹಾಳ, ಮೀರಿಂಜೆ (ಈಗಿನ ಮೀರಜ್) ಕರಹಾಟಕ (ಈಗಿನ ಕರ್ಹಾಡ), ಆಜುರಿಕಾ (ಈಗಿನ ಆಜ್ರ) ಮತ್ತು ಕೊಲ್ಲಾಪುರ – ಇವು ಹದಿನಾರನೆಯ ಶತಮಾನದ ಮೇಲೆ ಮಹಾರಾಷ್ಟ್ರದ ನೆಲೆವೀಡುಗಳಾಗಿದ್ದವು. ಈ ಸಂದರ್ಭದಲ್ಲಿ, ಕೊಲ್ಲಾಪುರದ ಅಧಿದೇವತೆಯಾದ ಮಹಾಲಕ್ಷ್ಮೀದೇವಿ ಕರ್ಹಾಡ, ಶಿಲಹಾರರ ಅಭಿಮಾನಿ ದೇವತೆಯಾಗಿದ್ದಳೆಂಬುದನ್ನು ಗಮನಿಸಬಹುದಾಗಿದೆ.

೧ನೆಯ ಜತಿಗ ಅವರ ಮೊದಮೊದಲಿನ ದೊರೆಗಳಲ್ಲಿ ಒಬ್ಬ. ಅವನ ವಂಶೀಯನಾದ ಮಾರಸಿಂಹನ ಮಗಳು ಚಂಗಲದೇವಿ ಪಶ್ಚಿಮ ಚಾಳುಕ್ಯ ದೊರೆಯಾದ ೬ನೆಯ ವಿಕ್ರಮಾದಿತ್ಯನ ರಾಣಿಯರಲ್ಲಿ ಒಬ್ಬಳಾಗಿದ್ದಳು. ಕರ್ಹಾಡ ಶಿಲಹಾರರ ಕಡೆ ಕಡೆಯ ದೊರೆಗಳಲ್ಲಿ ಒಬ್ಬನಾದ ವಿಜಯಾದಿತ್ಯನ ಕಾಲದಲ್ಲಿ ಈ ಶಾಖೆಯವರು ಉತ್ತರ ಶಿಲಹಾರರು ತಮ್ಮ ನಷ್ಟ ಪರಾಕ್ರಮಗಳನ್ನು ಮತ್ತೆ ಗಳಿಸಿಕೊಳ್ಳಲು ಅವರಿಗೆ ಸಹಾಯ ಮಾಡಿದರು. ಕರ್ಹಾಡ ವಂಶದ ಕೊನೆಯ ರಾಜ ೨ನೆಯ ಭೋಜ (ಕ್ರಿ.ಶ. ೧೨೧೮–೯). ಇವನ ಪರಾಕ್ರಮವನ್ನು ಯಾದವರ ದೊರೆ ಸಿಂಗಣನು ಮುರಿದನು.

(೨) ಸೌಂದತ್ತಿಯ ರಟ್ಟರು

ಈಗಿನ ಬೆಳಗಾಂವಿ ಜಿಲ್ಲೆಯ ಬಹುಭಾಗವನ್ನೂ ಅದರ ನೆರೆ ಪ್ರಾಂತಗಳಲ್ಲಿ ಕೆಲವನ್ನೂ ಒಳಗೊಂಡಿದ್ದ ಕೂಂಡಿ ಅಥವಾ ಕುಹುಂಡಿ ೩,೦೦೦ವನ್ನು ರಟ್ಟರು ಸುಮಾರು ಮೂರು ಶತಮಾನಗಳ ಕಾಲ ಆಳುತ್ತಿದ್ದರು. ಅವರು ಮೊದಲು ರಾಷ್ಟ್ರಕೂಟರ, ಆ ಬಳಿಕ ಪಶ್ಚಿಮ ಚಾಳುಕ್ಯರ ಸಾಮಂತರಾಗಿದ್ದು ತರುವಾಯ ಸ್ವತಂತ್ರ ರಾಜರಾಗಿದ್ದರು. ಕಡೆಗೆ ಅವರು ಸೇಉಣ ಸಾಮ್ರಾಜ್ಯಕ್ಕೆ ಸೇರಿಹೋದರು. ಅವರ ರಾಜಧಾನಿ ಮೊದಲು ಬೆಳಗಾಂವಿ ಜಿಲ್ಲೆಯ ಸೌಂದತ್ತಿಯಾಗಿತ್ತು; ಆ ಬಳಿಕ ಬೆಳಗಾಂವಿಯೇ ರಾಜಧಾನಿಯಾಗಿತ್ತು.

ರಟ್ಟರ ಎರಡು ಶಾಖೆಗಳಿದ್ದಂತೆ ತೋರುತ್ತದೆ – ಮೆಱದನಿಂದ ಮೊದಲಾದದ್ದು ಒಂದು, ನನ್ನನಿಂದ ಮೊದಲಾದದ್ದು ಮತ್ತೊಂದು (ಸು. ಕ್ರಿ.ಶ. ೯೫೦). ಮೊದಲನೆಯದು ಹೆಚ್ಚುಕಾಲ ಬಾಳಲಿಲ್ಲ. ಎರಡನೆಯದು ಕ್ರಿ.ಶ. ೧೨೨೮ರವರೆಗೂ ಇತ್ತು. ನನ್ನನಿಂದ ಹಿಡಿದು ೩ನೆಯ ಕಾರ್ತವೀರ್ಯನವರೆಗೆ ರಟ್ಟರು ಸಾಮಂತರಾಗಿಯೇ ಇದ್ದರು; ಆದರೆ ಸುಮಾರು ಕ್ರಿ.ಶ.೧೧೬೫ರಲ್ಲಿ, ಬಹುಶಃ ಕಳಚೂರಿಯರ ಪ್ರಾಬಲ್ಯ ಹಾಳಾದ ಮೇಲೆ ಯಾದವರಿಂದ ಕ್ಷೋಭೆಗೊಂಡು ಅನಾಯಕವಾಗಿದ್ದ ಕಾಲದಲ್ಲಿ, ಕಾರ್ತವೀರ್ಯನು ಸ್ವತಂತ್ರ ರಾಜನ ಪದವಿಯನ್ನು ಗಳಿಸಿದನು. ೩ನೆಯ ಕಾರ್ತವೀರ್ಯನ ಆಳಿಕೆಯಾದ ಮೇಲೆ ರಟ್ಟರು ವೇಣುಗ್ರಾಮವನ್ನು (ಈಗಿನ ಬೆಳಗಾಂ) ತಮ್ಮ ರಾಜಧಾನಿಯಾಗಿ ಮಾಡಿಕೊಂಡರು. ವೇಣುಗ್ರಾಮದ ರಟ್ಟರಲ್ಲಿ ಸ್ವಲ್ಪಮಟ್ಟಿಗಾದರೂ ರಾಜಕೀಯ ಪ್ರಾಬಲ್ಯ ಹೊಂದಿದ್ದವರಲ್ಲಿ ೨ನೆಯ ಲಕ್ಷ್ಮೀದೇವನೆ ಕಡೆಯವನು. ಅವನು ಸುಮಾರು ಕ್ರಿ.ಶ. ೧೨೩೦ರಲ್ಲಿ ದೇವಗಿರಿಯ ಯಾದವರಿಗೆ ಅಧೀನನಾದನು.

(೩) ಹಾನುಗಲ್ಲಿನ ಕದಂಬರು

ತಮ್ಮನ್ನು ತಾವು **ಬನವಾಸಿ ಪುರವರಾಧೀಶ್ವರ**ರೆಂದು ಕರೆದುಕೊಂಡಿದ್ದ ಹಾನುಗಲ್ ಮತ್ತು ಗೋವಾದ ಸಾಮಂತರು ಯಾವುದೋ ರೀತಿಯಲ್ಲಿ ಪೂರ್ವ ಕದಂಬರಿಗೆ ಸಂಬಂಧಿಸಿದ್ದರು. ಅವರು ಸಿಂಹದ ಚಿತ್ರವನ್ನು ತಮ್ಮ ಲಾಂಛನವಾಗಿ ಇಟ್ಟುಕೊಂಡಿದ್ದರು.

ಹಾನುಗಲ್ಲಿನ ಕದಂಬರು ತಮ್ಮ ಮುಖ್ಯ ಪಟ್ಟಣವಾದ ಹಾನುಗಲ್ಲಿನಿಂದ (ಧಾರವಾಡ ಜಿಲ್ಲೆಯಲ್ಲಿರುವ ಈಗಿನ ಹಾನಗಲ್) ಬನವಾಸಿ ಪ್ರಾಂತವೆಲ್ಲವನ್ನು ಆಳುತ್ತಿದ್ದರು. ಹಾನುಗಲ್ಲ ಕದಂಬರು ಮಯೂರವರ್ಮನು ತಮ್ಮ ಮೂಲಪುರುಷನೆಂದು ಹೇಳಿಕೊಳ್ಳುತ್ತಿದ್ದರು. ಮಯೂರವರ್ಮನನ್ನು ಆಮೇಲಿನ ಉಲ್ಲೇಖಗಳಲ್ಲಿ ಮುಕ್ಕಣ್ಣನೆಂದು ಚತುರ್ಭುಜನೆಂದೂ ಕರೆದಿದೆ. ಈ ವಂಶದಲ್ಲಿ ಅನೇಕ ಹೆಸರುಗಳನ್ನು ದಾಟಿಕೊಂಡು ಹೋದರೆ, ಪಶ್ಚಿಮ ಚಾಳುಕ್ಯ ದೊರೆಯ ಸಾಮಂತನಾದ ೨ನೆಯ ಕೀರ್ತಿವರ್ಮನ ಹೆಸರು ಕಾಣುತ್ತೇವೆ. (ಕ್ರಿ.ಶ. ೧೦೬೮–೯). ತರುವಾಯದ ಹಾನುಗಲ್ ಕದಂಬ ದೊರೆಯಾದ ಕಾಮದೇವ (ಕ್ರಿ.ಶ. ೧೧೮೧–೧೨೦೩) ಮಲೆ ಮತ್ತು

ತುಳುನಾಡುಗಳನ್ನು ಹಾಗೂ ಪಶ್ಚಿಮಘಟ್ಟಗಳನ್ನೂ ಗೆದ್ದನೆಂದು ಹೇಳಿದೆ. ಈ ವಂಶದಲ್ಲಿ ಕಡೆಯ ಹೆಸರು ಸೋಮದೇವನದು (ಸು. ಕ್ರಿ.ಶ. ೧೨೧೬).

(೪) ಗೋವೆಯ ಕದಂಬರು

ಇವರ ರಾಜಧಾನಿ ಗೋಪಕಪಟ್ಟಣ (ಈಗಿನ ಗೋವ). ಇವರ ವಂಶ ಗುಹಲ್ಲ ಎಂಬುವನಿಂದ ಮೊದಲಾಗುತ್ತದೆ. ಈ ವಂಶದಲ್ಲಿ ಕೆಲವು ಮಂದಿ ಪ್ರಸಿದ್ಧರಾದವರಿದ್ದಾರೆ. ಉದಾಹರಣೆಗೆ ಒಂದನೆಯ ಜಯಕೇಶಿಯ ಹೆಸರು ಹೇಳಬಹುದು (ಕ್ರಿ.ಶ. ೧೦೫೨). ಅವನು ಅತ್ಯಂತ ಪರಾಕ್ರಮಿಯಾಗಿದ್ದನು. ಅವನು ಉತ್ತರ ಶಿಲಹಾರರ ದೊರೆಯನ್ನು ಕೊಂದನು, ಚೋಳರನ್ನು ನಾಶಪಡಿಸಿದನು, ಪಶ್ಚಿಮ ಚಾಳುಕ್ಯರನ್ನು ಅವರ ರಾಜ್ಯದಲ್ಲಿ ನಿಲ್ಲಿಸಿದನು ಮತ್ತು ಕಾಂಚಿಯಲ್ಲಿ ಚಾಳುಕ್ಯರೂ ಚೋಳರೂ ಮಿತ್ರರಾಗುವಂತೆ ಏರ್ಪಡಿಸಿದನು. ತನ್ನ ಮಗಳು ಮಯಾಣಲ್ಲದೇವಿಯನ್ನು ಅನ್ಹಿಳ್ವಾಡದ (ಉತ್ತರ ಗುಜರಾತಿನ ಈಗಿನ ಪಟ್ಟಣ) ಗುಜರಾತ ದೊರೆ ೧ನೆಯ ಕರ್ಣನಿಗೆ ಮದುವೆ ಮಾಡಿಕೊಟ್ಟನು. ಇದರಿಂದಲೂ ಜಯಕೇಶಿಯ ಪ್ರಭಾವ ಎಷ್ಟಿತ್ತೆಂಬುದು ವ್ಯಕ್ತವಾಗುತ್ತದೆ.

೧ನೆಯ ಜಯಕೇಶಿಯ ಆಳಿಕೆಯಾದ ಮೇಲೆ ಗೋವಾದ ಕದಂಬರು ಕಷ್ಟಗಳಿಗೀಡಾದರು. ೧ನೆಯ ಜಯಕೇಶಿಯ ಕಾಲದಲ್ಲಿ (ಕ್ರಿ.ಶ. ೧೧೧೯ – ೧೧೨೫) ಯೆಲ್ಬುರ್ಗದ ಸಿಂದರು ಗೋವೆಯನ್ನು ಭಸ್ಮ ಮಾಡಿ ಜಯಕೇಶಿಯನ್ನು ಪಲಾಯನ ಮಾಡಿಸಿದರು. ಜಯಕೇಶಿಗೆ ಹೊಯ್‌ಸಳರ ದೊರೆಯಾದ ವಿಷ್ಣುವರ್ಧನನಿಂದಲೂ ಸೋಲಾಯಿತು. ಗೋವೆಯ ಕದಂಬರು ಹಾಗೂ ಹೀಗೂ ಕ್ರಿ.ಶ. ೧೨೭೫ರವರೆಗೆ ರಾಜ್ಯವಾಳಿದರು. ಕಡೆಯ ದೊರೆ ಶಿವಚಿತ್ತ ಷಷ್ಠದೇವನ ಕಾಲಕ್ಕೆ ಏನೋ ಒಂದು ಬಗೆಯ ಆಧಿಪತ್ಯವಿತ್ತು. ಇವನೊಡನೆ ಗೋವಾದ ಕದಂಬರ ವಂಶ ಕೊನೆಗೊಂಡಿತೆಂದು ಹೇಳಬಹುದು.

(೫) ಸಿಂದರು

ಸಿಂದರು ಸಿಂದವಾಡಿ ನಾಡನ್ನು ಆಳುತ್ತಿದ್ದರು. ಈಗಿನ ಪಟ್ಟದಕಲ್ಲು (ಬಾದಾಮಿ ಜಿಲ್ಲೆಯಲ್ಲಿ) ಮತ್ತು ಅದರ ನೆರೆನಾಡು, ಕೆಲವಾಡಿ (ಅದೇ ಜಿಲ್ಲೆ), ಬಾಗಲಕೋಟೆ ಪ್ರಾಂತ, ಧಾರವಾಡ ಜಿಲ್ಲೆಯಲ್ಲಿನ ನರೇಗಲ್ಲಿನ ನೆರೆನಾಡು – ಇವೆಲ್ಲ ಸೇರಿ ಸಿಂದವಾಡಿ ನಾಡಾಗಿತ್ತು.

ಇತರ ಸಾಮಂತರಾಜವಂಶಗಳ ಚರಿತ್ರೆಯಲ್ಲದೆ ಇವರ ಚರಿತ್ರೆ ಏಳುಮಂದಿ ಅಣ್ಣತಮ್ಮಂದಿರಿಂದ ಮೊದಲಾಗುತ್ತದೆ. ಅವರ ತಂದೆಯ ಹೆಸರು ತಿಳಿಯದು. ಸಿಂದರು ಪಶ್ಚಿಮ ಚಾಳುಕ್ಯರ ಸಾಮಂತರಾಗಿದ್ದರು. ಅವರ ಚರಿತ್ರೆಯಲ್ಲಿ ಒಂದು ಪ್ರಮುಖವಾದ ಹೆಸರು ೨ನೆಯ ಆಚುಗಿ ಎಂಬುವದು (ಕ್ರಿ.ಶ. ೧೧೨೨); ಅವನು ತನ್ನ ಸ್ವಾಮಿಯಾದ ಪಶ್ಚಿಮ ಚಾಳುಕ್ಯರ ವಿಕ್ರಮಾದಿತ್ಯನಿಗಾಗಿ

ಹೊಯ್‌ಸಳರನ್ನು ಅಟ್ಟಿಸಿಕೊಂಡು ಹೋಗಿ ಗೋವೆಯನ್ನು ಸುಟ್ಟು, ಹಲವು ಮಂದಿ ದೊರೆಗಳನ್ನು ಸೋಲಿಸಿದನು. ಅವನ ಮಗನಾದ ೧ನೆಯ ಪೆರ್ಮಾಡಿ (ಕ್ರಿ.ಶ. ೧೧೪೪) ಹೊಯ್‌ಸಳ ರಾಜನಾದ ವಿಷ್ಣುವರ್ಧನದೇವನ ರಾಜ್ಯದೊಳಕ್ಕೆ ನುಗ್ಗಿದ್ದಲ್ಲದೆ ದೋರಸಮುದ್ರವನ್ನೇ ಮುತ್ತಿದನೆಂದು ಹೇಳಿದೆ.

ಸಿಂದರಲ್ಲಿ ಮೇಲಿನವರಲ್ಲದೆ ಭೋಗವತೀ ಪುರವರಾಧೀಶ್ವರರೆಂದು ಹೆಸರುಗೊಂಡ ಇನ್ನೂ ಕೆಲವರಿದ್ದಾರೆ. ಮುಂಚಿನ ಸಿಂದರಿಗೂ ಇವರಿಗೂ ಏನು ಸಂಬಂಧವೆಂಬುದು ಖಚಿತವಾಗಿಲ್ಲ.

(೬) ಗುತ್ತರು

ಇವರನ್ನು ಸಾಮಾನ್ಯವಾಗಿ ಗುತ್ತಲಿನ ಗುತ್ತರೆಂದು ಕರೆಯಲಾಗಿದೆ. ಹರಳಹಳ್ಳಿ, ಕರಾಜಿಗಿ ತಾಲ್ಲೂಕಿನ ಗುತ್ತಲ್, ಚೌಡದಾಮಪುರ (ಅಥವಾ ಚವಡಾನಪುರ) ಮತ್ತು ಧಾರವಾಡ ಜಿಲ್ಲೆಯ ರಾಣಿಬೆನ್ನೂರು ತಾಲ್ಲೂಕಿನ ಹೂಲಿಹಳ್ಳಿ – ಈ ಕಡೆಗಳಲ್ಲಿ ಇವರ ಉಲ್ಲೇಖಗಳು ದೊರೆತಿವೆ. ಅಶೋಕನ ಅಜ್ಜನಾದ, ಪಾಟಲೀಪುತ್ರದ ಪ್ರಸಿದ್ಧ ಚಂದ್ರಗುಪ್ತನ ಹಾಗೂ ಉಜ್ಜಯಿನಿಯ (ಕಥಾವ್ಯಕ್ತಿಯಾದ) ವಿಕ್ರಮಾದಿತ್ಯನ ವಂಶೀಯರು ತಾವೆಂದು ಅವರು ಹೇಳಿಕೊಂಡರೂ, ಅವರು ನಿಜವಾಗಿಯೂ ಸಾರ್ವಭೌಮ ಗುಪ್ತರ ವಂಶದಲ್ಲಿ ಹುಟ್ಟಿರಬಹುದು; ಆ ಗುಪ್ತರಲ್ಲಿ ಒಬ್ಬನಾದ ೧ನೆಯ ಚಂದ್ರಗುಪ್ತನಿಗೆ ವಿಕ್ರಮಾದಿತ್ಯನೆಂಬ ಹೆಸರೂ ಇತ್ತು.

ಇತರ ಸಾಮಂತರಂತೆ ಗುತ್ತರೂ ಸಹ ಪಶ್ಚಿಮ ಚಾಳುಕ್ಯರು, ಕಳಚೂರಿಯರು ಮತ್ತು ಸೇಉಣರು – ಇವರ ಕೈಕೆಳಗೆ ಅಧಿಕಾರಿಗಳಾಗಿದ್ದರು. ಉದಾಹರಣೆಗಾಗಿ, ಕ್ರಿ.ಶ. ೧೧೧೫ರಲ್ಲಿ, ಗುತ್ತರಲ್ಲಿ ಅತ್ಯಂತ ಮೊದಲ ಐತಿಹಾಸಿಕ ವ್ಯಕ್ತಿಯಾದ ಮಲ್ಲಿದೇವನು, ಚಕ್ರವರ್ತಿಯಾದ ೬ನೆಯ ವಿಕ್ರಮಾದಿತ್ಯನಿಂದ ಬನವಾಸಿ ೧೨,೦೦೦ಕ್ಕೆ ರಾಜಪ್ರತಿನಿಧಿಯಾಗಿ ನೇಮಕನಾಗಿದ್ದ ಪಶ್ಚಿಮ ಚಾಳುಕ್ಯರ ಗೋವಿಂದರಸನ ಕೈಕೆಳಗೆ ಅಧಿಕಾರಿಯಾಗಿದ್ದನು. ಗುತ್ತರಲ್ಲಿ ಕೆಲವರು ಕಳಚೂರಿಯರ ಕೈಕೆಳಗೂ ಇದ್ದರು. ಉದಾಹರಣೆಗೆ, ಕ್ರಿ.ಶ. ೧೧೮೮ರಲ್ಲಿ, ೨ನೆಯ ವೀರವಿಕ್ರಮಾದಿತ್ಯನು ಕಳಚೂರಿಯ ಆಹವಮಲ್ಲನ ಕೈಕೆಳಗೆ ಮಹಾಮಂಡಲೇಶ್ವರನಾಗಿದ್ದನು; ಮತ್ತು ಬನವಾಸಿ ೧೨,೦೦೦ ಪ್ರಾಂತವನ್ನು ಸ್ವಂತ ಆಧಿಪತ್ಯವಾಗಿ ಆಳುತ್ತಿದ್ದನು. ಕ್ರಿ.ಶ. ೧೨೩೮ರಲ್ಲಿ, ಯಾದವ ದೊರೆ ಸಿಂಘಣನ ಕೈಕೆಳಗೆ ೨ನೆಯ ಜೋಯಿದೇವನೆಂಬ ಒಬ್ಬ ಗುತ್ತ ದೊರೆ ಇದ್ದನು. ಚರಿತ್ರೆಗೆ ತಿಳಿದುಬಂದ ಮಟ್ಟಿಗೆ, ಸೇಉಣ ದೊರೆಯಾದ ಮಹದೇವನ ಕೈಕೆಳಗೆ ಮಹಾಮಂಡಲೇಶ್ವರನಾಗಿದ್ದ ૩ನೆಯ ಗುತ್ತನೆ ಗುತ್ತರಲ್ಲಿ ಕಡೆಯವನು.

೭. ಸೇನವಾರರು

ಈ ಸಾಮಂತರ ಚರಿತ್ರೆ ಕ್ರಿ.ಶ. ೬೯೦ರಿಂದ ಮೊದಲಾಗುತ್ತದೆ; ಆಗ, ಪಶ್ಚಿಮ ಚಾಳುಕ್ಯ ದೊರೆ ವಿನಯಾದಿತ್ಯನ ಆಳಿಕೆಯ ಕಾಲದಲ್ಲಿ ಆಳುಪ ದೊರೆಯಾದ

ಚಿತ್ರವಾಹನನ ಶಾಸನಗಳಲ್ಲಿ ಒಬ್ಬ ಸೇನವಾರನ ಉಲ್ಲೇಖವಿದೆ. ಸೇನವಾರರು ಜೈನರು; ಅವರ ಆಧಿಪತ್ಯ ಸಾಮಾನ್ಯವಾಗಿ ಕಡೂರು ಜಿಲ್ಲೆಯಷ್ಟಕ್ಕೆ ವ್ಯಾಪಿಸಿತ್ತು. ಅವನು ಕಚ್ಚಾರ ವಂಶಕ್ಕೆ ಸೇರಿದವರು; ಮತ್ತು ಕೂಡಲೂರು ಪುರಾಧೀಶ್ವರರೆಂದು ಕರೆದುಕೊಂಡಿದ್ದಾರೆ. ಸೇನವಾರರಲ್ಲಿ ಒಬ್ಬನ ಹೆಸರು ಜೀಮೂತವಾಹನ ಎಂದಿದ್ದ ಸಂಗತಿ ಕುತೂಹಲದ್ದಾಗಿದೆ. ಅವನ ಮಗ ಮಾರ ಅಥವಾ ಮಾರಸಿಂಹನೆಂಬುದು; ಇವನು ವಿದ್ಯಾಧರಲೋಕದ ಸಮಸ್ತ ರಾಜರುಗಳಿಂದಲೂ ಮನ್ನಣೆ ಪಡೆದಿದ್ದನೆಂದು ಹೇಳಲಾಗಿದೆ. ಈ ಹೇಳಿಕೆಗೂ ಹಿಂದೆಯೇ ಹೇಳಿರುವಂತೆ ವಿದ್ಯಾಧರರಾಗಿದ್ದ ಶಿಲಹಾರರ ಚರಿತ್ರೆಗೂ ಯಾವ ರೀತಿ ಸಂಬಂಧ ಕಲ್ಪಿಸಬಹುದೆಂಬುದನ್ನು ಸದ್ಯದಲ್ಲಿ ನಿರ್ಧರಿಸುವ ಹಾಗಿಲ್ಲ. ಸೂರ್ಯ ಮತ್ತು ಆದಿತ್ಯ ಎಂಬ ಇಬ್ಬರು ಸೇನವಾರರು ಪಶ್ಚಿಮ ಚಾಳುಕ್ಯ ದೊರೆ ೬ನೆಯ ವಿಕ್ರಮಾದಿತ್ಯನ ಆಸ್ಥಾನದಲ್ಲಿ ವಿಶೇಷ ಸಚಿವರಾಗಿದ್ದರೆಂದು ಕ್ರಿ.ಶ. ೧೧೨೮ರ ಉಲ್ಲೇಖವೊಂದರಲ್ಲಿ ಹೇಳಿದೆ.

೮. ಶಾಂತರರು

ಹೆಚ್ಚು ಪ್ರಬಲರಾದ ಸಾಮಂತ ರಾಜವಂಶವೆಂದರೆ, ಕ್ರಿ.ಶ. ೭ನೆಯ ಶತಮಾನದಿಂದ ಈಚೆಗೆ ಪ್ರಸಿದ್ಧರಾದ ಶಾಂತರರದು. ಪಶ್ಚಿಮ ಚಾಳುಕ್ಯ ರಾಜನಾದ ವಿನಯಾದಿತ್ಯನ ಆಳಿಕೆಯಲ್ಲಿ ಇವರು ಮೊತ್ತಮೊದಲು ಕಾಣಬರುತ್ತಾರೆ. ಅವರು ಉತ್ತರ ಮಧುರಾಪುರದ ಅಧೀಶ್ವರರಾಗಿದ್ದರು. ಮತ್ತು ಉಗ್ರವಂಶಕ್ಕೆ ಸೇರಿದವರು. ಅವರ ಚರಿತ್ರೆಯಲ್ಲಿ ಗಮನಾರ್ಹವಾದ ಪ್ರಥಮ ವ್ಯಕ್ತಿ ಜಿನದತ್ತರಾಯ; ಅವನು ಕ್ರಿ.ಶ. ೯ನೆಯ ಶತಮಾನದಲ್ಲಿ ಈಗಿನ ತೀರ್ಥಹಳ್ಳಿ ತಾಲ್ಲೂಕು ಮತ್ತು ಅದರ ನೆರೆಯಲ್ಲಿ ಶಾಂತರ ಆಧಿಪತ್ಯವನ್ನು ಸ್ಥಾಪಿಸಿದನು. ಅವನು ನಗರ ತಾಲ್ಲೂಕಿನಲ್ಲಿನ ಹೊಂಬುಚ್ಚದ ಪದ್ಮಾವತಿದೇವಿಯ ಭಕ್ತನಾದನು. ಅವನು ಸ್ಥಾಪಿಸಿದ ಆಧಿಪತ್ಯ ಶಾಂತಲಿಗೆ ೧,೦೦೦ ಎಂಬ ಹೆಸರಿನಿಂದ ಅತ್ಯಂತ ಪ್ರಮುಖವಾದ ಸಂಸ್ಥಾನವಾಗಿ ಬೆಳೆಯಿತು. ಆಧಿಪತ್ಯವನ್ನು ಭದ್ರಪಡಿಸಿದ ಗೌರವ ವಿಕ್ರಮಶಾಂತರನಿಗೆ (ಸು. ಕ್ರಿ.ಶ. ೯೦೦) ಸಲ್ಲುತ್ತದೆ. ಶಾಂತರರು ಬೇಗನೆ ನೊಳಂಬರ ಮತ್ತು ಗಂಗರ ವೈರಕ್ಕೆ ಈಡಾದರು; ಆದರೆ, ಅನಂತರ ಬಂದ ನನ್ನಿ ಎಂಬ ಶಾಂತರರಾಜ ಮತ್ತು ಗಂಗರ ವೈರಕ್ಕೆ ಈಡಾರದರು; ಆದರೆ, ಅನಂತರ ಬಂದ ನನ್ನಿ ಎಂಬ ಶಾಂತರರಾಜ (ಸು. ಕ್ರಿ.ಶ. ೯೩೮) ಎಷ್ಟು ಪ್ರಸಿದ್ಧನಾಗಿದ್ದನೆಂದರೆ, ಗಂಗರ ದೊರೆ ಭೂತುಗ ಪೆರ್ಮಾನಡಿ ಎಂಬುವನು ಅವನನ್ನು ಎದುರುಗೊಳ್ಳಲು ಅರ್ಧದಾರಿ ಬಂದು, ಅವನಿಗೆ ತನ್ನ ಸಿಂಹಾಸನದಲ್ಲಿ ಅರ್ಧಾಸನವನ್ನು ಕೊಟ್ಟನಂತೆ.

ಶಾಂತರರ ಸಂಸ್ಥಾನ ರಾಜಧಾನಿಯನ್ನು ಆಮೇಲೆ ಹುಂಬುಚದಿಂದ ಕಲಶಕ್ಕೆ (ಮೂಡಿಗೆರೆ ತಾಲ್ಲೂಕು) ಬದಲಾಯಿಸಲಾಯಿತು. ಆದ್ದರಿಂದ ಕ್ರಿ.ಶ. ೧೨೦೯ರಿಂದ ಆಚೆಗೆ ಈ ರಾಜ್ಯವನ್ನು ಕಲಶರಾಜ್ಯವೆಂದು ಕರೆಯಲಾಗಿದೆ. ಈಗ ಶಾಂತರರು ಹೊಯ್ಸಳರ ನೆರವಿಗೆ ಹೋದರು; ಕ್ರಿ.ಶ. ೧೨೯೨ರಲ್ಲಿ, ೩ನೆಯ ವೀರಬಲ್ಲಾಳನ

ಪಟ್ಟಾಭಿಷೇಕ ಸಂದರ್ಭದಲ್ಲಿ ದೋರಸಮುದ್ರ ಮುತ್ತಿಗೆಗೊಂಡಾಗ ಅದನ್ನು ಶತ್ರುಗಳ ಆಕ್ರಮಣದಿಂದ ಬಿಡಿಸಿದವನು, ಶಾಂತರರ ದೊರೆಯಾದ ಪಾಂಡ್ಯದೇವ. ಕಲಶರಾಜ್ಯದ ಚರಿತ್ರೆಯಲ್ಲಿ ಜಾಲಕಮಹಾದೇವಿ ಮತ್ತು ಕಾಳಲಮಹಾದೇವಿ – ಇವರಂತಹ ಪ್ರಖ್ಯಾತ ರಾಣಿಯರ ಹೆಸರುಗಳನ್ನು ಕೇಳುತ್ತೇವೆ. ಕಲಶ ವಂಶದ ದೊರೆಯಾದ ವೀರಪಾಂಡ್ಯ ಶಾಂತರನು ಕ್ರಿ.ಶ. ೧೪೩೨ರಲ್ಲಿ ಕಾರ್ಕಳದಲ್ಲಿ (ತುಳುವ ನಾಡು) ಗೋಮಟನ ಮಹಾಶಿಲಾವಿಗ್ರಹವೊಂದನ್ನು ಮಾಡಿಸಿದನು.

ಕಾರ್ಕಳ ಬಹಳ ಪ್ರಸಿದ್ಧಿಗೆ ಬಂದು, ೧೫ನೆಯ ಶತಮಾನದಲ್ಲಿ ಅದನ್ನು ಶಾಂತರರ ಸಂಸ್ಥಾನದ ರಾಜಧಾನಿಯಾಗಿ ಮಾಡಲಾಯಿತು. ಕಾರ್ಕಳದ ಅರಸರು ಭೈರರಸ ಒಡೆಯರೆಂದು ಹೆಸರಾದರು. ಈ ವಂಶದ ಶಾಖೆಯೇ (ಕ್ರಿ.ಶ. ೧೬೦೪ರಲ್ಲಿ) ತುಳುವ ನಾಡಿನಲ್ಲಿರುವ ವೇಣೂರಿನಲ್ಲಿ ಗೋಮಟನ ಮತ್ತೊಂದು ದೊಡ್ಡ ಶಿಲಾಪ್ರತಿಮೆಯನ್ನು ಸ್ಥಾಪಿಸಿದ್ದು. ಕಾರ್ಕಳದರಸರು ಜೈನಮತ ಹಾಗೂ ಶೈವಮತಗಳಲ್ಲಿ ಆಸಕ್ತಿಯುಳ್ಳವರಾಗಿದ್ದರು.

(೯) ಸಾಳುವರು

ಸಾಳುವರದು ಪುರಾತನ ವಂಶ; ಆದರೆ ದುರ್ದೈವವಶದಿಂದ ಶಾಸನಗಳಲ್ಲಿ ಕೆಲವು ಪ್ರಮುಖ ಹೆಸರುಗಳು ಹೊರತು ಬೇರೆ ಯಾವ ವಿವರಗಳೂ ದೊರೆತಿಲ್ಲ. ಅವರ ರಾಜಧಾನಿ ಹಾಡುಹಳ್ಳಿಯಾಗಿತ್ತು (ಈಗ ಉತ್ತರ ಕನ್ನಡ ಜಿಲ್ಲೆಯಲ್ಲಿದೆ; ಆಗ ತುಳುವನಾಡಿಗೆ ಸೇರಿತ್ತು.) ಅವರು ತಾವು ಚಂದ್ರವಂಶದವರೆಂದು ಹೇಳಿಕೊಂಡಿದ್ದಾರೆ. ಮತ್ತು ಅವರು ಮೊದಲು ಶಾಂತರರಂತೆ ಜೈನಮತಾವಲಂಬಿಗಳಾಗಿದ್ದರು. ಸಾಳುವರ ಮುಖ್ಯತೆಯೇನೆಂದರೆ, ಅವರು ಸೇಉಣರಿಗೆ ಸಾಳುವ ತಿಕ್ಕಮನೆಂಬ ಒಬ್ಬ ಮಹಾ ಸೇನಾಧಿಪತಿಯನ್ನು ಒದಗಿಸಿಕೊಟ್ಟರು; ಇವನನ್ನು ಕುರಿತು ಕೆಲವು ಅಂಶಗಳನ್ನು ಹಿಂದೆಯೇ ತಿಳಿಸಿದೆ; ಅಲ್ಲದೆ, ವಿಜಯನಗರ ಸಾಮ್ರಾಜ್ಯಕ್ಕೆ ಸಾಳುವ ವಂಶವನ್ನು ಕೊಟ್ಟವರೂ ಇವರೇ; ಆದರೆ, ದುರದೃಷ್ಟದಿಂದ ಈ ಸಂಗೀತಪುರದ ಅರಸರ ವಿಚಾರವಾಗಿ ಒಂದು ಸಂಗತವಾದ ನಿರೂಪಣೆಯಾಗಲಿ, ಸಂಗೀತಪುರದ ಸಾಳುವರು ವಿಜಯನಗರಕ್ಕೆ ಹೇಗೆ ವಂಶದಾತರಾದರೆಂಬ ಬಗ್ಗೆ ವಿವರಗಳಾಗಲಿ – ಯಾವುದೂ ಸಾಹಿತ್ಯ ಅಥವಾ ಶಾಸನಗಳಿಂದ ತಿಳಿಯಬರುವುದಿಲ್ಲ.

(೧೦) ಚಂಗಾಳ್ವರು

ಇವರಿಗೂ ತುಳುವ ಆಳುಪರಿಗೂ ಏನೂ ಸಂಬಂಧವಿಲ್ಲ. ಚಂಗಾಳ್ವರು ಚಂಗನಾಡನ್ನು, (ಈಗಿನ ಹುಣಸೂರು ತಾಲ್ಲೂಕು) ಆಳುತ್ತಿದ್ದರು. ಅವರು ತಾವು ಚಂದ್ರವಂಶದವರೆಂದು ಹೇಳಿಕೊಳ್ಳುತ್ತಿದ್ದರು. ಅವರು ಮೊದಲು ಜೈನರಾಗಿದ್ದು ಆಮೇಲೆ ಶಿವನ ಆರಾಧಕರಾದರು. ಅವರ ಮನೆದೇವರು ಹುಣಸೂರು ತಾಲ್ಲೂಕಿನ ಬೆಟ್ಟದಪುರದ ಬೆಟ್ಟದ ಮೇಲಿರುವ ಅನ್ನದಾನಿ ಮಲ್ಲಿಕಾರ್ಜುನ. ಅವರಲ್ಲಿ ಚಾರಿತ್ರಿಕವಾಗಿ ಅತಿ ಹಿಂದಿನವನು ನನ್ನಿಚಂಗಾಳ್ವ (ಸುಮಾರು ಕ್ರಿ.ಶ. ೧೧ನೆಯ ಶತಮಾನ).

ಇಷ್ಟು ಹೊತ್ತಿಗೆ ಅವರ ರಾಜ್ಯ ಪೂರ್ವದಲ್ಲಿ ಪನಸೋಗೆಯಿಂದ ಪಶ್ಚಿಮದಲ್ಲಿ ಕೊಡಗಿನಲ್ಲಿರುವ ತಲಕಾವೇರಿಯವರೆಗೆ ಹರಡಿತ್ತು.

ಪ್ರಸಿದ್ಧ ಚೋಳ ಸೇನಾಪತಿ ಪಂಚವಮಹಾರಾಯನಿಂದ (ಸುಮಾರು ಕ್ರಿ.ಶ. ೧೦೦೪) ಅವರಿಗುಂಟಾದ ಸೋಲು ಅವರ ಚರಿತ್ರೆಯಲ್ಲಿ ಸ್ಮರಣೀಯವಾದ ಅತಿ ಹಿಂದಿನ ಸಂಗತಿ. ಬಳಿಕ ಅವರಿಗೂ ಹೊಯ್ಸಳರಿಗೂ ಘರ್ಷಣೆಯುಂಟಾಯಿತು. ಹೊಯ್ಸಳರ ಪ್ರಸಿದ್ಧ ಸೇನಾಪತಿ ಬೋಕಿಮಯ್ಯ ಚಂಗನಾಡನ್ನು ಜಯಿಸಿದನು (ಕ್ರಿ.ಶ. ೧೧೫೫). ಸುಮಾರು ೨೦ ವರ್ಷ ಕಳೆದ ಮೇಲೆ ಬೇಟರಸನೆಂಬ ಮತ್ತೊಬ್ಬ ಹೊಯ್ಸಳ ಸೇನಾಪತಿ ಚಂಗಾಳ್ವರ ರಾಜಧಾನಿಯಾದ (ದಕ್ಷಿಣ ಕೊಡಗಿನ) ಪಾಳುಪಜೆಯನ್ನು ಗೆದ್ದನು. ಇದರಿಂದ ಚಂಗಾಳ್ವರು ಹೊಯ್ಸಳರ ಆಧಿಪತ್ಯವನ್ನು ಒಪ್ಪಿಕೊಳ್ಳಬೇಕಾಯಿತು. ಅವರು ಹೊಯ್ಸಳರ ಪ್ರಭುತ್ವವನ್ನೊಪ್ಪಿಕೊಂಡು ಕಾವೇರಿಯ ದಕ್ಷಿಣದ ಶ್ರೀರಂಗಪಟ್ಟಣವನ್ನು ತಮ್ಮ ಹೊಸ ರಾಜಧಾನಿಯಾಗಿ ಮಾಡಿಕೊಂಡರು.

ಹದಿನೈದನೆಯ ಶತಮಾನದ ಕೊನೆಯ ಭಾಗದಲ್ಲಿ ಅವರ ದೊರೆ ನಂಜರಾಜನೆಂಬುವನು ಕಾವೇರಿಯ ಉತ್ತರದಲ್ಲಿ ನಂಜರಾಯಪಟ್ಟಣವೆಂಬ ಹೊಸ ರಾಜಧಾನಿಯನ್ನು ಕಟ್ಟಿದನು. ಆದರೆ ಹದಿನಾರನೆಯ ಶತಮಾನದ ಕೊನೆಯಲ್ಲಿ ಪಿರಿಯರಾಜನು ಶ್ರೀರಂಗಪಟ್ಟಣವನ್ನು ಜೀರ್ಣೋದ್ಧಾರಮಾಡಿ ಅದಕ್ಕೆ ತನ್ನ ಹೆಸರಿಟ್ಟು ಪಿರಿಯಪಟ್ಟಣ ಎಂದು ಕರೆದನು. ಚಂಗಾಳ್ವರು ಈಗ ವಿಜಯನಗರದ ಆಧಿಪತ್ಯವನ್ನು ಅಂಗೀಕರಿಸಿದರು. ಕಟ್ಟಕಡೆಗೆ ಮೈಸೂರು ದೊರೆ ರಾಜಒಡೆಯರಿಂದ ಚಂಗಾಳ್ವ ರಾಜ್ಯ ನಾಶವಾಯಿತು. (ಕ್ರಿ.ಶ. ೧೬೧೪).

(೧೧) ಕೊಂಗಾಳ್ವರು

ಕೊಂಗಾಳ್ವರ ರಾಜ್ಯ ಹಾಸನ ಜಿಲ್ಲೆಯ ದಕ್ಕಿಣದಲ್ಲಿರುವ ಅರಕಲಗೂಡು ತಾಲ್ಲೂಕು ಮತ್ತು ಕೊಡಗಿನ ಉತ್ತರ ಭಾಗದಲ್ಲಿರುವ ಎಳುಸಾವಿರ ನಾಡುಗಳನ್ನು ಒಳಗೊಂಡಿತ್ತು. ಈ ರಾಜ್ಯ ಮೇಲೆ ಹೇಳಿದ ಚೋಳ ಸೇನಾಪತಿ ಪಂಚವಮಹಾರಾಯನ ಶೌರ್ಯದಿಂದ ತಲೆದೋರಿತು. ಅವನು ಪನಸೋಗೆಯ ಯುದ್ಧದಲ್ಲಿ ಚಂಗಾಳ್ವರನ್ನು ಸೋಲಿಸಿದನು. ಅವನ ಒಡೆಯನಾದ ರಾಜರಾಜನು ಮಾಳವ್ವಿಯ (ಕೊಡಗಿನಲ್ಲಿರುವ ಈಗಿನ ಮಳಂಬಿ) ಸುತ್ತಮುತ್ತಣ ನಾಡನ್ನೂ **ಕ್ಷತ್ರಿಯ ಶಿಖಾಮಣಿ ಕೊಂಗಾಳ್ವ** ಎಂಬ ಬಿರುದನ್ನೂ ಕೊಟ್ಟನು. ಹೊಯ್ಸಳರು ಚೋಳರನ್ನು ಕರ್ನಾಟಕದಿಂದ ಹೊರಗಟ್ಟಿದ ಬಳಿಕ ಕೊಂಗಾಳ್ವರು ಕರ್ನಾಟಕದ ರಾಜಕೀಯದಲ್ಲಿ ಪ್ರಬಲ ಪಾತ್ರ ವಹಿಸದೆ ಮರೆಯಾಗುತ್ತಾರೆಂದೇ ಹೇಳಬಹುದು. ಅವರು ಮತದಲ್ಲಿ ಜೈನರು. ಅವರ ಹೆಸರು ಕ್ರಿ.ಶ. ೧೩೯೦ರವರೆಗೂ ಉಳಿದುಬಂದಿತ್ತು.

(೧೨) ಪಾಂಡ್ಯರು

ಉಚ್ಚಂಗಿಯ ಪಾಂಡ್ಯರು ಒಂದು ಮುಖ್ಯಮಾಂಡಲಿಕ ಮನೆತನದವರು.

ಅವರು ತಾವು ಚಂದ್ರವಂಶದ ಸಂತತಿಯೆಂದು ಹೇಳಿಕೊಳ್ಳುತ್ತಿದ್ದರು. ಅವರು ಮೊದಲು ಸಿಸುಗಳಿ ರಾಜಧಾನಿಯಿಂದ ಹಯ್ವೆಯನ್ನು ಆಳುತ್ತಿದ್ದರು. ಏಳು ಕೊಂಕಣಗಳನ್ನೂ, ಆದ್ದರಿಂದಲೇ ಅವುಗಳಲ್ಲೊಂದಾದ ಹಯ್ವೆಯನ್ನು, ಪಶ್ಚಿಮ ಚಾಳುಕ್ಯ ರಾಜಕುಮಾರ ಜಯಸಿಂಹನು ಜಯಿಸಿದಾಗ ಪಾಂಡ್ಯರು (ಬಳ್ಳಾರಿ ಜಿಲ್ಲೆಯ ನೈರುತ್ಯ ಭಾಗದಲ್ಲಿರುವ) ಪ್ರಸಿದ್ಧವಾದ ಉಚ್ಚಂಗಿಯ ದುರ್ಗದಲ್ಲಿ ಆಶ್ರಯ ಹೊಂದಿದರು.

ಅವರ ಮೂಲಪುರುಷ ಮಂಗಯ ಅಥವಾ ಆದಿತ್ಯದೇವ. ಹಲವು ಹೆಸರುಗಳನ್ನು ದಾಟಿದ ಬಳಿಕ ಆರುಮಡಿ ತ್ರಿಭುವನಮಲ್ಲ ವಿಕ್ರಮಾದಿತ್ಯನೆಂಬ ಪಶ್ಚಿಮ ಚಾಳುಕ್ಯರಾಜನ ಅಧೀನನಾದ ತ್ರಿಭುವನಮಲ್ಲ ಪಾಂಡ್ಯನಲ್ಲಿಗೆ ಬರುತ್ತೇವೆ. ತ್ರಿಭುವನಮಲ್ಲ ಪಾಂಡ್ಯ ಹಲವು ಜಯಗಳನ್ನು ಸಾಧಿಸಿದನೆಂದು ಹೇಳಿದೆ. ಈ ಎಲ್ಲ ಜಯಗಳ ಫಲವಾಗಿ ನೊಳಂಬವಾಡಿ ಪ್ರಾಂತವೂ ಶಾಂತಲಿಗೆ ಪ್ರಾಂತವೂ ಉಚ್ಚಂಗಿ ಪಾಂಡ್ಯರ ಅಧಿಕಾರಕ್ಕೆ ಒಳಗಾಯಿತು.

ಸುಮಾರು ಒಂದು ಶತಮಾನ ಕಳೆದ ಮೇಲೆ (ಕ್ರಿ. ಶ. ೧೧೮೪) ವಿಜಯ ಪಾಂಡ್ಯನೆಂಬ ಮತ್ತೊಬ್ಬ ತೇಜಸ್ವಿಯಾದ ಪಾಂಡ್ಯರಾಜ ಕಾಣಿಸಿಕೊಳ್ಳುತ್ತಾನೆ. ಅವನು ಚೋಳರ ಧಾಳಿಯನ್ನು ಯಶಸ್ವಿಯಾಗಿ ಎದುರಿಸಿ ವಿಶೇಷ ಖ್ಯಾತಿ ಪಡೆದನು. ಆದರೆ ಹೊಯ್ಸಳ ರಾಜ ಇಮ್ಮಡಿ ಬಲ್ಲಾಳ (ಕ್ರಿ.ಶ. ೧೧೭೭ಕ್ಕೆ ಹಿಂದೆ) ಉಚ್ಚಂಗಿ ದುರ್ಗವನ್ನು ಹಿಡಿದ ಮೇಲೆ ಪಾಂಡ್ಯರ ಬೆನ್ನು ಮುರಿಯಿತು.

೯. ಹೊರನಾಡಿನ ಸಂಬಂಧ

ಈ ಹಿಂದಿನ ಪುಟಗಳಲ್ಲಿ ಕರ್ನಾಟಕಕ್ಕೆ ಸೇರಿದ ಕೆಲವು ರಾಜವಂಶಗಳ ವಿಷಯಗಳನ್ನು ಆಗಾಗ ಪ್ರಸ್ತಾಪಿಸಿರುವುದು ವಾಚಕರ ನೆನಪಿನಲ್ಲಿರಬಹುದು. ಉದಾಹರಣೆಗೆ ಲಾಟರು, ಮಾಳವರು, ಪಲ್ಲವರು ಮತ್ತು ಚೋಳರ ವಿಷಯವಾಗಿ ನಾವು ಪ್ರಸ್ತಾಪಿಸಿದ್ದೇವೆ. ಈ ಹೊರ ರಾಜವಂಶಗಳಿಗೂ ಕರ್ನಾಟಕಕ್ಕೂ ಏನು ಸಂಬಂಧ? ಈ ಪ್ರಶ್ನೆಗೆ ಈಗ ನಾವು ಉತ್ತರ ಕೊಡಬೇಕು.

(೧) ಲಾಟರು

ಇದು ಲಾಟ ಅಥವಾ ದಕ್ಷಿಣ ಗುಜರಾತಿನ ಜನರಿಗೆ ಸಾಮಾನ್ಯವಾಗಿ ಕೊಟ್ಟ ಹೆಸರು. ಒಂದಾನೊಂದು ಕಾಲದಲ್ಲಿ ಏಳು ಕೊಂಕಣಗಳಲ್ಲಿ ಒಂದಾಗಿತ್ತೆಂದು ಊಹಿಸಲು ಒಳ್ಳೆಯ ಆಧಾರವಿದೆ. ರಾಷ್ಟ್ರಕೂಟ ಮತ್ತು ಪಶ್ಚಿಮ ಚಾಳುಕ್ಯರ ಶಾಸನಗಳ ಮತ್ತು ಆ ಸಮಕಾಲದ ಗುರ್ಜರ ಶಾಸನಗಳ ಸಹಾಯದಿಂದ ಅದರ ಸ್ಥಾನವನ್ನೂ ಮೇರೆಗಳನ್ನೂ ಗೊತ್ತು ಮಾಡಬಹುದು. ಆದಿಯಲ್ಲಿ ಅದೊಂದು ಸಣ್ಣ ಪ್ರಾಂತ. ಕೀಲ್ ನದಿ ಅದರ ಉತ್ತರದ ಮೇರೆಯಾಗಿ ಅದನ್ನು ಗುರ್ಜರದಿಂದ ಬೇರ್ಪಡಿಸಿತ್ತು. ಅದರ ದಕ್ಷಿಣದ ಮೇರೆ ದಮಣ್ಗಂಗ; ಪೂರ್ವದ ಮೇರೆ ಪಶ್ಚಿಮ

ಘಟ್ಟಗಳು; ಪಶ್ಚಿಮದ ಮೇರೆ ಕಡಲು. ನೌಸಾರಿ ಮತ್ತು ಅಷ್ಟಗಾಂಗಳು ಲಾಟ ರಾಜ್ಯಗಳಲ್ಲಿದ್ದವು.

ಏಳನೆಯ ಶತಮಾನದ ಪೂರ್ವಾರ್ಧದಲ್ಲಿ ಅದು ಕಳಚುರಿಯ ರಾಜ್ಯದ ಒಂದು ಭಾಗವಾಗಿದ್ದಾಗಿನಿಂದಲೂ ಅದಕ್ಕೆ ಕರ್ನಾಟಕದೊಡನೆ ಬಹಳ ಗಾಢವಾದ ಸಂಬಂಧವಿತ್ತು. ಸಂಕರಗಣ ಮತ್ತು ಬುದ್ಧ ಎಂಬ ಅಲ್ಲಿಯ ದೊರೆಗಳನ್ನು ಪಶ್ಚಿಮ ಚಾಳುಕ್ಯರಾಜ ಮಂಗಳೇಶನು (ಕ್ರಿ.ಶ. ೬೦೨) ಸೋಲಿಸಿದ ಮೇಲೆ ಲಾಟ ಪಶ್ಚಿಮ ಚಾಳುಕ್ಯರ ಸ್ವಾಧೀನಕ್ಕೆ ಹೋಯಿತು. ಆಗಿನಿಂದ ಎಂಟನೆಯ ಶತಮಾನದ ಮಧ್ಯಭಾಗದವರೆಗೂ ಅದು ಪಶ್ಚಿಮ ಚಾಳುಕ್ಯರ ಕೈಯಲ್ಲೇ ಇತ್ತು. ಮಂಗಳೇಶನ ಮರಣದ ತರುವಾಯ, ಎರಡನೆಯ ಪುಲಿಕೇಶಿ ಪಟ್ಟಕ್ಕೆ ಬಂದಾಗ ಇರಬೇಕು, ಎಲ್ಲ ಕಡೆಯೂ ದಂಗೆ ಎದ್ದಾಗ ಆ ದಂಗೆಯಲ್ಲಿ ಲಾಟ ಭಾಗವಹಿಸಿತು. ಆದ್ದರಿಂದ ಎರಡನೆಯ ಪುಲಿಕೇಶಿ ದಂಗೆಯಲ್ಲಿ ಸೇರಿದ್ದ ಇತರ ಭಾಗಗಳ ಜೊತೆಯಲ್ಲಿ ಇದನ್ನೂ ಮತ್ತೊಂದು ಸಲ ಗೆದ್ದನು. ಆದರೆ ಅಲ್ಲಿನ ಆಡಳಿತವನ್ನು ಅದರ ಸ್ವಂತ ರಾಜರ ಕೈಯಲ್ಲಿ ಉಳಿಸಿದನು. ಕ್ರಿ.ಶ. ೬೧೧ರಲ್ಲಿ ಸತ್ಯಾಶ್ರಯ – ಧ್ರುವರಾಜ – ಇಂದ್ರವರ್ಮನು ಅದನ್ನು ಆಳುತ್ತಿದ್ದನು. ಅವನಿಗೆ ಇದರ ಜೊತೆಗೆ ಬೇರೆಯ ಪ್ರಾಂತಗಳೂ ಸೇರಿದ್ದುವು. ಮೂವತ್ತೆರಡು ವರ್ಷಗಳು ಕಳೆದ ಬಳಿಕ (ಕ್ರಿ.ಶ.೬೪೩) ವಿಜಯವರ್ಮರಾಜ ಆಳುತ್ತಿದ್ದನು. ಲಾಟವನ್ನಾಳಿದ ಚಾಳುಕ್ಯವಂಶದ ಗುಜರಾತು ರಾಜರಲ್ಲಿ ಅವನೇ ಮೊದಲನೆಯವನು. ವಿಜಯವರ್ಮರಾಜನ ಶಾಖೆಯವರು ಏಕೋ ಚೆನ್ನಾಗಿ ಆಳಲಿಲ್ಲ. ಆದ್ದರಿಂದ ಅದನ್ನು ಸೇಂದ್ರಕರಾಜ ಪೃಥ್ವೀವಲ್ಲಭ ನಿಕುಂಭಲ್ಲಶಕ್ತಿಯ (ಕ್ರಿ.ಶ. ೬೫೧) ವಶಕ್ಕೆ ಒಪ್ಪಿಸಿದ್ದು ಕಂಡುಬರುತ್ತದೆ. ಆದರೆ ಕ್ರಿ.ಶ. ೬೭೦ರಿಂದ ಮುಂದಕ್ಕೆ ಅದು ಮತ್ತೆ ಪಶ್ಚಿಮ ಚಾಳುಕ್ಯ ರಾಜಪುತ್ರರಿಗೇ ಸೇರಿತು. ತಾಜಿಕರನ್ನು ಗೆದ್ದ (ಕ್ರಿ.ಶ. ೭೩೮) ಪಶ್ಚಿಮ ಚಾಳುಕ್ಯವಂಶದ ಅವನಿಜನಾಶ್ರಯ ಪುಲಿಕೇಶಿ ಒಬ್ಬ ಗುರ್ಜರರಾಜ ಆಳುತ್ತಿದ್ದ ಉತ್ತರ ಪ್ರಾಂತಗಳನ್ನು ಸೇರಿಸಿಕೊಂಡು ಅದರ ಮೇರೆಯನ್ನು ವಿಸ್ತರಿಸಿದನು. ಆದ್ದರಿಂದ ಲಾಟದ ಉತ್ತರ ಮೇರೆ ೮ನೆಯ ಶತಮಾನದಲ್ಲಿ ನರ್ಮದೆಯವರೆಗೆ ಅಥವಾ ಮಾಹಿ ಇರುವಷ್ಟು ದೂರ ಕೂಡ ವ್ಯಾಪಿಸಿತ್ತು.

ಅವನಿಜನಾಶ್ರಯ ಪುಲಿಕೇಶಿಯ ರಾಜ್ಯಭಾರ ಕಾಲದಲ್ಲೆ ಇರಬಹುದು, ಸದ್ಯಕ್ಕೆ ನಮಗೆ ತಿಳಿಯದಿರುವ ಯಾವುದೋ ಸಂದರ್ಭದಲ್ಲಿ ಲಾಟ ಬೇರೆಯವರ ಕೈಗೆ ಹೋಯಿತು. ಏಕೆಂದರೆ ಕ್ರಿ.ಶ. ೭೫೭ರಲ್ಲಿ ರಾಷ್ಟ್ರಕೂಟ ವಂಶದ ಸ್ವತಂತ್ರ ರಾಜನೂ ರಾಷ್ಟ್ರಕೂಟ ಮೂಲವಂಶದವನಾದ ದಂತಿದುರ್ಗರಾಜನ ಸಮಕಾಲಿಕನೂ ಆದ ಮಹಾರಾಜಾಧಿರಾಜ ಮೊದಲನೆಯ ಕಕ್ಕರಾಜನು ಅದನ್ನಾಳುತ್ತಿದ್ದನು.

ಆದರೆ ರಾಷ್ಟ್ರಕೂಟವಂಶದ ಮತ್ತೊಂದು ಶಾಖೆ ಲಾಟದ ಮೇಲೆ ಅಧಿಕಾರ ನಡೆಸುತ್ತಿದ್ದದ್ದು ಬಹು ಸ್ವಲ್ಪ ಕಾಲದವರೆಗೆ ಮಾತ್ರ. ಮೊದಲನೆಯ ಕಕ್ಕರಾಜನ

ಕಾಲದಲ್ಲಿಯೇ ದಂತಿದುರ್ಗನು ಅದನ್ನು ತನ್ನ ವಶಕ್ಕೆ ತೆಗೆದುಕೊಂಡನು. ದಂತಿದುರ್ಗನ ಮರಣಾನಂತರ ಮೊದಲನೆಯ ಕೃಷ್ಣರಾಜನು ಅದರ ಕೆಲವು ಭಾಗಗಳನ್ನು ಗೆದ್ದುಕೊಂಡನು. ಆದರೆ ಮೊದಲನೆಯ ಕಕ್ಕರಾಜನ ಅನುಯಾಯಿಗಳು ಮುಮ್ಮಡಿ ಪ್ರಭೂತವರ್ಷ ಗೋವಿಂದನ ಕಾಲದವರೆಗೂ ಲಾಟದ ಮೇಲೆ ಸ್ವಲ್ಪ ಅಧಿಕಾರವನ್ನು ಇಟ್ಟುಕೊಂಡೇ ಇದ್ದರು. ಈ ಪ್ರಭೂತವರ್ಷ ಗೋವಿಂದ ಲಾಟವನ್ನು ಅವರಿಂದ ಕಿತ್ತುಕೊಂಡು ಅದನ್ನು ತನ್ನ ತಮ್ಮ ಇಂದ್ರರಾಜನಿಗೆ ಕೊಟ್ಟನು (ಕ್ರಿ.ಶ, ೭೮೩–೪). ಅವನ ಮೊಮ್ಮಗ ಇಮ್ಮಡಿ ಕೃಷ್ಣ (ಕ್ರಿ.ಶ. ೮೮೪–೯೧೩) ಲಾಟದ ಸೊಕ್ಕು ಮುರಿದನೆಂದು ಹೇಳಿದೆ.

ಪಶ್ಚಿಮ ಚಾಳುಕ್ಯರು ಕ್ರಿ.ಶ. ೯೭೩ರಲ್ಲಿ ತೈಲಪನ ಕೈಕೆಳಗೆ ಮತ್ತೆ ತಲೆಯೆತ್ತಲಾಗಿ ಅವನ ಸೇನಾಪತಿ ಬಾರಪ ಲಾಟವನ್ನು ಹಿಡಿದನು. ಕ್ರಿ.ಶ. ೯೧೫). ಬಾರಪನ ಸಂತತಿಯವರು ೧೦೫೧ರವರೆಗೂ ಲಾಟವನ್ನಾಳಿದರು.

ಮುಂದೆ ಲಾಟರ ಸುದ್ದಿ ಬರುವುದು ೧೧೩೧ರ ಒಂದು ಶಾಸನದಲ್ಲಿ. ಅದರಲ್ಲಿ ಹೊಯ್‌ಸಳ ರಾಜ ವಿಷ್ಣುವರ್ಧನನು ಲಾಟರಾಜನೆಂಬ ಮೋಡವನ್ನು ಚದುರಿಸಿದನೆಂದು ಹೇಳಿದೆ. ಯಾದವರು ಹಿಂದಿನ ದೊರೆಗಳಂತೆಯೇ ಲಾಟವನ್ನು ಅಡಗಿಸುವ ನೀತಿಯನ್ನು ಮುಂದುವರಿಸಿದರು. ಸೇಊಣರಾಜ ಮೊದಲನೆಯ ಭಿಲ್ಲಮ (ಕ್ರಿ.ಶ. ೧೧೮೭–೧೧೯೧) ಲಾಟರನ್ನು ಸೋಲಿಸಿದನೆಂದು ಹೇಳಿದೆ. ಅವನ ಮೊಮ್ಮಗ ಸಿಂಘಣ (ಕ್ರಿ.ಶ. ೧೨೧೦–೧೨೪೭) ತನ್ನ ಅಪ್ಪಣೆ ನಡೆಸುವಂತೆ ಲಾಳ (ಲಾಟ) ರಾಜನನ್ನು ನಿರ್ಬಂಧಪಡಿಸಿದನೆಂದು ಹೇಳಿದೆ. ಬಹುಶಃ ಇದು ಅತಿಶಯೋಕ್ತಿಯಾಗಿರಬಹುದು. ಹೇಮಾದ್ರಿಯ ಹೇಳಿಕೆಯ ಪ್ರಕಾರ ಮಹಾದೇವರಾಜನು (೧೨೬೦–೧೨೭೧) ಲಾಟರನ್ನು ಜಯಿಸಿದನೆಂದು ಹೇಳಬಹುದು.

(೨) ಮಾಳವರು

ಮಧ್ಯಭಾರತದ ಮಾಳವಕ್ಕೂ ಕರ್ನಾಟಕದೊಡನೆ ನಿಕಟ ಸಂಬಂಧವಿತ್ತು. ಇಮ್ಮಡಿ ಪುಲಿಕೇಶಿರಾಜನು ಮಾಳವರನ್ನು ಅಡಗಿಸಿದನಂತೆ. ಅದೇ ಪಶ್ಚಿಮ ಚಾಳುಕ್ಯ ವಂಶದ ವಿನಯಾದಿತ್ಯ ರಾಜನು ಮಾಳವರನ್ನು ಅಡಗಿಸಿ ದಾಸ್ಯ ಸ್ಥಿತಿಗೆ ತಂದನೆಂದು ಹೇಳಲಾಗಿದೆ. ರಾಷ್ಟ್ರಕೂಟರಲ್ಲಿ ಇಮ್ಮಡಿ ದಂತಿದುರ್ಗರಾಜ ಮಾಳವ ರಾಜನನ್ನು ಸೋಲಿಸಿದನೆಂದು ಹೇಳಿದೆ. ಮುಮ್ಮಡಿ ಗೋವಿಂದ ತನ್ನ ಪೂರ್ವಿಕರ ಮಾಳವ ವಿರೋಧ ನೀತಿಯನ್ನು ಮುಂದುವರಿಸಿದನು. ಮಾಳವದೊಡೆಯನು ರಾಷ್ಟ್ರಕೂಟ ರಾಜನನ್ನೆದುರಿಸುವುದು ನೀತಿಯಲ್ಲವೆಂದು ತಿಳಿದು ಗೋವಿಂದರಾಜನಿಗೆ ಶರಣಾಗತನಾದನೆಂದು ಶಾಸನಗಳಲ್ಲಿ ಹೇಳಿದೆ. ಸೊಕ್ಕಿದ ಒಬ್ಬ ಗುರ್ಜರರಾಜ ಮಾಳವದ ಮೇಲೆ ಬಿದ್ದಾಗ ಅವನನ್ನೆದುರಿಸಿ ಮಾಳವರಾಜನನ್ನು ರಕ್ಷಿಸಿದವನು ಮುಮ್ಮಡಿ ಗೋವಿಂದನ ತಮ್ಮ ಇಂದ್ರನ ಮಗ ಕರ್ಕರಾಜ ಸುವರ್ಣವರ್ಷ.

ರಾಷ್ಟ್ರಕೂಟ ರಾಜ ಮೊದಲನೆಯ ಅಮೋಘವರ್ಷನ ಶಾಸನಗಳಲ್ಲೊಂದರಲ್ಲಿ ಆ ರಾಜನನ್ನು ಇತರರರೊಡನೆ ಮಾಳವ ರಾಜನೂ ಪೂಜಿಸಿದನೆಂದು ಹೇಳಿರುವ ಸಂಗತಿಯಿಂದ ಮಾಳವದ ಅಧೀನಸ್ಥಿತಿ ಮತ್ತಷ್ಟು ಸ್ಥಿರವಾಗುತ್ತದೆ.

ಪಶ್ಚಿಮ ಚಾಳುಕ್ಯರೂ ರಾಷ್ಟ್ರಕೂಟರೂ ಮಾಳವರನ್ನು ಯುದ್ಧದಲ್ಲಿ ಗೆದ್ದಿದ್ದರು ಮಾತ್ರ; ಆದರೆ ಹೊಯ್ಸಳರು ಇನ್ನೂ ಒಂದು ಹೆಜ್ಜೆ ಮುಂದೆ ಹೋದರು. ಅವರು ಮಾಳವ ರಾಜಧಾನಿಯನ್ನು ಸುಟ್ಟುಬಿಟ್ಟರು. ಮೊದಮೊದಲಿನ ಹೊಯ್ಸಳರಲ್ಲೊಬ್ಬನಾದ ಎಱೆಯಂಗನು (ಕ್ರಿ.ಶ. ೧೧೩೭) ಮಾಳವದ ರಾಜಧಾನಿಯಾದ ಧಾರಾನಗರವನ್ನು ಮೊದಲು ಗೆದ್ದನೆಂದೂ ಬಳಿಕ ಸುಟ್ಟನೆಂದೂ ಹೇಳಿದೆ. ಪಶ್ಚಿಮ ಚಾಳುಕ್ಯರ ಹೊಯ್ಸಳ ಮಾಂಡಲಿಕನ ಈ ಕೆಲಸದಿಂದ ಮಾಳವ ಅಳಿಸಿಹೋಗಲಿಲ್ಲ. ಅದು ಸ್ವಲ್ಪಮಟ್ಟಿಗೆ ಪ್ರಭಾವ ಬೀರುತ್ತಿತ್ತೆಂಬುದು ಸೇಉಣರಾಜ ಸಿಂಘಣನು ಮಾಳವರೊಡನೆ ಹೋರಿದ ಜಟ್ಟಿಯೆಂದು (ಕ್ರಿ.ಶ. ೧೨೧೮) ವರ್ಣಿಸಿರುವ ಸಂಗತಿಯಿಂದ ದೃಢಪಡುತ್ತದೆ. ಅವನ ಮೊಮ್ಮಗ ಕೃಷ್ಣನು (ಕ್ರಿ.ಶ. ೧೨೪೭ – ೫೫) ಮಾಳವರನ್ನು ಗೆದ್ದನೆಂದು ಒಂದು ಅಸ್ಪಷ್ಟ ಹೇಳಿಕೆಯಿದೆ. ಆದರೆ ಇಷ್ಟು ಹೊತ್ತಿಗೆ ಮಾಳವ ಉತ್ತರ ಭಾರತದ ರಾಜಕೀಯದಲ್ಲಿ ಸಿಕ್ಕಿಕೊಂಡು ಬಿಟ್ಟಿತ್ತು. ಯಾದವರು ಕೂಡ ಮಾಳವದ ಶಾಶ್ವತ ಜಯಕ್ಕೆ ಮನಸ್ಸು ಕೊಡಲಾರದಷ್ಟು ಮಟ್ಟಿಗೆ ತಮ್ಮ ದಕ್ಷಿಣದೇಶದ ವ್ಯವಹಾರಗಳಲ್ಲೆ ಮುಳುಗಿ ಹೋಗಿದ್ದರು.

(೩) ಪಲ್ಲವರು

ನಾವು ಈಗಾಗಲೇ ಗಂಗರಾಜ ಶಿವಮಾರನ ಕಾಲದವರೆಗೆ ಪಲ್ಲವರ ಚರಿತ್ರೆಯನ್ನು ಹೇಳಿರುವೆವೆಂಬುದು ವಾಚಕರಿಗೆ ನೆನಪಿರಬಹುದು. ಈಗ ರಾಷ್ಟ್ರಕೂಟರು, ಪಶ್ಚಿಮ ಚಾಳುಕ್ಯರು ಮತ್ತು ಹೊಯ್ಸಳರ ಕಾಲದಲ್ಲಿ ಪಲ್ಲವ–ಕರ್ನಾಟಕ ಸಂಬಂಧದ ಚರಿತ್ರೆಯನ್ನು ಮುಂದುವರಿಸುತ್ತೇವೆ.

ರಾಷ್ಟ್ರಕೂಟವಂಶದ ಮುಮ್ಮಡಿ ಗೋವಿಂದನ ತಂದೆ ಧ್ರುವರಾಜನು ಒಬ್ಬ ಪಲ್ಲವ ರಾಜನನ್ನು (ಇವನ ಹೆಸರು ಹೇಳಿಲ್ಲ) ತನಗೆ ತಲೆಬಗ್ಗಿ ಮಣಿಯುವಂತೆ ಮಾಡಿ ಅವನಿಂದ ಆನೆಗಳನ್ನು ತೆಗೆದುಕೊಂಡನು. ಮುಮ್ಮಡಿ ಗೋವಿಂದನೂ ಶ್ರೀಭವನನೆಂಬ ಹೆಸರಿನ (ಈಗ ಇಂಥದೆಂದು ಗೊತ್ತುಪಡಿಸಿಲ್ಲದ) ಒಂದು ಸ್ಥಳದಿಂದ ಹೊರಟು ತುಂಗಭದ್ರೆಗೆ ನಡೆದು ಅಲ್ಲಿ ಹಿಂದೆಯೇ ಗೆದ್ದು ಅಧೀನರಾಗಿ ಮಾಡಿಕೊಂಡಿದ್ದ ಪಲ್ಲವರಿಂದ ಮತ್ತಷ್ಟು ಸಿರಿಯನ್ನು ಸಂಪಾದಿಸಿದನು.

ಪಶ್ಚಿಮ ಚಾಳುಕ್ಯರೂ ರಾಷ್ಟ್ರಕೂಟರೂ ಪಲ್ಲವರನ್ನು ತಗ್ಗಿಸುವ ನೀತಿಯನ್ನು ಮುಂದುವರಿಸಿದರು. ದಿನ ಕಳೆದಹಾಗೆಲ್ಲ ಹೆಚ್ಚು ಹೆಚ್ಚು ಅಮುಖ್ಯರಾಗುತ್ತ ಬಂದರು. ಆ ಕಾಲದ ರಾಜಕೀಯದಲ್ಲಿ ಅವರು ಒಂದು ವೇಳೆ ಮತ್ತೆ ಕಾಣಿಸಿಕೊಂಡಿದ್ದರೆ ಅದು ನೊಳಂಬ – ಪಲ್ಲವರೆಂಬ ಹೆಸರಿನಿಂದ ಮಾತ್ರವೇ. ನೊಳಂಬ – ಪಲ್ಲವರು ಉಚ್ಚಂಗಿ ಪಾಂಡ್ಯರೊಡನೆ (೧೦ನೆಯ ಶತಮಾನ) ಕೂಡಿಹೋಗುವವರೆಗೂ

ಅವರ ಚರಿತ್ರೆಯನ್ನು ನಾವು ನೋಡಿದೆವು. ನೊಳಂಬಾಧಿರಾಜ ಘಟೆಯ ಅಂಕಕಾಱನು ಪಶ್ಚಿಮ ಚಾಳುಕ್ಯರಾಜ ಆರುಮಡಿ ವಿಕ್ರಮಾದಿತ್ಯನ ಮಾಂಡಲಿಕನಾಗಿದ್ದನು; ಆ ಚಾಳುಕ್ಯರಾಜನ ಅಧೀನತೆಯಲ್ಲಿ ನೊಳಂಬವಾಡಿ ೩೨,೦೦೦ ಮತ್ತು ಮಾಸವಾಡಿ ನಾಡುಗಳನ್ನು ಅವನಿಗೆ ಕೊಟ್ಟಿತ್ತು. ಮಾಸವಾಡಿ ನಾಡು ಮತ್ತು ನೊಳಂಬವಾಡಿ ೩೨,೦೦೦ಗಳನ್ನು ಪಶ್ಚಿಮ ಚಾಳುಕ್ಯದೊರೆ ಇಮ್ಮಡಿ ಜಯಸಿಂಹನ ಮಗ ಮೊದಲನೆಯ ಸೋಮೇಶ್ವರನು ಒಬ್ಬ ನೊಳಂಬ ರಾಜಪುತ್ರಿಯನ್ನು ಮದುವೆಯಾದದ್ದರಿಂದಿರಬಹುದು, ಸೋಮೇಶ್ವರನ ಮಗ ಪಲ್ಲವ ವಂಶದವನೆಂದು ಹೇಳಲಾಗಿದೆ. ಆದರೆ ಅದೇ ಪಶ್ಚಿಮ ಚಾಲುಕ್ಯ ವಂಶದ ಇಮ್ಮಡಿ ಸೋಮೇಶ್ವರನು ಪಲ್ಲವರನ್ನು ಸೋಲಿಸಿದನು; ಆರುಮಡಿ ವಿಕ್ರಮಾದಿತ್ಯನು ಅವರನ್ನು ಅಡಗಿಸಿದನು; ವಿಕ್ರಮಾದಿತ್ಯನ ತರುವಾಯ ಬಂದ ಇಮ್ಮಡಿ ಪೆರ್ಮ ಜಗದೇಕಮಲ್ಲನು ಅವರನ್ನು ನಾಶಮಾಡಿ ಅವರ ರಾಜ್ಯವನ್ನು ತಾನೇ ಆಳಿದನು.

ಹೊಯ್ಸಳರೂ ಪಲ್ಲವರೂ ಒಬ್ಬರಿಗೊಬ್ಬರು ಹಿತವರೇನಾಗಿರಲಿಲ್ಲ. ವಿಷ್ಣುವರ್ಧನ ರಾಜನು ತೊಂಡೈಮಂಡಲ ರಾಜ್ಯಕ್ಕೆ ಕಾಡುಬೆಂಕಿಯಾಗಿದ್ದನು. ಅವನು ನೊಳಂಬವಾಡಿ ನಾಡನ್ನು ವಶಪಡಿಸಿಕೊಂಡದ್ದಾಗಿ ಹೇಳಿದೆ. ಅವನ ಮೊಮ್ಮಗ ಎರಡನೆಯ ಬಲ್ಲಾಳನು ಪಲ್ಲವರನ್ನು ದಿಗಿಲುಗೊಳಿಸಿದನು. ನಾವು ಕೊನೆಯ ಸಲ ಪಲ್ಲವರ ವಿಚಾರವನ್ನು ಕೇಳುವುದು ಸೇಉಣರಾಜ ಸಿಂಘಣನ ಆಳಿಕೆಯಲ್ಲಿ; ಒಬ್ಬ ಪಲ್ಲವ ದೊರೆ ಅವನ ಸಮಕಾಲೀನನಾಗಿದ್ದನೆಂದು ಹೇಳಿದೆ. ಆದರೆ ಈ ಕಾಲಕ್ಕೆ ಬಹಳ ಮೊದಲೆ ಪಲ್ಲವರು ಅಧೀನಸ್ಥಿತಿಗೆ ಇಳಿದುಹೋಗಿದ್ದರು. ಅವರಲ್ಲಿ ಕೊನೆಯವನು ಪೂರ್ವ ಚಾಳುಕ್ಯರಾಜ ಕುಲೋತ್ತುಂಗ ಚೋಳದೇವನ (ಕ್ರಿ.ಶ. ೧೦೬೩-೧೧೧೨) ಸೇನಾಪತಿ ಕರುಣಾಕರ ತೊಂಡೈಮಾನ್.

(೪) ಚೋಳರು

ಕರ್ನಾಟಕದೊಡನೆ ಚೋಳರಿಗೆ ಪಲ್ಲವರಿಗಿಂತಲೂ ಹೆಚ್ಚು ಸಂಬಂಧವಿತ್ತು. ಅವರು ಕ್ರಿ.ಶ. ೧೦೦೪ರಿಂದ ಕ್ರಿ.ಶ. ೧೧೧೬ರವರೆಗೂ ನಮ್ಮ ನಾಡಿನ ದಕ್ಷಿಣ ಮತ್ತು ಪೂರ್ವ ಭಾಗಗಳಲ್ಲಿ ಹೆಚ್ಚು ಪ್ರದೇಶಗಳನ್ನು ಹಿಡಿದುಕೊಂಡಿದ್ದರು. ಎಂದರೆ ಕರ್ನಾಟಕದ ಮೇಲೆ ಚೋಳ ಅಧಿಪತ್ಯ ೧೧೨ ವರ್ಷಗಳವರೆಗೆ ಇತ್ತು. ಕಡೆಗೆ ಹೊಯ್ಸಳರು ಅವರನ್ನು ಗೆದ್ದು ಆ ಆಧಿಪತ್ಯವನ್ನು ತಪ್ಪಿಸಿದರು.

ಕ್ರಿ.ಶ. ೧೦೦೪ರಲ್ಲಿ ಗಂಗಸಾಮ್ರಾಜ್ಯವನ್ನು ಚೋಳರು ಮುರಿದರಷ್ಟೆ. ಆ ಗಂಗರಿಗಿಂತ ಬಹಳ ಹಿಂದಿನಿಂದಲೂ ಕನ್ನಡಿಗರು ಚೋಳರನ್ನು ಅರಿತಿದ್ದರು. ಇಮ್ಮಡಿ ಪುಲಿಕೇಶಿ ಚೋಳ ರಾಜ್ಯದ ಮೇಲೆ ದಾಳಿ ಮಾಡಿದ್ದನೆಂದೂ ಆದರೆ ಅವರನ್ನು ತನ್ನ ಮಿತ್ರರನ್ನಾಗಿ ಮಾಡಿಕೊಂಡನೆಂದೂ ಹೇಳಿದೆ. ಆದರೆ ಅವನು ಸತ್ತ ಮೇಲೆ ಚೋಳರು ದಂಗೆಯೇಳಲು ಆಗ ಪಟ್ಟಕ್ಕೆ ಬಂದ ಪುಲಿಕೇಶಿಯ ಮಗ ಮೊದಲನೆಯ ವಿಕ್ರಮಾದಿತ್ಯನು ಚೋಳ ಬಲವನ್ನು ಧ್ವಂಸಮಾಡಿದನು.

ವಿನಯಾದಿತ್ಯನ ಆಳಿಕೆಯಲ್ಲಿ ಅವರು ಪಶ್ಚಿಮ ಚಾಳುಕ್ಯರ ಮಿತ್ರರಾಗಿಯೇ ಇದ್ದರು; ಆದರೆ ಮತ್ತೆ ದಂಗೆ ಎದ್ದರು. ಇಮ್ಮಡಿ ವಿಕ್ರಮಾದಿತ್ಯನು (ಕ್ರಿ.ಶ. ೬೯೨ ರಿಂದ ಕ್ರಿ.ಶ. ೬೯೫ರೊಳಗೆ) ಮತ್ತೊಮ್ಮೆ ಅವರನ್ನಡಗಿಸಿದನು.

ಈಚಿನ ಗಂಗರಸ ಬೂತುಗನ ಮತ್ತು ರಾಷ್ಟ್ರಕೂಟ ರಾಜ ಮುಮ್ಮಡಿ ಕೃಷ್ಣನ ಕಾಲಗಳಲ್ಲಿ ಚೋಳರಿಗೂ ಕನ್ನಡಿಗರಿಗೂ ಹೆಚ್ಚು ಹತ್ತಿರದ ಸಂಬಂಧವುಂಟಾಯಿತು. ಅದಾದದ್ದು ಹೀಗೆ: ಚೋಳರು ಬಾಣರನ್ನು ಧ್ವಂಸಮಾಡಿದ್ದರು. ಅವರ ದೊರೆ ಪರಾಂತಕನು ಬಾಣರ ರಾಜ್ಯವನ್ನು ಹಸ್ತಿಮಲ್ಲನೆಂಬ ಹೆಸರು ಹೊಂದಿದ ಪೃಥ್ವೀಪತಿಯೆಂಬ ಗಂಗರಸನಿಗೆ ಕೊಟ್ಟಿದ್ದನು. ಇದು ನಡೆದದ್ದು ಕ್ರಿ.ಶ. ೯೨೧ರಲ್ಲಿ. ಆದರೆ ೯೪೯ರಲ್ಲಿ ಗಂಗರಾಜ ಬೂತುಗನು (ಆರ್ಕೋಣಂ ಬಳಿ) ತಕ್ಕೋಲದಲ್ಲಿ ಚೋಳರಾಜ ರಾಜಾದಿತ್ಯನನ್ನು ಕೊಂದನು. ಇದು ನಡೆದದ್ದು ರಾಷ್ಟ್ರಕೂಟರಿಗೂ ಚೋಳರಿಗೂ ಒದಗಿದ್ದ ಒಂದು ಯುದ್ಧದಲ್ಲಿ; ಆಗ ರಾಷ್ಟ್ರಕೂಟರ ದೊರೆ ಮುಮ್ಮಡಿ ಗೋವಿಂದನಿಗೆ ಅವನ ಭಾವ ಗಂಗರಾಜ ಬೂತುಗನು ಸಹಾಯ ಮಾಡಿದನು. ಬೂತುಗನು ಬನವಾಸಿ ೧೨,೦೦೦ ಪ್ರಾಂತವನ್ನು, ಇತರ ಪ್ರದೇಶಗಳೊಡನೆ ಮುಮ್ಮಡಿ ಗೋವಿಂದನಿಂದ ಬಹುಮಾನವಾಗಿ ಪಡೆದನು.

ಆದರೆ ಚೋಳರು ತಮ್ಮ ಕಳೆದ ಪ್ರಭಾವವನ್ನು ಬಹುಬೇಗ ಮತ್ತೆ ಸಂಪಾದಿಸಿಕೊಂಡರು. ಮೊದಲನೆಯ ರಾಜರಾಜನ ಆಧಿಪತ್ಯದಲ್ಲಿ ಅವರು ಉತ್ತರಕ್ಕೆ ದಾಳಿಯಿಟ್ಟು ಪೂರ್ವಚಾಳುಕ್ಯ ರಾಜ್ಯವನ್ನು ಮುರಿದುರುಳಿಸಿ ವೆಂಗಿಯನ್ನು ತಮ್ಮ ಸಾಮ್ರಾಜ್ಯಕ್ಕೆ ಸೇರಿಸಿಕೊಂಡು ಪಶ್ಚಿಮಕ್ಕೆ ತಿರುಗಿ ಕುಸಿದುಬೀಳುತ್ತಿದ್ದ ಗಂಗ ಸಾಮ್ರಾಜ್ಯದ ಮೇಲೆ ಬಿದ್ದು ಅದನ್ನು ಬೇರು ಸಹಿತ ಕಿತ್ತೆಸೆದರು. ಹೊಸಕೋಟೆಯನ್ನು ಹಿಡಿದರು. (ಕ್ರಿ.ಶ. ೯೯೭). ರಾಜರಾಜನ ಮಗ ಪ್ರಸಿದ್ಧನಾದ ಮೊದಲನೆಯ ರಾಜೇಂದ್ರ ಚೋಳನು (ಕ್ರಿ.ಶ. ೧೦೦೪) ಪುರಾತನ ಗಂಗರಾಜಧಾನಿಯಾದ ತಳಕಾಡನ್ನು ಹಿಡಿದು ಅದ್ಭುತ ವಿಜಯವನ್ನು ಸಂಪಾದಿಸಿದನು. ಈ ಕಾಲದಲ್ಲಿ ಕರ್ನಾಟಕದಲ್ಲಿ ಚೋಳರಿಗೆ ಸೇರಿದ ಪ್ರದೇಶ ಪಶ್ಚಿಮದಲ್ಲಿ ಅರಕಲ್‌ಗೂಡಿನಿಂದ ಶ್ರೀರಂಗಪಟ್ಟಣದ ಮಾರ್ಗವಾಗಿ ಉತ್ತರದಲ್ಲಿ ನೆಲಮಂಗಲದಿಂದ ನಿಡುಗಲ್ಲಿನವರೆಗೆ ಹರಡಿತ್ತು. ಈಗ ಗೆದ್ದುಕೊಂಡ ಚೆಂಗಾಳ್ವರನಾಡನ್ನೂ ಹೊಸ ಕೊಂಗಾಳ್ವ ನಾಡನ್ನೂ ನೈಋತ್ಯದ ಕೊನೆಯಲ್ಲಿ ಹೆಂಜೆಱ್ (ಈಗಿನ ಹೇಮಾವತಿ) ನಾಡನ್ನೂ ಈ ರಾಜ್ಯಕ್ಕೆ ಕಾಪು ನಾಡುಗಳಾಗಿ ಸ್ಥಾಪಿಸಿದರು.

ಅಜೇಯರಾದ ಚೋಳರಿಗೆ ಕರ್ನಾಟಕ ವಶವಾಗಿ ಅಡಗಿ ಹೋಗುವುದೋ ಎಂಬಂತೆ ತೋರುತ್ತಿತ್ತು. ಮೊದಲನೆಯ ರಾಜೇಂದ್ರ ಚೋಳನ ಮಗ ರಾಜಾಧಿರಾಜದೇವನು (ಕ್ರಿ.ಶ. ೧೦೧೮) ಚೋಳರ ಘನವಾದ ಹೆಸರನ್ನು ಉಳಿಸಿಕೊಂಡು ಬಂದು ಪಶ್ಚಿಮ ಚಾಳುಕ್ಯ ರಾಜ ಅಹವಮಲ್ಲನ ಸೇನೆಯನ್ನು ಸೋಲಿಸಿ ಕನ್ನಡದ ಕೇಂದ್ರವಾದ ಕೊಲ್ಲಿಪಾಕಿಯನ್ನು (ಈಗ ಆಂಧ್ರ ರಾಜ್ಯದಲ್ಲಿದೆ)

ಸುಟ್ಟನು. ಆದರೆ ಆಹವಮಲ್ಲನು ಕೊಪ್ಪಂ (ರಾಯಚೂರು ಜಿಲ್ಲೆಯಲ್ಲಿರುವ ಕೊಪಣ / ಕೊಪ್ಪಳ ಇರಬಹುದು) ಯುದ್ಧದಲ್ಲಿ ಅವನನ್ನು ಕೊಂದನು. (ಕ್ರಿ.ಶ. ೧೦೫೨). ತನ್ನ ಮನೆತನದ ಮತಾಚರಣೆಗಳನ್ನೆಲ್ಲ ಬಿಟ್ಟು ಬಿಟ್ಟು ಬೆಳುವೊಲ ನಾಡಿನಲ್ಲಿ ಜೈನ ದೇವಾಲಯಗಳನ್ನು ಸುಟ್ಟು ಹಾಕಿದ್ದ ಆ ದುಷ್ಟ ಚೋಳರಾಜನ ಸಾವಿನಿಂದ ಕರ್ನಾಟಕ ಹರ್ಷಗೊಂಡಿತು.

ಕರ್ನಾಟಕದ ಹರ್ಷ ಬಹುಕಾಲ ಉಳಿಯಲಿಲ್ಲ. ರಾಜಾಧಿರಾಜದೇವನ ತಮ್ಮ ರಾಜೇಂದ್ರದೇವನು (ಕ್ರಿ.ಶ. ೧೦೫೨) ಕೊಪ್ಪಂ ಯುದ್ಧಕ್ಕೆ ಬಂದಿದ್ದವನು ಚೋಳ ಸೈನ್ಯದ ಆಧಿಪತ್ಯವನ್ನು ವಹಿಸಿಕೊಂಡು ಆಹವಮಲ್ಲನ ತಮ್ಮ ಜಯಸಿಂಹನನ್ನೂ ಇತರ ಕನ್ನಡಿರ ಮಾನ್ಯರನ್ನೂ ಕೊಂದು ಅವರ ಸೈನ್ಯವನ್ನು ಪೂರ್ತಿಯಾಗಿ ಸೋಲಿಸಿದನು. ರಾಜೇಂದ್ರದೇವನ ತಮ್ಮ ಮೊದಲನೆಯ ವೀರರಾಜೇಂದ್ರನು (ಕ್ರಿ.ಶ. ೧೦೬೩) ಅನೇಕ ಜಯಗಳನ್ನು ಸಂಪಾದಿಸಿದನು; ಅವುಗಳಲ್ಲೊಂದರಲ್ಲಿ ಅವನು ಆಹವಮಲ್ಲನನ್ನೇ ಸೋಲಿಸಿದನು. ಆದರೆ ಅವನ ತಂಗಿಯ ಮಗ ಇಮ್ಮಡಿ ರಾಜೇಂದ್ರ ಚೋಳನ ಕಾಲದಲ್ಲಿ (ಕ್ರಿ.ಶ. ೧೦೭೦) ಕನ್ನಡಿಗರಿಗೆ ಅನುಕೂಲವಾಗಿ ದೆಸೆ ತಿರುಗಿತು. ಪಶ್ಚಿಮ ಚಾಳುಕ್ಯರಾಜ ವಿಕ್ರಮಾದಿತ್ಯನೂ ಉಚ್ಚಂಗಿ ಪಾಂಡ್ಯರೂ ರಾಜೇಂದ್ರಚೋಳನ ಪ್ರಯತ್ನಗಳನ್ನೆಲ್ಲ ನಾಶಮಾಡಿದರು. ರಾಜೇಂದ್ರಚೋಳನೇನೋ ಪಶ್ಚಿಮ ಚಾಳುಕ್ಯರನ್ನು ತುಂಗಭದ್ರೆಯ ಆಚೆಗೆ ಓಡಿಸಿ ಉಚ್ಚಂಗಿ ಪಾಂಡ್ಯರನ್ನು ಪೂರ್ತಿ ಸೋಲಿಸಿದನು. ಆದರೂ ಇವು ಕರ್ನಾಟಕದಲ್ಲಿ ಚೋಳರು ಸಂಪಾದಿಸಿದ ದೊಡ್ಡ ಜಯಗಳಲ್ಲಿ ಕಟ್ಟಕಡೆಯವು. ಏಕೆಂದರೆ, ಕರ್ನಾಟಕದ ಉದ್ಧಾರಕರಾದ ಹೊಯ್ಸಳರು ಈಗ ರಂಗದ ಮೇಲೆ ಕಾಣಿಸಿಕೊಂಡರು. ವಿಷ್ಣುವರ್ಧನ ರಾಜನ ಆಳಿಕೆಯಲ್ಲಿ ಪ್ರಸಿದ್ಧ ಹೊಯ್ಸಳ ಸೇನಾನಾಯಕ ಗಂಗರಾಜನು ಕ್ರಿ.ಶ. ೧೧೧೬ನೇ ವರ್ಷದ ಹೊತ್ತಿಗೆ ಚೋಳರ ಆಧಿಪತ್ಯಕ್ಕೆ ಮಾರಕ ಚಿಹ್ನೆಯಾಯಿತು. ಮೇಲೆ ಬಿದ್ದು ಹಾವಳಿ ಮಾಡುತ್ತಿದ್ದ ಚೋಳರಾಜರು ಈಗ ಮೆತ್ತಗಾಗಿ ಬಗ್ಗಿ ಬೇಡುವವರಾದರು. ಹೀಗೆ ಬೇಡಿದ್ದರಿಂದಲೇ ೧೨೩೨ರಲ್ಲಿ ಚೋಳರಾಜ ಮುಮ್ಮಡಿ ರಾಜರಾಜನನ್ನು ಪಲ್ಲವ ನಾಯಕ ಪೆರುಂಜಿಂಗನು ದೇಶ ಬಿಟ್ಟೋಡಿಸಿದಾಗ ಹೊಯ್ಸಳರಾಜ ನರಸಿಂಹನು (ಕ್ರಿ.ಶ. ೧೨೨೦-೧೨೩೫) ರಾಜರಾಜನನ್ನು ಮತ್ತೆ ಅವನ ರಾಜ್ಯದಲ್ಲಿ ಸ್ಥಾಪಿಸಿದನು. ಕ್ರಿ.ಶ. ೧೨೩೭ರಲ್ಲಿ ಹೊಯ್ಸಳ ಸೋಮೇಶ್ವರ ರಾಜನು ಇದೇ ರೀತಿ ರಾಜೇಂದ್ರಚೋಳನೆಂಬ ಮತ್ತೊಬ್ಬ ಚೋಳರಾಜನನ್ನು ಅವನ ಪೂರ್ವಿಕರ ಸಿಂಹಾಸನದ ಮೇಲೆ ಕೂರಿಸಿದನು. ನಿಜವಾಗಿ ನೋಡಿದರೆ, ಸೋಮೇಶ್ವರ ರಾಜನು ಕಣ್ಣಾನೂರಿನ (ವಿಕ್ರಮಪುರ) ರಾಜಧಾನಿಯಿಂದ ಚೋಳಮಂಡಳವನ್ನು ತಾನೇ ಆಳುತ್ತಿದ್ದನೆಂದು ಹೇಳಬಹುದು. ಇಲ್ಲಿಗೆ ಚೋಳರ ಚರಿತ್ರೆ ವಾಸ್ತವವಾಗಿ ಮುಗಿಯಿತೆನ್ನಬೇಕು.

ಪ್ರಕರಣ ೫

ಕರ್ನಾಟಕ ಸಾಮ್ರಾಜ್ಯದ ಉಚ್ಛ್ರಾಯಕಾಲ; ವಿಜಯನಗರ

ಮೇಲೆ ಹೇಳಿದ ಹೊಯ್‌ಸಳ ಯುಗ ವಿಜಯನಗರ ಯುಗವನ್ನು ಆರಂಭಗೊಳಿಸಿತು. ವಿಜಯನಗರದ ಕಾಲ ಕರ್ನಾಟಕ ಸಾಮ್ರಾಜ್ಯದ ಅತ್ಯುತ್ತಮ ಕಾಲ; ದಕ್ಷಿಣ ಭಾರತದ ರಾಜಕೀಯ ಪ್ರತಿಭೆಯ ಉಚ್ಛ್ರಾಯ ಕಾಲ. ವಿಜಯನಗರದ ರಾಜ್ಯ ಕ್ರಿ.ಶ. ೧೩೪೬ರಲ್ಲಿ ಸ್ಥಾಪಿತವಾಯಿತು. ಕ್ರಿ.ಶ. ೧೩೩೬ರಲ್ಲಿ ಸ್ಥಾಪಿತವಾಯಿತೆಂದು ಸಂಪ್ರದಾಯದ ಕಥೆ. ಅದನ್ನು ಸ್ಥಾಪಿಸಿದ ಐವರು ಸೋದರರು ಹರಿಹರ, ಬುಕ್ಕ, ಕಂಪಣ, ಮಾರಪ ಮತ್ತು ಮುದ್ದಪ ಎಂಬುವರು. ಅವರ ತಂದೆಗೆ ಸಂಗಮ ಎಂದು ಹೆಸರು. ಇವರು ಸಂಗಮ ವಂಶದವರೆಂದು ಹೇಳುವುದು ಈ ಕಾರಣದಿಂದ. ಅವರು ತುಂಗಭದ್ರಾ ತೀರದ ವಿಜಯನಗರದಲ್ಲಿ ಸ್ಥಾಪಿಸಿದ ರಾಜ್ಯ ಭಾರತದ ಹಿಂದೂ ಸಾಮ್ರಾಜ್ಯಗಳಲ್ಲೆಲ್ಲ ಅತ್ಯಂತ ಪ್ರಸಿದ್ಧವಾದದ್ದಾಗಿ ಬೆಳೆಯಿತು. ಅದು ಕ್ರಿ.ಶ. ೧೩೪೬ರಿಂದ ಕ್ರಿ.ಶ. ೧೬೪೬ ರವರೆಗೆ ಮೂರು ಶತಮಾನಗಳ ಕಾಲ ಬಾಳಿ ಸೈನಿಕ ಮತ್ತು ರಾಜಕೀಯ ರಂಗದಲ್ಲಿ ಹಿಂದೂಗಳ ಘನತೆಯನ್ನು ಹಿಂದೆಂದೂ ಕಾಣದಿದ್ದಷ್ಟು ಮಟ್ಟಿಗೆ ಉನ್ನತಿಗೇರಿಸಿತು.


ವಿಜಯನಗರದ ಸ್ಥಾಪಕರು ಹಂಪೆಯ ವಿರೂಪಾಕ್ಷದೇವರ ಭಕ್ತರು. ಅವರು ತಮ್ಮ ರಾಜದತ್ತಿಗಳಿಗೆಲ್ಲ ಶ್ರೀ ವಿರೂಪಾಕ್ಷನ ಹೆಸರಿನಲ್ಲೇ ಕೈಬರಹ ಹಾಕುತ್ತಿದ್ದರು. ಅವರ ಚಿಹ್ನೆ ವರಾಹ ಎಂದರೆ ಹಂದಿ. ಚಾಳುಕ್ಯರಿಗೂ ಅದೇ ಚಿಹ್ನೆಯಾಗಿತ್ತು. ಈ ಚಿಹ್ನೆಯನ್ನು ಉಪಯೋಗಿಸಿಕೊಂಡದ್ದು ಆಕಸ್ಮಿಕವಲ್ಲ. ಪಶ್ಚಿಮ ಚಾಳುಕ್ಯರ ಮಿಗಿಲಾದ ಸಕಲ ಸಂಪತ್ತಿಗೂ ವಿಜಯನಗರದ ರಾಜರು ಉತ್ತರಾಧಿಕಾರಿಗಳಾದರೆಂಬುದನ್ನು ಇದು ತೋರಿಸುತ್ತದೆ. ಈ ವರಾಹಲಾಂಛನದಿಂದ ಇತರ ವಿಷಯಗಳ ಜೊತೆಗೆ ಕನ್ನಡ ನಾಡಿನ ರಾಜಕೀಯ ಸಂಸ್ಥೆಗಳೂ ಉಳಿದುಕೊಂಡು ಬಂದುವೆಂಬುದು ಸೂಚಿತವಾಗುತ್ತದೆ. ಈ ಹಿಂದಿನ ಪುಟಗಳಿಂದ ವಾಚಕರು ಊಹಿಸಿರಬಹುದಾದಂತೆ ಈ ಪಾರಂಪರ್ಯ ಕನ್ನಡಿಗರ ರಾಜಕೀಯ ಪ್ರಯೋಗ ಪರೀಕ್ಷೆಗಳಲ್ಲಿ ಸದಾ ಕಂಡುಬರುತ್ತಿತ್ತು. ವಿಜಯನಗರದ ದೀರ್ಘಕಾಲದ ಚರಿತ್ರೆಯಲ್ಲೆಲ್ಲ ಆ ರಾಜರು ತಮ್ಮ ಪ್ರಖ್ಯಾತ ರಾಜಧಾನಿಯಾದ ವಿಜಯನಗರದಿಂದಲೇ ಆಳುತ್ತಿರಲಿ ಅಥವಾ ಈಚಿನ ರಾಜಧಾನಿಗಳಾದ ಪೆನುಗೊಂಡ, ಚಂದ್ರಗಿರಿ, ವೆಲ್ಲೂರುಗಳಿಂದ ಆಳುತ್ತಿರಲಿ, ಯಾವಾಗಲೂ ಅವರನ್ನು ಕರ್ನಾಟಕ ರಾಜರೆಂದೇ ಕರೆಯುತ್ತಿದ್ದರು. ಇದರಿಂದ ದಕ್ಷಿಣ ಮತ್ತು ಪಶ್ಚಿಮ ಭಾರತದ ಮುಂದಾಳುತನ, ಕನಿಷ್ಠಪಕ್ಷ ಹಿಂದುಗಳ


ವಿಷಯದಲ್ಲಾದರೂ, ಕರ್ನಾಟಕದ್ದೆಂಬುದು ನಿರ್ವಿವಾದವಾಗಿ ಸಿದ್ಧವಾಗುತ್ತದೆ. ಮುಖ್ಯವಾಗಿ ತೆಲುಗು ಮೂಲವುಳ್ಳ ವಿಜಯನಗರದ ಕೊನೆಯ ರಾಜಸಂತತಿ ಎಂದರೆ ಅರವೀಟಿ ಸಂತತಿ ಅಧಿಕರಕ್ಕೆ ಬಂದ ಮೇಲೂ ಜನ ವಿಜಯನಗರದ ರಾಜರನ್ನು ಕರ್ನಾಟಕ ರಾಜರೆಂದೇ ಕರೆಯುತ್ತಿದ್ದದ್ದು ಇನ್ನೂ ಹೆಚ್ಚು ಗಮನಾರ್ಹವಾಗಿದೆ.

ಮೇಲೆ ಹೇಳಿದ ಸೋದರರೈವರೂ ಉತ್ತರದ ಅಥವಾ ದಕ್ಷಿಣದ ಯಾವ ಹಿಂದೂ ನಾಯಕನೂ ಸಾಧಿಸದ ಮಹತ್ಕಾರ್ಯವನ್ನು ಎಂದರೆ, ಮಹಮ್ಮದೀಯರ ಆಧಿಪತ್ಯದಿಂದ ದೇಶವನ್ನು ಬಿಡುಗಡೆ ಮಾಡುವುದನ್ನು – ಸಾಧಿಸಿದರು. ಈ ಕಾರ್ಯವನ್ನು ಸುಮಾರು ಮೂವತ್ತೈದು ವರ್ಷದ ಅವಧಿಯಲ್ಲಿ ಸಾಧಿಸಿದರು. ನಾವು ಹಿಂದೆಯೇ ಹೇಳಿರುವಂತೆ, ಮಹಮ್ಮದೀಯರು ಕರ್ನಾಟಕದ ಉತ್ತರ ಭಾಗದಲ್ಲಿ ಯಾದವರಾಜರನ್ನು ತೊಡೆದುಹಾಕಿ ಬಿಟ್ಟಿದ್ದರು; ಪೂರ್ವದಲ್ಲಿ ಗಜಪತಿ ರಾಜ್ಯವನ್ನು ನಾಶಮಾಡಿದ್ದರು; ದಕ್ಷಿಣದಲ್ಲಿ ತಮಿಳು ರಾಜ್ಯಗಳ ಕೊನೆಕೊನೆಯ ಗುರುತುಗಳನ್ನು ಅಳಿಸಿಬಿಟ್ಟಿದ್ದರು. ಕರ್ನಾಟಕದಲ್ಲಿ ಕೂಡ ಹೊಯ್ಸಳ ರಾಜ ಮುಮ್ಮಡಿ ವೀರಬಲ್ಲಾಳನು ಸಾಹಸದಿಂದ ಎದುರಿಸದಿದ್ದ ಪಕ್ಷದಲ್ಲಿ ಅವರು ತಮ್ಮ ಪ್ರಯತ್ನದಲ್ಲಿ ಜಯಶಾಲಿಗಳಾಗಿಬಿಡುತ್ತಿದ್ದರು. ಐವರು ಸೋದರರಿಗೆ ಒಂದು ಧರ್ಮದೀಕ್ಷೆ ಬಿಟ್ಟು ಹೋದವನು ಈ ಮಹಾರಾಜನೇ. ಆ ಐವರೂ ಬಲ್ಲಾಳರಾಜನ ಈ ದೀಕ್ಷೆಯನ್ನು ಪವಿತ್ರವಾದ ಮುಡಿಪೆಂದು ಭಾವಿಸಿ ಮುಸ್ಲಿಮರನ್ನು ನಾಡಿನಿಂದ ಹೊರಗೋಡಿಸಿ ದೇಶದಲ್ಲಿ ಹಿಂದುಗಳ ಪರಮ ಪ್ರಭುತ್ವವನ್ನು ಸ್ಥಾಪಿಸಿದರು.

ಹೀಗೆ ಹಿಂದೂಗಳ ರಾಜಕೀಯ ಜೀವನವನ್ನು ಪುನರುಜ್ಜೀವನಗೊಳಿಸಿದ ಖ್ಯಾತಿ ಈ ಐವರು ಸೋದರರಿಗೂ ಸಲ್ಲತಕ್ಕದ್ದು. ಅವರಲ್ಲೆಲ್ಲ ಮಿಗಿಲಾಗಿ ಎದ್ದು ಕಾಣುತ್ತಿದ್ದವನು ಪ್ರಸಿದ್ಧನಾದ ವಿಜಯನಗರ ರಾಜಧಾನಿಯನ್ನೂ ಅದರ ಕೋಟೆ ಕೊತ್ತಳಗಳನ್ನೂ ಕಟ್ಟಿದ, ಸಂಗಮನ ಎರಡನೆಯ ಮಗ ಬುಕ್ಕರಾಯ. ಬುಕ್ಕರಾಯ ಮಹಾರಾಯನ ಸೈನಿಕ ಸಾಧನೆಗಳು ಅನೇಕ; ಅವನ ಹೆಸರು ಮುಸ್ಲಿಮರು, ಆಂಧ್ರರು ಮತ್ತು ಇತರ ವಿಜಯನಗರದ ಶತ್ರುಗಳ ಹೃದಯವನ್ನು ದಿಗಿಲಿನಿಂದ ತಲ್ಲಣಗೊಳಿಸುತ್ತಿತ್ತೆಂಬುದೊಂದನ್ನು ಗಮನಿಸಿದರೇ ಸಾಕು. ಅವನ ಮತ್ತು ಅವನ ಸೋದರರ ಸೈನಿಕ ಜಯಗಳ ಫಲವಾಗಿ ಕೃಷ್ಣಾನದಿಯ ದಕ್ಷಿಣದ ನಾಡೆಲ್ಲ ಹಿಂದೂ ಧರ್ಮದ ನಾಡಾಯಿತು. ಸೋದರರೈವರೂ ಹಿಂದೂಧರ್ಮದ ರಕ್ಷಕರಾದರು.

ಆದರೂ ವಿಜಯನಗರದ ಹಿಂದೂಗಳು ಸಾಧಿಸಿದ ವಿಜಯಗಳಿಂದ, ಮುಖ್ಯವಾಗಿ ದಕ್ಷಿಣದಲ್ಲಿ ಮಧುರೆಯಲ್ಲಿ ಕಡೆ ಕಡೆಯ ಕುರುಹಾಗಿ ಉಳಿದಿದ್ದ ಮಹಮ್ಮದೀಯಾಧಿಕಾರವನ್ನು ಒರಸಿಹಾಕಿದ ವಿಜಯಗಳಿಂದ, ಮಹಮ್ಮದೀಯರು ಭಯಪಟ್ಟು ಕುಗ್ಗಿ ಹೋಗಲಿಲ್ಲ. ದಕ್ಷಿಣ ದೇಶದಲ್ಲಿ ಗುಲ್ಬರ್ಗದಲ್ಲಿ ಮುಸ್ಲಿಮರು ಬಹುಮನಿ ರಾಜ್ಯವನ್ನು ಕ್ರಿ.ಶ. ೧೩೪೭ರಲ್ಲಿ, ವಿಜಯನಗರ ಸ್ಥಾಪನೆಯಾದ ಮೇಲೆ


ವಿಜಯನಗರ ಸಾಮ್ರಾಜ್ಯ
ಕೃಷ್ಣದೇವರಾಯನ ಕಾಲ
ಕಾಶ್ಮೀರ
ರಾಜಪುತಾಣ
ಸಾಮ್ರಾಜ್ಯ
ಗುಜರಾತ್
ಮಾಳವ
ಬಂಗಾಳ
ಖಾನದೇಶ
ಬೀರಾರ
ಗೊಂಡವನ
ಅಹಮದ ನಗರ
ಬದರೆ
ಗೋಲ ಕೊಂಡ
ಬಿಜಾಪುರ
ವಿಜಯ ನಗರ
ಬಂಗಾಳ ಕೊಲ್ಲಿ
ಅರಬಿ ಸಮುದ್ರ


ಮೈಸೂರಿನ ಉನ್ನತಿ
ಹೈದರನ ಕಾಲ
ಕ್ರಿ.೧೭೮೦
ದೆಹಲಿ
ರಾ ಜ ಪು ತ್ರ ರು
ಬಂಗಾಳ
ಮುಂಬಯಿ
ಪೂನೆ
ಹೈದರಾಬಾದು
ಮದರಾಸು
ಬೆಂಗಳೂರು
ಶ್ರೀರಂಗಪಟ್ಟಣ
ಪುದುಚೇರಿ
ಮೈಸೂರು
ತಂಜಾವೂರು

ಒಂದೇ ಒಂದು ವರ್ಷ ಕಳೆದ ಬಳಿಕ, ಸ್ಥಾಪನೆ ಮಾಡಿದರು. ಅವರು ತಮ್ಮ ದಕ್ಷಿಣದ ನೆರೆಯವರಾದ ಹಿಂದುಗಳ ಮೇಲೆ ನಿಷ್ಕುರುಣವಾಗಿ ಯುದ್ಧ ಮಾಡುತ್ತಲೇ ಬಂದರು. ಅವರು ೧೫೬೫ರಲ್ಲಿ ಹಿಂದುಗಳನ್ನು ಸೋಲಿಸಿ ಅಮೋಘ ವಿಜಯವನ್ನು ಸಂಪಾದಿಸಿದರೂ ದಕ್ಷಿಣ ದೇಶದಲ್ಲಿ ಮುಸ್ಲಿಮ್ ಪ್ರಭುತ್ವವನ್ನು ಶಾಶ್ವತವಾಗಿ ಸ್ಥಾಪಿಸಬೇಕೆಂಬ ಅವರ ಹೆಬ್ಬಯಕೆಗೆ ಈ ಹೋರಾಟ ಘಾತುಕವಾಗಿ ಪರಿಣಮಿಸಿತು.

ವಿಜಯನಗರದ ಸೈನಿಕ ಘನತೆಗೆ ವಿಜಯನಗರದ ಹಿಂದೂ ಮತ್ತು ಜೈನ ಸೇನಾಪತಿಗಳೇ ಜವಾಬ್ದಾರರು. ಬುಕ್ಕರಾಯನ ಮಗ ಇಮ್ಮಡಿ ಹರಿಹರರಾಯನ ಆಳಿಕೆಯಲ್ಲಿದ್ದ ಅತ್ಯಂತ ಪ್ರಖ್ಯಾತ ಹಿಂದೂ ಸೇನಾನಾಯಕ ಗುಂಡ ದಂಡಾಧಿಪ (ಕ್ರಿ.ಶ. ೧೩೯೭). ಮುಸ್ಲಿಮರ ಮೇಲೆ ಅವನು ಸಾಧಿಸಿದ ಪ್ರಸಿದ್ಧ ವಿಜಯಗಳು ವಿಜಯನಗರ ಸಾಮ್ರಾಜ್ಯವನ್ನು ಸ್ಥಿಮಿತಕ್ಕೆ ತರಲು ಬಹಳ ಮಟ್ಟಿಗೆ ಸಹಾಯ ಮಾಡಿದವು. ಶತ್ರು ರಾಜ್ಯವನ್ನು ಒಳನುಗ್ಗಿ ಯುದ್ಧ ಮಾಡುವ ನೀತಿಯನ್ನು ಹರಿಹರರಾಯನ ಎರಡನೆಯ ಮಗ ದೇವರಾಯನೂ (ಕ್ರಿ.ಶ. ೧೪೦೬–೧೪೧೬) ಮುಂದುವರಿಸಿದನು. ಅವನು ಬಿಜಾಪುರದ ಸುಲ್ತಾನ ಫಿರೋಸ್‌ಷಹನ ಆಳ್ವಿಕೆ ಕೊನೆಯ ಭಾಗದಲ್ಲಿ ಅವನನ್ನು ಸಂಪೂರ್ಣವಾಗಿ ಸೋಲಿಸಿ ಬಗ್ಗು ಬಡಿದನು. ಆದರೆ ಅದಕ್ಕೆ ಪ್ರತಿ ದಂಡ ಹಿಂಬಾಲಿಸಿ ಬಂದೇ ಬಂತು. ಫಿರೋಸ್‌ಷಹನ ಉತ್ತರಾಧಿಕಾರಿಯಾಗಿ ಪಟ್ಟಕ್ಕೆ ಬಂದ ಅವನ ಮಗ ಅಹ್ಮದ್‌ಷಹನು ವಿಜಯನಗರಕ್ಕೆ ಸೇರಿದ ಪ್ರದೇಶಗಳನ್ನು ನಿಷ್ಕರುಣೆಯಿಂದ ಧ್ವಂಸಮಾಡಿದನು.

ಮುಂದಿನ ದೊರೆ ಇಮ್ಮಡಿ ದೇವರಾಯ (ಕ್ರಿ.ಶ. ೧೪೧೯– ೧೪೪೬) ವಿಜಯನಗರದ ಕುದುರೆ ಸೈನ್ಯದಲ್ಲಿ ೧೦,೦೦೦ ಮುಸ್ಲಿಮರನ್ನು ಸೇರಿಸಿಕೊಂಡನು. ಇದಕ್ಕೆ ಶತ್ರುಗಳಿಂದ ಅವರ ಯುದ್ಧಕ್ರಮಗಳನ್ನು ಅರಿಯುವ ವಿವೇಕ ಬುದ್ಧಿ ಸ್ವಲ್ಪಮಟ್ಟಿಗೆ ಕಾರಣವಾಗಿರಬಹುದು.

ಸಾಳುವ ನರಸಿಂಹನು ಸುಮಾರು ಕ್ರಿ.ಶ. ೧೪೭೮ರಲ್ಲಿ ವಿರೂಪಾಕ್ಷ ರಾಜನನ್ನು ಅಡಗಿಸಿ ವಿಜಯನಗರದ ಸಾಳುವ ವಂಶವೆಂದು ಕರೆಯುವ ವಂಶವನ್ನು ಸ್ಥಾಪಿಸಿದಾಗ ವಿಜಯನಗರದ ಚರಿತ್ರೆಯಲ್ಲಿ ಒಂದು ಹೊಸ ಪ್ರಕರಣ ಪ್ರಾರಂಭವಾಯಿತು. ಆ ರಾಜನ ಆಳಿಕೆಯಲ್ಲಿ ಬಹುಮನಿ ಸುಲ್ತಾನನು ವಿಜಯನಗರ ರಾಜ್ಯದ ಮೇಲೆಲ್ಲ ದಾಳಿಯಿಟ್ಟು ಸಾಳುವ ನರಸಿಂಹನು ಓಡಿ ಹೋಗುವಂತೆ ಮಾಡಿದನು. ಆದರೆ ವಿಜಯನಗರದ ರಾಜ ಬೇಗ ಬಹುಮನಿ ಸುಲ್ತಾನನೊಡನೆ ಒಪ್ಪಂದಕ್ಕೆ ಬಂದು ತನ್ನ ರಾಜ್ಯವನ್ನು ಭದ್ರವಾಗಿಯೂ ಚೆನ್ನಾಗಿಯೂ ಆಳಿದನು.

ಸಾಳುವನು ರಾಜನನ್ನು ಅಡಗಿಸಿ ಮೂಲೆಗೆ ಕೂರಿಸಿದ್ದು, ಕ್ರಿ.ಶ. ೧೪೯೬ರಲ್ಲಿ ಸೇನಾಪತಿ ನರಸನು ವಿಜಯನಗರದ ಸಿಂಹಾಸನವನ್ನೇರಿದಾಗ ತುಳವ ಅತಿಕ್ರಮಣಕ್ಕೆ ಎಡೆಗೊಟ್ಟಿತು. ಈ ನಾಯಕನ ಅನೇಕ ಸಾಹಸಕಾರ್ಯಗಳಲ್ಲಿ, ಕಾವೇರಿ ಪೂರ್ಣ ಪ್ರವಾಹದಿಂದ ಹರಿಯುತ್ತಿರುವಾಗ ಅದಕ್ಕೆ ಅಡ್ಡಕಟ್ಟೆ ಕಟ್ಟಿ ದಾಟಿ ಶತ್ರುವನ್ನು (ಹೆಸರು

ಹೇಳಿಲ್ಲ) ಹಿಡಿದದ್ದು ಒಂದು. ಶ್ರೀರಂಗಪಟ್ಟಣವನ್ನು ಎರಡನೆಯ ರಾಜಧಾನಿಯಾಗಿ ಮಾಡಿಕೊಂಡವನು ಇವನೇ. ಇವನು ಮುಸ್ಲಿಂ, ತೆಲುಗು ಮತ್ತು ತಮಿಳು ರಾಜರ ಮೇಲೆ ಅನೇಕ ಯುದ್ಧ ಪರಂಪರೆಗಳನ್ನು ಹೂಡಿ ಯಶಸ್ವಿಯಾದನು.

ಈ ರಾಜನ ಆಳಿಕೆ ವಿಜಯನಗರ ಮತ್ತು ಪೋರ್ಚುಗೀಸರ ಗೋವಾ ಪಟ್ಟಣಗಳೊಡನೆ ನಿಕಟ ಸಂಬಂಧವನ್ನು ಸ್ಥಾಪಿಸಿದಕ್ಕಾಗಿಯೂ ಮುಖ್ಯವಾಗಿದೆ. ಆಗ ಪೋರ್ಚುಗೀಸರು ಪ್ರಪಂಚದ ವ್ಯಾಪಾರವನ್ನು ಸಾಗಿಸುವವರಾಗಿದ್ದರು. ಅವರು ವಿಜಯನಗರದ ಸೈನ್ಯಕ್ಕಾಗಿ ಪರ್ಷಿಯ ಮತ್ತು ಅರೇಬಿಯಗಳಿಂದ ಕುದುರೆಗಳನ್ನು ಆಮದು ಮಾಡುತ್ತಿದ್ದರು. ವಾಸ್ತವವಾಗಿ ಗೋವಾಪಟ್ಟಣದ, ಆದ್ದರಿಂದಲೇ ಪೋರ್ಚುಗೀಸರ ಪೂರ್ವ ಚಕ್ರಾಧಿಪತ್ಯದ ಅಭಿವೃದ್ಧಿ ಅವರು ಅರಬ್ಬರ ಸಹಾಯದಿಂದ ನಡೆಸುತ್ತಿದ್ದ ಬಹು ಲಾಭಕರವಾದ ಕುದುರೆ ವ್ಯಾಪಾರವನ್ನವಲಂಬಿಸಿತ್ತು. ಈ ವ್ಯಾಪಾರ ಗೋವಾಪಟ್ಟಣದ ಮೂಲಕ ನಡೆಯುತ್ತಿತ್ತು. ಆ ದೊಡ್ಡ ಹಿಂದೂ ರಾಜಧಾನಿಗೆ ಬಂದಿದ್ದು ಪ್ರತ್ಯಕ್ಷವಾಗಿ ಕಂಡವರು ವಿಜಯನಗರದ ರಾಜರು. ಒಂದೊಂದು ಕುದುರೆಗೆ, ಅದು ಬದುಕಿರಲಿ ಸತ್ತಿರಲಿ, ಅಪಾರ ಹಣ ಕೊಡುತ್ತಿದ್ದರೆಂದು ಹೇಳುತ್ತಾರೆ. ವಿಜಯನಗರದ ಹಿಂದುಗಳು ಕುದುರೆಗಳಿಗೆ ಇಷ್ಟು ಉದಾರವಾಗಿ ಹಣ ಕೊಡುತ್ತಿದ್ದದ್ದು ಬಹು ದೂರದ ಪೋರ್ಚುಗಲ್ ದೇಶದ ಅರಸರಲ್ಲಿ ಕೂಡ ವಿಜಯನಗರದ ದೊರೆಗಳ ಪ್ರಭಾವವನ್ನು ಹೆಚ್ಚಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

ನಿಜವಾಗಿ ನೋಡಿದರೆ, ಪರ್ಷಿಯದ ರಾಜರು ಇಮ್ಮಡಿ ದೇವರಾಯನ ಆಳಿಕೆಯಲ್ಲಿ (ಕ್ರಿ.ಶ. ೧೪೪೩) ಅಬ್ದುಲ್ ರಸಾಕನು ಷಾರೂಖನ ಪರವಾಗಿ ವಿಜಯನಗರದ ಪಟ್ಟಣಕ್ಕೆ ಬಂದಾಗ ಒಂದು ಸಲ, ಕ್ರಿ.ಶ. ೧೫೧೧ರಲ್ಲಿ ಪ್ರಸಿದ್ಧನಾದ ಕೃಷ್ಣದೇವರಾಯನ ಆಳಿಕೆಯಲ್ಲಿ ಯದ್ಗಾರ್‌ಬೇಗ್ ಆ ಮಹಾರಾಜಧಾನಿಗೆ ಬಂದಿದ್ದಾಗ ಒಂದು ಸಲ ಹೀಗೆ – ಎರಡು ಸಲ ವಿಜಯನಗರದ ಆಸ್ಥಾನಕ್ಕೆ ತಮ್ಮ ರಾಯಭಾರಿಗಳನ್ನು ಕಳಿಸುವಂತೆ ಮಾಡಿದ್ದು ಸ್ವಲ್ಪಮಟ್ಟಿಗೆ ವಿಜಯನಗರದ ಅಪಾರ ಸಂಪತ್ತು ಎನ್ನಬೇಕು. ಕೃಷ್ಣದೇವರಾಯನ ಆಳಿಕೆಯಲ್ಲಿ ಪೋರ್ಚುಗೀಸರು ಮೂವರು ರಾಯಭಾರಗಳನ್ನು ಕಳಿಸಿದ್ದರು. ಕ್ರಿ.ಶ. ೧೫೧೦ ಜನವರಿಯಲ್ಲಿ ಜೆಸೂಇಟ್ ಪಾದ್ರಿ ಲೂಯಿಯ ರಾಯಭಾರ, ಅದೇ ವರ್ಷ ಮಾರ್ಚ್ ತಿಂಗಳಲ್ಲಿ ಜಾಸ್ಪರ್ ಚನೋಕನ ರಾಯಭಾರ, ಕ್ರಿ.ಶ. ೧೫೧೭ರಲ್ಲಿ ಕ್ರಿಸೊವಾಓ ಡೆ ಫಿಗಿರೆಡೊ ರಾಯಭಾರ. ವಿಜಯನಗರದ ಮುಂದಿನ ಚರಿತ್ರೆಯಲ್ಲಿ ಚಕ್ರವರ್ತಿ ಇಮ್ಮಡಿ ವೆಂಕಟಪತಿದೇವನು ವಿಜಯನಗರದ ಆಸ್ಥಾನಕ್ಕೂ ಜೆಸೂಇಟರಿಗೂ ಬಹು ನಿಕಟ ಸಂಬಂಧ ಇಟ್ಟುಕೊಂಡಿದ್ದನು. ಮುಖ್ಯವಾಗಿ, ಮಧುರೆಯ ಪ್ರಾಂತಸ್ಥಾನದಲ್ಲಿ ಅವರು ಪ್ರಭಾವಶಾಲಿಗಳಾಗಿದ್ದರು. ಆ ಕಾಲದಲ್ಲಿ ಮಧುರೆಯ ಆಸ್ಥಾನಕ್ಕೆ ಬಂದ ಫಾದರ್ ರಾಬರ್ಟ್ ಡೆ ನೋಬಿಲಿ ಎಂಬ ಜೆಸೂಇಟ್ ರಾಯಭಾರ ವಿಜಯನಗರ ಸರ್ಕಾರದ

ಆಶ್ರಯದಲ್ಲಿ ಬರಮಾಡಿಕೊಂಡ ಬಹು ಮುಖ್ಯವಾದ ಜೆಸೂಇಟ್ ರಾಯಭಾರಗಳಲ್ಲಿ ಒಂದೆಂದು ತೋರುತ್ತದೆ. ಜೆಸೂಇಟರು ದಕ್ಷಿಣದಲ್ಲಿ ತಮ್ಮ ವರ್ಚಸ್ಸನ್ನು ಬಲಪಡಿಸಿಕೊಳ್ಳಲು ಈ ರಾಯಭಾರ ಹಿಂದಿನ ಯಾವ ಯಾರಭಾರವೂ ಮಾಡದಿದ್ದಷ್ಟು ಸಹಾಯ ಮಾಡಿತು. ಇಮ್ಮಡಿ ವೆಂಕಟಪತಿದೇವನ ಆಳಿಕೆಯಲ್ಲಿ ಚಂದ್ರಗಿರಿಯಲ್ಲಿದ್ದ ವಿಜಯನಗರದ ಆಸ್ಥಾನಕ್ಕೆ ಡಚ್ಚರ ಮತ್ತು ಇಂಗ್ಲಿಷರ ರಾಯಭಾರಗಳೂ ಬಂದವು. ಆದರೆ ಇವುಗಳ ಪ್ರಾಮುಖ್ಯ ಕಡಮೆ. ಸಮಗ್ರ ಭಾರತಕ್ಕೂ ತೀವ್ರ ಪರಿಣಾಮಕಾರಿಯಾದ ಒಂದೇ ಒಂದು ಸಂಗತಿಯನ್ನು ಇಲ್ಲಿ ಹೇಳಬಹುದು; ಅದೇನೆಂದರೆ – ೧೬೩೯ರಲ್ಲಿ ಚನ್ನಪಟ್ಟಣದಲ್ಲಿದ್ದ ವಿಜಯನಗರದ ಅಧಿಕಾರಿ ಡೇ ಎಂಬ ಇಂಗ್ಲಿಷರವನಿಗೆ ಈಗ ಫೋರ್ಟ್ ಸೇಯ್‌ಂಟ್ ಜಾರ್ಜ್ ಇರುವ ಸ್ಥಳವನ್ನು ಕೊಟ್ಟದ್ದು.

ವಿಜಯನಗರದ ಒಳಚರಿತ್ರೆಯನ್ನು ತುಳುವರ ಸಿಂಹಾಸನಾಕ್ರಮಣದ ಬಳಿ ನಿಲ್ಲಿಸಿದ್ದೆವಷ್ಟೆ. ಇನ್ನು ಆ ಚರಿತ್ರೆಯನ್ನು ಮುಂದುವರಿಸೋಣ. ತುಳುವ ವಂಶ ತುಂಬ ಅದೃಷ್ಟಶಾಲಿಯಾದದ್ದು. ಈ ವಂಶದಲ್ಲಿ ಒಬ್ಬರಾದ ಮೇಲೊಬ್ಬರಂತೆ ಎಡೆಬಿಡದೆ ಬಹು ಪ್ರಸಿದ್ಧ ರಾಜರು ಬಂದರು. ನರಸದಂಡನಾಯಕನಾದ ಮೇಲೆ ಅವನ ಹಿರಿಯ ಮಗ ವೀರಸಿಂಹನು (ಕ್ರಿ.ಶ. ೧೫೦೪–೧೫೦೯) ಪಟ್ಟಕ್ಕೆ ಬಂದು ತನ್ನ ತಂದೆಯ ಉನ್ನತ ಸೇನಾ ಸಂಪ್ರದಾಯಗಳನ್ನು ಉಳಿಸಿಕೊಂಡು ಬಂದನು. ವೀರನರಸಿಂಹನ ಅನಂತರ ಅವನ ತಮ್ಮ ಕೃಷ್ಣದೇವರಾಯ ಪಟ್ಟಕ್ಕೆ ಬಂದನು. ಇವನು ವಿಜಯನಗರದ ರಾಜರಲ್ಲೆಲ್ಲ ಶ್ರೇಷ್ಠನಾದವನು ಮತ್ತು ಅಖಿಲ ಭಾರತದಲ್ಲೆಲ್ಲ ಬಹು ಪ್ರಖ್ಯಾತರಾದ ಮಹಾರಾಜರಲ್ಲೊಬ್ಬ. ಮುಂದೆ ಸರ್ವಕಾಲದಲ್ಲೂ ವಿಜಯನಗರದ ಚರಿತ್ರೆಯಲ್ಲಿ ಅತ್ಯಂತ ಘನವಾದ, ಶ್ರೇಷ್ಠವಾದ, ಎಲ್ಲಕ್ಕೂ ಇವನೇ ಆದರ್ಶ ಎಂಬಷ್ಟು ಯಶಸ್ಸು ಸಂಪಾದಿಸಿದನು.

ಕೃಷ್ಣದೇವರಾಯನು ಕ್ರಿ.ಶ. ೧೫೦೯ರಲ್ಲಿ ಪಟ್ಟಕ್ಕೆ ಬಂದು ೧೫೨೯ರ ವರೆಗೆ ಆಳಿದನು. ಈ ಇಪ್ಪತ್ತು ವರ್ಷಗಳಲ್ಲಿ ಒಟ್ಟುಗೂಡಿ ಬಂದ ದಕ್ಷಿಣದ ಮುಸ್ಲಿಂ ರಾಷ್ಟ್ರಗಳನ್ನು ರಾಯಚೂರು ಯುದ್ಧದಲ್ಲಿ (ಕ್ರಿ.ಶ. ೧೫೨೦) ಪೂರ್ತಿಯಾಗಿ ಸೋಲಿಸಿದನು. ದಂಗೆಯೆದ್ದ ಉಮ್ಮತ್ತೂರು ಪಾಳೆಯಗಾರ ಗಂಗರಾಜನನ್ನು ಅಡಗಿಸಿದನು; ಗಜಪತಿರಾಜ ಪ್ರತಾಪರುದ್ರನನ್ನು ಸೋಲಿಸಿ ಓಡಿಸಿದನು; ಮತ್ತು ವಿಜಯನಗರ ಸಾಮ್ರಾಜ್ಯವನ್ನು ಒರಿಸ್ಸದ ತುತ್ತತುದಿಯಿಂದ ಸಿಲೋನಿನ ಕೊನೆಯವರೆಗೂ ವಿಸ್ತಾರಮಾಡಿದನು. ದಕ್ಷಿಣ ಭಾರತದ ಚರಿತ್ರೆಯಲ್ಲಿ ಎಂದೂ ರಾಷ್ಟ್ರಕೂಟ ರಾಜ ಮುಮ್ಮಡಿ ಕೃಷ್ಣನ ಆಳಿಕೆಯಲ್ಲಿ ಕೂಡ, ಹಿಂದೂಗಳ ಸೈನಿಕ ಘನತೆ ಕೃಷ್ಣದೇವರಾಯನ ಕಾಲದಲ್ಲಿದ್ದಷ್ಟು ಉಜ್ವಲವಾಗಿರಲಿಲ್ಲ. ಭಯಂಕರವಾಗಿರಲಿಲ್ಲ. ಕೃಷ್ಣದೇವರಾಯನ ಮಹಾ ಔದಾರ್ಯ, ಶೌರ್ಯ, ವಿದ್ಯಾವೈಭವಗಳಿಗೆ ರಾಜಧಾನಿಗೇ ಬಂದು ಆ ಮಹಾರಾಜನನ್ನು ಪ್ರತ್ಯಕ್ಷವಾಗಿ

ಕಂಡು ಮಾತಾಡಿದ ಡಾಮಿಂಗೊ ಪಯೊ ಮೊದಲಾದ ಪಾಶ್ಚಾತ್ಯ ಪ್ರಯಾಣಿಕರೇ ಸಾಕ್ಷಿಯಾಗಿದ್ದಾರೆ.

ಕೃಷ್ಣದೇವರಾಯನ ಆಳಿಕೆ ಬೇರೆ ದೃಷ್ಟಿಗಳಿಂದಲೂ ಸ್ಮರಣಾರ್ಹವಾಗಿದೆ. ತಿಮ್ಮಣ್ಣ ಕವಿ, ಅಲಸಾನಿಪೆದ್ದನ ಮೊದಲಾದ ಪ್ರಸಿದ್ಧ ಕನ್ನಡ ಮತ್ತು ತೆಲುಗು ಕವಿಗಳಿಗೆ ಆಶ್ರಯದಾತನಾಗಿದ್ದವನೂ ಇವನೇ. ತನ್ನ ಕಾಲದಲ್ಲಿ ಕೃಷ್ಣಸ್ವಾಮಿ ದೇವಾಲಯದಂಥ ಸುಂದರವಾದ ಗುಡಿಗಳನ್ನು ರಾಜಧಾನಿಯಲ್ಲಿ ಕಟ್ಟಿಸಿದನು. ವಿಸ್ತಾರವಾದ ಅವನ ಚಕ್ರಾಧಿಪತ್ಯದ ಗಡಿಗಳೊಳಗೆ ಹೊರದೇಶಗಳವರು ಬಂದು ನೆಲಸುವುದಕ್ಕೆ ಉತ್ತೇಜನ ಉಂಟಾಗುವಂತೆ ಅವರಿಗೆ ಎಲ್ಲ ಬಗೆಯ ನೆರವು ಕೊಡುವುದನ್ನು ಆ ಮಹಾರಾಜನು ತನ್ನ ರಾಜನೀತಿಯಲ್ಲಿ ಒಂದು ಅಂಶವನ್ನಾಗಿ ಮಾಡಿಕೊಂಡಿದ್ದನು. ಅವನು ತೀರಿಕೊಂಡಮೇಲೆ ಅವನ ಮಲತಮ್ಮ ಅಚ್ಯುತದೇವರಾಯನು (ಕ್ರಿ.ಶ. ೧೫೩೦ ರಿಂದ ೧೫೪೨) ವಿಜಯನಗರದ ಆಸ್ಥಾನ ವೈಭವವನ್ನು ಕಾಪಾಡಿದನು. ಮುಂದಿನ ಘಟನೆಗಳು ಈ ಹಿಂದೂ ಮಹಾಚಕ್ರಾಧಿಪತ್ಯ ಇಳಿಮುಖವಾಗಿ ಇದ್ದಿತೆಂಬುದನ್ನು ಸ್ಪಷ್ಟಪಡಿಸುತ್ತವೆ. ಅಧಿಕಾರ ಕ್ರಮಕ್ರಮವಾಗಿ ಕರ್ನಾಟಕರಾದ ತುಳುವ ಅರಸುಗಳ ಕೈಯಿಂದ ಕೃಷ್ಣದೇವರಾಯನ ಅಳಿಯನಾದ ರಾಮರಾಯನು ಸೇರಿದ ಆರವೀಟಿ ಆಂಧ್ರ ಮನೆತನದ ಕೈಗೆ ಹೋಯಿತು. ಈತನೆ ಸುಪ್ರಸಿದ್ಧನಾದ ಅಳಿಯ ರಾಮರಾಜನೆಂದು ರೂಢಿಯ ಹೆಸರುಳ್ಳ ರಾಜ್ಯಾಧಿಕಾರಿ. ಈತನೆ ಕ್ರಿ.ಶ. ೧೫೪೩ – ೧೫೭೦ರವರೆಗೆ ಆಳಿದ ಚಕ್ರವರ್ತಿ ಸದಾಶಿವರಾಯರನ್ನು ಸಿಂಹಾಸನಕ್ಕೆ ಏರಿಸಿದನು; ಮತ್ತು ಆತನ ದುರ್ಬಲವಾದ ಆಳಿಕೆಯಲ್ಲಿ ವಿಜಯನಗರ ಸಾಮ್ರಾಜ ಆಡಳಿತವನ್ನು ನಡೆಸಿದವನು. ಚಕ್ರವರ್ತಿ ಸದಾಶಿವರಾಯನ ಆಳಿಕೆಯಲ್ಲಿ ದಖ್ಖನ್ ಸುಲ್ತಾನರು ಸಮ್ಮಿಳಿತವಾಗಿ ಹಿಂದೂಗಳನ್ನು ರಕ್ಕಸತಂಗಡಿ ಯುದ್ಧರಂಗದಲ್ಲಿ ಸಂಪೂರ್ಣವಾಗಿ ಸೋಲಿಸಿದರು. ೧೫೬೫ರಲ್ಲಿ ನಡೆದ ಈ ಯುದ್ಧವನ್ನು ತಾಳೀಕೋಟೆಯ ಯುದ್ಧವೆಂದು ತಪ್ಪಾಗಿ ಕರೆಯುವುದು ವಾಡಿಕೆ. ರಾಮರಾಜನೇ ಈ ಯುದ್ಧದಲ್ಲಿ ಸತ್ತುಬಿದ್ದನು. ವಿಜಯನಗರದ ಮಹಾರಾಜಧಾನಿ ಸೂರೆಯಾಯಿತು. ಅದರ ಉತ್ತರ ಪ್ರಾಂತಗಳು ಮುಸಲ್ಮಾನ್ ಸಂಸ್ಥಾನಗಳಿಗೆ ಸೇರಿಹೋದವು.

ಆದರೆ ಹಿಂದೂಗಳು ಪೂರ್ತಿ ನಾಶವಾಗಲಿಲ್ಲ. ಅವರು ತಮ್ಮ ರಾಜಧಾನಿಯನ್ನು ಪೆನುಕೊಂಡೆಗೂ ಅಲ್ಲಿಂದ ಚಂದ್ರಗಿರಿಗೂ, ವೆಲ್ಲೂರಿಗೂ ತೆಗೆದುಕೊಂಡು ಹೋಗಿ ಮುಂದೆ ೮೦ ವರ್ಷ ಕಾಲ ಮುಸ್ಲಿಮರ ಮೇಲೆ ನಿಂತು ತಡೆಗಟ್ಟಿದರು. ವಿಜಯನಗರ ಸಾಮ್ರಾಟರ ಮೇಲೆ ಎದುರುಬಿದ್ದು ತಲೆಯೆತ್ತಲು ಬಯಸುತ್ತಿದ್ದ ಪ್ರಚಂಡವೀರರಾದ ಹಿಂದೂ ರಾಜಪ್ರತಿನಿಧಿಗಳನ್ನು ಸೋಲಿಸಿದರು. ಹಿಂದೂಗಳ ದರ್ಪ ಗೌರವಗಳನ್ನು ಉಳಿಸಿದ ಕೀರ್ತಿ ಅರವೀಟಿ ವಂಶಕ್ಕೆ ಸೇರಿದ ತೆಲುಗು ರಾಜರ ಸಾಮರ್ಥ್ಯಕ್ಕೆ ಪೂರ್ತಿ ಸಲ್ಲುವುದು. ಅವರಲ್ಲಿ ಅತಿ ಪ್ರಮುಖರಾದವರಲ್ಲಿ ರಾಮರಾಜನೊಬ್ಬನು. ಎರಡನೆಯ ವೆಂಕಟಪತಿದೇವನು (ಕ್ರಿ.ಶ.

೧೬೦೬–೧೬೧೫) ಇನ್ನೊಬ್ಬನು. ಎರಡನೆಯವನ ಆಳಿಕೆ ಸ್ಮರಣೀಯವಾದದ್ದು. ಏಕೆಂದರೆ ಮಹಮ್ಮದೀಯರ ಮೇಲೆ ಅನೇಕ ದಂಡಯಾತ್ರೆಗಳನ್ನು ನಡೆಸಿ ಆತನು ಜಯಶೀಲನಾದನು. ಇಷ್ಟೇ ಅಲ್ಲದೆ ಗತಿಸಿಹೋದ ವಿಜಯನಗರದ ಪ್ರತಿಷ್ಠೆಯನ್ನು ಅಳಿಯ ರಾಮರಾಜನ ಕಾಲವಾದ ಮೇಲೆ ವಿಜಯನಗರದ ಬೇರೆ ಯಾವ ಮಹಾರಾಜನೂ ಎರಡನೆಯ ವೆಂಕಟಪತಿ ದೇವನಷ್ಟು ಸಾಧಿಸಲಿಲ್ಲ. ಆತನು ಪೆನ್ನಾರ್ ಯುದ್ಧದಲ್ಲಿ ಮಹಮ್ಮದ್ ಕುಲೀ ಖುತಬ್‌ಷಾನ ಮೇಲೆ ದೊಡ್ಡ ಜಯವನ್ನು ಪಡೆದನು. ಆ ಬಳಿಕ ಬಿಜಾಪುರದ ಇಮ್ಮಡಿ ಇಬ್ರಾಹಿಂ ಆದಿಲ್‌ಷಾನನ್ನು ಬಲಾತ್ಕರಿಸಿ ವಿಜಯನಗರದ ರಾಜಾಸ್ಥಾನಕ್ಕೆ ರಾಯಭಾರ ಕಳಿಸುವಂತೆಯೂ ಮಾಡಿದನು.

ವಿಜಯನಗರದ ಕಡೆಯ ಅರಸನು ಆರನೆಯ ಶ್ರೀರಂಗರಾಯನು (ಕ್ರಿ.ಶ. ೧೬೪೩–೧೬೪೬). ಗೋಲ್ಕೊಂಡದ ಸುಲ್ತಾನರ ಸೈನ್ಯಗಳು ತನ್ನ ರಾಜಧಾನಿಯಾದ ಚಂದ್ರಗಿರಿಯನ್ನು ವಶಪಡಿಸಿಕೊಂಡಾಗ ಅವನು ಇಕ್ಕೇರಿಯ ರಾಜನಾದ ಶಿವಪ್ಪನಾಯಕನ (ಕ್ರಿ.,ಶ. ೧೬೪೬) ಆಸ್ಥಾನಕ್ಕೆ ಓಡಿಹೋದನು.

ಶ್ರೀರಂಗರಾಯನು ಹೀಗೆ ಓಡಿಹೋದ ಕೂಡಲೆ ವಿಜಯನಗರ ಸಾಮ್ರಾಜ್ಯ ಕಣ್ಮರೆಯಾಯಿತು. ದಕ್ಷಿಣದ ಮತ್ತು ಪಶ್ಚಿಮದ ಭರತಖಂಡದ ರಾಜಕಾರಣದಲ್ಲಿ ಅದರ ಸತ್ವ ಅಳಿಯಿತು. ಶ್ರೀರಂಗರಾಯನ ಸಂತತಿಯವರು ತಮ್ಮ ಪೂರ್ವಜರ ಸ್ವತ್ತಾಗಿದ್ದ ಆನೆಗೊಂದಿಗೆ ಹಿಂತಿರುಗಿ ಹೋದರು. ಇಂಗ್ಲಿಷರಿಂದ ಯಾವ ಸಹಾಯವೂ ದೊರಕದಿರಲು ಹೈದರಾಬಾದಿನ ನಿಜಾಮರ ರಕ್ಷಣೆಯನ್ನು ಬೇಡಿದರು.

ಹಿಂದೂ ಭರತಖಂಡಕ್ಕೆ ವಿಜಯನಗರ ಸಾಮ್ರಾಜ್ಯದ ಚರಿತ್ರೆ ವಿಶೇಷ ಮುಖ್ಯವಾದದ್ದು. ಏಕೆಂದರೆ ಅನೇಕ ವೇಳೆ ಸ್ಥಾಪಿತವಾಗಿದ್ದಂತೆ ದೇಶದ ರಾಜಕೀಯ ಜೀವನವನ್ನು ಹಿಂದೂಗಳು ಪುನರುಜ್ಜೀವನಗೊಳಿಸಬಲ್ಲರೆಂದು ಇನ್ನೊಂದು ಬಾರಿ ಸ್ಥಾಪಿತವಾಯಿತು. ಹಿಂದೂಗಳ ದೃಢಸಂಕಲ್ಪದಿಂದ ಯುದ್ಧಕಾರ್ಯವನ್ನು ನಡೆಸಲು ಸಮರ್ಥರೆಂಬುದನ್ನು ವಿಜಯನಗರ ತೋರಿಸಿಕೊಟ್ಟಿತು. ವಿಜಯನಗರ ಸಾಮ್ರಾಜ್ಯದ ಶಕ್ತಿಯೂ ದರ್ಪವೂ ಸಂಬಳಕ್ಕೆ ಕೆಲಸ ಮಾಡುವ ಸೈನಿಕರಿಂದ ಉಳಿದುದಲ್ಲ; ದೇಶಭಕ್ತರಾದ, ಸುಶಿಕ್ಷಿತರಾದ ಹಿಂದೂಗಳೇ ಅವನ್ನು ಸಾಧಿಸಿದರು. ಎಲ್ಲೋ ಕೆಲವು ಸಂದರ್ಭಗಳಲ್ಲಿ ಹಿಂದೂಗಳಲ್ಲದ ಇತರ ಸಿಪಾಯಿಗಳೂ ಸೇರಿದ್ದರು. ಎಲ್ಲಕ್ಕೂ ಮೀರಿ ರಾಜಕೀಯ ಸ್ವಾತಂತ್ರ್ಯವಿಲ್ಲದೆ ರಾಷ್ಟ್ರದ ಪುನರುಜ್ಜೀವನ ಅಶಕ್ಯವೆಂಬುದನ್ನು ತೋರಿಸಿಕೊಟ್ಟುದರಿಂದ ವಿಜಯನಗರ ಚರಿತ್ರೆ ಮುಖ್ಯವಾಗಿದೆ. ಈ ಸಂಗತಿಯೇ ಮುಂದಿನ ಕಾಲದವರೆಗೆ ವಿಜಯನಗರ ಗಳಿಸಿಟ್ಟು ಹೋದ ಅತಿ ದೊಡ್ಡ ಆಸ್ತಿ.

ಆದರೆ ಇದರ ಜತೆಗೆ ಭರತಖಂಡದ ಚರಿತ್ರೆಯಿಂದ ಅದು ಕಣ್ಮರೆಯಾಗುವುದಕ್ಕೆ ಕಾರಣಗಳೇನು ಎಂಬುದನ್ನು ನೋಡಬೇಕು. ಮೊದಲನೆಯದು: ಅವರು ದೊಡ್ಡ ಸಾಮ್ರಾಜ್ಯದ ಸಮುದ್ರ ವ್ಯಾಪಾರದ ಅಗತ್ಯಗಳೇನು ಎಂಬುದನ್ನು ಸಂಪೂರ್ಣವಾಗಿ

ಅಲಕ್ಷ್ಯಮಾಡಿದುದು. ಎರಡನೆಯದು: ವಿಜಯನಗರದ ಹಿಂದೂಗಳು ತಮ್ಮ ಶತ್ರುಗಳ, ಅದರಲ್ಲಿಯೂ ವಿಜಯನಗರ ಸಾಮ್ರಾಜ್ಯದ ನಾನಾ ಭಾಗಗಳಲ್ಲಿ ತಮ್ಮ ರಾಜ್ಯವನ್ನು ವಿಸ್ತರಿಸುವ ನೀತಿಯನ್ನು ಆರಂಭ ಮಾಡಿದ್ದ ಪಶ್ಚಿಮದಿಂದ ಬಂದ ವಿದೇಶಿಗಳ ಶಕ್ತಿ ಮೂಲವಾವುದೆಂಬುದನ್ನು ತಿಳಿಯಲು ಒಂದು ಕ್ರಮದಲ್ಲಿ ಆಗಲಿ ಸಂತತವಾಗಿ ಆಗಲಿ ಪ್ರಯತ್ನಪಡಲಿಲ್ಲ. ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳದಿದ್ದುದು ವಿಜಯನಗರದವರ ಇನ್ನೊಂದು ದೋಷ. ಅಳಿಯ ರಾಮರಾಜನು ಸತ್ತಮೇಲೆ ಯುದ್ಧಕಾರ್ಯಗಳಲ್ಲಿ ವಿಶೇಷವಾಗಿ ಈ ದೋಷ ವ್ಯಕ್ತಪಡುತ್ತದೆ. ಕಡೆಯದಾಗಿ, ತಮ್ಮ ಮಹಾಸಾಮಂತರಿಗೂ ರಾಜಪ್ರತಿನಿಧಿಗಳಿಗೂ ಅವರು ವಹಿಸಿದ ಅಧಿಕ ಬಲ ನಿಜವಾಗಿ ಅವರ ಬೀಳನ್ನು ಜಾಗ್ರತೆಗೊಳಿಸಿತು.

ಇವರುಗಳು ವಿಜಯನಗರ ಸಾಮ್ರಾಟನ ಅವನತಿಯ ಅವಕಾಶವನ್ನು ಉಪಯೋಗಿಸಿಕೊಂಡು ತಮ್ಮ ಸ್ವಾತಂತ್ರ್ಯವನ್ನು ಸಾರುವುದರಲ್ಲಿ ಸಾವಕಾಶ ಮಾಡಲಿಲ್ಲ.

ಪ್ರಬಲರಾದ ಈ ಸಾಮಂತರು ಮತ್ತು ರಾಜಪ್ರತಿನಿಧಿಗಳಲ್ಲಿ ಪ್ರಮುಖರಾಗಿದ್ದವರು ಯಾರೆಂದರೆ; ಮೈಸೂರು, ಇಕ್ಕೇರಿ (ಅಥವಾ ಬಿದನೂರು) ಗೇರಸೊಪ್ಪೆ ಮತ್ತು ಭಟಕಲ್ ಇವುಗಳ ಅರಸರು; ಉಮ್ಮತ್ತೂರು, ಆವಲಿನಾಡು, ಯಲಹಂಕ, ಚಿತ್ರದುರ್ಗ, ನಿಡುಗಲ್ಲು, ಚನ್ನಪಟ್ಟಣ, ಕೊಡಗು ಮತ್ತು ಕಾರ್ಕಳ– ಇವುಗಳ ಪುಟ್ಟ ಪಾಳೆಯಗಾರರು; ಮತ್ತು ಮಧರೆ, ಜಿಂಜಿ, ತಂಜಾವೂರು– ಇವುಗಳ ನಾಯಕರಂಥ ರಾಜಪ್ರತಿನಿಧಿಗಳು. ಇವರೆಲ್ಲರಲ್ಲೂ ನಡೆದ ದೀರ್ಘ ಕಲಹದಲ್ಲಿ ಪ್ರಮುಖರಾಗಿ ಎದ್ದು ನಿಂತವರು ಇಬ್ಬರು: ಕೆಳದಿಯ ಮತ್ತು ಮೈಸೂರಿನ ಅರಸರು; ಉಳಿದವರನ್ನು ಮರಾಠರು ಅಧೀನಪಡಿಸಿಕೊಂಡರು, ಇಲ್ಲವೆ ಇಂಗ್ಲಿಷರು ಹೇಳಹೆಸರಿಲ್ಲದಂತೆ ಮಾಡಿದರು.

ಮೈಸೂರಿನ ಮತ್ತು ಕೆಳದಿಯ ಚರಿತ್ರೆಗಳನ್ನು ಹೇಳತೊಡಗುವ ಮುನ್ನ ಮೇಲೆ ಹೇಳಿದ ದೊಡ್ಡ ರಾಜಪ್ರತಿನಿಧಿಗಳ ಹಾಗೂ ಸಣ್ಣ ಸಂಸ್ಥಾನಗಳ ವಿಷಯವಾಗಿ ಕೆಲವು ಅಂಶಗಳನ್ನು ಉಲ್ಲೇಖಿಸುವುದು ಅಪ್ರಕೃತವಾಗಲಾರದು. ಅತ್ಯಂತ ಮುಖ್ಯನಾದ ರಾಜಪ್ರತಿನಿಧಿ ಮಧುರೆಯವನು. ಮಧುರೆಯ ಕೋಟೆಕೊತ್ತಲಗಳನ್ನು ಸಂರಕ್ಷಿಸುವುದಕ್ಕಾಗಿ ಇಲ್ಲಿಯ ಪಾಳೆಯಗಾರರ ಏರ್ಪಾಟನ್ನು ಮಾಡಿದ್ದು. ಈ ಪಾಳೆಯಗಾರರನ್ನು ಚಿಕ್ಕಪುಟ್ಟ ಸಂಸ್ಥಾನಗಳ ದೊರೆಗಳೆಂದಾಗಲಿ ಅಥವಾ ರಾಜಪ್ರತಿನಿಧಿಗಳೆಂದಾಗಲಿ ತಪ್ಪು ತಿಳಿಯಕೂಡದು; ಏಕೆಂದರೆ, ಪಾಳೆಯಗಾರರು ಸೈನ್ಯಕ್ಕೂ ಊರ ಕಾವಲಿಗೂ ಸಂಬಂಧಪಟ್ಟ ಕೆಲಸಗಳನ್ನು ಮಾತ್ರ ನೋಡಿಕೊಳ್ಳುತ್ತಿದ್ದರು. ಮಧುರೆಯ ಕೋಟೆಯ ಎಪ್ಪತ್ತೆರಡು ಕೊತ್ತಲಗಳನ್ನು ಕಾಯಲು ಎಪ್ಪತ್ತೆರಡು ಪಾಳೆಯಗಾರರಿದ್ದರು. ಇಲ್ಲಿ ಮಧುರೆಯ ರಾಜಪ್ರತಿನಿಧಿಯ ವಿಚಾರ ಮುಖ್ಯವೇ ಹೊರತು, ಈ ಪಾಳೆಯಗಾರರ ವಿಷಯ ಅಷ್ಟು ಮುಖ್ಯವಲ್ಲ. ಮಧುರೆಯ ರಾಜಪ್ರತಿನಿಧಿಯ ಆಧಿಪತ್ಯ ಕೃಷ್ಣದೇವರಾಯನ ರಾಜ್ಯಾಡಳಿತ ನೀತಿಯ ಫಲವಾಗಿ ಹುಟ್ಟಿಕೊಂಡಿತು. ಕೃಷ್ಣದೇವರಾಯ ತನ್ನ ಸಾಮ್ರಾಜ್ಯದ ಮೂರು ಬೇರೆ

ಬೇರೆ ಭಾಗಗಳಿಗೆ ಮೂವರು ಮುಖ್ಯ ಅಧಿಕಾರಿಗಳನ್ನು ರಾಜಪ್ರತಿನಿಧಿಗಳಾಗಿ ನೇಮಿಸಿದನು. ಕೊಲ್ಲಡಂ ನದಿಯಿಂದ ನೆಲ್ಲೂರಿನವರೆಗಿನ ಪ್ರಾಂತಕ್ಕೆ ತುಬಕಿ ಕೃಷ್ಣಪ್ಪನಾಯಕನೂ ಕಾವೇರಿಯ ಸುತ್ತಮುತ್ತಣ ಪ್ರಾಂತಕ್ಕೆ ವಿಜಯರಾಘವನಾಯಕನೂ ಸಾಮ್ರಾಜ್ಯದ ದಕ್ಷಿಣ ಭಾಗಗಳಿಗೆ ವೆಂಕಟಪ್ಪ ನಾಯಕನೂ ರಾಜಪ್ರತಿನಿಧಿಗಳಾಗಿದ್ದರು. ಇವರ ಆಧಿಪತ್ಯಗಳ ಮುಖ್ಯ ಪಟ್ಟಣಗಳು ಕ್ರಮವಾಗಿ ಜಿಂಜಿ, ತಂಜಾವೂರು ಮತ್ತು ಮಧುರೆ.

ಮಧುರೆಯ ರಾಜನ ಪ್ರತಿನಿಧಿಗಳಲ್ಲಿ ಅತ್ಯಂತ ಪ್ರಮುಖನಾದವನು ವಿಶ್ವನಾಥನಾಯಕ (ಕ್ರಿ.ಶ. ೧೫೨೯–೧೫೬೪). ಇವನನ್ನು ಇವನ ತಂದೆ ನಾಗಮನಾಯಕನ ದಂಗೆ ಅಡಗಿಸಲು ಸಾರ್ವಭೌಮ ಅಚ್ಯುತದೇವನು ಕಳಿಸಿದನು; ವಿಶ್ವನಾಥನಾಯಕನು ತನ್ನ ತಂದೆಯನ್ನು ಅಡಗಿಸುವುದರಲ್ಲಿ ಜಯಶಾಲಿಯಾದ ಮೇಲೆ, ವಿಜಯನಗರದ ಸಾರ್ವಭೌಮನು ತಂದೆಯ ಸ್ಥಳದಲ್ಲಿ ಮಗನನ್ನು ಮಧುರೆಯ ರಾಜಪ್ರತಿನಿಧಿಯಾಗಿ ನೇಮಿಸಿದನು. ವಿಶ್ವನಾಥನಾಯಕನ ವಂಶಿಕರೇ ೧೭೩೨ರ ವರೆಗೂ ಮಧುರೆಯಲ್ಲಿ ಆಳುತ್ತಿದ್ದರು; ಅವರಲ್ಲಿ ೨ನೆಯ ವಿಜಯರಾಘವ ಚೊಕ್ಕನಾಥನೇ ಕಡೆಯವನು; ಇವನು ಮಕ್ಕಳಿಲ್ಲದೆ ಸತ್ತುಹೋದನು. ಅವನ ವಿಧವೆ ಮೀನಾಕ್ಷಿ ೧೭೬೩ರಲ್ಲಿ ಚಂದಾಸಾಹೇಬನು ಮಧುರೆಯನ್ನು ಹಿಡಿದುಕೊಂಡಾಗ ಆತ್ಮಹತ್ಯೆ ಮಾಡಿಕೊಂಡಳು.

ತಂಜಾವೂರು ಸಾಮಂತಾಧಿಪತ್ಯ ವಿಜಯರಾಘವ ನಾಯಕನಿಂದ ಮೊದಲುಗೊಂಡಿತು. ಅದರ ದೊರೆಗಳಲ್ಲಿ ಕೆಲವರು ಪ್ರಖ್ಯಾತರಾಗಿದ್ದರು. ಉದಾಹರಣೆಗೆ ಸಾಮಂತಾಧಿಪತ್ಯಗಳ ಚರಿತ್ರೆಯಲ್ಲಿ ಯಾರೂ ತಂಜಾವೂರಿನ ರಘುನಾಥನಾಯಕನನ್ನು (ಕ್ರಿ.ಶ. ೧೬೧೪–೧೬೪೦) ಸರಿಗಟ್ಟುವಂತಿರಲಿಲ್ಲ; ಅವನು ಸಾಹಿತ್ಯ ಸಂಗೀತಗಳಲ್ಲಿ ವಿದ್ವಾಂಸನೆಂದು ಪ್ರಸಿದ್ಧನಾಗಿದ್ದನು. ಅವನ ಮೊಮ್ಮಗ ಶೆಂಗಮಲದಾಸನ ಕಾಲದಲ್ಲಿ, ಕ್ರಿ.ಶ. ೧೬೭೪ರಲ್ಲಿ, ಪ್ರಸಿದ್ಧನಾದ ಶಿವಾಜಿಯ ತಮ್ಮ ವೆಂಕೋಜಿ ತಂಜಾವೂರನ್ನು ಸ್ವಾಧೀನಪಡಿಸಿಕೊಂಡನು. ತಂಜಾವೂರು ಸಾಮಂತರ ಆಧಿಪತ್ಯ ಹೀಗೆ ಕೊನೆಗೊಂಡಿತು.

ಜಿಂಜಿಯ ರಾಜಪ್ರತಿನಿಧಿಗಳಲ್ಲಿ ತುಬುಕಿ ಕೃಷ್ಣನಾಯಕನೇ ಅತ್ಯಂತ ಹೆಸರಾದವನು. ಅವನು ಅನೇಕ ಊರುಗಳನ್ನೂ ಕೊತ್ತಲಗಳನ್ನೂ ಕಟ್ಟಿಸಿದ್ದಲ್ಲದೆ ಜಿಂಜಿಯ ಕೋಟೆಯನ್ನು ಹೊರಗೆ ಒಳಗೆಲ್ಲ ಉತ್ತಮಪಡಿಸಿದಂತೆ ಹೇಳಲಾಗಿದೆ. ಜಿಂಜಿಯ ಸೂರಪ್ಪನಾಯಕನು (ಕ್ರಿ.ಶ. ೧೫೫೦) ವಿದ್ವಾಂಸರಿಗೆ ಆಶ್ರಯ ಕೊಡುವುದರಲ್ಲಿ ಹೆಸರಾಗಿದ್ದನು. ಭಾವನಾಪುರುಷೋತ್ತಮದ ಕರ್ತೃವಾದ, ಪ್ರಸಿದ್ಧ ಕವಿ ಶ್ರೀನಿವಾಸದೀಕ್ಷಿತನು ಸೂರಪ್ಪನಾಯಕನ ಆಸ್ಥಾನ ಕವಿಯಾಗಿದ್ದನೆಂದು ಹೇಳಲಾಗಿದೆ.

ಮೇಲೆ ಹೇಳಿರುವ ಇನ್ನುಳಿದ ಸಣ್ಣಪುಟ್ಟ ಸಾಮಂತ ರಾಜ್ಯಗಳ ಚರಿತ್ರೆಯ ವಿವರಗಳನ್ನು ಬಿಟ್ಟು, ಇಷ್ಟು ಮಾತ್ರ ಹೇಳಬಹುದು: ಇವೆಲ್ಲವುಗಳ ಆಶಾಪೂರಿತ ಯೋಜನೆಗಳು ಮಹಮ್ಮದೀಯರ ಆಕ್ರಮಣಗಳಷ್ಟೆ ವಿಜಯನಗರ ಸಾಮ್ರಾಜ್ಯವನ್ನು ಹಾಳುಮಾಡಿದುವು. ಮೇಲೆಯೇ ಹೇಳಿದಂತೆ, ಕರ್ನಾಟಕ ಸಾರ್ವಭೌಮತ್ವಕ್ಕಾಗಿ ಸ್ಪರ್ಧಿಸಲು ಅವುಗಳಲ್ಲಿ ಉಳಿದವು ಎರಡೇ: ಮೈಸೂರು ಮತ್ತು ಕೆಳದಿ. ಇನ್ನು ಇವುಗಳ ಇತಿಹಾಸಕ್ಕೆ ತಿರುಗೋಣ.

ಪ್ರಕರಣ ೬

ವಿಜಯನಗರವಾದ ಮೇಲಿನ ಕಾಲದ ಕರ್ನಾಟಕ

ಮೈಸೂರಿನ ತಲೆಮೆ

ಶ್ರೀರಂಗರಾಯನು ಬಿದನೂರಿಗೆ ಪಲಾಯನ ಮಾಡಿದ್ದು, ರಾಜಕೀಯ ಪ್ರಭಾವದ ಕೇಂದ್ರ ವಿಜಯನಗರದ ಮುಖ್ಯ ನಗರವಾದ ಚಂದ್ರಗಿರಿ ಅಥವಾ ವೆಲ್ಲೂರಿನಿಂದ ಬೇರೆಯ ಕಡೆಗೆ ಬದಲಾಯಿಸಿತ್ತು ಎಂಬುದನ್ನು ಸೂಚಿಸುವಂತಿತ್ತು. ಮತ್ತು ಕರ್ನಾಟಕದ ಪ್ರಾಮುಖ್ಯತೆ ಈಗ ಇಕ್ಕೇರಿಯಲ್ಲಿ ನೆಲೆಸಿತೆಂದು ಎಲ್ಲರಿಗೂ ತೋರಿತು. ಆದರೆ ವಾಸ್ತವವಾಗಿ ಕರ್ನಾಟಕದ ಜೀವನದ ಮೂಲಾಧಾರ ಮೂವತ್ತಾರು ವರ್ಷಗಳ ಹಿಂದೆಯೆ ಶ್ರೀರಂಗಪಟ್ಟಣದಲ್ಲಿ ಸ್ಥಾಪಿತವಾಗಿತ್ತು. ಇದು ವಿಜಯನಗರದ ಅರಸರ ಕಾಲದಲ್ಲಿಯೇ ಹೇಗೆ ಆಯಿತೆಂಬುದನ್ನು ವಿವರಿಸಬೇಕಾಗಿದೆ; ಹಾಗೆ ಮಾಡುವಲ್ಲಿ, ಕೆಳದಿ ಮತ್ತು ಮೈಸೂರುಗಳ ಚರಿತ್ರೆಯನ್ನು ನಿರೂಪಿಸಬೇಕಾಗಿದೆ.

೧. ಕೆಳದಿ

ಇಕ್ಕೇರಿ ಇಲ್ಲವೆ ಬಿದನೂರು ಇಲ್ಲವೆ ಕೆಳದಿ ಸಾಮಂತಾಧಿಪತ್ಯಕ್ಕೆ ಶಿವಮೊಗ್ಗ ಜಿಲ್ಲೆ, ಇಡಿಯ ದಕ್ಷಿಣ ಕನ್ನಡ, ಉತ್ತರ ಕನ್ನಡದ ಬಹುಭಾಗ, ಗುತ್ತಿ ಮತ್ತು ಘಟ್ಟದ ಮೇಲಿನ ಆರಗ – ಇವಿಷ್ಟು ಸೇರಿದ್ದವು. ಅದರ ಮುಖ್ಯ ಪಟ್ಟಣ ಮೊದಲು ಇಕ್ಕೇರಿಯಾಗಿದ್ದು, ೧೬೩೯ರಲ್ಲಿ ಬಿದನೂರಿಗೆ (ಈಗಿನ ನಗರ) ಬದಲಾಯಿತು. ಈ ರಾಜ್ಯ ಅದರ ಐಶ್ವರ್ಯಕ್ಕಾಗಿ ಪೋರ್ಚುಗೀಸರಿಗೆ ಚೆನ್ನಾಗಿ ತಿಳಿದಿತ್ತು. ಅದರ ಅರಸರು ಲಿಂಗಾಯತರು.

ಈ ರಾಜ್ಯದ ಹುಟ್ಟಿಗೆ ಮೂಲಕಾರಣ ವ್ಯವಸಾಯಗಾರನಾದ ಪಳ್ಳಿಬಯಲಿನ ಚೌಡಪ್ಪನ (೧೪೯೯–೧೫೧೩) ಧೈರ್ಯ ಮತ್ತು ಮುಂಗಾಣ್ಕೆ. ಅವನ ಮಗ ಸದಾಶಿವನಾಯಕನು ಕೃಷ್ಣದೇವರಾಯನ ಆಳಿಕೆಯಲ್ಲಿ ಆ ದೊರೆಯ ಅತ್ಯಂತ ಧೈರ್ಯಶಾಲಿಗಳಾದ ದಳವಾಯಿಗಳಲ್ಲಿ ಒಬ್ಬನೆಂದು ಹೆಸರುಪಡೆದನು. ಸದಾಶಿವನಾಯಕನು ೧೫೧೩ ರಿಂದ ೧೫೪೫ ರವರೆಗೆ ಆಳಿದನು. ಇವನ ವಂಶದಲ್ಲಿ ಹುಟ್ಟಿದ ವೆಂಕಟಪ್ಪನಾಯಕನು (೧೫೮೭–೧೬೨೯), ಸ್ವಾತಂತ್ರ್ಯವಹಿಸಿದ ವಿಜಯನಗರದ ಸಾಮಂತರಲ್ಲಿ ಮೊತ್ತಮೊದಲನೆಯವನು. ೧ನೆಯ ವೆಂಕಟಪ್ಪನಾಯಕನು ರಣದುಲ್ಲಾಖಾನನು ಎತ್ತಿ ತಂದ ಬಿಜಾಪುರದ ದಾಳಿಯನ್ನು ಯಶಸ್ವಿಯಾಗಿ ಎದುರಿಸಿದ್ದಲ್ಲದೆ, ಪೋರ್ಚುಗೀಸರ ಮಿತ್ರಳೂ ಬಿಜಾಪುರದ ಸುಲ್ತಾನನ ಸಾಮಂತಳೂ ಆದ ಗೇರುಸೊಪ್ಪೆಯ ರಾಣಿಯನ್ನು ಜಯಿಸಿದನು.

ಇವನ ಆಡಳಿತ ಮಲಬಾರಿನ ಗಡಿಯವರೆಗೂ ಹಬ್ಬಿತ್ತೆಂದ ಮೇಲೆ, ಇವನ ಕಾಲದಲ್ಲಿ ಕೆಳದಿ ರಾಜ್ಯ ತನ್ನ ಉತ್ಕರ್ಷದ ತುತ್ತತುದಿ ಮುಟ್ಟಿತೆಂದು ಹೇಳಬಹುದಾಗಿದೆ. ಅವನ ಪ್ರಭಾವ ಎಷ್ಟುಮಟ್ಟಿಗಿತ್ತು ಎಂದರೆ, ಗೋವೆಯ ಪೋರ್ಚುಗೀಸರು ಅವನ ಗೆಳೆತನವನ್ನು ಕೋರಿದರು.

ಆದರೆ ಕೆಳದಿ ರಾಜ್ಯದ ಸಂಪತ್ಸಮೃದ್ಧಿಯನ್ನು ಬೆಳಗಿಸಿದವನು, ಕೆಳದಿಯ ರಾಜವಂಶದಲ್ಲಿ ಅತ್ಯಂತ ಹೆಸರಾದವರಲ್ಲಿ ಒಬ್ಬನಾದ ಶಿವಪ್ಪನಾಯಕ (೧೬೪೫–೧೬೬೦). ಇವನ ಆಳಿಕೆಯಲ್ಲೆ ಶಿಸ್ತು ಎಂಬ ಭೂಗಂದಾಯ ಪದ್ಧತಿ ಜಾರಿಗೆ ಬಂದದ್ದು ಮತ್ತು ಇಕ್ಕೇರಿ ಆಸ್ಥಾನಕ್ಕೆ ಓಡಿಬಂದಿದ್ದ ವಿಜಯನಗರದ ಶ್ರೀರಂಗರಾಯನಿಗೆ ಬೇಲೂರು ಮತ್ತು ಸಕ್ಕರೆಪಟ್ಟಣಗಳ ಆಡಳಿತವನ್ನು ವಹಿಸಿಕೊಟ್ಟದ್ದು.

ಶಿವಪ್ಪನಾಯಕನ ಆಳಿಕೆಯಾದಮೇಲೆ ಬಿದನೂರಿನ ಏಳಿಗೆ ಇಳಿಮುಖವಾಗುತ್ತ ಬಂತು. ಆತನ ತರುವಾಯ ಬಿದನೂರಿನ ಇತಿಹಾಸದಲ್ಲಿ ಅತ್ಯಂತ ಗಮನಾರ್ಹವಾದ ಸಂಗತಿಯೆಂದರೆ, ಸೋಮಶೇಖರನಾಯಕನ ವಿಧವೆ ಚೆನ್ನಮ್ಮಾಜಿ (೧೬೭೧–೧೬೯೭) ಶಿವಾಜಿಯ ಮಗ ರಾಜಾರಾಮನು ಮೊಗಲರಿಂದ ತಲೆತಪ್ಪಿಸಿಕೊಂಡಿದ್ದಾಗ ಅವನಿಗೆ ಆಶ್ರಯಕೊಟ್ಟದ್ದು. ರಾಜಾರಾಮನು ತನ್ನ ದೇಶಕ್ಕೆ ತಪ್ಪಿಸಿಕೊಂಡು ಹೋಗಲು ಚೆನ್ನಮ್ಮಾಜಿ ಸಹಾಯ ಮಾಡಿದಳು. ಇದು ಇಂಡಿಯದ ಭವಿಷ್ಯದ ಮೇಲೆ ತುಂಬ ಪರಿಣಾಮಕಾರಿಯಾಗಿತ್ತು. ಕೆಳದಿಯ ರಾಣಿ ಓಡಿಬಂದ ಮಹಾರಾಷ್ಟ್ರದ ರಾಜಕುಮಾರನಿಗೆ ಆಶ್ರಯಕೊಟ್ಟು, ಉತ್ತರದಲ್ಲಿ ಮಹಾರಾಷ್ಟ್ರರ ಆಳಿಕೆ ಉಳಿಯುವಂತೆ ಮಾಡಿದಳು. ಹೀಗೆ, ಮುಸ್ಲಿಮರು ಹಿಂದೂಗಳನ್ನು ಜಯಿಸದಂತೆ ಅವರನ್ನು ಮತ್ತೊಮ್ಮೆ ಪಾರುಮಾಡಿದ್ದು ಕರ್ನಾಟಕವೆ.

೨ನೆಯ ಸೋಮಶೇಖರ ನಾಯಕನು ಮೊಗಲರ ಮೇಲೆ ಕೆಲವು ವಿಜಯಗಳನ್ನು ಪಡೆದರೂ, ಬಿದನೂರು ಬೇಗನೆ ಇಳಿಮೆ ಹೊಂದುತ್ತ ಬಂತು. ಬಿದನೂರಿನ ದೊಡ್ಡಬಾಳು ಹಾಳಾದದ್ದಕ್ಕೆ ಅದಕ್ಕೆ ಸೈನಿಕ ಬಲ ಸಾಲದಿದ್ದುದು ಅಷ್ಟಾಗಿ ಕಾರಣವಲ್ಲ; ಏಕನಿಷ್ಠೆಯಿಲ್ಲದುದೇ ಕಾರಣ. ಎರಡನೆಯ ಬಸಪ್ಪನಾಯಕನ (೧೭೩೯–೧೭೫೪) ವಿಧವೆ ವೀರಮ್ಮಾಜಿ ನಡೆಸುತ್ತಿದ್ದ ಅಸಮರ್ಪಕ ಆಡಳಿತ ಹೈದರಾಲಿಗೆ ಚಿತ್ರದುರ್ಗದಲ್ಲಿ ತನ್ನ ಮರೆಹೊಕ್ಕ ಬಿದನೂರಿನ ಒಬ್ಬ ಹಕ್ಕುಸಾಧಕನ ಹೆಸರಿನಲ್ಲಿ ಬಿದನೂರಿನ ಮೇಲೆ ಬೀಳಲು ಅವಕಾಶ ಕೊಟ್ಟಿತು; ಹೈದರಾಲಿ ೧೭೬೩ರಲ್ಲಿ ಬಿದನೂರನ್ನು ಮುತ್ತಿ ಅದನ್ನು ತನ ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡನು. ವೀರವಮ್ಮಾಜಿ, ಅವಳ ದತ್ತುಮಗ ಮೂರನೆಯ ಸೋಮಶೇಖರನಾಯಕ ಮತ್ತು ಹಕ್ಕುಸಾಧಕ ಇವರೆಲ್ಲರನ್ನೂ ಹೈದರಾಲಿ ಮದ್ದಗಿರಿ ಕೋಟೆಯಲ್ಲಿ ಸೆರೆಯಿಟ್ಟನು; ಈ ಕೋಟೆಯನ್ನು ಮರಾಠರು ೧೭೬೨ರಲ್ಲಿ ಹಿಡಿದುಕೊಳ್ಳುವವರೆಗೂ ಅವರು ಅಲ್ಲಿ ಇದ್ದರು. ಬಿದನೂರಿನ ರಾಣಿ ಪುಣೆಗೆ ಹೋಗುತ್ತ ದಾರಿಯಲ್ಲಿ ಸತ್ತಳು; ಅವಳ ದತ್ತುಮಗ ಆ ಪಟ್ಟಣದಲ್ಲಿ ಸತ್ತ.

೨.ಮೈಸೂರು

ಹೀಗೆ, ೧೪೯೯ರಿಂದ ೧೭೬೩ರವರೆಗೆ ಬಿದನೂರು ಕರ್ನಾಟಕದ ರಾಜಕೀಯದಲ್ಲಿ ತಕ್ಕಮಟ್ಟಿನ ಪ್ರಭಾವ ಬೀರಿತ್ತು. ಆದರೆ ರಾಜ್ಯವನ್ನು ಭಿನ್ನ ಭಿನ್ನ ಮಾಡುವಂಥ ಶಕ್ತಿಗಳನ್ನು ಕೆಳದಿ ತಡೆಗಟ್ಟಲಾರದೆ ಹೋಯಿತು. ಮೇಲೆ ಹೇಳಿದಂತೆ, ಪೋರ್ಚುಗೀಸರ ದೃಷ್ಟಿಯಲ್ಲಿ ಕೆಳದಿ ಪ್ರಬಲವಾದ ರಾಜ್ಯವಾಗಿ ಇದ್ದುದೇನೋ ದಿಟ. ಆದರೆ ಕರ್ನಾಟಕ ಮತ್ತು ಹಿಂದೂ ಭಾರತ ಇವುಗಳ ದೃಷ್ಟಿಯಿಂದ ಕೆಳದಿ ಏನೂ ಶಾಶ್ವತ ವಿಜಯವನ್ನು ಸಾಧಿಸಲಾರದೆ ಹೋಯಿತು. ಇದಕ್ಕೆ ಕಾರಣಗಳನ್ನು ದೂರ ಅರಸಬೇಕಾಗಿಲ್ಲ. ಮೊದಲನೆಯದಾಗಿ ಕೆಳದಿಗೆ ಸಾಧಿಸಲು ಒಂದು ಉದ್ದೇಶವಿರಲಿಲ್ಲ. ವಿಜಯನಗರ ಹಿಂದೆ ಬಿಟ್ಟುಹೋದ ದೊಡ್ಡ ನೀತಿಪಾಠವನ್ನು ಎಂದರೆ ನಾಡಿನ ಜೀವನವನ್ನು ಪುನರುದ್ದೀಪನಗೊಳಿಸುವುದನ್ನು ಕೆಳದಿಯ ದೊರೆಗಳು ತಿಳಿಯದೆ ಹೋದರು. ಅವರಿಗೆ ಹೇಗೆ ಒಂದು ಧ್ಯೇಯವಿರಲಿಲ್ಲವೊ ಹಾಗೆಯೆ ದೂರದೃಷ್ಟಿಯೂ ಇರಲಿಲ್ಲ. ಎರಡನೆಯದಾಗಿ ಕೆಳದಿ ಕಾಲಕ್ಕೆ ತಕ್ಕಂತೆ ನಡೆಯಲಿಲ್ಲ. ಅದು ತನ್ನ ನೆರೆಯವರಿಂದ, ಮುಖ್ಯವಾಗಿ ಅನೇಕ ಸಂದರ್ಭಗಳಲ್ಲಿ ತಾನು ಸಂಬಂಧ ಬೆಳಸಿದ್ದ ಪೋರ್ಚುಗೀಸರಿಂದ, ಪ್ರಗತಿಪರವಾದ ಸೈನಿಕ ಚಲನವಲನ ರೀತಿಗಳನ್ನಾಗಲಿ ಉತ್ತಮ ರಾಜಕೀಯ ಸ್ಥಿತಿಗಳನ್ನಾಗಲಿ ಕಲಿಯಲಿಲ್ಲ. ಮೂರನೆಯದಾಗಿ ಕೆಳದಿ ಶಕ್ತಿವಂತ ದೊರೆಗಳ ವಂಶವನ್ನು ಹೊಂದಿರಲಿಲ್ಲ. ಅಲ್ಲದೆ ಅಷ್ಟೇ ಮುಖ್ಯವಾದ ಧೈರ್ಯಶಾಲಿಗಳಾದ ಸೇನಾಪತಿಗಳ ಮತ್ತು ವಿವೇಕಿಗಳಾದ ರಾಜನೀತಿ ನಿಪುಣರ ಪರಂಪರೆಯನ್ನೂ ಪಡೆದಿರಲಿಲ್ಲ. ಮತ್ತು ಕಡೆಯದಾಗಿ, ಕೆಳದಿರಾಜ್ಯದ ಅವನತಿಗಾಗಿ ಪ್ರಕೃತಿಯೇ ಸಂಚು ನಡೆಸಿತೊ ಎನ್ನುವಂತಿತ್ತು. ಮಲೆನಾಡಿನ ಘಟ್ಟಗಳ ಮೊರಡು ಪ್ರದೇಶಗಳು ಹದಿನೇಳನೆಯ ಮತ್ತು ಹದಿನೆಂಟನೆಯ ಶತಮಾನಗಳ ಅವಶ್ಯಕತೆಗಳಿಗೆ ತಕ್ಕಂತಿರಲಿಲ್ಲ. ಪ್ರಕೃತಿಜನ್ಯ ಸಂಪತ್ತಿನ ಕೊರತೆಯೂ ದಕ್ಷರಾದ ಸೇನಾಪತಿಗಳ ಮತ್ತು ಸಚಿವರ ಕೊರತೆಯೂ ಸೇರಿ ಸ್ವಾಭಾವಿಕವಾಗಿ ನಾಡಿನ ಜನರ ನೈತಿಕ ಬಲವನ್ನು ಹಾಳುಮಾಡಿದವು.

ಮೇಲೆ ಹೇಳಿದ ಕಾರಣಗಳಿಂದ ವ್ಯಕ್ತವಾಗುವ ಸ್ಥಿತಿಗಳಿಗೆ ವ್ಯತಿರಿಕ್ತವಾದ ಸ್ಥಿತಿಗಳು ಬಿದನೂರಿನ ಪ್ರಬಲ ಪ್ರತಿಕಕ್ಷಿಯಾದ ಮೈಸೂರಿನ ಏಳಿಗೆಗೆ ಪ್ರಾಬಲ್ಯಕ್ಕೂ ಕಾರಣವಾದವು. ಕಾವೇರಿನದಿಯ ಪೋಷಣೆ, ಅಪಾರವಾದ ಪ್ರಕೃತಿಸಂಪತ್ತು, ಧೈರ್ಯಶಾಲಿಗಳಾದ ರಾಜರ ಪರಂಪರೆ, ಚತುರರಾದ ಸೇನಾಪತಿಗಳು, ದಕ್ಷರಾದ ಆಡಳಿತಗಾರರು – ಎಲ್ಲ ಒಟ್ಟುಗೂಡಿ, ಮೈಸೂರನ್ನು ದಕ್ಷಿಣ ಇಂಡಿಯದ ರಾಜ್ಯಗಳಲ್ಲಿ ಮುನ್ನೆಲೆಗೆ ತಂದಿರಿಸಿದುವು. ಮೈಸೂರು, ಇನ್ನು ಯಾವ ಕರ್ನಾಟಕ ರಾಷ್ಟ್ರವೂ ಇಟ್ಟುಕೊಂಡಿರದ ಧ್ಯೇಯವನ್ನು ಇಟ್ಟುಕೊಂಡಿತ್ತು. ವಿಜಯನಗರ ತನ್ನ ಮುಂದೆ ಇಟ್ಟುಕೊಂಡಿದ್ದ ಧ್ಯೇಯವೇ ಅದು; ಅದು ಯಾವುದೆಂದರೆ, ಸರ್ವಧರ್ಮ ಸಂರಕ್ಷಣೆ ಮತ್ತು ಕನ್ನಡ ಜನದ ಏಕೀಕರಣ. ಈ ಆದರ್ಶದ ಸಾಧನೆಗೆ ಮುಂಗಾಣ್ಕೆಯೂ ಬುದ್ಧಿವಂತಿಕೆಯೂ ಅವಶ್ಯವಾಗಿದ್ದುವು; ಒಟ್ಟಿನ ಮೇಲೆ, ಮೈಸೂರು ದೊರೆಗಳಿಗೆ

ಅವು ಇದ್ದುವು. ಅಲ್ಲದೆ ಮೈಸೂರು ತಾನು ಸಂಬಂಧ ಬೆಳಸಿದ ಹೊಸ ರಾಜ್ಯಗಳಿಂದ, ಮುಖ್ಯವಾಗಿ ಫ್ರೆಂಚರಿಂದ ಮತ್ತು ಇಂಗ್ಲಿಷರಿಂದ ಯುದ್ಧವಿಷಯಗಳಲ್ಲೂ ಆಡಳಿತ ವಿಚಾರಗಳಲ್ಲೂ ಹೊಸ ಸಂಗತಿಗಳನ್ನು ಅರಿತುಕೊಳ್ಳಲು ಪ್ರಯತ್ನಿಸಿತು. ಯಾವಾಗಲೂ ಕಾಲಕ್ಕಿಂತ ಸ್ವಲ್ಪ ಮುಂದೆ ಹೋಗಲು ಮಾಡುತ್ತಿದ್ದ ಸಂತತ ಪ್ರಯತ್ನಗಳ ಫಲವಾಗಿ ಮೈಸೂರು ಕರ್ನಾಟಕದ ರಾಜಕೀಯ ಹಾಗೂ ಸಾಂಸ್ಕೃತಿಕ ಜೀವನದ ಕೇಂದ್ರವಾಗಲು ಸಾಧ್ಯವಾಯಿತು.

ಕರ್ನಾಟಕದ ಈ ಪುನರುಜ್ಜೀವನ ಕಾರ್ಯದಲ್ಲಿ ಹಿಂದೂ, ಮುಸಲ್ಮಾನರಿಬ್ಬರೂ ಪ್ರಶಂಸನೀಯವಾದ ರೀತಿಯಲ್ಲಿ ಭಾಗವಹಿಸಿದರು. ಮೈಸೂರು ರಾಜ್ಯದ ಏಳಿಗೆಗೆ ಕಾರಣವಾದ ಕೆಲವು ಸಂಗತಿಗಳನ್ನು ಹೇಳಿದರೆ, ಈ ವಿಷಯ ಚೆನ್ನಾಗಿ ಮನದಟ್ಟಾಗುತ್ತದೆ. ಮೈಸೂರಿನ ಪೂರ್ವ ಚರಿತ್ರೆಗೆ ಸಂಬಂಧಪಟ್ಟ ಪರಸ್ಪರ ವಿರೋಧಕವಾದ ಹಲವು ಹೇಳಿಕೆಗಳಲ್ಲಿ ಈ ಮುಂದಿನ ಅಂಶಗಳು ಗಮನಾರ್ಹವಾಗಿರುವಂತೆ ತೋರುತ್ತವೆ. ಮೈಸೂರಿನ ಮುಂದಿನ ಮಹತ್ವಕ್ಕೆ ತಳಪಾಯ ಹಾಕಿದ ರಾಜವೊಡೆಯರು ಮೊದಲು ಶ್ರೀರಂಗಪಟ್ಟಣದಲ್ಲಿ ವಿಜಯನಗರದ ರಾಜಪ್ರತಿನಿಧಿಯಾಗಿ ಆಳುತ್ತಿದ್ದ ತಿರುಮಲನ ಕೈಕೆಳಗೆ ಅಧಿಕಾರಿಯಾಗಿದ್ದರು ಎಂಬುದು. ರಾಜವೊಡೆಯರು ತಳಕಾಡು, ಕನ್ನಂಬಾಡಿ ಮುಂತಾದ ಸ್ಥಳಗಳ ಸಣ್ಣಸಣ್ಣ ರಾಜರನ್ನು ಅಡಗಿಸಿ ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಮೊದಲುಮಾಡಿದರು ಎಂಬುದು; ವಿಜಯನಗರ ಚಕ್ರವರ್ತಿಯಾದ ಎರಡನೆಯ ವೆಂಕಟಪತಿದೇವನು ಶ್ರೀರಂಗಪಟ್ಟಣದಲ್ಲಿದ್ದ ತನ್ನ ಪ್ರತಿನಿಧಿಯಾದ ತಿರುಮಲನ ವಿಚಾರದಲ್ಲಿ ತೋರಿಸುತ್ತಿದ್ದ ಅಸಡ್ಡೆಯ ದೆಸೆಯಿಂದ ರಾಜವೊಡೆಯರು ಆ ರಾಜಪ್ರತಿನಿಧಿಯನ್ನು ಶ್ರೀರಂಗಪಟ್ಟಣದಿಂದ ಓಡಿಸಿದರು ಎಂಬುದು; ಮತ್ತು ೧೬೧೦ರಲ್ಲಿ ವಿಜಯನಗರದ ಚಕ್ರವರ್ತಿಯ ಒಪ್ಪಿಗೆ ಪಡೆದು ರಾಜವೊಡೆಯರು ಶ್ರೀರಂಗಪಟ್ಟಣವನ್ನು ಹಿಡಿದುಕೊಂಡರು ಎಂಬುದು.

ರಾಜವೊಡೆಯರು ಶ್ರೀರಂಗಪಟ್ಟಣವನ್ನು ಹಿಡಿದುಕೊಂಡಿದ್ದು ಕರ್ನಾಟಕ ಇತಿಹಾಸದಲ್ಲಿ, ಆದ್ದರಿಂದ ದಕ್ಷಿಣ ಮತ್ತು ಪಶ್ಚಿಮ ಇಂಡಿಯದ ಇತಿಹಾಸದಲ್ಲಿ ಒಂದು ಹೊಸ ಯುಗವನ್ನು ಪ್ರಾರಂಭಿಸಿತು. ಕರ್ನಾಟಕದ ಜೀವನ ಮತ್ತು ಸಂಸ್ಕೃತಿ ಕೇಂದ್ರ ಈಗ ಶ್ರೀರಂಗಪಟ್ಟಣದಲ್ಲಿ ನೆಲೆಗೊಂಡಿತೆಂದು ಕನ್ನಡ ಪ್ರಪಂಚಕ್ಕೆ ತಿಳಿಯಿತು. ಮೈಸೂರು ದೊರೆಗಳು ತಾವು ವಿಜಯನಗರ ಸಾಮ್ರಾಜ್ಯ ಸಂಪತ್ತಿನ ಉತ್ತರಾಧಿಕಾರಿಗಳು ಎಂಬುದನ್ನು ತೋರಿಸುವುದಕ್ಕಾಗಿ, ಮೇಲೆ ಹೇಳಿದಂತೆ ಆಗಲೇ ಅವನತಿ ಹೊಂದುತ್ತಿದ್ದ ವಿಜಯನಗರದ ಸಾರ್ವಭೌಮತ್ವವನ್ನು ಕ್ರಿ.ಶ. ೧೬೬೮ರ ವರೆಗೂ ಒಪ್ಪಿಕೊಳ್ಳುತ್ತ ಹೋದರು. ಮೈಸೂರು ದೊರೆಗಳಲ್ಲಿ ರಾಜವೊಡೆಯರಿಗೆ ಎರಡನೆಯವರಾಗಿ ನಿಲ್ಲುವವರು ಕಂಠೀರವ ನರಸರಾಜವೊಡೆಯರು (ಕ್ರಿ.ಶ. ೧೬೩೮ರಿಂದ ೧೬೫೯). ಬಿಜಾಪುರದ ಸೇನಾಪತಿಯಾದ ರಣದುಲ್ಲಾಖಾನನನ್ನು ಹಿಮ್ಮೆಟ್ಟಿಸಿದ್ದಕ್ಕಾಗಿ ಈ ದೊರೆಯ ಆಳಿಕೆ ಪ್ರಖ್ಯಾತವಾಗಿದೆ. ಕಂಠೀರವ

ನರಸರಾಜವೊಡೆಯರು ಜನಗಳ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿದರು ಮತ್ತು ಅವರು ತಮ್ಮ ಹೆಸರುಳ್ಳ **ಕಂಠೀರಾಯ ಹಣ** ಮತ್ತು **ವರಹ** ಎಂಬ ನಾಣ್ಯಗಳನ್ನು ತಯಾರಿಸಲು ಒಂದು ಟಂಕಶಾಲೆಯನ್ನು ಸ್ಥಾಪಿಸಿದರು.

ರಾಜವೊಡೆಯರು ಮೈಸೂರು ಸೀಮೆಯ ಗಡಿಯನ್ನು ವಿಸ್ತಾರಗೊಳಿಸುವ ನೀತಿಯನ್ನು ಕೈಕೊಂಡಿದ್ದರಷ್ಟೆ. ಅದನ್ನು ಕಂಠೀರವ ನರಸರಾಜವೊಡೆಯರೂ ಮತ್ತು ಮುಖ್ಯವಾಗಿ ದೊಡ್ಡ ದೇವರಾಜವೊಡೆಯರು (ಕ್ರಿ. ಶ. ೧೬೫೯–೧೬೭೨) ಮತ್ತು ಚಿಕ್ಕದೇವರಾಜವೊಡೆಯರು ಇವರುಗಳೂ ಮುಂದುವರಿಸಿದರು. ಚಿಕ್ಕದೇವರಾಜವೊಡೆಯರ ಹೆಸರು ಚಿರಸ್ಥಾಯಿಯಾಗಿರಲೂ ಅವರು ಮೈಸೂರಿನ ಹಲವು ಶತ್ರುಗಳ ಮೇಲೆ ಯುದ್ಧಮಾಡಿ ಜಯಶೀಲರಾದದ್ದೂ ಮತ್ತು ದಕ್ಷತೆಯಿಂದ ದೇಶದ ಆಡಳಿತವನ್ನು ಪುನರ್ವ್ಯವಸ್ಥೆಗೊಳಿಸಿದ್ದೂ ಕಾರಣ. ಚಿಕ್ಕದೇವರಾಜವೊಡೆಯರು ಮಹಾಪ್ರಸಿದ್ಧನಾದ ಶಿವಾಜಿಯನ್ನು ಕೂಡ ಸೋಲಿಸಿ, ಅನೇಕ ಸಂದರ್ಭಗಳಲ್ಲಿ ಮರಾಠರನ್ನು ಹೊಡೆದೋಡಿಸಿ **ಅಪ್ರತಿಮವೀರ** ಎಂಬ ಬಿರುದು ಪಡೆದು ಕರ್ನಾಟಕದ ಪರಾಕ್ರಮ ಕಟ್ಟುಕತೆಯಲ್ಲ, ವಾಸ್ತವಿಕ – ಎಂಬುದನ್ನು ಮೆರೆದರು. ಈ ಬಿರುದು ಆಮೇಲೆ ಮೈಸೂರು ದೊರೆಗಳ ಬಿರುದುಗಳಲ್ಲಿ ಒಂದೆನಿಸಿತು.

ಚಿಕ್ಕದೇವರಾಜವೊಡೆಯರ ಆಳಿಕೆಯಾದ ಮೇಲೆ ನಡೆದ ಸಂಗತಿಗಳು, ತಿರುಮಲರಾಯ ಮತ್ತು ನಂಜರಾಜರಂಥ ದಕ್ಷರಾದ ಸಚಿವರ ಮತ್ತು ದೇವರಾಜ ಮುಂತಾದವರಂಥ ದಳವಾಯಿಗಳ ಮಾರ್ಗದರ್ಶಿತ್ವ ಇದ್ದೂ ಸಹ ಹಿಂದೂರಾಜರ ಬುದ್ಧಿ, ಭೋಗಾಸಕ್ತಿಯಿಂದ ಇಲ್ಲವೆ ಪರಾಕ್ರಮ ಹೀನತೆಯಿಂದ ಮಂಕಾಗಿತ್ತು ಎಂಬುದನ್ನು ತೋರಿಸಿದುವು; ಇಂಥ ಸನ್ನಿವೇಶದಲ್ಲಿ ಇಸ್ಲಾಂ ಧರ್ಮ ಮುಂದೆ ಬಂದು ಹಿಂದೂಧರ್ಮವೂ ಸ್ಥಿರಗೊಳ್ಳಲು ಅನುಕೂಲವಾಯಿತು.

ಹೀಗೆ, ನಾವು ಮೈಸೂರಿನ ಸುಲ್ತಾನರಿಬ್ಬರ ಆಳಿಕೆಯನ್ನು ಪರಿಶೀಲಿಸಬೇಕಾಗಿದೆ. ಒಬ್ಬ – ಹೈದರ್‌ಆಲಿ (ಕ್ರಿ.ಶ. ೧೭೬೧ರಿಂದ ೧೭೮೨). ಇನ್ನೊಬ್ಬ ಅವನ ಮಗ ಟೀಪು (ಕ್ರಿ.ಶ. ೧೭೮೨ ರಿಂದ ೧೭೯೯) ಮೈಸೂರಿನ ಇತಿಹಾಸದಲ್ಲಿ ಅವರಿಬ್ಬರ ಆಳಿಕೆ ಬೇರೆಯಾದ ಪ್ರಕರಣವೆಂದು ಹೇಳುವುದು ವಾಡಿಕೆಯಾಗಿದೆ. ಇದು ತಪ್ಪು. ಮೈಸೂರು ಕರ್ನಾಟಕದ ಮುಂದಾಳಾಗಿ ಇರಬೇಕಾಗಿದ್ದ ಪಕ್ಷದಲ್ಲಿ ರಾಜ್ಯ ಸಂಪಾದನೆಯ ಜೊತೆಗೆ ಹಿಂದೂಧರ್ಮವನ್ನೂ ಸಂರಕ್ಷಿಸುವ ಕಾರ್ಯವನ್ನು ಮಾಡಬೇಕಾಗಿತ್ತು ಎಂಬುದು ಮೇಲೆ ಹೇಳಿರುವ ಮೊದಮೊದಲಿನ ಮೈಸೂರು ದೊರೆಗಳ ಕಾರ್ಯ ಸಾಧನೆಗಳಿಂದ ಸ್ಪಷ್ಟವಾಗಿತ್ತು. ಕರ್ನಾಟಕದ ಜೀವನಕ್ಕೆ ಹೊಸ ಚೈತನ್ಯ ತುಂಬಲು ಹಿಂದೂ ನಾಯಕನಿಗೆ ಎಷ್ಟು ಹಕ್ಕು ಇತ್ತೊ ಅಷ್ಟೇ ಕನ್ನಡಿಗನಾಗಿ ಬೆಳೆದ ಹೈದರ್‌ಅಲಿಗೂ ಇತ್ತು. ಆತನು ತನ್ನ ಕರ್ತವ್ಯವನ್ನು ಚೆನ್ನಾಗಿ ನೆರವೇರಿಸಿದನು. ದೇಶದ ಆಡಳಿತವನ್ನು ಮೈಸೂರು ದೊರೆಗಳ (ಎಂಟನೆಯ ಮತ್ತು ಒಂಬತ್ತನೆಯ ಚಾಮರಾಜರ) ಹೆಸರಿನಲ್ಲಿ ನಡೆಸಿಕೊಂಡು ಹೋಗುತ್ತ, ಕ್ರಿ.ಶ. ೧೭೬೩ರಲ್ಲಿ

ಬಿದನೂರನ್ನು ಜಯಿಸಿ ತನ್ನ ರಾಜನ ಹಾದಿಗೆ ಅಡ್ಡವಾಗಿದ್ದ ಮೈಸೂರಿನ ಶಕ್ತಿಗುಂದಿಸುತ್ತಿದ್ದ ಪ್ರತಿಸ್ಪರ್ಧಿಯೊಬ್ಬರನ್ನು ನಿರ್ಮೂಲ ಮಾಡಿದನು. ಆಮೇಲೆ ಅವನು ರಾಜತಂತ್ರ ನಿಪುಣರಾದ "ಕರ್ನಾಟಕ"ದ ಮಹಮ್ಮದ್ ಅಲಿ, ಮದರಾಸು ಸರ್ಕಾರ, ನಿಜಾಮ, ಮರಾಠರು ಇವರ ಜೊತೆ ಸೇರಿ ಎಂದಿನಿಂದಲೂ ಕರ್ನಾಟಕದ ವೈಶಿಷ್ಟ್ಯವಾಗಿರುವ ರಾಜತಂತ್ರ ಸಾಮರ್ಥ್ಯವನ್ನು ತೋರಿಸಿದನು; ಮತ್ತು ಕಡೆಯದಾಗಿ ಹಿಂದೂಧರ್ಮವನ್ನು ಪೋಷಿಸಿ ಮೈಸೂರಿನ ಹಿಂದೂ ದೊರೆಗಳ ಉದಾತ್ತ ಸಂಪ್ರದಾಯವನ್ನು ಮುಂದುವರಿಸಿದನು. ಅವನು ಹಿಂದೂ ದೇವಾಲಯಗಳಿಗೆ ದಾನ ಧರ್ಮಗಳನ್ನು ಮಾಡಿ ಎಲ್ಲ ವರ್ಗಗಳ ಜನರ ಐಹಿಕ ಹಿತವನ್ನು ನೋಡಿಕೊಳ್ಳುತ್ತಿದ್ದನು. ಅವನ ಮಗನಾದ ಟೀಪುಸುಲ್ತಾನನು ಈ ಭಾಗದಲ್ಲಿ ತನ್ನ ತಂದೆಯ ಮಾರ್ಗವನ್ನೇ ಅನುಸರಿಸಿದನು. ಶೃಂಗೇರಿಯ ಪ್ರಸಿದ್ಧವಾದ ಹಿಂದೂಮಠವನ್ನು ಮರಾಠರು ಕೊಳ್ಳೆಹೊಡೆದಾಗ ಅದರ ಪುನರುದ್ಧಾರಕ್ಕಾಗಿ ಸುಲ್ತಾನನು ಮಾಡಿದ ಔದಾರ್ಯಪೂರಿತವಾದ ಪ್ರಯತ್ನಗಳು ಮೈಸೂರಿನ ಹಿಂದೂಗಳಲ್ಲಿಯೂ ಮಹಮದೀಯರಲ್ಲಿಯೂ ಎಂದಿನಿಂದಲೂ ಪರಸ್ಪರ ನೆಲೆಸಿರುವ ಸೌಹಾರ್ದಕ್ಕೆ ತಕ್ಕ ಕಾಣಿಕೆಯಂತಿವೆ. ಅವನ ಆಳಿಕೆ ಇನ್ನೊಂದು ದೃಷ್ಟಿಯಿಂದಲೂ ಗಮನಾರ್ಹವಾಗಿವೆ. ಪ್ರಸಿದ್ಧನಾದ ತನ್ನ ತಂದೆಯಂತೆಯೂ ಮೈಸೂರಿನ ಹಿಂದಿನ ದೊರೆಗಳಂತೆಯೂ ಮೈಸೂರನ್ನು ದಕ್ಷಿಣ ಮತ್ತು ಪಶ್ಚಿಮ ಇಂಡಿಯದಲ್ಲಿ ಪ್ರಮುಖ ರಾಜ್ಯವಾಗಿ ಮಾಡಬೇಕೆಂಬುದೇ ಟೀಪುಸುಲ್ತಾನನ ಹೆಬ್ಬಯಕೆಯಾಗಿತ್ತು. ಒಂದನೆಯ ನೆಪೋಲಿಯನ್ನನೊಡನೆ ಅವನು ಸ್ನೇಹ ಬೆಳಸಿದ್ದನು ಎಂಬುದು ತನ್ನ ಉದ್ದೇಶ ಸಾಧನೆಗೆ ಎಲ್ಲಿಯವರೆಗೆ ಮುನ್ನುಗ್ಗಿ ಹೋಗುತ್ತಿದ್ದನೆಂಬುದನ್ನು ವ್ಯಕ್ತಪಡಿಸುತ್ತದೆ.

ಟೀಪುಸುಲ್ತಾನನ ಯೋಜನೆಗಳನ್ನು ಹಾಳುಮಾಡಿದ್ದು ಅವನ ಪ್ರತಿಪಕ್ಷದ ಸಾಮರ್ಥ್ಯವಲ್ಲ, ಅವನ ಸ್ವಂತ ಚಂಚಲಸ್ವಭಾವ. ಆದರೂ ಅವನ ಅಲ್ಪಾವಧಿಯ ರಾಜ್ಯಭಾರ ಪ್ರಾಚೀನ ಹಿಂದೂ ಆದರ್ಶಗಳಾದ ಧರ್ಮ, ಒಳ್ಳೆಯ ರಾಜ್ಯಭಾರ ಮತ್ತು ಶಾಂತಿಗಳನ್ನು ಎತ್ತಿಹಿಡಿಯುವ ರಾಜ್ಯವನ್ನು ಅಳಿಸಬಾರದೆಂಬ ಅಂಶವನ್ನು ಅವನ ಪರಮ ಶತ್ರುಗಳಾದ ಇಂಗ್ಲಿಷರಿಗೂ ಸಹ ಮನದಟ್ಟು ಮಾಡಿಕೊಟ್ಟಿತು. ಈ ಕಾರಣದಿಂದಲೇ ಇಂಗ್ಲಿಷರು ಎರಡು ಸಂದರ್ಭಗಳಲ್ಲಿ ಹಿಂದೂ ರಾಜವಂಶವನ್ನು ಪುನರುದ್ಧಾರ ಮಾಡಿದ್ದು; ಒಮ್ಮೆ ೧೭೯೯ರಲ್ಲಿ, ಟೀಪು ಸುಲ್ತಾನನು ಕಾಲವಾದ ಮೇಲೆ, ಚಾಮರಾಜನ ಮಗ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ರಾಜ್ಯವನ್ನು ಹಿಂದಕ್ಕೆ ಕೊಟ್ಟರು; ಮತ್ತೆ ೧೮೮೧ರಲ್ಲಿ ಬ್ರಿಟಿಷ್ ಪ್ರತಿನಿಧಿ ರಾಜ್ಯಭಾರ (ಕ್ರಿ.ಶ. ೧೮೩೧–೧೮೮೧) ಕೊನೆಗೊಂಡಮೇಲೆ, ೧೦ನೆಯ ಚಾಮರಾಜೇಂದ್ರರಿಗೆ ರಾಜ್ಯವನ್ನು ಒಪ್ಪಿಸಿದರು. ಚಾಮರಾಜೇಂದ್ರ ಒಡೆಯರು (೧೮೯೪) ಕಾಲಾಧೀನರಾದ ಮೇಲೆ ಸ್ವಲ್ಪಕಾಲ (೧೮೯೪–೧೯೦೨) ಮತ್ತೆ ತಮ್ಮ ತಾಯಿಯವರ ಪ್ರತಿನಿಧಿ ರಾಜ್ಯಭಾರ ನಡೆದಮೇಲೆ ೧೯೦೨ರಲ್ಲಿ ಆದರ್ಶಪ್ರಭುಗಳಾದ ನಾಲ್ಮಡಿ ಶ್ರೀ ಕೃಷ್ಣರಾಜ

ಒಡೆಯರನ್ನು ಸಿಂಹಾಸನಾಧಿಪತಿಗಳನ್ನಾಗಿ ಮಾಡಲಾಯಿತು. ನಾಲ್ಮಡಿ ಕೃಷ್ಣರಾಜ ಒಡೆಯರವರು ಜನಕ್ಕೆ ಮಾರ್ಗದರ್ಶಕರಾಗಿದ್ದುಕೊಂಡು, ಜನದ ಎಲ್ಲ ವರ್ಗಗಳನ್ನೂ ಸಮದೃಷ್ಟಿಯಿಂದ ಕಾಣುತ್ತ ಆದರ್ಶ ಹಿಂದೂ ರಾಜತ್ವದ ಮೂರ್ತಿಸ್ವರೂಪರಾಗಿ, ತಮ್ಮ ಸ್ವಂತ ಸುಖವನ್ನು ಬದಿಗಿಟ್ಟು ಪ್ರಜೆಗಳ ಹಿತಕ್ಕಾಗಿಯೇ ದುಡಿಯುತ್ತ, ಕರ್ನಾಟಕದ, ಅಷ್ಟೇಕೆ ಇಡಿಯ ಭರತಖಂಡದ ಹೆಮ್ಮೆಯಾಗಿದ್ದರೆಂಬುದಕ್ಕೆ ಅವರ ಆಳಿಕೆಯಲ್ಲಿ ಮೈಸೂರು ಸಂಸ್ಥಾನದಲ್ಲಿ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಆಗಿರುವ ತೀವ್ರವಾದ ಮುನ್ನಡೆಯೇ ಸಾಕ್ಷಿ. ೧೯೪೦ರಲ್ಲಿ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ರಾಜ್ಯಸೂತ್ರಗಳನ್ನು ವಹಿಸಿಕೊಂಡರು. ಇವರು ದಯಾಮಯರಾದ ಪ್ರಭುಗಳೂ, ವಿದ್ವತ್ತಿನ ಉದಾರ ಆಶ್ರಯದಾತರೂ, ಜನಪ್ರಿಯರೂ ಆಗಿದ್ದರು.

ಪ್ರಕರಣ ೭

ಕರ್ನಾಟಕ – ಭಾರತ

ಆಧುನಿಕ ಭಾರತದ ಇತಿಹಾಸದಲ್ಲಿ ಕರ್ನಾಟಕದ ಸ್ಥಾನವೇನು? ಹಿಂದಿನ ಕಾಲದಲ್ಲಿ ಕನ್ನಡಿಗರು ಏನು ಸಾಧಿಸಿದರು ಎಂಬುದನ್ನು ಪರಿಚಯ ಮಾಡಿಕೊಂಡ ನಾವು ಈಗ ಪ್ರಶ್ನೆಗೆ ಉತ್ತರ ಹೇಳಬೇಕಾಗಿದೆ. ಈ ಉತ್ತರ ಕೊಡಲು ನಮ್ಮ ದೇಶದಲ್ಲಿ ಈಗ ಏನು ನಡೆಯುತ್ತಿದೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು.

ಇಡಿಯ ಭರತಖಂಡವೆ ನಮ್ಮ ಕಣ್ಣೆದುರಿಗೆ ಮಹತ್ವದ ಮಾರ್ಪಾಟುಗಳನ್ನು ಹೊಂದುತ್ತಿದೆ. ದೇಶಕ್ಕೆ ದೇಶವೇ ಎಚ್ಚರಗೊಂಡು, ಆತ್ಮಗೌರವ ಭಾವವನ್ನೂ ಕಾರ್ಯಪ್ರವೃತ್ತಿಯನ್ನೂ ಪಡೆದಿದೆ; ಅದರ ಪ್ರಾಚೀನ ಚರಿತ್ರೆಯ ಯಾವ ಕಾಲದಲ್ಲೂ ಇದು ನಡೆದಿರಲಿಲ್ಲ. ಇಂದಿನ ಪ್ರಪಂಚದ ಮಹಾಶಕ್ತಿಗಳ ನಡುವೆ ಭಾರತ ತಾನೊಂದು ಮಹಾಶಕ್ತಿಯಾಗಬೇಕೆಂದು ನಿರ್ಧರಿಸಿದೆ. ಈ ಧ್ಯೇಯ ಸಾಧನೆಗಾಗಿ ಕೆಲವು ಪ್ರಭಾವಶಕ್ತಿಗಳು ಆಗಲೇ ಕಾರ್ಯಮುಖವಾಗಿವೆ. ಸಾಂಸ್ಕೃತಿಕ, ಧಾರ್ಮಿಕ ಮತ್ತು ರಾಜಕೀಯ – ಈ ಮೂರು ಶಕ್ತಿಗಳ ವಿಷಯ ಮಾತ್ರ ನಮಗೆ ಪ್ರಕೃತ.

ಇವುಗಳಲ್ಲಿ ಧಾರ್ಮಿಕ ಪ್ರಭಾವಗಳು ಪ್ರಾಯಶಃ ಅಷ್ಟು ಮುಖ್ಯವಲ್ಲ. ಅನೇಕ ಕಾರಣಗಳಿಂದ ಮನುಷ್ಯ ಜೀವನದಲ್ಲಿ ಧರ್ಮ, ಮತ, ಎರಡನೆಯ ಸ್ಥಾನಕ್ಕೆ ಹೋಗಿವೆ; ಆ ಕಾರಣಗಳೇನೆಂಬುದನ್ನು ಇಲ್ಲಿ ಹೇಳುವ ಅವಶ್ಯಕತೆಯಿಲ್ಲ. ಆದರೆ ಇಷ್ಟು ಹೇಳಬಹುದು; ಹಿಂದಿನ ಕಾಲದಂತೆ ನಮ್ಮ ಮತ ಧರ್ಮಗಳನ್ನು ಒಂದಕ್ಕೊಂದಕ್ಕೆ ಸಂಬಂಧವಿಲ್ಲದಂತೆ ಭಿನ್ನ ಭಿನ್ನ ಬೇರೆ ಬೇರೆಯವೆಂದು ಭಾವಿಸದೆ ಎಲ್ಲ ಜನರನ್ನೂ ಒಂದು ಸರ್ವಸಾಮಾನ್ಯ ಗುರಿಯಾಗಿ ಒಂದುಗೂಡಿಸಬೇಕೆಂಬುದೆ ಈಗ ನಾವು ಧರ್ಮದ ದೃಷ್ಟಿಯಲ್ಲಿ ಕಾಣುತ್ತಿರುವ ಪ್ರವೃತ್ತಿ. ಈಗ ನಮಗೆ ಬೇಕಾಗಿರುವುದು ಹೊಸ ಮತವಲ್ಲ. ಹಳೆಯ ನಂಬಿಕೆಗಳ ವಿಷಯದಲ್ಲಿ ಒಂದು

ಹೊಸ ದೃಷ್ಟಿ – ನಮ್ಮ ಸ್ವಂತ ಅಭಿಪ್ರಾಯಗಳಿಗೆ ಅವು ಎಷ್ಟೇ ಭಿನ್ನವಾಗಿರಲಿ, ಎಷ್ಟೇ ವಿರುದ್ಧವಾಗಿರಲಿ, ನೆರೆಯವರ ಅಭಿಪ್ರಾಯಗಳನ್ನು ಗೌರವಿಸಬಲ್ಲ ದರ್ಶನ ವೈಶಾಲ್ಯ. ಈ ಭಾವನೆ ಕರ್ನಾಟಕಕ್ಕೆ ಹೊಸದೇನೂ ಅಲ್ಲ; ಹಿಂದೆ ಭದ್ರಬಾಹು ಮುನಿಯ ಸಂಗಡ ಓಡಿಬಂದ ಜೈನ ನಿರಾಶ್ರಿತರಿಗೆ ಕರ್ನಾಟಕ ಆಶ್ರಯ ಕೊಟ್ಟಂದಿನಿಂದಲೂ ಧಾರ್ಮಿಕ ಸಹನೆಯಲ್ಲಿ ಕರ್ನಾಟಕ ಪ್ರಾಂತ ಎಲ್ಲ ಪ್ರಾಂತಗಳಲ್ಲೂ ಅತ್ಯಂತ ಉದಾರ ಭಾವವುಳ್ಳದ್ದೆನಿಸಿಕೊಂಡಿದೆ.

ಧಾರ್ಮಿಕ ಪ್ರಭಾವಗಳಿಗಿಂತ ಆಧುನಿಕ ಭಾರತದಲ್ಲಿ ನಾವು ಕಾಣುವ ಸಾಂಸ್ಕೃತಿಕ ಮತ್ತು ರಾಜಕೀಯ ಪ್ರವೃತ್ತಿಗಳು ಹೆಚ್ಚು ಮುಖ್ಯವಾದುವು. ಇಂಡಿಯದ ಎಲ್ಲ ಕಡೆಯೂ ನಮ್ಮ ಪ್ರಾಚೀನ ಸಂಸ್ಕೃತಿಯ ಸಾರವಿಚಾರಗಳನ್ನು ಆಧುನಿಕ ವೇಷದಲ್ಲಿ ಕಾಣಬಹುದಾಗಿದೆ. ಎಲ್ಲೆಲ್ಲೂ ನಮ್ಮ ಪ್ರಾಚೀನ ಸಂಸ್ಕೃತಿಯ ಹಾಗೂ ಆಧುನಿಕ ಪಾಶ್ಚಾತ್ಯ ಸಂಸ್ಕೃತಿಯ ಕ್ರಮೇಣ ಸಂಮಿಳನವನ್ನು ಕಾಣುತ್ತಿದ್ದೇವೆ. ಅತ್ಯಂತ ಅವಶ್ಯಕವಾದ ಈ ನವೀಕರಣವನ್ನು ಕರ್ನಾಟಕ ಆಗಲೇ ಅರಿತುಕೊಂಡು ಪ್ರಗತಿಪಥದಲ್ಲಿ ಮುಂದಾಗಿದೆ; ಕರ್ನಾಟಕದ ಆಧುನಿಕ ಪ್ರತಿನಿಧಿಯಾದ ಮೈಸೂರಿನಲ್ಲಿ ಸಂಸ್ಕೃತಿ ಮತ್ತು ಜ್ಞಾನ ಇವುಗಳ ಪುರೋಭಿವೃದ್ಧಿಗೆ ಸಂಬಂಧಪಟ್ಟ ವಿಚಾರಗಳಲ್ಲಿ ಕಾಣಬರುತ್ತಿರುವ ಪ್ರಗತಿಯೇ ಇದಕ್ಕೆ ದೃಷ್ಟಾಂತವಾಗಿದೆ.

ರಾಜಕೀಯ ದೃಷ್ಟಿಯಿಂದ ಭಾರತ ಬೇಗ ಬೇಗನೆ ಮುನ್ನಡೆಯುತ್ತ, ಏಕೀಕೃತವಾದ ಮತ್ತು ಶಕ್ತಿಯುಳ್ಳ ರಾಷ್ಟ್ರವಾಗುತ್ತಿದೆ. ಇಂಡಿಯದ ರಾಜಕೀಯ ಏಳಿಗೆಗೆ ಪ್ರತಿ ಹಂತವೂ ಸಹಾಯಕವಾಗತೊಡಗಿದೆ.

ಏಕೀಕೃತ ಕರ್ನಾಟಕ ಸ್ವತಂತ್ರ ಭಾರತದ ನಿಧಿಯಾಗಿರುವುದಲ್ಲದೆ ನಮ್ಮ ನಾಡಿನ ಸತ್ತ್ವ ಮಹತ್ತ್ವಗಳ ಬೆಳವಣಿಗೆಯನ್ನು ಕೈಸಿದ್ಧಿ ಮಾಡಿಕೊಡುವಂತಹುದಾಗಿರುತ್ತದೆ. ನಾವು ಇದುವರೆಗೆ ಪರಿಶೀಲಿಸಿರುವ ಕರ್ನಾಟಕದ ಇತಿಹಾಸ, ಕರ್ನಾಟಕ ಎಂದಿನಿಂದಲೂ ಸಂಸ್ಕೃತಿಯ ತೊಟ್ಟಿಲು, ಧರ್ಮಗಳ ನೆಲೆವೀಡು, ಸಾಮ್ರಾಜ್ಯಗಳ ತಾಯಿ – ಎಂಬುದನ್ನು ತೋರಿಸಿಕೊಟ್ಟಿದೆ. ಮುಂದೆ ನುಗ್ಗಿ, ಭಾರತದ ಗೌರವ ಶಕ್ತಿಗಳನ್ನು ಹೆಚ್ಚಿಸುವ ಮಟ್ಟಿನ ಸತ್ತ್ವ, ಬುದ್ಧಿ, ನೋಟ ಕರ್ನಾಟಕಕ್ಕೆ ಇನ್ನೂ ಇವೆ. ಆ ಉದ್ದೇಶ ಸಾಧನೆಯನ್ನು ಹಾರೈಸಿ ಅದಕ್ಕಾಗಿ ಕನ್ನಡಿಗರೆಲ್ಲ ದುಡಿಯಬೇಕಾಗಿದೆ. ನಾವೆಲ್ಲ ಒಂದಾಗಿ ಕೆಲಸಮಾಡಿದರೆ ಮಾತ್ರ ಏಕೀಕೃತ ಕರ್ನಾಟಕದ ಮಹತ್ತ್ವ, ಭಾರತದ ನಿರ್ಮಾಣಕ್ಕೆ ಸಹಾಯಕವಾಗುವುದೂ ಸಾಧ್ಯ.

ಆಧಾರ ಗ್ರಂಥಗಳು

೧. ಜೆ. ಎಫ್. ಫ್ಲೀಟ್ – ಕನ್ನಡ ಜಿಲ್ಲೆಗಳ ರಾಜವಂಶಗಳು (ಬೊಂಬಾಯಿ ಗೆಜೆಟೀರ್, ಸಂಪುಟ ೧, ಭಾಗ ೨)

೨. ಎಚ್. ಹಿರಾಸ್ – ವಿಜಯನಗರದ ಅರವೀಡು ರಾಜವಂಶ (೧೯೨೯), (ಮದರಾಸು)

೩. ಮೈಸೂರು ಪ್ರಾಚ್ಯ ಶಾಖೆಯಿಂದ ವರ್ಷವರ್ಷವೂ ಪ್ರಕಟವಾಗುತ್ತಿದ್ದ ಮೈಸೂರು ಪ್ರಾಚ್ಯ ವಿಷಯ ವರದಿಗಳು

೪. ಲೂಯಿ ರೈಸ್ – ಶಾಸನಗಳಿಂದ ತಿಳಿಯುವ ಮೈಸೂರು ಮತ್ತು ಕೊಡುಗು ಮತ್ತು ಎಪಿಗ್ರಾಫಿಯ ಕರ್ನಾಟಿಕ (೧೨ ಸಂಪುಟಗಳು)

೫. ಸತ್ಯನಾಥ – ಮಧುರೆಯ ನಾಯಕರು

೬. ಬಿ.ಎ. ಸಾಲೆತ್ತೊರೆ–ವಿಜಯನಗರ ಸಾಮ್ರಾಜ್ಯದ ಸಾಮಾಜಿಕ ಮತ್ತು ರಾಜಕೀಯ ಜೀವನ – (೨ ಸಂಪುಟಗಳು)

೭. ಬಿ.ಎ. ಸಾಲೆತ್ತೊರೆ– ಪ್ರಾಚೀನ ಕರ್ನಾಟಕ– ಸಂಪುಟ ೧ ತುಳುವರಾಜ್ಯ ಚರಿತ್ರೆ (೧೯೩೬)

೮. ದಕ್ಷಿಣ ಮಂಡಲದ ಶಾಸನ ವರದಿಗಳು

೯. ಡಾ॥ ವೆಂಕಟರಮಣಯ್ಯ– ವಿಜಯನಗರದ ಮೂರನೆಯ ರಾಜವಂಶ (ಮದರಾಸು)

೨ನೆಯ ಅಧ್ಯಾಯ: ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ

ಪ್ರಕರಣ ೧

ಸಾಮಾಜಿಕ ಪರಿಸ್ಥಿತಿ

೧. ಸಮಾಜದ ರಚನೆ ಮತ್ತು ಚಲನವಲನಗಳು

ಹುರಿಯಾದ ಹಗ್ಗಗಳಿಂದ ಬಿಗಿದು ಮಹಾ ಸಾಗರದಲ್ಲಿ ತೇಲಿಬಿಟ್ಟ ಒಂದು ದೊಡ್ಡ ತೆಪ್ಪಕ್ಕೆ ಭಾರತೀಯ ಸಮಾಜವನ್ನು ಹೋಲಿಸಬಹುದು. ಕಡಲ ಅಲೆಗಳ ಹುಯ್ಲಿಗೆ ಸಿಲುಕಿ ಅದು ತನ್ನ ಮೊದಲಿನ ನೆಲೆಯನ್ನು ಬಿಟ್ಟು ಬಲುದೂರ ಕದಲಿದರೂ ಅದರೊಳಗಿನ ಹಾಯಿಗಳು ತಮ್ಮ ತಮ್ಮ ಸ್ಥಾನಗಳಿಗೆ ಅಂಟಿಕೊಂಡಿರುವಂತೆ, ಅನಂತಕಾಲ ಪ್ರವಾಹದಲ್ಲಿ ಸಿಲುಕಿ ಪರಿವರ್ತಿತವಾಗಿದ್ದರೂ, ಪರಿವರ್ತನವಿಲ್ಲದಂತೆ, ಭಾರತೀಯ ಸಮಾಜ ನಿಂತುಕೊಂಡಿದೆ. ಗತಿಗಿಂತ ಸ್ಥಿತಿ, ಕ್ರಾಂತಿಗಿಂತ ಶಾಂತಿಯೇ ಇದರ ಸ್ವಭಾವ ಪ್ರವೃತ್ತಿ. ಅಂಗಗಳ ಚಲನವಲನಕ್ಕಾಗಲಿ, ಅಂತರಂಗದ ಅಲೆದಾಟಕ್ಕಾಗಲಿ ಇಲ್ಲಿ ಅಷ್ಟೊಂದು ಅವಕಾಶವಿಲ್ಲ.

ಕನ್ನಡ ಸಮಾಜ ಇದಕ್ಕೆ ಅಪವಾದವಾಗಿಲ್ಲ. ನೂತನ ಪುರಾತನದಲ್ಲಿಯೇ ಇದರ ಶಕ್ತಿ. ಸ್ವಾತಂತ್ರ್ಯಕ್ಕಿಂತ ನಿಯಂತ್ರಣದಲ್ಲಿಯೇ ಆಸಕ್ತಿ.

ಕನ್ನಡ ನಾಡಿನ ಮೂಲನಿವಾಸಿಗಳು ಪ್ರಪಂಚದಲ್ಲಿ ಪ್ರಾಚೀನವೆಂದು ಗಣ್ಯವಾದ ಒಂದೆರಡು ಮಾನವ ವಂಶಗಳಿಗೆ ಸೇರಿದವರು ಆಗಿದ್ದರು. ಪೂರ್ವ ದ್ರಾವಿಡ, ದ್ರಾವಿಡ ಮೊದಲಾದ ಹೆಸರುಗಳಿಂದ ಇವರನ್ನು ಗುರುತಿಸಲು ಪರಿಶೋಧಕರು ಪ್ರಯತ್ನಪಟ್ಟಿರುವರು.[೧] ಮುಂದೆ ಆರ್ಯ ಮೊದಲಾದ ಅನ್ಯ ಜನಾಂಗಗಳ ಸಂಸರ್ಗದಿಂದಲೂ ಆಯಾ ಭಿನ್ನ ಸಂಸ್ಕೃತಿಗಳ ಪ್ರಭಾವದಿಂದಲೂ ಮೂಲನಿವಾಸಿಗಳ ಜೀವನ ಕ್ರಮದಲ್ಲಿ ವಿಧವಿಧ ವ್ಯತ್ಯಾಸಗಳು ಉಂಟಾಗಿ ಅವರ ಸ್ವರೂಪ ಲಕ್ಷಣಗಳು ಬಹುವಾಗಿ ಮಾರ್ಪಟ್ಟುವು. ಆದುದರಿಂದ ಕರ್ನಾಟಕದ ಮೂಲ ಜನಾಂಗದ ಸಾಮಾಜಿಕ ಸನ್ನಿವೇಶವನ್ನು ಕುರಿತು ವಿವೇಚಿಸುವುದು ದುಸ್ತರವಾಗಿದೆ. ಆದರೂ ಈ ಜನಾಂಗದ ಕೆಲವು ಗುಂಪುಗಳು ಕಾಲನ ಅಸಂಖ್ಯ ಆಘಾತಗಳನ್ನು ಇದಿರಿಸುತ್ತ ಇಂದಿನವರೆಗೂ ಬಾಳಿ ಬಂದಿವೆ. ನೀಲಗಿರಿಯ ಬಡಗರು, ಕೋತರು, ತೋಡರು, ತುಳುನಾಡಿನ ಬಂಟರು, ನಾಡವರು, ಬಲ್ಲವರು ಮತ್ತು ಸಾಮಾನ್ಯವಾಗಿ ಎಲ್ಲೆಡೆಯೂ

---

೧. ಈ ದ್ರಾವಿಡರು ಯಾರು? ಪೂರ್ವ ದ್ರಾವಿಡರು, ನಿಗ್ರಿಟೊ ಇಲ್ಲವೆ ಕೊಲೇರಿಯನ್ ವರ್ಗಕ್ಕೆ ಸೇರಿದವರೊ? ಮುಂತಾದ ವಿಚಾರಗಳನ್ನು ಕುರಿತು ಪಂಡಿತರಲ್ಲಿ ಏಕಾಭಿಪ್ರಾಯವಿಲ್ಲ. ಆದುದರಿಂದ ಈ ಪ್ರಮೇಯವನ್ನು ಸದ್ಯಕ್ಕೆ ಅನಿರ್ಣೀತವಾಗಿಯೇ ಇಟ್ಟುಕೊಳ್ಳಬೇಕಾಗಿದೆ.

ನೆಲೆಗೊಂಡಿರುವ ಬೇಡರು, ಕುರುಬರು, ಹೊಲೆಯರು ಮುಂತಾದವರು ಕನ್ನಡಿಗರ ಆದಿ ಪ್ರತೀಕಗಳೆಂದು ಹೇಳಬಹುದು.

ಕ್ರಿಸ್ತಪೂರ್ವ ಹಲವು ಶತಮಾನಗಳ ಆಚೆ ಆರ್ಯರು ಕನ್ನಡ ನಾಡಿನಲ್ಲಿ ಕಾಲೂರಿದರು. ಅಂದಿನಿಂದ ಆರ್ಯರಿಗೂ ಇಲ್ಲಿಯ ಜನಗಳಿಗೂ ಬಗೆಬಗೆಯ ಬಳಕೆಗಳು ಹುಟ್ಟಿಬೆಳೆದುವು. ಆರ್ಯರು ಸಾಹಸಿಗಳೂ ವ್ಯವಹಾರಚತುರರೂ ಆಗಿದ್ದರು. ಅವರ ಸಮಾಜ ಸಂಘಟನೆ ಮತ್ತು ಸಾಂಘಿಕ ಬಲ ಸುಸಜ್ಜಿತವಾದುವು. ಅವರ ನಾಗರಿಕತೆ ಉತ್ಕರ್ಷವಾದುದು. ಆದುದರಿಂದ ಆರ್ಯರ ಆದರ್ಶ ಧ್ಯೇಯಗಳು, ರೀತಿ ನೀತಿಗಳು, ಸಂಸ್ಕಾರ ಸಂಪ್ರದಾಯಗಳು ಕನ್ನಡಿಗರಲ್ಲಿ ಪ್ರಸ್ಥಾಪಿತವಾಗಿ ಕರ್ನಾಟಕದ ಮೇಲೆ ಸ್ಥಿರವಾದ ಮುದ್ರೆಯನೊತ್ತಿದುವು. ಕನ್ನಡ ಸಮಾಜ ಆರ್ಯಾಭಿಮುಖಿಯಾಯಿತು.

ಚಾತುರ್ವರ್ಣ್ಯ ಆರ್ಯ ಸಮಾಜದ ಅಸ್ತಿವಾರವಾಗಿದ್ದಿತು. ಈ ಚಾತುರ್ವರ್ಣ್ಯ ಕಾಲಕ್ರಮದಲ್ಲಿ ಹಲವು ವಿಕಾರಗಳಿಗೆ ಒಳಗಾಗುತ್ತ ನಾನಾ ಜಾತಿಗಳ ಸ್ವರೂಪದಲ್ಲಿ ಮಾರ್ಪಟ್ಟಿತು. ವಂಶ ವಿಶುದ್ಧಿ ಕುಲಪ್ರಶಸ್ತಿ ಮತ್ತು ಆಚಾರ ಭಿನ್ನತೆ ಇವುಗಳನ್ನು ಮೂಲಸೂತ್ರವಾಗಿ ಇಟ್ಟುಕೊಂಡು ಹೊರಟ ಈ ಜಾತಿಯ ಪ್ರವೃತ್ತಿ ಮಿಕ್ಕೆಡೆಯಂತೆ ಕರ್ನಾಟಕದಲ್ಲಿಯೂ ಬಗೆಬಗೆಯಾಗಿ ವಿಸ್ತಾರಗೊಂಡಿತು. ಉದ್ಯಮಾಭಿವೃದ್ಧಿ, ವ್ಯವಹಾರ ಸೌಕರ್ಯ, ಮತ್ತು ಪರಂಪರಾ ಪರಿಪಾಲನೆಯ ಅಗತ್ಯ – ಇವು ಹೆಚ್ಚಿದಂತೆ, ಜಾತಿಯ ಭಾವನೆಗೆ ಹೆಚ್ಚು ಹೆಚ್ಚು ಪುಟ ದೊರೆತು ಅದು ಚಿಕ್ಕ ಚಿಕ್ಕ ಸಂಘಗಳ ರೂಪದಿಂದ ಸಂಕೋಚಗೊಂಡಿತು. ಮೂಲವರ್ಣಗಳಾಗಲಿ, ಜಾತಿಗಳಾಗಲಿ ಕೆಲವೇ ಆಗಿದ್ದರೂ ದೇಶಕಾಲಗಳ ಪರಿವರ್ತನೆಯಂತೆ ಭಿನ್ನ ಆಚಾರ – ವಿಚಾರ, ರೂಢಿ – ಸಂಪ್ರದಾಯ ಎಂಬ ವೈಲಕ್ಷಣ್ಯಗಳ ಮೂಲಕ ಅನೇಕ ಜಾತಿಗಳೂ ಕುಲಗಳೂ ನಿರ್ಮಾಣವಾದುವು.

ಬ್ರಾಹ್ಮಣರಲ್ಲಿಯೆ ಪಂಚದ್ರಾವಿಡ, ಪಂಚಗೌಡ ಎಂಬ ವಿಭಾಗಗಳು ದೇಶ ಭೇದದಿಂದ ಹುಟ್ಟಿದವುಗಳು ಆಗಿದೆ.[೧] ಇದಲ್ಲದೆ ದೇಶಸ್ಥ, ಕೊಂಕಣಸ್ಥ, ಕರ್ಹಾಡ, ತುಳು, ಸಾರಸ್ವತ, ಹವಿಕ ಮುಂತಾದ ಶಾಖೆಗಳು ಮತ್ತು ದಕ್ಷಿಣ ಕರ್ನಾಟಕದಲ್ಲಿ ಹೆಚ್ಚಾಗಿ ನೆಲೆಗೊಂಡಿರುವ ಹೊಯ್ಸಳ ಕರ್ನಾಟಕ, ಬಡಗನಾಡ ಕರ್ನಾಟಕ, ಕಮ್ಮೆ ಮುಂತಾದ ಒಳಪಂಗಡಗಳು ಪ್ರದೇಶಭೇದದಿಂದ ಉಂಟಾದ ಕುಲಭೇದಗಳು ಆಗಿರುವುವು. ಇದೇ ಮೇರೆಗೆ ವೇದಾಧ್ಯಯನ ಪರಂಪರೆ ಮತ್ತು ಕ್ರಮ ಭಿನ್ನತೆಯ ಮೂಲಕ ಕಾಣ, ಮಾಧ್ಯಂದಿನ ಮೊದಲಾದ ವೈದಿಕ ಪಂಗಡಗಳು, ಹಾಗೂ ಮತಾಂತರ ಮೂಲಕ ಶಾಂಕರ, ರಾಮಾನುಜ, ಮಾಧ್ವ ಮೊದಲಾದ ಸಂಪ್ರದಾಯಗಳು ಹುಟ್ಟಿ ಬೆಳೆದವುಗಳು ಆಗಿವೆ.

---

೧. ಈ ವಿಭಾಗಗಳು ಸುಮಾರು ೧೧ನೆಯ ಶತಮಾನದಲ್ಲಿ ಹುಟ್ಟಿರಬೇಕು (R.K. : p. 335)

ಒಕ್ಕಲಿಗರು, ಕುರುಬರು, ಗೊಲ್ಲರು, ಬೆಸ್ತರು ಮುಂತಾದ ಜಾತಿಗಳು ವೃತ್ತಿ ಭೇದಗಳ ಮೂಲಕ ಹುಟ್ಟಿದವುಗಳಾಗಿವೆ. ಇವರಲ್ಲಿ ಮತ್ತೆ ದೇಶಭೇದದಿಂದ ಗಂಗಡಿಕಾರ, ಒಕ್ಕಲಿಗ, ನೊಣಬ ಮುಂತಾದ ಪ್ರಭೇದಗಳುಂಟಾದುವು. ಅಕ್ಕಸಾಲಿಗ, ಬಡಿಗ, ಕಮ್ಮಾರ, ನೇಕಾರ, ಕುಂಬಾರ, ಅಗಸ, ಸಮಗಾರ, ಕೆಲಸಿಗ, ಉಪ್ಪಾರ, ತಳವಾರ ಮೊದಲಾದ ಜಾತಿಗಳ ನಿರ್ಮಿತಿಗೆ ಉದ್ಯೋಗ ಹೋರೆಗಳ ಭಿನ್ನತೆಯೇ ಮೂಲಕಾರಣವೆಂಬುದು ಸ್ಪಷ್ಟವಾಗಿದೆ.

ಜಾತಿ ಪಂಗಡಗಳ ವಿಭಜನೆಯಲ್ಲಿ ಮತಗಳು ಮಾಡಿದ ಕಾರ್ಯ ಅಲ್ಪವಾಗಿಲ್ಲ. ಬೌದ್ಧ, ಜೈನ, ವೀರಶೈವ, ರಾಮಾನುಜ ಮೊದಲಾದ ಮತಗಳು ಆದಿಯಲ್ಲಿ ತತ್ವಬೋಧೆಯ ಸ್ವರೂಪದವು ಆಗಿದ್ದವು. ಈ ಮತಗಳು ಮೈವೆತ್ತು ಕೆಲಕಾಲವಾಗುವವರೆಗೆ ಅವು ತಮ್ಮ ಮೂಲೋದ್ದೇಶವನ್ನು ಕಾಯ್ದುಕೊಂಡವು ಎಂಬುದು ಚರಿತ್ರೆಯಿಂದ ಕಾಣಬಹುದಾಗಿದೆ. ನಾನಾ ಜಾತಿವರ್ಗಗಳಿಗೆ ಸೇರಿದ ಜನರು ಮೊದಮೊದಲು ಬೌದ್ಧ, ಜೈನಾದಿ ಮತಗಳನ್ನು ಅಂಗೀಕರಿಸಿದರೂ ತಮ್ಮ ಮುಂಚಿನ ಜಾತಿಯನ್ನೂ ಸಾಮಾಜಿಕ ಸ್ಥಾನಮಾನಗಳನ್ನೂ ಕಳೆದುಕೊಳ್ಳುತ್ತಿರಲಿಲ್ಲ. ಬೇರೆ ಬೇರೆ ಮತೀಯರಲ್ಲಿ ಅನ್ನ ವಿವಾಹಾದಿ ವ್ಯವಹಾರಗಳು ಧಾರಾಳವಾಗಿ ನಡೆಯುತ್ತಿದ್ದುವು. ಮುಂದೆ ಈ ಮತಗಳ ತಾತ್ವಿಕ ಸ್ವರೂಪ ನಷ್ಟವಾಗಿ ತಾಂತ್ರಿಕ ಸಂಪ್ರದಾಯದ ಸ್ವರೂಪ ಪ್ರಾಪ್ತವಾಯಿತು. ಮತಗಳೆಲ್ಲ ಸ್ವತಂತ್ರ ಜಾತಿಪಂಗಡಗಳಾಗಿ ಪರಿಣಮಿಸಿ ಜಾತೀಯ ವೈಷಮ್ಯವನ್ನೂ ವಿರೋಧವನ್ನೂ ಹೆಚ್ಚಿಸಲಿಕ್ಕೆ ಸಹಾಯವಾದುವು. ಅವುಗಳಲ್ಲಿ ಮೂಲದಲ್ಲಿಯ ಬ್ರಾಹ್ಮಣ ಕ್ಷತ್ರಿಯಾದಿ ಭೇದಗಳೂ ಅಯ್ಯ, ಬಣಜಿಗ, ಪಂಚಮಸಾಲಿ ಮುಂತಾದ ಪಂಗಡಗಳೂ ಬೇರೂರಿ ಬೆಳೆದುಬಂದವು.

ಪ್ರಾಚೀನ ಕಾಲದಲ್ಲಿ ನಡೆಯುತ್ತಿದ್ದ ವ್ಯಾಪಾರದ ಮೂಲಕ ಇರಾಣಿಗಳೂ, ಅರಬರೂ, ಪಶ್ಚಿಮ ಕರಾವಳಿಗೆ ಬಂದು ಅಲ್ಲಲ್ಲಿ ನೆಲೆಸಿದರು. ಈಚೆಯ ಕಾಲದಲ್ಲಿ ಧರ್ಮ, ರಾಜಕಾರಣ, ವ್ಯಾಪಾರ ಮೊದಲಾದ ಉದ್ದೇಶಗಳಿಂದ ಮುಸಲ್ಮಾನರೂ ಕ್ರೈಸ್ತರೂ ಇಲ್ಲಿಗೆ ಬಂದರು. ಕೆಲಜನರು ಈ ಧರ್ಮ ಮತಗಳನ್ನು ಅನುಸರಿಸುವವರಾದರು. ಗುಜರಾತ, ರಾಜಪುತಾನ ಮೊದಲಾದ ಕಡೆಯಿಂದ ಗುಜ್ಜರೂ ರಾಜಪೂತರೂ ಲಾಡರೂ ಇಲ್ಲಿಗೆ ಬಂದಿರುವರು. ನೆರೆನಾಡಿನಿಂದ ನಡೆದುಬಂದ ಅನೇಕ ಮರಾಠರಿಗೂ ಕರ್ನಾಟಕ ಆಶ್ರಯವಿತ್ತಿದೆ. ಇವರೆಲ್ಲರೂ ಕರ್ನಾಟಕದ ವಿಶಾಲ ಜೀವನದಲ್ಲಿ ಸೇರ್ಪಡೆಯಾಗಿ ಸಾಮಾಜಿಕ ಸ್ಥಾನಮಾನಗಳನ್ನು ಪಡೆದಿರುವರು.

ಈವರೆಗೆ ನಿರೂಪಿಸಿದ ಪರಿಯಲ್ಲಿ ನಿರ್ಮಾಣವಾದ ಜಾತಿ ಪಂಗಡಗಳಲ್ಲಿ ಅನ್ಯೋನ್ಯವಾಗಿ ಕೀಳು ಮೇಲೆಂಬ ಬಲವಾದ ಭಾವನೆಯಿರುವುದಲ್ಲದೆ, ಮೊತ್ತವಾಗಿ ಈ ಜಾತಿಗಳನ್ನು ಎರಡು ಪ್ರಮುಖ ವಿಭಾಗಗಳಲ್ಲಿ ವಿಂಗಡಿಸಿ ಅವುಗಳ ಉಚ್ಚ

ನೀಚತೆಯನ್ನು ಸೂಚಿಸುವ ಬಲಗೈ, ಎಡಗೈ ಎಂಬ ಭೇದಗಳು ಬಹುಕಾಲದಿಂದ ನಡೆದು ಬಂದಿದೆ. ಈ ಭೇದಗಳು ಹೇಗೆ ಹುಟ್ಟಿದವು ಮತ್ತೂ ಈ ವಿಭಾಗಕ್ರಮದ ಗುಟ್ಟೇನು ಎಂಬುದು ತಿಳಿದಿಲ್ಲ.[೧] ಈ ವಿಭಾಗಗಳು ದಕ್ಷಿಣ ಭಾರತದಲ್ಲಿ ಸಾಮಾನ್ಯವಾಗಿಯೂ ತಮಿಳುನಾಡಿನಲ್ಲಿ ವಿಶೇಷವಾಗಿಯೂ ಪ್ರಚುರವಾಗಿವೆ. ಸಾಂಪ್ರದಾಯಿಕವಾಗಿ ಈ ಬಲಗೈ ಎಡಗೈ ಪಂಗಡಗಳಿಗೆ ಬೇರೆ ಬೇರೆ ಪನಗಳನ್ನು ಎಂದರೆ ಹೋರೆಗಳನ್ನು ಮಾಡುವ ಹದಿನೆಂಟು ಜಾತಿಗಳು ಸೇರಿವೆ. ಆದರೆ ವ್ಯಾವಹಾರಿಕವಾಗಿ ಈ ಜಾತಿಗಳ ಸಂಖ್ಯೆ ಇದಕ್ಕೂ ಹೆಚ್ಚಾಗಿದೆ. ಈ ಎರಡು ಪಂಗಡಗಳಿಗೆ ಸೇರಿದ ಜಾತಿಗಳು ಸಾಮಾನ್ಯವಾಗಿ ಹೀಗೆ ಇವೆ. ಬಲಗೈ: ಕೋಮಟಿ, ಬಣಜಿಗ, ಒಕ್ಕಲಿಗ, ಗಾಣಿಗ, ಕುರುಬ, ಕುಂಬಾರ, ಅಗಸ, ಬೆಸ್ತ, ಪದ್ಮಸಾಲಿ, ನಾಯಿಂದ, ಉಪ್ಪಾರ, ಹೊಲೆಯ, ರಂಗಾರಿ, ಲಾಡ, ಗುಜರಾತಿ, ಕಾಮಾಟಿ ಇತ್ಯಾದಿ. ಎಡಗೈ: ಬಡಿಗ, ಕಂಚುಗಾರ, ಕಮ್ಮಾರ, ಕಲ್ಲುಕುಟಿಗ, ಅಕ್ಕಸಾಲಿಗ, ದೇವಾಂಗ, ಗೊಲ್ಲ, ತಿಗಳ, ಮಾದಿಗ ಇತ್ಯಾದಿ.

ಈ ವಿಧವಾದ ನಾನಾ ಜನ ಜಾತಿಗಳ ಸಂಮಿಲನದಿಂದ ಕನ್ನಡ ಮಹಾಸಮಾಜ ವಿಸ್ತಾರಗೊಂಡುದಾಯಿತು. ಈ ಮಹಾಸಮಾಜದ ಒಡಲಲ್ಲಿ ನಾಡು ನಾಡಿಗೂ ಊರೂರಿಗೂ ಬೇರೆ ಬೇರೆ ಸಮಾಜಗಳು, ಒಂದೊಂದು ಸಮಾಜದಲ್ಲಿ ಹಲವಾರು ಜಾತಿಗಳು, ಜಾತಿ ಜಾತಿಗೆ ಹಲವಾರು ಪಂಗಡಗಳು, ಪಂಗಡಕ್ಕೆ ಕುಲಗಳು, ಕುಲಕ್ಕೆ ಮನೆತನಗಳು ಸೇರಿಕೊಂಡಿದ್ದುವು. ಈ ಗುಂಪುಗಳ ಸಾಂಘಿಕ ಜೀವನಕ್ಕೆ ಕೌಟುಂಬಿಕ ಮತ್ತು ಸಾಮಾಜಿಕ ನಿಯಮಗಳು ತಳಹದಿಯಾಗಿದ್ದುವು. ಈ ನಿಯಮಗಳ ಪರಿಪಾಲನೆಗೆ ಗುರುಭಕ್ತಿ, ನೀತಿನಿಷ್ಠೆ, ಧರ್ಮಶ್ರದ್ಧೆ ಇವುಗಳು ಆಂತರಿಕ ಪ್ರೇರಣೆಯನ್ನು ನೀಡುವಂತಹವಾಗಿದ್ದುವು. ಮನೆಯ ಯಜಮಾನರು, ಉಪಾಧ್ಯಾಯರು, ಪುರೋಹಿತರು, ಗುರುಗಳು, ಧರ್ಮಪೀಠಗಳು, ಅರಸರು ಇವರುಗಳಿಂದ ಸಮಾಜದ ನಿಯಮನ ಮತ್ತು ಶಾಸನಕಾರ್ಯ ನಡೆಯುತ್ತಿದ್ದಿತು. ಬಹುಜನ ಸಮಾಜ ವರ್ಣಾಶ್ರಮ ಸಂಪ್ರದಾಯಗಳನ್ನು ಅನುಸರಿಸುವಂಥದಾಗಿದ್ದಿತು. ಬ್ರಾಹ್ಮಣಾದಿ ಉಚ್ಚ ವರ್ಗದವರಿಗೆ ಶೃತಿ, ಸ್ಮೃತಿ. ಆಗಮ ಪುರಾಣಾದಿಗಳಲ್ಲಿ ಉಕ್ತವಾದ ಆಚಾರ ಧರ್ಮಗಳು, ಮಿಕ್ಕ ವರ್ಗದವರಿಗೆ ದೇಶಾಚಾರ, ಕುಲಾಚಾರ, ಪೂರ್ವಪರಂಪರೆ, ರೂಢಿ ಇವುಗಳು ಜೀವನಕ್ರಮವನ್ನು ನಿರ್ದಿಷ್ಟಪಡಿಸುವಂತಹವಾಗಿದ್ದವು.

ಮೇಲೆ ಸೂಚಿಸಿದಂತೆ ಉಚ್ಚ ನೀಚತೆಯ ಅಸ್ತಿವಾರದ ಮೇಲೆ ಊರಿ ನಿಂತ ಜಾತಿಗಳಲ್ಲಿ ಮತಭಿನ್ನತೆ, ವಂಶಪಾವಿತ್ರ್ಯ, ಆತ್ಮಶುದ್ಧಿತ್ವ ಮುಂತಾದ ತಾರತಮ್ಯ ಭಾವನೆಗಳು ವಿಕಾಸಗೊಂಡು ಆಹಾರ ವಿಹಾರಾದಿ ವ್ಯವಹಾರಗಳಲ್ಲಿ ಅನೇಕ ನಿರ್ಬಂಧಗಳು ಉಂಟಾದವು. ಒಂದೊಂದು ಮುಖ್ಯ ಜಾತಿಯಲ್ಲಿ ಹಲವಾರು ಉಪಜಾತಿಗಳೂ ಪಂಗಡಗಳೂ ನಿರ್ಮಾಣವಾಗಿ ಸಾಮಾಜಿಕ ಬಳಕೆಗಳು ಹೆಚ್ಚು

೧.ಸುಮಾರು ೫ನೆಯ ಶತಮಾನದಲ್ಲಿ ಈ ಭೇದಗಳು ತಲೆಯೆತ್ತಿದುವು ಎಂಬದು ಕೆಲವರ ಮತ. (SPL: II p.68)

ಹೆಚ್ಚು ನಿಯಂತ್ರಿತವಾದುವು. ಒಂದೊಂದು ಪಂಗಡದ ಒಳಬಳಕೆಯ ಬಗೆಗೂ ಬಿಗುವಿನ ಕಟ್ಟುನಿಟ್ಟುಗಳು ಏರ್ಪಟ್ಟವು. ಅನ್ನ ವ್ಯವಹಾರಕ್ಕಿಂತಲೂ ವಿವಾಹದ ನಿರ್ಬಂಧಗಳು ಹೆಚ್ಚು ಕಟ್ಟಿನವಾದುವು. ಈ ನಿಯಮ ನಿರ್ಬಂಧಗಳ ಜೊತೆಗೆ ಹೊಲೆಯ, ಮಾದಿಗ ಮುಂತಾದ ಹೀನ ಜಾತಿಗಳ ಅಸ್ಪೃಶ್ಯ ಭಾವನೆಯೂ ಪ್ರಬಲಿಸಿತು.

ಬ್ರಾಹ್ಮಣಾದಿ ಜಾತಿಗಳ ಮೂಲಗುಣ, ಕರ್ಮ, ಸ್ವಭಾವದಲ್ಲಿ ಅನೇಕ ಭೇದಗಳು ಬೆಳೆದಂತೆ ಅವರವರ ಉದ್ಯೋಗ ವೃತ್ತಿಗಳಲ್ಲಿಯೂ ಬಗೆ ಬಗೆಯ ವ್ಯತ್ಯಾಸಗಳು ಉಂಟಾದುವು. ಬ್ರಾಹ್ಮಣರು ತಮ್ಮ ನೈಜ ವೃತ್ತಿಯಾದ ಅಧ್ಯಯನ, ಅಧ್ಯಾಪನವಲ್ಲದೆ ಮಂತ್ರಿ, ಸೇನಾಪತಿ ಮೊದಲಾದ ಹಲವು ವಿಧದ ಪ್ರಭುಸೇವೆಯಲ್ಲಿಯೂ ವ್ಯಾಪಾರ, ಒಕ್ಕಲತನ ಮೊದಲಾದ ಹೋರೆಗಳಲ್ಲಿಯೂ ತೊಡಗಿಕೊಂಡರು. ಜಾತಿಯನ್ನು ಎಣಿಸದೆ ಕೃತಿಯಿಂದ ಮುಂದುವರಿದ ಅರಸರು, ನಾಯಕರು ಮೊದಲಾದವರೇ ಕ್ಷಾತ್ರವೃತ್ತಿಯನ್ನು ಅನುಸರಿಸುವವರಾದರು. ವೀರವೃತ್ತಿಯ ಬೇಡರು, ಕುರುಬರು, ಕಬ್ಬಲಿಗರು, ಬಂಟರು, ಹೊಲೆಯರು ಬಹುಸಂಖ್ಯೆಯಿಂದ ದಂಡಿನಲ್ಲಿ ಸೇರಿ ಕರ್ನಾಟಕದ ಶೌರ್ಯ ಪರಂಪರೆಯನ್ನು ಪುರಸ್ಕರಿಸಿದರು. ಕೋಮಟಿ, ಪಾಂಚಾಲ, ದೇವಾಂಗ, ಬಣಜಿಗ ಮೊದಲಾದ ಜಾತಿಯವರು ಕರ್ನಾಟಕದ ವಾಣಿಜ್ಯವನ್ನು ವಿಸ್ತಾರಗೊಳಿಸಿದರು. ಅಗಸ, ನಾವಿಗ, ಮಾದಿಗ ಮೊದಲಾದುವು ಊಳಿಗದ ಜಾತಿಗಳಾಗಿವೆ.

ಕನ್ನಡಿಗರ ಕುಟುಂಬ ಪದ್ಧತಿ ಸಾಮಾನ್ಯವಾಗಿ ಪಿತೃಪ್ರಧಾನವಾದುದು. ಹಿರಿಯ ಮಗನೇ ಮನೆಯ ಯಜಮಾನನಾಗಿ ಗಂಡು ಸಂತತಿಯಿಂದಲೆ ಕುಲಪರಂಪರೆ ಮುಂದುವರಿಯುವುದು. ಇದಕ್ಕೆ ಪ್ರತಿಯಾಗಿ ಕೆಲವು ಕಡೆ ಮಾತೃಪ್ರಧಾನ ಪದ್ಧತಿ ಬಳಕೆಯಲ್ಲಿದೆ. ತುಳುನಾಡಿನ ಬಂಟ ಮೊದಲಾದ ಪಂಗಡಗಳಲ್ಲಿ ಅಳಿಯ ಸಂತಾನದ ಕಟ್ಟು ಪ್ರಚುರವಾಗಿದ್ದು ಹೆಣ್ಣು ಸಂತತಿಯಿಂದಲೆ ಕುಲಪರಂಪರೆ ಮುಂದೆ ಸಾಗುತ್ತಿದೆ.

ಕನ್ನಡ ನಾಡಿನ ಮೂಲ ನಿವಾಸಿಗಳ ಕುಟುಂಬ ರಚನೆ ನಾರೀಪ್ರಧಾನವಾಗಿದ್ದಿತು ಎಂದು ತೋರುವುದು. ಈ ಪದ್ಧತಿಯ ಕೆಲವು ಅವಶೇಷಗಳು ಇಂದಿನವರೆಗೆ ನಡೆದು ಬಂದುದನ್ನು ಕಾಣಬಹುದು. ಕುರುಬ, ಬೇಡ, ವಡ್ಡ, ಡೊಂಬ, ಹೊಲೆಯ, ಮಾದಿಗ ಮೊದಲಾದ ಜಾತಿಗಳಲ್ಲಿ ಗಂಡು ಸಂತತಿ ಇಲ್ಲದ ಪಕ್ಷಕ್ಕೆ ಮಗಳೇ ಮನೆಗೆ ಯಜಮಾನಿಯಾಗುವಳು. ಇಂತಹ ಸಂದರ್ಭದಲ್ಲಿ ಇವಳನ್ನು ಮದುವೆ ಮಾಡದೆ 'ಬಸವಿ' ಬಿಡುವರು. ಬಳಿಕ ಈಕೆಯಿಂದ ವಂಶವು ಮುಂದುವರಿಯುವುದು. ಮೇಲಿನವಲ್ಲದೆ ಗಂಗಡಿಕಾರ, ಒಕ್ಕಲಿಗ, ಗೊಲ್ಲ ಮೊದಲಾದ ಜಾತಿಗಳಲ್ಲಿ ಮನೆಯಳಿಯತನದ ಪದ್ಧತಿ ರೂಢವಿದೆ. ಮಗಳಿಗೆ ಗಂಡನಾಗಿ ಮಾವನ ಮನೆಯಲ್ಲಿ ಇದ್ದುಕೊಂಡ ಇಂತಹ ಅಳಿಯನು ಮಾವನ ಗಂಡುಮಕ್ಕಳಿಗೆ ಸಲ್ಲುವ ಆಸ್ತಿಯಲ್ಲಿ ತಾನೂ ಸಮಾನ ಬಾಧ್ಯತೆಯನ್ನು ಪಡೆಯುತ್ತಾನೆ. ಅಗಸ, ಕುರುಬ, ಕುಂಬಾರ ಮೊದಲಾದ ಜಾತಿಗಳಲ್ಲಿ ಸೋದರಮಾವನಿಗೆ ಹುಡುಗಿಯ ಮದುವೆಯ

ವ್ಯವಹಾರದಲ್ಲಿ ಬಹಳ ಪ್ರಾಧಾನ್ಯವಿದೆ. ಅಣ್ಣ ಇಲ್ಲವೆ ತಮ್ಮನಾದವನು ಅಕ್ಕನ ಮಗಳನ್ನು ತನ್ನ ಮಗನಿಗಾಗಲಿ, ತನಗಾಗಲಿ ಅಧಿಕಾರದಿಂದ ಕೇಳುವ ರೂಢಿ ಕರ್ನಾಟಕದಲ್ಲಿ ಸಾರ್ವತ್ರಿಕವಾಗಿದೆ. ಇವೆಲ್ಲ ಮಾತೃಮುಖ ಇಲ್ಲವೆ ನಾರೀಪ್ರಧಾನ ಕುಟುಂಬ ರಚನೆಯ ಕುರುಹುಗಳಾಗಿವೆ.

೨. ಸಾಮಾಜಿಕ ಪರಿವರ್ತನಗಳು

ಸಚೇತನ ಜನಗಳಿಂದ ಸಂಘಟಿತವಾದ ಸಮಾಜದಲ್ಲಿ ಚಲನವಲನಗಳಂತೆ ಪರಿವರ್ತನಗಳಾದರೂ ತಲೆದೋರುವುದು ಸಹಜಧರ್ಮ. ಅಲ್ಪವೃತ್ತಿಯಿಂದ ಜೀವಿಸುವ ಸಮಾಜದ ಪ್ರಥಮಾವಸ್ಥೆಯಲ್ಲಿ ಅದರ ಆಸೆ ಆಕಾಂಕ್ಷೆಗಳು ಪರಿಮಿತವಾಗಿದ್ದುವು. ಕಾಲಗತಿಯಿಂದ ನಾಗರಿಕತೆ ಸಂಸ್ಕಾರಗಳು ಹೆಚ್ಚಿದಂತೆ ಜೀವನ ಕ್ಷೇತ್ರ ವಿಸ್ತಾರವಾಗಿ ಸಮಾಜದ ಗೊತ್ತುಗುರಿಗಳು ಮಾರ್ಪಟ್ಟುವು. ರಾಜಕೀಯ ಆಂದೋಲನ, ಆರ್ಥಿಕ ಸ್ಪರ್ಧೆ, ಧರ್ಮ ಮತಗಳ ಆಕರ್ಷಣೆ ಮುಂತಾದ ಸನ್ನಿವೇಶಗಳಿಂದ ಜನಜೀವನ ಸಂಕುಲವಾಗಿ ಅದರಲ್ಲಿ ಬಗೆಬಗೆಯ ವೈಲಕ್ಷಣಗಳು ಕಾಣಿಸಿಕೊಂಡುವು. ಈ ಮೇರೆಗೆ ಸಮಾಜದ ಸ್ವರೂಪದಲ್ಲಿ ಮೆಲ್ಲಮೆಲ್ಲನೆ ವ್ಯತ್ಯಾಸಗಳು ಅಳವಡುತ್ತ ಕಾಲಾಂತರದಲ್ಲಿ ನೂತನವಾದ ಅನೇಕ ಸಂವಿಧಾನಗಳು ಪ್ರಕಟವಾದುವು.

ಹೀಗೆ ಸ್ಥಿತ್ಯಂತರಗಳಿಗೆ ಇಂಬುಕೊಡುತ್ತ ಪರಿವರ್ತನಶೀಲವಾದ ಸಮಾಜದ ಅಪರಿವರ್ತನೀಯವಾದ ಒಂದು ಸನ್ನಿವೇಶವೂ, ಜನಾಂಗದ ಅದಮ್ಯವಾದ ಒಂದು ಮನಃಪ್ರವೃತ್ತಿಯೂ ಗಮನಾರ್ಹವಾಗಿವೆ. ಜಾತಿ ಪಂಗಡಗಳು ಆದಿಯಲ್ಲಿ ಯಾವ ಜಾತಿಯವೇ ಆಗಿರಲಿ, ರಾಜಕೀಯ ಆರ್ಥಿಕ ಮೊದಲಾದ ಕಾರಣಗಳ ಮೂಲಕ ಆಯಾ ಜಾತಿ ಪಂಗಡಗಳ ಮೊದಲಿನ ಸ್ವರೂಪ ಲಕ್ಷಣಗಳು ಎಷ್ಟು ವ್ಯತ್ಯಾಸವನ್ನೇ ಹೊಂದಲಿ, ಅದರಿಂದ ಗೋಚರಿಸುವ ಅಂತಿಮ ಪರಿಣಾಮ ಆ ಜಾತಿ ಪಂಗಡಗಳ ವಿಕಾಸ ವಿಸ್ತಾರವಾಯಿತಲ್ಲದೆ ಸಂಕೋಚ ಸಂಕ್ಷೇಪವಾಗಲಿಲ್ಲ. ಇದೇ ರೀತಿಯಾಗಿ ಸಮಾಜದ ಕಶ್ಮಲವನ್ನು ಕಳೆದು ಉದಾರವಾದ ನೀತಿಯನ್ನೂ ಉನ್ನತವಾದ ಆತ್ಮಬೋಧೆಯನ್ನು ಬೀರಲು ಅವತರಿಸಿದ ಮತಗಳಿಂದಲೂ ಜಾತಿಭೇದ ತಾರತಮ್ಯಗಳನ್ನು ನಂದಿಸುವ ಕಾರ್ಯ ಸಾಧಿಸಲಿಲ್ಲ. ಸಾಲದುದಕ್ಕೆ ಜಾತಿಯ ಉಚ್ಚ ನೀಚ ಭಾವನೆಗಳು ಆಯಾ ಮತೀಯರಲ್ಲಿ ಹೊಸ ಹೊಸ ಜಾತಿ ಪಂಗಡಗಳನ್ನು ಹುಟ್ಟಿಸಲನುವಾದುವು. ಈ ಕ್ರಮದಂತೆ ಪ್ರಾಚೀನ ಕಾಲದಿಂದ ಈಚೀಚಿನ ಕಾಲಕ್ಕೆ ಬರುವಾಗ ಪ್ರತಿಯೊಂದು ವಿಧಾನದಲ್ಲಿ ಸಾಮಾಜಿಕ ಬಂಧನಗಳು ಬಿಗುಪುಗೊಳ್ಳುವ ನೋಟವನ್ನು ಕಾಣುವೆವು.

ಈ ಸಾಮಾಜಿಕ ಪರಿವರ್ತನಗಳನ್ನು ಮೂರು ಕಾಲ ವಿಭಾಗಗಳಲ್ಲಿ ವಿಂಗಡಿಸಿ ವಿಮರ್ಶಿಸಬಹುದಾಗಿದೆ.

೧) ಪ್ರಾಚೀನಯುಗ : ಕ್ರಿ.ಪೂ. ೨ನೆಯ ಶತಮಾನದಿಂದ ಕ್ರಿಸ್ತೋತ್ತರ ೧೦ನೆಯ ಶತಮಾನದವರೆಗೆ.

೨) ಮಧ್ಯಮ ಯುಗ: ೧೦೦೦–೧೩೫೦

೩) ಅರ್ವಾಚೀನ ಯುಗ: ೧೩೫೦–೧೯೦೦

ಪ್ರಾಚೀನ ಯುಗದಲ್ಲಿ ಜಾತಿ, ಮತ, ಸಮಾಜ ಇವುಗಳ ನಿಯಮಗಳು ವ್ಯಾಪಕ ಭಾವನೆಗಳ ತಳಹದಿಯ ಮೇಲೆ ಏರ್ಪಟ್ಟಿದ್ದುವು. ಜಾತಿಗಳಲ್ಲಿ ನಾನಾ ಉಪಜಾತಿ ಪಂಗಡಗಳು ಹುಟ್ಟಿರಲಿಲ್ಲ. ಶೂದ್ರರನ್ನುಳಿದು ಮಿಕ್ಕ ಜಾತಿಗಳಲ್ಲಿ ವಿಶೇಷವಾದ ವಿಷಮತೆ ತಲೆಯೆತ್ತಿರಲಿಲ್ಲ. ಬ್ರಾಹ್ಮಣಾದಿ ಮೂರು ವರ್ಣಗಳಲ್ಲಿ ಅನ್ನ ವ್ಯವಹಾರಕ್ಕೆ ಆತಂಕವಿರಲಿಲ್ಲ. ಅನುಲೋಮ ವಿವಾಹಗಳು ಕಡಮೆಯಾಗುತ್ತಿರುವಾಗಲೂ ನಿಷಿದ್ಧವಾಗಿರಲಿಲ್ಲ. ಬಾಲಿಕೆಯ ವಿವಾಹ ವಯಸ್ಸು ಬಹಳ ಕೆಳಗೆ ಇಳಿದಿರಲಿಲ್ಲ. ಅವರಿಗೆ ಹೆಚ್ಚಿನ ವಿದ್ಯಾ ಸೌಕರ್ಯಗಳು ದೊರೆಯುತ್ತಿದ್ದುವು.[೧]

ಈ ಕಾಲದಲ್ಲಿ ಮೊದಲು ಬೌದ್ಧಮತವೂ ಬಳಿಕ ಜೈನಮತವೂ ವೈದಿಕ ಮತಕ್ಕೆ ಪ್ರತಿಕಕ್ಷಿಗಳಾಗಿ ಜನತೆಯ ಆದರವನ್ನು ಪಡೆದುವು. ವೈದಿಕ, ಬೌದ್ಧ, ಜೈನಮತೀಯರಲ್ಲಿ ಅನ್ಯೋನ್ಯವಾಗಿ ಸಹಿಷ್ಣುತೆ, ಸಹಾನುಭೂತಿ, ಆದರಭಾವನೆ ಇದ್ದುವು. ಯಾವುದೊಂದು ಮತದವನು ಅನ್ಯಮತವನ್ನು ಅಂಗೀಕರಿಸಿದರೆ ಆತನ ಮೊದಲಿನ ಜಾತಿ ಇಲ್ಲವೆ ಸಾಮಾಜಿಕ ಸ್ಥಾನಕ್ಕೆ ಚ್ಯುತಿ ಒದಗುತ್ತಿರಲಿಲ್ಲ. ಭಿನ್ನಮತೀಯರಲ್ಲಿ ವಿವಾಹ ಸಂಬಂಧವಾದರೂ ಅನ್ನವ್ಯವಹಾರ ನಡೆಯುತ್ತಿದ್ದಿತು.[೨]

ಶಾತವಾಹನ, ಕದಂಬ, ಬಾದಾಮಿಚಾಳುಕ್ಯ ಇವರುಗಳ ಕಾಲದಲ್ಲಿ ಶ್ರೌತ ಸಂಪ್ರದಾಯದ ಕರ್ಮಮಾರ್ಗ ಊರ್ಜಿತವಾಗಿತ್ತು. ಅನೇಕ ಯಜ್ಞಯಾಗಗಳು ಧಾರಾಳವಾಗಿ ನೆರವೇರುತ್ತಿದ್ದುವು. ಶಾತಕರ್ಣಿ, ಮಯೂರವರ್ಮ, ಪುಲಿಕೇಶಿ, ಮಂಗಳೇಶ ಮೊದಲಾದ ಅರಸರು ಅಶ್ವಮೇಧ ವಾಜಪೇಯ ಮೊದಲಾದ ಮಹಾಯಜ್ಞಗಳನ್ನು ಪೂರಯಿಸುವವರಾಗಿದ್ದರು. ಈ ಕರ್ಮಮಾರ್ಗದ ನೆರೆಯಲ್ಲಿ ಆಗಮ, ಪುರಾಣ, ತಂತ್ರಗಳ ಸಂಪ್ರದಾಯವೂ ಶಿವ, ವಿಷ್ಣು, ಗಣಪತಿ ಮೊದಲಾದ ದೇವತೆಗಳ ಉಪಾಸನಾಕ್ರಮವೂ ಮುಂದಡಿಯಿಡುವುವಾಗಿದ್ದುವು.[೩]

ಮೇಲೆ ಕಲ್ಪಿಸಿದ ಮಧ್ಯಯುಗ ಕರ್ನಾಟಕದ ಸಾಮಾಜಿಕ ಚರಿತ್ರೆಯಲ್ಲಿ ಕ್ರಾಂತಿಮಯ ಕೋಲಾಹಲದ ಕಾಲವಾಗಿದೆ. ಈ ಯುಗದಲ್ಲಿ ಕರ್ನಾಟಕದ ರಾಜಕೀಯ ಪರಿಸ್ಥಿತಿ ವಿಧವಿಧದ ಸ್ಥಿತ್ಯಂತರಗಳಿಗೆ ಈಡಾಗಿ ಬಹು ಅಸ್ಥಿರವಾಯಿತು. ವೀರಶೈವ, ರಾಮಾನುಜ, ಮಾಧ್ವ ಈ ಮೂರು ಮತಗಳು ಈ ಯುಗದಲ್ಲಿ ಅವತರಿಸಿ ಬಹುಕಾಲ ಬಾಳಿ ಬಲಿತ ಜೈನಮತದ ಬೇರಳುಗಳನ್ನು ಸಡಲಿಸಿದುವು.

---

೧. ಮಿಂಚಿದ ಮಹಿಳೆಯರು: 'ನಮ್ಮ ನಾರೀ ಜೀವನ' ಪುಟ ೧೯

೨. RK : pp. 336-37

೩. EHD : p. 83

ಅನೇಕ ಅರಸರು ನಾಯಕರು ಈ ನೂತನ ಮತಗಳನ್ನು ಸ್ವಾಗತಿಸಿ ಅವುಗಳ ಅಭ್ಯುದಯಕ್ಕೆ ನೆರವಾದರು. ಪುರಾತನ ಸಂಪ್ರದಾಯದಲ್ಲಿ ಹಲವೆಡೆ ಪ್ರಚುರವಾಗಿದ್ದ ಮಡಿಮೈಲಿಗೆಯ ಆಡಂಬರವನ್ನೂ ಅಸ್ಪೃಶ್ಯ ಭಾವನೆಯ ಅತಿರೇಕವನ್ನೂ ಕಳೆಯಲು ವೀರಶೈವ, ರಾಮಾನುಜ ಮತಗಳು ಪ್ರಯತ್ನಿಸಿದುವು. ಈ ಮತ ಮತಾಂತರಗಳಿಂದ ಇದುವರೆಗೆ ನೆಲೆಗೊಂಡ ಸಮಾಜ ವ್ಯವಸ್ಥೆಯಲ್ಲಿ ವಿಷಮತೆಯ ಬಿರುಗಾಳಿ ಬೀಸತೊಡಗಿತು. ಅಷ್ಟರಲ್ಲಿ ಮಹಮದೀಯ ಆಕ್ರಮಣದ ತೆರೆಗಳು ದೇಶದ ಎಲ್ಲ ಭಾಗಗಳಲ್ಲಿ ಹಬ್ಬುತ್ತ ಜನಾಂಗವನ್ನು ಇನ್ನಷ್ಟು ಕಲಕಿಸಿದುವು.

ಈ ಮೊದಲಾದ ರಾಜಕೀಯ, ಧಾರ್ಮಿಕ ಆಂದೋಲನಗಳ ಮೂಲಕ ಈ ಯುಗದಲ್ಲಿ ಧರ್ಮಮತಗಳಲ್ಲಿಯ ಅನ್ಯೋನ್ಯ ಸೌಹಾರ್ದತೆ ಅಳಿದು ಅನ್ಯಮತಗಳ ಬಗೆಗೆ ಅಸಹಿಷ್ಣುತೆ ಪ್ರಬಲಿಸಿತು. ಭಿನ್ನಮತೀಯರಲ್ಲಿಯ ಪರಸ್ಪರ ಬಳಕೆ ಕುಗ್ಗುತ್ತ ಮತನಿಷ್ಠವಾಧ ಜೈನ, ವೀರಶೈವ ಮೊದಲಾದ ಹೊಸ ಜಾತಿಗಳು ಹುಟ್ಟಲನುವಾದುವು. ಜಾತೀಯ ಭೇದಭಾವನೆ ಬೆಳೆದು ದೇಶಭೇದ, ಆಚಾರಭೇದಗಳ ನಿಮಿತ್ತದಿಂದ ಅನೇಕ ನವೀನ ಪಂಗಡಗಳು ನಿರ್ಮಾಣವಾಗಿ ಅವುಗಳ ಅನ್ಯೋನ್ಯ ವ್ಯವಹಾರಗಳನ್ನು ಕುರಿತು ಹೊಸ ಹೊಸ ಕಟ್ಟಳೆಗಳು ಏರ್ಪಟ್ಟುವು. ಭಿನ್ನ ಜಾತಿಮತದ ಜನರಲ್ಲಿಯ ವಿವಾಹ ಸಂಬಂಧಗಳು ಪೂರ್ತಿಯಾಗಿ ನಿಂತುಹೋದವು.[೧]

ಈ ಮುಂದಿನ ಯುಗ ಅರ್ವಾಚೀನಯುಗ. ಈ ಯುಗಕ್ಕೆ ಬರುವಷ್ಟರಲ್ಲಿ ವಿಜಯನಗರದ ಸಾಮ್ರಾಜ್ಯ ಪ್ರಸ್ಥಾಪಿತವಾಗಿರುತ್ತದೆ. ಸಮಾಜ, ಸಂಸ್ಕೃತಿಗಳ ಮೇಲೆ ಒದಗಿದ ಘೋರ ವಿಪತ್ತನ್ನು ಮುರಿದೊತ್ತಲು ಒಂದೂಗೂಡಿದ ಹಿಂದುತ್ವದ ಶಕ್ತಿಯೆಲ್ಲ ಈ ಸಾಮ್ರಾಜ್ಯದಿಂದ ಪ್ರಕಟವಾಯಿತು. ಮುಂದೆ ಮೂರುನೂರು ವರುಷಗಳವರೆಗೆ ವಿಜಯನಗರ ಸಾಮ್ರಾಜ್ಯ ಭಾರತೀಯ ಸಂಸ್ಕೃತಿಯನ್ನು ಪರಿಪರಿಯಿಂದ ಪಾಲಿಸಿ ಪೋಷಿಸಿತು. ಜಾತಿಮತಗಳ ವೈಮನಸ್ಯ ಬೆಳೆಯದಂತೆ ದಕ್ಷತೆ ವಹಿಸುತ್ತ ಸಕಲ ಧರ್ಮ ಜಾತಿ – ಮತಗಳ ಪರಂಪರೆಯನ್ನೂ ಪೂರ್ವ ಸಂಪ್ರದಾಯಗಳನ್ನೂ ಕಾಪಾಡುವ ಹೊಣೆಯನ್ನು ಈ ಸಾಮ್ರಾಜ್ಯ ಹೊತ್ತುಕೊಂಡಿತು. ಇದರಿಂದ ಸಮಾಜದಲ್ಲಿ ಸ್ವಧರ್ಮ, ಸಂಸ್ಕೃತಿಗಳ ಉತ್ಕಟವಾದ ಶ್ರದ್ಧೆಯೊಂದಿಗೆ ಸಂಕುಚಿತವಾದ ಜಾತಿ ಮತ ಪಂಗಡಗಳ ಅಭಿಮಾನವೂ ಪೂರ್ವಸಂಪ್ರದಾಯ ಪರಂಪರೆಗಳ ಗೌರವವೂ ಅತಿಶಯವಾಗಿ ಬೆಳೆದುವು. ಪ್ರತಿಯೊಂದು ಪಂಗಡದಲ್ಲಿ ತನ್ನ ತನ್ನ ಪ್ರಾಚೀನತೆಯನ್ನೂ ಘನತೆಯನ್ನೂ ಪ್ರಸ್ತಾಪಿಸುವ ಪ್ರಯತ್ನ ನಡೆಯಿತು. ಕೀಳೆಂದು ಎಣಿಸಲಾದ ಕೆಲವು ಜಾತಿಗಳು ಉಚ್ಚತೆಯನ್ನು ಸಂಪಾದಿಸುವ ಹೋರಾಟಕ್ಕನುವಾದವು.[೨] ಸಣ್ಣ ಸಣ್ಣ ಆಚಾರ ಸಂಪ್ರದಾಯ ಭೇದಗಳಿಗೆ ಪ್ರಾಶಸ್ತ್ಯವುಂಟಾಗಿ ಜಾತಿ ಪಂಗಡಗಳಲ್ಲಿ ಪ್ರತ್ಯೇಕ ಬುದ್ಧಿಯೂ ಆತ್ಮಪ್ರತಿಷ್ಠೆಯೂ

೧. KK : p. 338

೨. SPL: II,p.60

ಹೆಚ್ಚಿದುವು. ಇದರಿಂದ ಮೊದಲಿದ್ದ ಜಾತಿಮತಗಳಲ್ಲಿ ಅನೇಕ ಪಂಥ ಪಂಗಡಗಳು ಮುಂಬರಿದು ಸಾಮಾಜಿಕ ದೂರಭಾವನೆಯನ್ನು ಪ್ರೋತ್ಸಾಹಿಸಿದುವು.

ಈ ಕಾಲದಲ್ಲಿ ಶ್ರೌತಧರ್ಮಕ್ಕಿಂತಲೂ ಆಗಮ, ಸ್ಮೃತಿ, ತಂತ್ರ, ಪುರಾಣಗಳಲ್ಲಿ ಉಕ್ತವಾದ ಮತಾಚಾರಗಳಿಗೆ ಹೆಚ್ಚಿನ ಪ್ರಾಮುಖ್ಯ ಪ್ರಾಪ್ತವಾಯಿತು. ಕೆಲವು ಶತಮಾನಗಳ ಹಿಂದೆ ಬಾಳಿ ಆ ಮತಗಳನ್ನು ಪುರಸ್ಕರಿಸಿದ ಮಹಾನುಭಾವರ ಬಗೆಗೆ ದೇವಾಂಶರೆಂಬ ಕಲ್ಪನೆ ಉದಯಿಸಿತು. ಇವರುಗಳ ಗೌರವಾರ್ಥವಾಗಿಯೂ ಮತಪ್ರಚಾರದ ಉದ್ದೇಶದಿಂದಲೂ ರಚಿಸಲಾದ ಪುರಾಣವೇ ಮೊದಲಾದ ಧಾರ್ಮಿಕ ಲೌಕಿಕ ಗ್ರಂಥಗಳಲ್ಲಿ ವಿವರಿಸಿದ ಅನೇಕ ರಂಜಕ ವಿಷಯಗಳಿಗೂ ಪವಾಡ ಕತೆಗಳಿಗೂ ಶಾಸ್ತ್ರೀಯ ಮಾನ್ಯ ದೊರೆಯಿತು. ರೂಢಿಗೆ ಮಿತಿಮೀರಿದ ಮಹತ್ವ ಉಂಟಾಗಿ ವಿವಿಧ ಬಂಧನಗಳು ಸಮಾಜವನ್ನು ಆವರಿಸಿಕೊಂಡುವು. ನೀತಿಗಿಂತ ಜಾತಿಗೆ, ಗುಣಕ್ಕಿಂತ ಕುಲಕ್ಕೆ, ಸದಾಚಾರಕ್ಕಿಂತ ಸಂಪ್ರದಾಯಕ್ಕೆ ಪ್ರಾಧಾನ್ಯ ಉಂಟಾಯಿತು. ಈ ಸನ್ನಿವೇಶದ ಪ್ರತಿಬಿಂಬ ಈ ಕಾಲದ ಸಾಹಿತ್ಯದಲ್ಲಿ ಒಡಮೂಡಿದುದಾಗಿದೆ. ಸಮಾಜದ ತೂಕತಪ್ಪಿದ ಈ ವಿಷಯವನ್ನು ಕನಕ, ಪುರಂದರ, ಸರ್ವಜ್ಞ ಮೊದಲಾದ ಕವಿ ಬೋಧಕರು ಬಿಚ್ಚು ನುಡಿಗಳಿಂದ ಬಯಲಿಗಿರಿಸಿರುವರು.

ಭಿನ್ನ ಜನಾಂಗದ ಸಂಪರ್ಕ ಮತ್ತು ವರ್ಣಸಂಕರ ಇವುಗಳನ್ನು ಸಮಾಜ ಶಾಸಕರು ಕಾಲಕಾಲಕ್ಕೆ ನಿಷೇಧಿಸಿರುವರಾದರೂ ಇವುಗಳು ಮಿತ ಪ್ರಮಾಣದಲ್ಲಿ ಮೊದಲಿನಿಂದಲೂ ನಡೆಯುತ್ತಲೇ ಬಂದಿರುವುವು. ಇವುಗಳ ಬಗೆಗೆ ನಮ್ಮ ಸಾಮಾಜಿಕ ವಿರೋಧವೃತ್ತಿ ಪ್ರಾಚೀನ ಕಾಲಕ್ಕಿಂತ ಈಚಿನ ಕಾಲದಲ್ಲಿ ಹೆಚ್ಚಿದುದಾಗಿ ಕಾಣುತ್ತದೆ. ಆರ್ಯೇತರರಾದ ದ್ರಾವಿಡರನ್ನು ನೀಚರಾಗಿ ಎಣಿಸಿ ಶೂದ್ರ ಮ್ಲೇಚ್ಛಕೋಟಿಗೆ ನೂಕಿದರೂ ಆರ್ಯರು ದಕ್ಷಿಣದಲ್ಲಿ ಬಂದು ನೆಲೆಯಾದ ಬಳಿಕ ಆರ್ಯ ದ್ರಾವಿಡರ ರಕ್ತಗಳು ಬೆರೆತುಕೊಂಡುವು ಎಂದು ಪರಿಶೋಧಕರು ತೋರಿಸಿಕೊಟ್ಟಿರುವರು.[೧] ದಕ್ಷಿಣ ಭಾರತದ ಕನ್ನಡರು ಮೊದಲಾದವರ ವರ್ಣಾಶ್ರಮ ವ್ಯವಸ್ಥೆಯೂ ಜಾತಿ ಸಂಪ್ರದಾಯಗಳೂ ಕೇವಲ ಆರ್ಯಮಾರ್ಗವನ್ನೇ ಅನುಸರಿಸದೆ ವಿಧವಿಧವಾಗಿ ಮಾರ್ಪುಗೊಂಡುವು.

ಶಾತವಾಹನ ಕಾಲದಲ್ಲಿ ಭರತಭೂಮಿಗೆ ನುಗ್ಗಿದ ಯವನ ಶಕ ಪಲ್ಲವಾದಿ ದ್ವೀಪಾಂತರ ಜನಾಂಗಗಳ ಸಂಸರ್ಗ ಕರ್ನಾಟಕದವರೆಗೆ ತಲುಪಿತು. ಈ ಜನಾಂಗಗಳ ಅರಸರು ಮೊದಮೊದಲು ಪರಕೀಯರಾಗಿದ್ದರೂ ಮುಂದೆ ವೈದಿಕ ಮತಗಳನ್ನು ಅವಲಂಬಿಸಿ ಇಲ್ಲಿಯ ಜೀವನದಲ್ಲಿ ಮಿಲಿತರಾದರು. ಈ ಮುಂದಿನ ಅನೇಕ ಶತಮಾನಗಳವರೆಗೆ ಪ್ರಾದೇಶಿಕ ಭೇದ ಭಾವನೆ ಬಲಗೊಂಡಿರದುದರಿಂದ ಕರ್ನಾಟಕಕ್ಕೂ ಅನ್ಯ ಪ್ರಾಂತಗಳಿಗೂ ರಾಜಕೀಯವಲ್ಲದೆ ಸಾಮಾಜಿಕ ಧಾರ್ಮಿಕ ಮೊದಲಾದ ವ್ಯವಹಾರಗಳು ಧಾರಾಳವಾಗಿ ನಡೆಯುತ್ತಿದ್ದುವು. ದಕ್ಷಿಣದ ತೆಲುಗು,

೧. AL : p.9

ತಮಿಳುನಾಡುಗಳೊಡನೆಯೂ ಉತ್ತರದ ಬಂಗಾಲ, ಬಿಹಾರ, ಗುಜರಾತ, ಕಾಶ್ಮೀರ ಮುಂತಾದ ದೇಶಗಳೊಡನೆಯೂ ಕರ್ನಾಟಕದ ತಡೆಯಿಲ್ಲದ ಬಳಕೆ ಇದ್ದಿತು. ಕ್ಷತ್ರಿಯಾದಿ ಜಾತಿಗಳಲ್ಲಿ ಭಿನ್ನ ಪ್ರಾಂತೀಯ ವಿವಾಹ ಸಂಬಂಧಗಳು ಆಗುತ್ತಿದ್ದುವು.[೧] ಬ್ರಾಹ್ಮಣ ಮೊದಲಾದ ವರ್ಗದ ಕುಟುಂಬಗಳು ಇಲ್ಲಿಂದ ಹೊರನಾಡಿಗೂ ಹೊರನಾಡಿನಿಂದ ಕನ್ನಡನಾಡಿಗೂ ಬಂದು ಒಕ್ಕಲಾಗುತ್ತಿದ್ದುವು. ಕದಂಬ ಮಯೂರಶರ್ಮನು ರೋಹಿಲಖಂಡದ ಅಹಿಚ್ಛತ್ರ ನಗರದಿಂದ ಬ್ರಾಹ್ಮಣ ಕುಟುಂಬಗಳನ್ನು ಕರೆತಂದು ತುಳುನಾಡಿನಲ್ಲಿ ನೆಲೆಯೂರಿಸಿದನೆಂಬುದು ಸುವಿಶ್ರುತ ವಿಷಯವಾಗಿದೆ. ಇಂದು ಕರ್ನಾಟಕದಲ್ಲಿ ಸ್ಥಾಯಿಯಾದ ಶಿವಳ್ಳಿ, ಹೈಗ, ಸಹವಾಸಿ, ವೀರಬಣಂಜು, ಸಾರಸ್ವತ ಮೊದಲಾದ ಬ್ರಾಹ್ಮಣ ಕುಲವೃತ್ತಗಳು ಅವರ ಔತ್ತರೇಯ ಮೂಲನಿವಾಸವನ್ನು ಸಿದ್ಧಪಡಿಸುತ್ತಿರುವುವು.[೨] ಕಾಶ್ಮೀರ ದೇಶದ ಕಾಳಾಮುಖ ಪಂಥದ ಅನೇಕ ಪಂಡಿತರು ಕರ್ನಾಟಕದಲ್ಲಿ ಮನೆಮಾಡಿ ಮಾನ್ಯತೆಯನ್ನು ಪಡೆದುದಕ್ಕೆ ಅನೇಕ ಶಾಸನಗಳ ಸಾಕ್ಷ್ಯವಿದೆ. ಕಾಲಾಂತರದಲ್ಲಿ ಇವರೆಲ್ಲರೂ ಕನ್ನಡ ತಾಯಿಯ ನೆಚ್ಚಿನ ಮಕ್ಕಳಾಗಿ ಕನ್ನಡ ಸಮಾಜದ ವಿವಿಧತೆಯನ್ನು ಹೆಚ್ಚಿಸಲು ಸಹಾಯವಾಗಿರುವರು.

ಈ ಮೇರೆಗೆ ಪರಿವರ್ತನಗೊಳ್ಳುತ್ತ ವಿಜಯನಗರ ಯುಗದವರೆಗೆ ಬಂದು, ಅಲ್ಲಿ ರೂಪುಗೊಂಡು ಸ್ಥಿರವಾದ ಸಮಾಜದ ಪಡಿಯಚ್ಚು, ವಿಜಯನಗರ ಆಳಿದ ಬಳಿಕ ಈಚಿನ ಕಾಲದಲ್ಲಿ ವಿಶೇಷ ವ್ಯತ್ಯಾಸಹೊಂದದೆ ಹಾಗೆಯೆ ಇಂದಿನವರೆಗೆ ನಡೆದು ಬಂದಿದೆ.

೩. ಸಾಮಾಜಿಕ ಸಂಘ ಸಹಕಾರ

ಸಮಾಜವೇ ರಾಷ್ಟ್ರದ ಮೂಲಾಧಾರ. ರಾಷ್ಟ್ರೀಯ ಅಭ್ಯುದಯ ಅಧಃಪತನಗಳು ಸಮಾಜದ ಸ್ವಾಸ್ಥ್ಯ ಅಸ್ವಾಸ್ಥ್ಯಗಳನ್ನೇ ಅವಲಂಬಿಸಿರುತ್ತವೆ. ಕರ್ನಾಟಕದ ರಾಷ್ಟ್ರೀಯ ಘನತೆಗೆ ಅದರ ಸಾಮಾಜಿಕ ಸುಸ್ಥಿತಿಯೆ ಸಹಾಯವಾಯಿತು. ಕರ್ನಾಟಕ ನಾಗರಿಕತೆಯ ಮೇಲ್ಮೆಗೆ ಅದರ ಸಾಮಾಜಿಕ ಸಂಘಟನೆಯೆ ಪ್ರೇರಕವಾಯಿತು. ಕನ್ನಡಿಗರ ಸಾಮಾಜಿಕ ಸ್ಥೈರ್ಯವೆ ಪೋಷಕವಾಯಿತು. ಕನ್ನಡ ಸಂಸ್ಕೃತಿಯ ವೈಭವಕ್ಕೆ ಕನ್ನಡಿಗರ ಸಾಮಾಜಿಕ ಸಂಘಟನೆಯುನ್ನು ಜನಜಾತಿಗಳಲ್ಲಿಯ ಸಂಘ ಸಹಕಾರ ಬುದ್ಧಿಯೆ ಸಂವರ್ಧಿಸುವುದಾಗಿದ್ದಿತು.

ಸಹಕಾರವೇ ಸುಸಂಘಟಿತ ಸಾಮಾಜಿಕ ಜೀವನದ ತಿರುಳು ಎಂಬುದನ್ನು ನೆರೆಯರಿತ ಕನ್ನಡಿಗರು ಹಲವು ವಿಧದ ಸಂಘ ಸಂಪ್ರದಾಯಗಳನ್ನು ಕಟ್ಟಿ ಬೆಳೆಸಿದರು.

---

೧. ಗುಪ್ತ– ವಾಕಾಟಕರೊಡನೆ ಕದಂಬರ ವಿವಾಹ ಸಂಬಂಧ. ಮುಂದೆ ವಿಜಯನಗರ ಕಾಲದವರೆಗೆ ಇಂತಹ ಅನೇಕ ಉದಾಹರಣೆಗಳು ದೊರೆಯುತ್ತವೆ.

೨. ಶ್ರೀ. ನಾ. ಶ್ರೀ ರಾಜಪುರೋಹಿತರ ಲೇಖನ: 'ಸಂಯುಕ್ತ ಕರ್ನಾಟಕ'– ೧೬–೮–೧೯೩೮.

ಈ ಸಂಘ ಸಂಪ್ರದಾಯಗಳು ಹಳ್ಳಿಯಿಂದ ಪಟ್ಟಣದವರೆಗೆ ರಾಜಕೀಯ, ಆರ್ಥಿಕ ಮೊದಲಾದ ರಂಗಗಳಲ್ಲಿ ಬಳಸಿಕೊಂಡು ನಾಡಿನ ಏಳಿಗೆಗೆ ನೆರವಾದುವು.

ಒಂದೊಂದು ಜಾತಿ, ಕುಲ ಇಲ್ಲವೆ ಪಂಗಡ ಸಂಘ ಸಂಪ್ರದಾಯದ ಅಡಿಗಲ್ಲು ಆಗಿತ್ತು. ಜಾತಿನಿಷ್ಠವಾದ ಮೂಲ ಸಂಘಟನೆಯಿಂದಲೇ ಜನಹಿತಕರವಾದ ಗ್ರಾಮ ಪಂಚಾಯತಿಗಳ ಉದಯವಾಯಿತು. ಗ್ರಾಮಪಂಚಾಯಿತಿಗಳು ಬಹು ಪ್ರಾಚೀನ ಕಾಲದಿಂದ ಕಾರ್ಯನಿರತವಾಗಿದ್ದುವು. ಜಾತೀಯ ಸಂಘಗಳಿಗೆ ಕೂಟವೆಂದು ಹೆಸರು. ಇಂತಹ ಸಂಘಗಳಿಗೆ ಒಬ್ಬೊಬ್ಬ ಪ್ರಮುಖ ಇಲ್ಲವೆ ಹಿರಿಯನಿದ್ದು ಆತನು ಜಾತಿಯ ವಿವಾದಗಳನ್ನು ನಿರ್ಣಯಿಸುತ್ತಿದ್ದನು.[೧]

ಪ್ರಾಯಿಕವಾಗಿ ಹಳ್ಳಿಗೊಂದು ಗ್ರಾಮಸಭೆಯಿದ್ದು ಅದು ಹಳ್ಳಿಯ ಹಿತದ ವಿಷಯಗಳನ್ನು ವಿಚಾರಿಸುವಂತಹುದು ಆಗಿತ್ತು. ಸಾಮಾನ್ಯವಾಗಿ ಮನೆಗೊಬ್ಬ ಯಜಮಾನನು ಈ ಸಭೆಗೆ ಸದಸ್ಯನಾಗಿ ಆರಿಸಿದವನಾಗಿರುತ್ತಿದ್ದನು. ಜಾತಿಯ ನಾಯಕರು, ಧರ್ಮಧುರೀಣರು, ಬೇರೆ ಬೇರೆ ಉದ್ಯೋಗ ವ್ಯವಸಾಯದ ಮುಂದಾಳುಗಳು, ಗೌಡರು, ಶಾನುಭೋಗರು, ಸೆಟ್ಟಿ ಮುಂತಾದವರು ಈ ಸಭೆಯಲ್ಲಿ ಸೇರುತ್ತಿದ್ದರು. ಇವರೆಲ್ಲರಿಗೆ ಮಹಾಜನರೆಂದು ಹೆಸರು. ಈ ಗ್ರಾಮ ಸಭೆಯವರು ಊರಿಗೆ ಸಂಬಂಧಿಸಿದ ಧಾರ್ಮಿಕ, ಸಾಮಾಜಿಕ, ಆರ್ಥಿಕ ಮೊದಲಾದ ಎಲ್ಲ ವ್ಯವಹಾರಗಳನ್ನು ನಿರ್ಧರಿಸುವುದಲ್ಲದೆ ರಾಜಕೀಯ ಆಡಳಿತದಲ್ಲಿಯೂ ನೆರವಾಗುತ್ತಿದ್ದರು. ತೆರಿಗೆ ಕೂಡಿಸುವುದು, ಸಾರ್ವಜನಿಕ ನಿಧಿಯ ಪರಿಪಾಲನೆ, ಕೆರೆ ಕಾಲುವೆ ಧರ್ಮಶಾಲೆಗಳ ಜೋಕೆ, ವಿದ್ಯಾಶಾಲೆ, ದೇವಾಲಯದ ಆಡಳಿತ, ಸಾರ್ವಜನಿಕ ಉತ್ಸವ ಸಮಾರಂಭಗಳನ್ನು ನೆರವೇರಿಸುವುದು, ಅಪರಾಧಗಳ ವಿಚಾರಣೆ ಮುಂತಾದ ಕಾರ್ಯಕಲಾಪಗಳನ್ನು ನಿರಾತಂಕವಾಗಿ ಇವರೇ ಸಾಗಿಸುವವರಾಗಿದ್ದರು.[೨]

ಇದೇ ರೀತಿಯಿಂದ ಪಟ್ಟಣಗಳಲ್ಲಿ ಪ್ರಾತಿನಿಧಿಕವಾದ ಪೌರಸಭೆಗಳು ಏರ್ಪಟ್ಟಿದ್ದುವು. ಈ ಸಭೆಗಳ ಅಧ್ಯಕ್ಷರಿಗೆ ನಗರಪತಿ, ಪಟ್ಟಣಸ್ವಾಮಿ ಮುಂತಾದ ಹೆಸರುಗಳು ಇದ್ದುವು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕೆಲವೊಂದು ವಿಭಾಗಗಳನ್ನು ಕಲ್ಪಿಸಿ ಅವುಗಳಿಂದ ಪ್ರತಿನಿಧಿಗಳನ್ನು ಆರಿಸುವ ಕ್ರಮವಿದ್ದಿತು. ಬಳ್ಳಿಗಾವೆಯಲ್ಲಿ ಐದು ಮಠಗಳು, ಮೂರು ಪುರಗಳು, ಏಳು ಬ್ರಹ್ಮಪುರಿಗಳು ಇದ್ದುವಾಗಿ ತಿಳಿಯುತ್ತದೆ.[೩]

ಹಳ್ಳಿಗಳಲ್ಲಿಯೂ ಪಟ್ಟಣಗಳಲ್ಲಿಯೂ ನೇಕಾರ, ಒಕ್ಕಲಿಗ, ಕಮ್ಮಾರ, ಕುಂಬಾರ, ವರ್ತಕ ಮೊದಲಾದ ಬೇರೆ ಬೇರೆ ಉದ್ಯೋಗಸ್ಥರ ಸಾಮಾಜಿಕ ಆರ್ಥಿಕ

೧.SPL : p. 197
೨. RK : p.207-209
೩. .MCI : p. 181

ಕಾರ್ಯಕಲಾಪಗಳು ಈ ಸಂಘದ ಮುಖಾಂತರ ವ್ಯವಸ್ಥಿತವಾಗಿ ನಡೆಯುತ್ತಿದ್ದುವು. ಈ ಸಂಘಗಳ ಘಟನೆಯೂ ನಿಯಮಗಳೂ ಕಟ್ಟುನಿಟ್ಟಿನವಾಗಿದ್ದು, ಸದಸ್ಯರೆಲ್ಲರೂ ಅವುಗಳನ್ನು ದಕ್ಷತೆಯಿಂದ ಪಾಲಿಸುವ ಸಮಯಧರ್ಮದಿಂದ ಬದ್ಧರಾಗಿರುತ್ತಿದ್ದರು. ನಗರದ ಆಡಳಿತ ಈ ಸಂಘ ಪ್ರತಿನಿಧಿಗಳ ಕೈಯಲ್ಲಿಯೇ ಇರುತ್ತಿದ್ದಿತು.[೧]

ದೇವಾಲಯ ಸಂಸ್ಥೆ ಸಾಮಾಜಿಕ ಜೀವನದಲ್ಲಿ ವಿಶಿಷ್ಟವಾದ ಗೌರವದ ಸ್ಥಾನವನ್ನು ಪಡೆದಿತ್ತು. ಪವಿತ್ರ ವಾತಾವರಣದಿಂದ ಕೂಡಿದ ಈ ಸ್ಥಳ ನಿತ್ಯನೈಮಿತ್ತಿಕ ಧಾರ್ಮಿಕ ಕಾರ್ಯಗಳ ಕೇಂದ್ರವಾಗಿರುವುದಲ್ಲದೆ, ಸಂಗೀತ, ಶಿಲ್ಪ ಮುಂತಾದ ಕಲೆಗಳ ಪ್ರದರ್ಶನವೂ ಸಾರ್ವಜನಿಕ ಸಮ್ಮೇಲನ ಮಂದಿರವೂ ವಿದ್ಯಾಶಾಲೆಯೂ ನ್ಯಾಯಗೃಹವೂ ಆಗಿದ್ದಿತು. ಕೆಲವು ದೊಡ್ಡ ದೇವಾಲಯಗಳಲ್ಲಿ ಉಚ್ಚ ವಿದ್ಯಾವ್ಯಾಸಂಗ ನಡೆಯುತ್ತಿದ್ದಿತು. ಅದು ಅನೇಕ ಪಂಡಿತರ, ವಿದ್ಯಾವಂತರ, ಧರ್ಮಜೀವಿಗಳ ಆಶ್ರಯಸ್ಥಾನವಾಗಿದ್ದಿತು. ದೇವಾಲಯದ ಎಲ್ಲ ವ್ಯವಸ್ಥೆ ಸಾಮಾನ್ಯವಾಗಿ ಜನತಾ ಪ್ರತಿನಿಧಿಗಳ ಮುಖಾಂತರ ಸಾಗುತ್ತಿದ್ದಿತು.

ಮಠಗಳು ಧಾರ್ಮಿಕ ಜೀವನದಂತೆ ಸಾಮಾಜಿಕ ಜೀವನದಲ್ಲಿಯೂ, ಪ್ರಭಾವಶಾಲಿಯಾಗಿದ್ದುವು. ಪ್ರತಿಯೊಂದು ಕುಟುಂಬವೂ ಬುದ್ಧ, ಜೈನ, ಶಾಂಕರ, ವೀರಶೈವ ಮುಂತಾದ ಯಾವುದೊಂದು ಮಠಪೀಠದ ಗುರುತ್ವಕ್ಕೆ ಒಳಪಟ್ಟುದಾಗಿತ್ತು. ಕೌಟುಂಬಿಕ ಮತ್ತು ಸಾಮಾಜಿಕ ನಿಯಮಗಳ ಪಾಲನೆಗಾಗಿ ಧರ್ಮ, ನೀತಿ ಮತ್ತು ಸಂಸ್ಕೃತಿ, ಇವುಗಳು ಸಮಾಜದ ಆಳದಲ್ಲಿ ನೆಲೆಗೊಳ್ಳಲು ಮಠಸಂಸ್ಥೆಯಿಂದ ಅಪಾರವಾದ ಉಪಕೃತಿ ಒದಗಿತು. ಮಠಗಳಿಗೆ ಶಿಕ್ಷಾದೀಕ್ಷಾಧಿಕಾರ ಒಪ್ಪಿಸಲಾಗಿತ್ತು.

ಜಾತಿಪಂಗಡಗಳ ಪ್ರತಿನಿಧಿಗಳು ಒಂದೆಡೆಗೆ ಸಭೆ ಸೇರಿ ತಂತಮ್ಮ ಸಾಮಾಜಿಕ ಸಮಸ್ಯೆಗಳನ್ನಾಗಲಿ ಅನ್ಯಜಾತಿ ಪಂಗಡಗಳಿಗೆ ಸಂಬಂಧಿಸಿದ ಅನ್ಯೋನ್ಯ ವ್ಯಾಜ್ಯಗಳನ್ನಾಗಲಿ ನಿರ್ಣಯಿಸಿಕೊಳ್ಳುತ್ತಿದ್ದರು. ಈ ಬಗೆಯ ಸಂಘ ಸಮ್ಮೇಳನಗಳು ತಂತಮ್ಮ ಸಮಾಜಕ್ಕೆ ಪ್ರಯೋಜನಕರವಾದ ನಿಯಮ ನಿರ್ಬಂಧಗಳನ್ನು ರಚಿಸಿಕೊಂಡು ಅವುಗಳಿಗೆ ಪ್ರಭುತ್ವದ ಮಾನ್ಯತೆಯನ್ನು ಪಡೆಯುತ್ತಿದ್ದುವು. ಇಂತಹ ಸಾಮಾಜಿಕ ಕಟ್ಟಳೆ ಮೀರುವವರನ್ನು ದಂಡಿಸಿ ಜಾತಿಯಿಂದ ಬಹಿಷ್ಕರಿಸುವ ಅಧಿಕಾರ ಸಾಮಾಜಿಕರಿಗೆ ಇರುತ್ತಿದಿತು.

ಸಮಾಜದಲ್ಲಿ ಬೇರೂರಿದ ಹಾನಿಕರವಾದ ಒಂದು ರೂಢಿಯನ್ನು ಕುರಿತು ಸಮಾಜದ ಪ್ರಮುಖರು ಆಲೋಚನೆಗೈದು ಕಟ್ಟಳೆಯನ್ನು ಮಾಡಿ ಶಾಸನಾಧಿಕಾರವನ್ನು ಪಡೆದ ಒಂದು ಮಹತ್ತರವಾದ ಸಂದರ್ಭ ಚರಿತ್ರೆಯಲ್ಲಿ ಸಂಸ್ಮರಣೀಯವಾಗಿದೆ. ವಿಜಯನಗರ ಕಾಲದಲ್ಲಿ (೧೫ನೆಯ ಶತಮಾನ) ಕನ್ಯಾಶುಲ್ಕ ಪದ್ಧತಿ ಪ್ರಬಲಿಸಿ ಸಮಾಜದಲ್ಲಿ ಹಾಹಾಕಾರವುಂಟಾಯಿತು. ಆಗ ಈ ಸನ್ನಿವೇಶವನ್ನು ವಿಮರ್ಶಿಸಲು

೧.. GT : pp.282-83

ಪಡವೀಡು ನಾಡಿನ ಕನ್ನಡ, ತಮಿಳು, ತೆಲುಗು, ಲಾಟ ಈ ಪಂಗಡಗಳ ಎಲ್ಲ ಗೋತ್ರ, ಶಾಖೆ, ಸೂತ್ರದ ಬ್ರಾಹ್ಮಣರು ಸಂಮಿಲಿತರಾದರು. ಇನ್ನು ಮುಂದೆ ಬ್ರಾಹ್ಮಣ ಸಮಾಜದಲ್ಲಿ ಎಲ್ಲ ವಿವಾಹಗಳು ಸಂಪೂರ್ಣವಾಗಿ ಕನ್ಯಾದಾನ ಪದ್ಧತಿಯಿಂದಲೇ ನಡೆಯಬೇಕು ಎಂದು ನಿರ್ಧರಿಸಿದರು. ಈ ನಿಯಮವನ್ನು ಉಲ್ಲಂಘಿಸಿ ಕನ್ಯಾಶುಲ್ಕಕ್ಕೆ ಎಡೆಗೊಡುವವರು ರಾಜಶಾಸನಕ್ಕೆ ಗುರಿಯಾಗಿ ಜಾತಿಬಾಹಿರರಾಗಬೇಕು ಎಂದು ಈ ಪರಿಷತ್ತಿನಲ್ಲಿ ತೀರ್ಮಾನವಾಯಿತು.

ಈ ಮೇರೆಗೆ ಸಾಮಾಜಿಕ ಜೀವನ ಪ್ರವಾಹದಲ್ಲಿ ಬಲವಾಗಿ ಸುಳಿಸುಳಿದು ಬಹುಕಾಲ ರಾಷ್ಟ್ರೀಯ ಅಭ್ಯುದಯಕ್ಕೆ ಸಹಕಾರಿಯಾದ ಸಂಘ ಸಹಕಾರ ಶಕ್ತಿ ಬರುಬರುತ್ತ ರಾಜಕೀಯ ದುಃಸ್ಥಿತಿ, ಸಾಮಾಜಿಕ ಶೈಥಿಲ್ಯ, ಜಾತಿ ಮತ ಭಾವನೆಯ ಪ್ರಾಬಲ್ಯ, ಸಂಕುಚಿತ ಸ್ವಾರ್ಥಬುದ್ಧಿ ಮುಂತಾದ ಕಾರಣಗಳ ಮೂಲಕ ಲೋಪ ಹೊಂದಿದುದರಿಂದ ಕನ್ನಡ ಜನಾಂಗ ಅವನತಿಗಿಳಿಯಿತು.

೪. ವಿದ್ಯಾವಂತಿಕೆ

ವಿದ್ಯೆ ಮನುಷ್ಯನಿಗೆ ಅತ್ಯವಶ್ಯವಾದ ಒಂದು ಸಂಸ್ಕಾರ. ಇದರ ಬಲದಿಂದ ಮಾನವನು ಉನ್ನತ ಜೀವಿಯಾಗಬಲ್ಲನು ಎಂಬುದನ್ನು ಕನ್ನಡಿಗರು ಬಹು ಪ್ರಾಚೀನ ಕಾಲದಿಂದ ಅರಿತಿದ್ದರು. ಕನ್ನಡಿಗರ ಜೀವನ ಧರ್ಮಾಭಿಮುಖವಾದುದರಿಂದ ಅವರು ಮೊದಮೊದಲು ಆಧ್ಯಾತ್ಮಕ್ಕಾಗಿಯೆ ಹೆಚ್ಚಾಗಿ ವಿದ್ಯೆಯನ್ನು ಪರಿಪೋಷಿಸಿದರು. ಬಳಿಕ ಭೌತಿಕ ಪ್ರಪಂಚದಲ್ಲಿಯ ಅದರ ವ್ಯಾಪ್ತಿಯನ್ನು ಲಕ್ಷಿಸಿ ಲೌಕಿಕಕ್ಕಾಗಿಯೂ ಅದನ್ನು ಅಭಿವೃದ್ಧಿಗೊಳಿಸಿದರು. ಅರಸರು, ಧರ್ಮಗುರುಗಳು, ಸ್ಥಿತಿವಂತರು, ಜನಸಾಮಾನ್ಯರು, ಎಲ್ಲರೂ ಉತ್ತಮವಾದ ವಿದ್ಯಾಪರಂಪರೆಯನ್ನು ಸ್ಥಾಪಿಸಿ ಪರಿಪರಿಯಾಗಿ ವಿಸ್ತರಿಸಿದರು.

ವಿದ್ಯಾದೇವಿಗೆ ಭಾಷಾಮಯೂರ ವಾಹನವಾದುದು. ಪ್ರಾಕೃತ, ಸಂಸ್ಕೃತ, ಕನ್ನಡ ಈ ಮೂರು ಪ್ರಮುಖ ಭಾಷೆಗಳು ವಿದ್ಯಾಪ್ರಸಾರದ ಸಾಧನಗಳಾದುವು. ಶಾತವಾಹನ ಮತ್ತು ಕದಂಬರ ಕಾಲದಲ್ಲಿ ಪ್ರಾಕೃತಭಾಷೆಗೆ ಪ್ರಾಧಾನ್ಯವಿದ್ದಿತು. ಆ ಕಾಲದಲ್ಲಿ ಅದು ರಾಜಭಾಷೆಯಾಗುವ ಗೌರವವನ್ನು ಪಡೆಯಿತು. ಪಂಡಿತರು ಉದ್ಗ್ರಂಥಗಳನ್ನು ರಚಿಸಿ ಇದಕ್ಕೆ ಪ್ರತಿಷ್ಠೆಯನ್ನು ನೀಡಿದರು. ಸುಮಾರು ಕ್ರಿ. ಶ. ೬ನೆಯ ಶತಮಾನದಿಂದ ಪ್ರಾಕೃತಕ್ಕೆ ರಾಜಕೀಯ ಬೆಂಬಲ ಕುಗ್ಗಿತು. ಆಮೇಲೆ ಕೆಲವು ಶತಮಾನಗಳವರೆಗೆ ಅದು ಪಂಡಿತ ಪೋಷಣೆಯಲ್ಲಿ ಬೌದ್ಧ, ಜೈನ ಮತಗಳನ್ನು ಆಶ್ರಯಿಸಿ ಬಾಳಿತು. ಪ್ರಾಕೃತಭಾಷೆ ಎಷ್ಟಾದರೂ ಒಂದು ವಿಶಿಷ್ಟ ವರ್ಗದ ಭಾಷೆಯಾಗಿದ್ದಿತಲ್ಲದೆ ಜನಸಾಮಾನ್ಯರನ್ನು ಒಲಿಸುವ ಶಕ್ತಿ ಅದಕ್ಕೆ ಎಂದೂ ಪ್ರಾಪ್ತವಾಗಲಿಲ್ಲ.

ಸುಮಾರು ಕ್ರಿ.ಶ. ೪–೫ನೆಯ ಶತಮಾನದಿಂದ ಪ್ರಾಕೃತವನ್ನು ಪ್ರತಿಭಟಿಸುತ್ತ ಅರಮನೆ ಗುರುಮನೆಗಳನ್ನು ಆಕ್ರಮಿಸುತ್ತ ಸಂಸ್ಕೃತ ಮುಂದೆ ನುಗ್ಗಿತು. ಕ್ರಿ.ಶ.

೮–೯ನೆಯ ಶತಮಾನದಿಂದ ಕನ್ನಡದ ಪ್ರಭಾವದ ಮೂಲಕ ಸಂಸ್ಕೃತದ ಗೌರವಕ್ಕೆ ಹಾನಿ ಒದಗಿತು. ಆದರೂ ರಾಜರ ಮತ್ತು ಪಂಡಿತ ಮಂಡಲಿಯ ಮೇಲಿನ ಇದರ ವರ್ಚಸ್ಸು ಕೊನೆಯವರೆಗೂ ಅಳಿಯಲಿಲ್ಲ. ಮಾತ್ರವಲ್ಲ, ಕನ್ನಡದ ಅತ್ಯಂತ ಊರ್ಜಿತ ಕಾಲದಲ್ಲಿಯೂ ಇದು ದೇವವಾಣಿ, ಧರ್ಮಭಾಷೆ, ನಿಖಿಲವಾಗ್‌ಜನನಿ ಎಂಬ ಘನತೆಯನ್ನು ಬೀರುತ್ತ ತನ್ನ ಆಧಿಪತ್ಯವನ್ನು ಕಾಯ್ದುಕೊಂಡು ಬಾಳಿತು. ಸಕಲ ಮತದ ಪುರಸ್ಕರ್ತರು ತಂತಮ್ಮ ಮತಗ್ರಂಥಗಳನ್ನು ಸಂಸ್ಕೃತದಲ್ಲಿ ರಚಿಸಿ ಆ ಮತಗಳಿಗೆ ವಿಬುಧಮಾನ್ಯತೆಯನ್ನು ಒದಗಿಸಿದರು.

ಮೊದಲು ಪಾಮರ ಭಾಷೆಯಾಗಿದ್ದ ಕನ್ನಡ ಮುಂದೆ ಪಂಡಿತಭಾಷೆ, ಬಳಿಕ ರಾಜಭಾಷೆಯಾಗಿ ಮೆರೆಯಿತು. ಇದಕ್ಕಾಗಿ ಜೈನ, ವೀರಶೈವರು ಸಲ್ಲಿಸಿದ ಸೇವೆ ಹೆಚ್ಚಿನದಾಗಿದೆ. ಸುಮಾರು ಕ್ರಿಶ. ೫ನೆಯ ಶತಮಾನದಿಂದ ಕನ್ನಡ ರಾಜಪ್ರಶಸ್ತಿಯನ್ನು ಪಡೆಯತೊಡಗಿತು. ವಿಜಯನಗರ ಕಾಲಕ್ಕೆ ಬರುವಷ್ಟರಲ್ಲಿ ಎಲ್ಲ ರಾಜಶಾಸನಗಳು ಕನ್ನಡದಲ್ಲಿಯೇ ಪ್ರಕಟವಾಗುತ್ತಿದ್ದುವಲ್ಲದೆ, ಸಾಮಾನ್ಯವಾಗಿ ಸಂಸ್ಕೃತದ ಸೊತ್ತಾದ ತಾಮ್ರಶಾಸನಗಳಾದರೂ ಕನ್ನಡವನ್ನು ಮರೆಹೊಕ್ಕವು. ವಚನಕಾರರು ಮತವನ್ನು ಕನ್ನಡದಲ್ಲಿಯೇ ತಿಳಿಸಿದ್ದರು. ಅನೇಕ ಶತಮಾನಗಳಿಂದ ಸಂಸ್ಕೃತದಲ್ಲಿಯೇ ಬರೆಯುತ್ತಿದ್ದ ಬ್ರಾಹ್ಮಣರಾದರೂ ಶಾಂಕರ, ಮಾಧ್ವ, ರಾಮಾನುಜ ಮೊದಲಾದ ಮತವಿಚಾರಗಳನ್ನು ಜನಸಾಮಾನ್ಯರಿಗೆ ಹಿಡಿಯಬಲ್ಲ ಸುಲಭವಾದ ಕನ್ನಡದ ಮುಖಾಂತರ ಬೀರತೊಡಗಿದರು.

ಸು. ಕ್ರಿಪೂ. ೩ನೆಯ ಶತಮಾನದಿಂದ ಬ್ರಾಹ್ಮಿ ಮೊದಲಾದ ಲಿಪಿಗಳು ಕನ್ನಡಿಗರಿಗೆ ಪರಿಚಯವಾಗಿದ್ದುವು. ಮುಂದೆ ಬ್ರಾಹ್ಮಿಯಿಂದ ಹುಟ್ಟಿದ ದುಂಡಾದ ಲಿಪಿಯನ್ನು ಕನ್ನಡಿಗರು ತಮ್ಮದಾಗಿ ಮಾಡಿಕೊಂಡು ಸೊಬಗಿನಿಂದ ವಿಕಾಸಗೊಳಿಸಿದರು. ಸು. ೪ನೆಯ ಶತಮಾನದಿಂದ ಕನ್ನಡದಲ್ಲಿ ಬರೆದ ಬರಹಗಳು ದೊರೆಯುತ್ತವೆ.

ಇನ್ನು ಶಿಕ್ಷಣ ವಿಧಾನದತ್ತ ಹೊರಳುವ. ವಿದ್ಯೆಯ ಮಹತ್ವ ಹಿಂದಿನ ಕಾಲದಲ್ಲಿ ಕಡಿಮೆಯಿರಲಿಲ್ಲವಾದರೂ ಕೇವಲ ಪುಸ್ತಕ ಪಾಂಡಿತ್ಯವೇ ಶಿಕ್ಷಣದ ಸರ್ವಸ್ವವಾಗಿರಲಿಲ್ಲ. ಶಿಕ್ಷಣಕ್ರಮ ಪರೀಕ್ಷಾ ಯಂತ್ರದ ಆಡಂಬರಕ್ಕೆ ಸಿಲುಕಿರಲಿಲ್ಲ. ಬ್ರಾಹ್ಮಣ ಮೊದಲಾದ ಉಚ್ಚವರ್ಗಗಳಲ್ಲಿ ವಿದ್ಯಾಸಂಸ್ಕಾರ ಹೆಚ್ಚಾಗಿದ್ದಿತು. ದೇಶಭಾಷೆಯ ಪ್ರಾಥಮಿಕ ಶಿಕ್ಷಣವನ್ನು ಕೊಡುವ ಶಾಲೆಗಳು ಸಾಮಾನ್ಯವಾಗಿ ಹಳ್ಳಿಹಳ್ಳಿಗೆ ನಡೆಯುತ್ತಿದ್ದುವು.[೧] ಇವುಗಳಲ್ಲಿ ಓದು, ಬರಹ ಮತ್ತು ವ್ಯವಹಾರ ಗಣಿತದ ಶಿಕ್ಷಣ ತಕ್ಕಮಟ್ಟಿಗೆ ದೊರೆಯುತ್ತಿದ್ದುವು. ಉಚ್ಚಜ್ಞಾನದ ನಿಧಿಯಾದುದುರಿಂದಲೂ ಎಲ್ಲ ದೇಶಭಾಷೆಗಳಿಗೆ ಮೂಲಾಧಾರವಾದುದರಿಂದಲೂ ಸಂಸ್ಕೃತ ವಿದ್ಯೆ ಪ್ರೌಢ (ಮಧ್ಯಮ ಮತ್ತು ಉಚ್ಚ) ವ್ಯಾಸಂಗದ ಪ್ರಧಾನ ವಿಷಯವಾಗಿದ್ದಿತು. ಬ್ರಾಹ್ಮಣಾದಿ ಪಂಡಿತ ವರ್ಗದವರು ಸಂಸ್ಕೃತ ವಿದ್ಯಾಪರಂಪರೆಯನ್ನೇ ಆಸ್ಥೆಯಿಂದ ಮುಂದುವರಿಸು

---

೧. KK : p. 287

ವವರಾಗಿದ್ದರು. ಜೈನರು ಮತ್ತು ವೀರಶೈವರು ಕನ್ನಡವನ್ನು ಧರ್ಮಭಾಷೆ, ಲೋಕಭಾಷೆಯಾಗಿ ಮಾಡಿಕೊಂಡು ಅದರಲ್ಲಿ ಗ್ರಂಥರಚನೆ ವ್ಯಾಸಂಗಗಳನ್ನು ಹೆಚ್ಚಾಗಿ ಪುರಸ್ಕರಿಸಿದುದರಿಂದ ಕನ್ನಡ ತಲೆಯೆತ್ತಿ ಮನ್ನಣೆಗೆ ಅರ್ಹವಾಯಿತು. ಬರುಬರುತ್ತ ಪ್ರೌಢ ಅಧ್ಯಯನದಲ್ಲಿಯೂ ಕನ್ನಡಕ್ಕೆ ಸ್ಥಾನಮಾನಗಳು ಲಭಿಸಿದುವು.

ದೇವಾಲಯ, ಮಠ, ಬ್ರಹ್ಮಪುರಿ, ಅಗ್ರಹಾರ ಇವುಗಳು ಪ್ರೌಢಶಿಕ್ಷಣದ ಸ್ಥಾನಗಳಾಗಿದ್ದುವು. ಇವುಗಳಲ್ಲಿ ಧಾರ್ಮಿಕ ವಿದ್ಯೆಯ ನೆರೆಯಲ್ಲಿ ಲೌಕಿಕ ವಿದ್ಯೆಯ ವ್ಯಾಸಂಗ ಕೆಲಮಟ್ಟಿಗೆ ನಡೆಯುತ್ತಿದ್ದಿತು. ಇದಲ್ಲದೆ ಕೆಲವೊಂದು ಊರುಗಳಲ್ಲಿ ಸ್ಥಾಪಿತವಾದ ವಿದ್ಯಾಪೀಠಗಳು ಮತ್ತು ಘಟಿಕಾಸ್ಥಾನಗಳು ಪ್ರೌಢಶಿಕ್ಷಣದ ಕೇಂದ್ರಗಳಾಗಿದ್ದುವು. ಈ ಸಂಸ್ಥೆಗಳಲ್ಲಿ ಮಧ್ಯಮ ಮತ್ತು ಉಚ್ಚ ತರಗತಿಯ ವಿದ್ಯಾವ್ಯಾಸಂಗ ಸಾಗುತ್ತಿದ್ದಿತು. ಕಾವ್ಯ, ಸಾಹಿತ್ಯ, ವ್ಯಾಕರಣ, ಇತಿಹಾಸ, ಪುರಾಣ ಮೊದಲಾದುವು ಮಧ್ಯಮ ತರಗತಿಯ ಶಿಕ್ಷಣ ವಿಷಯಗಳಾಗಿದ್ದುವು. ವೇದ, ವೇದಾಂಗ, ದರ್ಶನ, ಮೀಮಾಂಸೆ, ಜ್ಯೋತಿಷ, ನ್ಯಾಯ, ವ್ಯಾಕರಣ, ಇತಿಹಾಸ, ಪುರಾಣ, ಗಣಿತ, ವೈದ್ಯಕ, ಧರ್ಮಶಾಸ್ತ್ರ, ಸಮಯಸ್ಫೂರ್ತಿ, ಪ್ರವಚನ ಸಾಮರ್ಥ್ಯ, ವಾದಪಟುತ್ವ ಇವುಗಳು ಸಾಮಾನ್ಯವಾಗಿ ಸುಶಿಕ್ಷಿತನ ಯೋಗ್ಯತೆಯನ್ನು ಪರೀಕ್ಷಿಸುವ ಒರೆಗಲ್ಲುಗಳಾಗಿದ್ದು, ಇವುಗಳಲ್ಲಿ ಪ್ರಾವೀಣ್ಯವನ್ನು ಸಂಪಾದಿಸಿದನು. ವಿದ್ಯಾ ಪಾರಂಗತನೆನಿಸುತ್ತಿದ್ದನು.

ಬೌದ್ಧ, ಜೈನ, ಕಾಳಾಮುಖ, ವೀರಶೈವಾದಿ ಮತೀಯರು ಇತರ ಸಾಮಾನ್ಯವಾದ ವಿಷಯಗಳಲ್ಲದೆ ತಂತಮ್ಮ ಧರ್ಮಮತಗ್ರಂಥಗಳನ್ನು ಆಸ್ಥೆಯಿಂದ ಅಭ್ಯಸಿಸುತ್ತಿದ್ದರು. ಕ್ಷತ್ರಿಯಾದಿ ವರ್ಗದವರು ಮಿಕ್ಕ ವಿಷಯಗಳೊಂದಿಗೆ ರಾಜನೀತಿ, ಅರ್ಥಶಾಸ್ತ್ರ, ಧರ್ಮಶಾಸ್ತ್ರ, ಧನುರ್ವಿದ್ಯೆ, ಭರತಶಾಸ್ತ್ರ, ಕಾಮಶಾಸ್ತ್ರ, ಸಂಗೀತ ಮೊದಲಾದ ವಿಷಯಗಳನ್ನು ಪರಿಶೀಲಿಸುವವರಾಗಿದ್ದರು.

ಕೃಷಿ, ಕೈಗಾರಿಕೆ, ಕಲೆ, ವ್ಯಾಪಾರ, ಉದ್ಯೋಗ ಮೊದಲಾದ ವೃತ್ತಿಶಿಕ್ಷಣದ ಸೌಲಭ್ಯಗಳು ಇದ್ದುವು. ಪೂರ್ವಾರ್ಜಿತ ಅನುವಂಶಿಕ ವೃತ್ತಿಯಲ್ಲಿಯೆ ಹೆಚ್ಚಿನ ಪ್ರಯೋಜನವೂ ಪ್ರಾಶಸ್ತ್ಯವೂ ಇದ್ದಿತು. ಮನೆಯಲ್ಲಿಯೂ ಉದ್ಯಮಸಂಘದ ಕರ್ಮಸ್ಥಾನಗಳಲ್ಲಿಯೂ ಅಂತೇವಾಸಿಯಾಗಿ ಇಂತಹ ಶಿಕ್ಷಣವನ್ನು ಪಡೆಯಬಹುದಾಗಿದ್ದಿತು.[೧] ಹೀಗೆ ಕಲಿಯುವವನು ಪ್ರತ್ಯಕ್ಷ ಅನುಭವದಿಂದಲೂ ನಿತ್ಯಪ್ರಯೋಗದಿಂದಲೂ ನುರಿತು ಸ್ವಲ್ಪ ದಿನಗಳಲ್ಲಿ ಪಾರಂಗತನಾಗುತ್ತಿದ್ದನು. ನೇಕಾರಿಕೆ, ಕಂಚುಗಾರಿಕೆ ಮೊದಲಾದ ಕೈಗಾರಿಕೆಗಳು, ಮೂರ್ತಿ, ಮಂದಿರ, ಶಿಲ್ಪಚಿತ್ರಗಳು, ಸಂಗೀತ ಮೊದಲಾದ ಲಲಿತಕಲೆಗಳು ಇಂತಹ ನಿರಂತರ ಪ್ರಯೋಗ ಶಾಲೆಗಳಲ್ಲಿ ಪರಿಪಾಕಗೊಂಡು ಅಸಾಧಾರಣವಾದ ಪ್ರೌಢಿಮೆಯನ್ನು ಪಡೆದುವು. ಬಾಳಿನಲ್ಲಿ ಕಾಳಗದ ಹಾವಳಿ ಹೆಚ್ಚಾಗಿದ್ದುದರಿಂದ ಸಂಗ್ರಾಮವಿದ್ಯೆಯ ಸಾಧನೆಯೂ

೧. EAI : p. 193

ನಡೆಯುತ್ತಿದ್ದಿತು. ಊರೂರಿಗೆ ಗ್ರಾಮಸೇನೆಯಿದ್ದು ಸಮರಪಟುಗಳು ನವಯುವಕರನ್ನು ಮಲ್ಲವಿದ್ಯೆಯಲ್ಲಿಯೂ ಶಸ್ತ್ರವಿದ್ಯೆಯಲ್ಲಿಯೂ ಪ್ರವೀಣರಾಗಿ ಮಾಡುತ್ತಿದ್ದರು.

ವಿದ್ಯಾಪ್ರಸಾರಕ್ಕಾಗಿ ರಾಜ್ಯಾಂಗದ ಒಂದು ಪ್ರತ್ಯೇಕ ವಿಭಾಗವನ್ನು ಏರ್ಪಡಿಸಿದ್ದರೂ ರಾಜರು, ಸಾಮಂತರು, ಮಂಡಲಪತಿಗಳು, ರಾಜ್ಯಾಧಿಕಾರಿಗಳು ಮೊದಲಾದವರು ವಿದ್ಯೆಗೆ ಸಾಕಷ್ಟು ಪ್ರೋತ್ಸಾಹವೀಯುತ್ತಿದ್ದರು. ವಿದ್ಯಾಭಿವೃದ್ಧಿಯೂ ಪಂಡಿತ ಪೋಷಣೆಯೂ ಅರಸರ ಮುಖ್ಯ ಕರ್ತವ್ಯಗಳಲ್ಲಿ ಒಂದಾಗಿತ್ತು. ಅರಸರು, ಅಧಿಕಾರಿಗಳು, ಅಗ್ರಹಾರ ಮುಂತಾದ ವಿದ್ಯಾನಿಲಯಗಳಿಗೆ ವಿಪುಲ ವೃತ್ತಿಗಳನ್ನು ನೀಡುತ್ತಿದ್ದರು. ಇದಲ್ಲದೆ ಹಲವು ಸ್ಥಿತಿವಂತರು ಸ್ವಯಂಪ್ರೇರಣೆಯಿಂದ ಅನೇಕ ವಿದ್ಯಾನಿಲಯುಗಳನ್ನು ಸ್ಥಾಪಿಸಿ ಅವುಗಳಿಗೆ ಸ್ಥಿರವಾದ ಜೀವನವನ್ನು ಕಲ್ಪಿಸಿಕೊಡುತ್ತಿದ್ದರು. ಉಪಾಧ್ಯಾಯರು ನಿಶ್ಚಿಂತರಾಗಿ ಸುಖಜೀವನವನ್ನು ಸಾಗಿಸುವ ಅನುಕೂಲವಿದ್ದುದರಿಂದ ವಿದ್ಯಾವ್ಯಾಸಂಗದಲ್ಲಿಯೇ ತಮ್ಮ ಆಯುಷ್ಯವನ್ನು ಸವೆಸುತ್ತಿದ್ದರು. ವಿದ್ಯಾರ್ಥಿಗಳು ವಿದ್ಯೆಗಾಗಿ ತೆರ ಕೊಡಬೇಕಾಗುತ್ತಿರಲಿಲ್ಲ. ಮಾತ್ರವಲ್ಲ, ಅನ್ನ ವಸ್ತ್ರಾದಿ ಸೌಕರ್ಯಗಳೂ ಅವರಿಗೆ ಒದಗುತ್ತಿದ್ದುವು. ಹೀಗಾಗಿ ವಿದ್ಯಾರ್ಜನೆ ಭಾರವೆನಿಸುತ್ತಿರಲಿಲ್ಲ. ಈ ಮೇರೆಗೆ ವಿದ್ಯೆಗೆ ಪ್ರೋತ್ಸಾಹ ದೊರೆಯುತ್ತಿದ್ದುದರಿಂದ ಎಲ್ಲೆಲ್ಲಿಯೂ ವಿದ್ಯಾವಾತಾವರಣವೂ ವಿದ್ಯಾಗೌರವವೂ ಸ್ಥಾಪಿತವಾಗಿ ವಿದ್ಯಾಪ್ರಸಾರಕ್ಕೆ ಬಹಳ ಸಹಾಯವಾಗುತ್ತಿದ್ದಿತು.

ರಾಜಾಸ್ಥಾನ, ದೇವಾಲಯ, ಮಠ ಮುಂತಾದೆಡೆಯಲ್ಲಿ ಪಂಡಿತ ಸಮ್ಮೇಲನಗಳೂ ವಿದ್ವದ್ಗೋಷ್ಠಿಗಳೂ ನೆರೆದು ಕಾವ್ಯಾಲಾಪಗಳೂ ಶಾಸ್ತ್ರ ಚರ್ಚೆಗಳೂ ನಡೆಯುತ್ತಿದ್ದವು. ಈ ವಾದಗಳು ಎರಡು ವಿಧವಾಗಿದ್ದವು. ಒಂದು, ತತ್ವಜಿಜ್ಞಾಸೆಯಿಂದ ಪ್ರೇರಿತವಾದ ಸ್ನೇಹ ಸಂವಾದಗಳು. ಎರಡು, ಭಿನ್ನಮತೀಯವಾದಿಗಳು ಅನ್ಯೋನ್ಯ ಜಿಗೀಷೆಯಿಂದ ಹೂಡುವ ವಾಕ್‌ಸಮರಗಳು. ಎರಡನೆಯ ಜಾತಿಗೆ ಸೇರಿದವುಗಳಲ್ಲಿ ಪ್ರಖ್ಯಾತವಾದ ಕೆಲವನ್ನು ಇಲ್ಲಿ ನಿರ್ದೇಶಿಸಬಹುದು. ಗಂಗಕುಲದ ಹರಿವರ್ಮನ ಆಳಿಕೆಯಲ್ಲಿ ವಾದಿಮದಗಜೇಂದ್ರನೆಂಬ ಬೌದ್ಧಪಂಡಿತನು ಆಸ್ಥಾನಪಂಡಿತರನ್ನು ಕೆಣಕಿ ಮಾಧವಭಟ್ಟನೆಂಬ ಬ್ರಾಹ್ಮಣನಿಂದ ಪರಾಜಿತನಾದನು.[೧] ಜೈನದರ್ಶನಾಚಾರ್ಯನಾದ ಸಮಂತಭದ್ರನು ಅದ್ವತೀಯವಾದ ಪಟುತ್ವದಿಂದ ಇದಿರಾಳಿಯನ್ನು ಆಹ್ವಾನಿಸುತ್ತ ಕಂಚಿಯವರೆಗೆ ದೇಶಸಂಚಾರ ಮಾಡಿದನು ಎಂದು ಐತಿಹ್ಯವಿದೆ. ಇದೇ ಮೇರೆ ಬೌದ್ಧರನ್ನು ಸದೆಬಡಿದ ಜೈನ ವಾದಾಗ್ರಣಿ ಅಕಳಂಕನ ಹೆಸರು ಸುವಿಶ್ರುತವಾಗಿದೆ. ಇದೇ ಕ್ರಮವಾಗಿ ಶಂಕರಾಚಾರ್ಯ, ಮಂಡನಮಿಶ್ರ, ಬಸವೇಶ್ವರ, ಚೆನ್ನಬಸವ, ಜಯತೀರ್ಥ, ವಿದ್ಯಾರಣ್ಯ, ವೇದಾಂತ ದೇಶಿಕಾಚಾರ್ಯ, ಅಪ್ಪಯ್ಯದೀಕ್ಷಿತ, ವ್ಯಾಸಯೋಗಿ, ವಾದಿವಿದ್ಯಾನಂದ ಮೊದಲಾದ ಪ್ರತಿಭಾಮೂರ್ತಿಗಳು, ಸ್ವಮತಸ್ಥಾಪನೆಯಲ್ಲಿ ಪ್ರಕಟಿಸಿದ ಅಸಾಧಾರಣವಾದ ಪಾಂಡಿತ್ಯ, ಅಸದೃಶವಾದ ವಾದಕೌಶಲ, ಆಶ್ಚರ್ಯಕರವಾದ ದಿಗ್ವಿಜಯಗಳು ಚಿರಸ್ಮರಣೀಯವಾಗಿವೆ.

೧. EI:VIII p. 40

ಬಹುಭಾಷಾಪ್ರವೀಣತೆ, ಆಶುಕವಿತ್ವ, ಅದ್ಭುತ ಸ್ಮರಣಶಕ್ತಿ ಮುಂತಾದ ಗುಣವಿಶೇಷಗಳಿಂದ ನಾಮಾಂಕಿತರಾದ ವಿದ್ವಾಂಸರನೇಕರ ಉದಾಹರಣೆಗಳು ಸಿಕ್ಕುತ್ತವೆ. ಅಷ್ಟಾವಧಾನ, ಶತಾವಧಾನ, ಚಿತ್ರಕವಿತೆ ಮುಂತಾದ ಬುದ್ಧಿಚಮತ್ಕಾರಗಳಿಂದ ಜನರನ್ನು ಬೆರಗುಗೊಳಿಸುವಂತಹ ಮೇಧಾವಿಗಳೂ ಅಲ್ಲಲ್ಲಿ ಬಾಳಿದ್ದರು.

ರಾಜಧಾನಿಯ ಸ್ಥಳಗಳೂ ದೊಡ್ಡ ಪಟ್ಟಣಗಳೂ ಪ್ರಾಯಿಕವಾಗಿ ಉಚ್ಚವಿದ್ಯೆಯ ನೆಲೆವೀಡುಗಳಾಗಿದ್ದವು. ಅರಸರಿಂದಲೂ, ಸ್ಥಿತಿವಂತರಿಂದಲೂ ವಿದ್ಯಾವಂತರಿಗೆ ಪೋಷಣೆ ದೊರೆಯುತ್ತಿದ್ದುದರಿಂದ ಇಂತಹ ಕಡೆಗಳಲ್ಲಿ ಅನಾಯಾಸವಾಗಿ ವಿದ್ಯೆಗೆ ಪ್ರೋತ್ಸಾಹ ಒದಗುತ್ತಿದ್ದಿತು. ಬನವಾಸಿ, ತಳಕಾಡು, ಐಹೊಳೆ, ಗೋಕರ್ಣ ಮುಂತಾದುವು ಪ್ರಾಚೀನ ವಿದ್ಯಾಕೇಂದ್ರಗಳಾಗಿದ್ದುವು. ಈಚಿನ ಕಾಲದಲ್ಲಿ ಸಾಲೋಟಗಿ, ವಿಜಾಪುರ, ಬಳ್ಳಿಗಾಮೆ, ಮಾಲಿಂಗಿ, ವಿಜಯನಗರ, ಶ್ರೀರಂಗಪಟ್ಟಣ ಮುಂತಾದವು ಉಚ್ಚವಿದ್ಯೆಯ ನೆಲೆವೀಡುಗಳಾಗಿದ್ದುವು. ಕ್ರಿ. ಶ. ೧೫ನೆಯ ಶತಮಾನದಲ್ಲಿ ವಿಜಯನಗರ ಉನ್ನತ ವಿಶ್ವವಿದ್ಯಾಲಯದೆಡೆಗೆ ಅಖಿಲ ಭಾರತೀಯ ವಿದ್ಯಾಕೇಂದ್ರವಾಗುವ ಘನತೆಯನ್ನು ಪಡೆಯಿತು.

ಇಂತು ಕನ್ನಡಿಗರ ವಿದ್ಯಾವಂತಿಕೆ ಆಳದಲ್ಲಿಯೂ ವಿಸ್ತಾರದಲ್ಲಿಯೂ ವೈವಿಧ್ಯದಲ್ಲಿಯೂ ಔನ್ನತ್ಯದಲ್ಲಿಯೂ ಶ್ಲಾಘನೀಯವಾದುದಾಗಿದ್ದಿತು. ಶಿಕ್ಷಿತರ ಪ್ರಮಾಣ ಅಂದಿನ ಕಾಲದಲ್ಲಿ ಇಂದಿಗಿಂತ ಬಹಳ ಹೆಚ್ಚಾಗಿದ್ದಿತು ಎಂದು ಪರಿಶೋಧಕರು ಅಭಿಪ್ರಾಯಪಟ್ಟಿರುವರು.[೧] ಅದು ಹಾಗಿರಲು, ಬರಿಯ ಅಕ್ಷರಜ್ಞಾನ ಇಲ್ಲವೆ ಬುದ್ಧಿ ಪ್ರದರ್ಶನಕ್ಕಿಂತ ಮನಸ್ಸಿನ ಪಕ್ವತೆ ಮತ್ತು ಹೃದಯ ವಿಕಾಸವೇ ನಿಜವಾದ ವಿದ್ಯಾವಂತಿಕೆ ಎಂಬುದನ್ನು ಅಂದಿನವರು ಮನಗಂಡಿದ್ದರು. ಶಿಕ್ಷಿತರಾಗಲಿ ಅಕ್ಷರಸ್ಥರಾಗಲಿ ಎನ್ನಲಾಗದ ಅನೇಕರು ಉತ್ತಮವಾದ ವಿದ್ಯಾಸಂಸ್ಕಾರದಿಂದ ಕೂಡಿದವರಾಗಿರುತ್ತಿದ್ದರು. ಕನ್ನಡಿಗರ ವಿದ್ಯಾ ಸಂಸ್ಕಾರವನ್ನು ಕುರಿತು ನೃಪತುಂಗನು (೯ನೆಯ ಶತಮಾನ) ಆಡಿದ ಮಾತುಗಳು ಎಷ್ಟು ಮನನೀಯವಾಗಿವೆ!

ಪದನಱಿದು ನುಡಿಯಲುಂ ನುಡಿ
ದುದನಱಿದಾರಯಲುಮಾರ್ಪರಾ ನಾಡವರ್ಗಳ್ ।
ಚದುರರ್ ನಿಜದಿಂ ಕುಱಿತೋ
ದದೆಯುಂ ಕಾಗ್ಯಪ್ರಯೋಗ ಪರಿಣತ ಮತಿಗಳ್ ॥

ಕುಱಿತರವಲ್ಲದೆ ಮತ್ತಂ
ಪೆಱರುಂ ತಂತಮ್ಮ ನುಡಿಯೊಳೆಲ್ಲರ್ ಜಾಣರ್ ।
ಕಿಱುವಕ್ಕಳುಮಾಮೂಗರು
ಮಱುಪಲ್ಕಱಿ ವರ್ ವಿವೇಕಮಂ ಮಾತುಗಳಂ॥[೨]

೧. ಒಂಭತ್ತನೆಯ ಶತಮಾನದಲ್ಲಿ ನೂರಕ್ಕೆ ೪೦ರಷ್ಟು ಜನರು ಅಕ್ಷರಜ್ಞರಾಗಿದ್ದರೆಂದು ಶ್ರೀ ಅಳತೇಕರರು ಸೂಚಿಸಿರುವರು. (EAI : p 214) ಇದನ್ನು ನಂಬಬಹುದಾದಲ್ಲಿ ಈ ಪ್ರಮಾಣ ಮುಂದೆ ವಿಜಯನಗರ ಕಾಲದವರೆಗೆ ಇದಕ್ಕೂ ಹೆಚ್ಚಾಗಿ ಬೆಳೆಯಿತು ಎಂದು ಹೇಳಬೇಕಾಗುತ್ತದೆ.
೨. ಕವಿರಾಜಮಾರ್ಗ, ಪ್ರಥಮ ಪರಿಚ್ಛೇದ, ಪದ್ಯ ೩೮, ೩೯.

೫. ವಾಙ್ಮಯ ವಿಕಾಸ

ವಿದ್ಯಾವಂತಿಕೆಯಲ್ಲಿ ಮುಂದುವರಿದ ಕನ್ನಡಿಗರು ವಿದ್ಯಾನಿರ್ಮಿತಿಯ ರಂಗದಲ್ಲಿ ಹಿಂದುಳಿದವರಾಗಿರಲಿಲ್ಲ. ಅವರು ಕನ್ನಡದಂತೆ, ಸಂಸ್ಕೃತ, ಪ್ರಾಕೃತ, ತೆಲುಗು, ತಮಿಳು ಮೊದಲಾದ ಭಾಷೆಗಳಲ್ಲಿ ಬಗೆಬಗೆಯ ಗ್ರಂಥಗಳನ್ನು ರಚಿಸಿಯೂ ಪ್ರೋತ್ಸಾಹಿಸಿಯೂ ಭಾರತೀಯ ವಾಙ್ಮಯವನ್ನು ವಿಸ್ತಾರಗೊಳಿಸಿರುವರು. ಕನ್ನಡ ಭಾಷಾ ಸಾಹಿತ್ಯಗಳ ಚರಿತ್ರೆ ಇನ್ನೊಂದು ಅಧ್ಯಾಯದಲ್ಲಿ ಸ್ವತಂತ್ರವಾಗಿ ವಿವೇಚಿಸಲಿರುವುದರಿಂದ ಇಲ್ಲಿ ಅವನ್ನುಳಿದು ಮಿಕ್ಕ ವಾಙ್ಮಯ ಪರಿಯನ್ನು ಕಿರಿದರಲ್ಲಿ ಪರಾಂಬರಿಸುವ.

ವಿವಿಧ ಭಾಷಾ ಕ್ಷೇತ್ರಗಳಲ್ಲಿ ಕರ್ನಾಟಕ ಮಾಡಿದ ವಾಙ್ಮಯ ಸೇವೆ ಅಪಾರವಾಗಿದೆ. ಅದರಲ್ಲಿ ಸ್ವಲ್ಪ ಭಾಗ ಮಾತ್ರ ಈಗ ಬೆಳಕಿಗೆ ಬಂದಿದೆ. ಈ ಬಗೆಯ ವಾಙ್ಮಯದಲ್ಲಿ ಸ್ಥೂಲವಾಗಿ ಎರಡು ವಿಭಾಗಗಳನ್ನು ಕಲ್ಪಿಸಬಹುದು. ಧಾರ್ಮಿಕ ಮತ್ತು ಲೌಕಿಕ. ಕೇವಲ ಲೌಕಿಕ ವಿಷಯಗಳನ್ನು ಪ್ರತಿಪಾದಿಸುವ ಗ್ರಂಥಗಳು ಸಾಮಾನ್ಯವಾಗಿ ಎಲ್ಲ ಭಾಷೆಗಳಲ್ಲಿಯೂ ಸ್ವಲ್ಪವಾಗಿವೆ. ಧರ್ಮ, ಮತ, ನೀತಿಯನ್ನು ಬೋಧಿಸುವ ಗ್ರಂಥಗಳು ಬಹಳ ಹೆಚ್ಚಾಗಿವೆ. ಬೌದ್ಧ, ಜೈನ, ರಾಮಾನುಜ, ವೀರಶೈವ, ಮಾಧ್ವ ಮೊದಲಾದ ಎಲ್ಲ ಮತೀಯರು ಈ ಉಭಯ ವಿಧ ವಾಙ್ಮಯ ಸೃಷ್ಟಿಗೆ ಸಹಾಯವಾಗಿರುವರು. ಈ ಸಾರಸ್ವತ ಸಮಾರಂಭದ ಮುಂಭಾಗದಲ್ಲಿ ಕೆಲವು ಹೆಂಗಳೆಯರೂ ಹಲವು ಅರಸರೂ ರಾರಾಜಿಸುತ್ತಿರುವುದು ಹೆಚ್ಚಾಗಿ ಹೆಮ್ಮೆಪಡುವಂತಹ ಸಂದರ್ಭವಾಗಿದೆ.

ಪ್ರಾಕೃತ ವಾಙ್ಮಯ: ಕ್ರಿ.ಶ. ೩ನೆಯ ಶತಮಾನದಿಂದ ಕ್ರಿಸ್ತಯುಗದ ೧೧ನೆಯ ಶತಮಾನದವರೆಗೆ ಶಾಸನ ಮತ್ತು ಗ್ರಂಥಗಳ ರಚನೆಗೆ ಪ್ರಾಕೃತವನ್ನು ಬಳಸುತ್ತಿದ್ದರು. ಶಾತವಾಹನ, ಕದಂಬ ಮನೆತನಗಳ ಅರಸರು ಮತ್ತು ಜೈನ ಪಂಡಿತರು ಈ ಭಾಷೆಯನ್ನು ಹೆಚ್ಚಾಗಿ ಪೋಷಿಸಿದರು. ಗಾಥಾಸಪ್ತಶತೀ ಹಾಗೂ ಬೃಹತ್ಕಥೆ ಶಾತವಾಹನ ಕಾಲದಲ್ಲಿ ರಚಿತವಾದ ಕೃತಿಗಾಳಗಿವೆ. ಜನತಾ ಗೌರವವನ್ನು ಪಡೆದ ಭಾಷೆಯೆ ಮತಪ್ರಚಾರಕ್ಕೆ ಉಪಯುಕ್ತವಾದುದು ಎಂಬ ರಹಸ್ಯವನ್ನು ಅರಿತ ಜೈನರು ಪ್ರಾಕೃತದಲ್ಲಿ ಅನೇಕ ಮತಗ್ರಂಥಗಳನ್ನು ಬರೆದರು. ಇಂತಹವರಲ್ಲಿ **ಅನುಪ್ರೇಕ್ಷಾ** ಮುಂತಾದ ಕೃತಿಗಳನ್ನು ರಚಿಸಿದ ಕೊಂಡಕುಂದಾಚಾರ್ಯ (ಸು.೧ನೆಯ ಶತಮಾನ), ಸಮಂತಭದ್ರ (ಸು. ೨ನೆಯ ಶತಮಾನ) ಶ್ರೀವರ್ಧದೇವ (ಸು. ೭ನೆಯ ಶತಮಾನ) ಮೊದಲಾದ ಪಂಡಿತೋತ್ತಮರ ಹೆಸರುಗಳು ಸುವಿಶ್ರುತವಾಗಿವೆ.

ಸಂಸ್ಕೃತ ವಾಙ್ಮಯ: ಪ್ರಾಚೀನತೆಯಿಂದಲೂ ಧಾರ್ಮಿಕ ಪಾವಿತ್ರ್ಯದಿಂದಲೂ ಮನ್ನಣೆವೆತ್ತ ಭಾಷೆಯಾದುದರಿಂದ ಸಂಸ್ಕೃತಕ್ಕೆ ಬಹಳ ಪೂರ್ವಕಾಲದಿಂದ ಪುರಸ್ಕಾರ ದೊರತಿತ್ತು. ಕರ್ನಾಟಕದಲ್ಲಿ ಕ್ರಿಸ್ತಯುಗದ ಆರಂಭದಿಂದ ಸಂಸ್ಕೃತ ಗ್ರಂಥರಚನೆ ಪ್ರಾರಂಭವಾಗಿ ಈ ಶತಮಾನದವರೆಗೆ ನಡೆದುಬಂದಿದೆ. ಈ ಎರಡು ಸಾವಿರ

ವರ್ಷಗಳಲ್ಲಿ ಪುರಾಣ, ಸಾಹಿತ್ಯ, ತತ್ತ್ವಜ್ಞಾನ, ಶಾಸ್ತ್ರ, ಕಲೆ, ಚರಿತ್ರೆ ಮುಂತಾದ ನಾನಾ ಶಾಖೆಗಳಲ್ಲಿ ಅನೇಕ ಕೃತಿಗಳು ನಿರ್ಮಾಣವಾದುವು. ವೈದಿಕರಲ್ಲದೆ, ಜೈನ, ವೀರಶೈವ ಮತೀಯರು ಸಂಸ್ಕೃತದಲ್ಲಿ ಮತಗ್ರಂಥಗಳನ್ನು ವಿರಚಿಸಿ ಸ್ವಮತಕ್ಕೆ ಪ್ರಾಶಸ್ತ್ಯವನ್ನು ತಂದುಕೊಟ್ಟರು.

ಸಾಮಾನ್ಯವಾಗಿ ಎಲ್ಲ ಅರಸರು ವಿಶೇಷವಾದ ಆದರದಿಂದ ಸಂಸ್ಕೃತ ವಾಙ್ಮಯವನ್ನು ಪೋಷಿಸುವವರಾಗಿದ್ದರು. ಇವರೆಲ್ಲರಿಗಿಂತಲೂ ವಿಜಯನಗರದ ಅರಸರಿಂದ ಸಂಸ್ಕೃತ ವಾಙ್ಮಯದ ವ್ಯಾಸಂಗ ಮತ್ತು ನಿರ್ಮಿತಿಗೆ ಒದಗಿದ ಪ್ರೋತ್ಸಾಹ ಮಿಗಿಲಾದುದು. ಈ ಪ್ರೋತ್ಸಾಹದಿಂದ ಮೈವೆತ್ತ ವಾಙ್ಮಯ ವೈವಿಧ್ಯದಲ್ಲಿಯೂ ವಿಪುಲತೆಯಲ್ಲಿಯೂ ಅಸಮಾನವಾಗಿದೆ. ಸಂಸ್ಕೃತ ವಾಙ್ಮಯದ ಅಪೂರ್ವವಾದ ಈ ಪುನರುಜ್ಜೀವನಕ್ಕೆ, ಈ ಸಾಮ್ರಾಜ್ಯದ ಮೂಲಕ ಹಿಂದೂಧರ್ಮ ಮತ್ತು ಸಂಸ್ಕೃತಿಯ ಬಗೆಗೆ ಜನಾಂಗದಲ್ಲಿ ಉದ್ದೀಪಿತವಾದ ಉತ್ಕಟ ಸ್ವಾಭಿಮಾನದ ಸತ್ತ್ವವೇ ಮುಖ್ಯ ಕಾರಣವೆಂದು ಹೇಳಬಹುದು.

ಅನೇಕ ಅರಸರು ಕವಿ ಪಂಡಿತರಿಗೆ ಪೋಷಕರಾಗಿರುವುದಲ್ಲದೆ ಸ್ವತಃ ಕವಿಗಳೂ ಗ್ರಂಥಕಾರರೂ ಆಗಿದ್ದರು. ಗಂಗಮನೆತನದ ದುರ್ವಿನೀತನು (೬ನೆಯ ಶತಮಾನ) ಗುಣಾಢ್ಯನ **ಬೃಹತ್ಕತೆಯನ್ನು** ಸಂಸ್ಕೃತಕ್ಕೆ ರೂಪಾಂತರಿಸಿದನು. ಬೃಹತ್ಕತೆಯ ಅನುವಾದಕರಲ್ಲಿ ಇವನೇ ಮೊದಲಿಗನು. ರಾಷ್ಟ್ರಕೂಟರ ನೃಪತುಂಗನು (೯ನೆಯ ಶತಮಾನ) **ಪ್ರಶ್ನೋತ್ತರಮಾಲಾ** ಎಂಬ ಗ್ರಂಥವನ್ನು ರಚಿಸಿದನೆಂದು ಜೈನರಲ್ಲಿ ಪ್ರತೀತಿಯಿದೆ. ಈ ಕೃತಿ ತಿಬೆಟ್ ಭಾಷೆಯಲ್ಲಿ ಅನುವಾದವಾಗಿದೆ. ಕಲ್ಯಾಣ ಚಾಳುಕ್ಯ ವಂಶದ ಭೂಲೋಕಮಲ್ಲನು (೧೨ನೆಯ ಶತಮಾನ) **ಮಾನಸೋಲ್ಲಾಸ** ಎಂಬ ರಾಜನೀತಿ ಗ್ರಂಥವನ್ನು ಬರೆದನು. ವಿಜಯನಗರದ ಕೃಷ್ಣದೇವರಾಯನು (೧೬ನೆಯ ಶತಮಾನ) **ಜಾಂಬವತೀ ಕಲ್ಯಾಣಂ, ಮದಲಸಾ ಚರಿತ್ರಂ** ಮುಂತಾದ ಸಾಹಿತ್ಯ ಕೃತಿಗಳನ್ನು ರಚಿಸಿದನು. ಕೆಳದಿಯ ಬಸವಪ್ಪನಾಯಕನು (೧೮ನೆಯ ಶತಮಾನ) ನಾನಾಶಾಸ್ತ್ರದರ್ಶನಗಳ ಸಾರರೂಪವಾದ **ಶಿವತತ್ತ್ವ ರತ್ನಾಕರ** ವನ್ನು ನಿರ್ಮಿಸಿದನು. ಮೈಸೂರ ಒಡೆಯರಾದ ಚಿಕ್ಕದೇವರಾಜರು (೧೭ನೆಯ ಶತಮಾನ), ಮತ್ತು ಮುಮ್ಮಡಿ ಕೃಷ್ಣರಾಜರು (೧೯ನೆಯ ಶತಮಾನ) ಅನೇಕ ಗ್ರಂಥಗಳನ್ನು ರಚಿಸಿದರು.

ಸಂಸ್ಕೃತ ಸಾಹಿತ್ಯಕ್ಕೆ ಸೇವೆಯನ್ನು ಸಲ್ಲಿಸಿದ ಕೆಲವು ಮಹಿಳೆಯರ ಹೆಸರುಗಳು ಸಿಕ್ಕುತ್ತವೆ. ಇಂತಹವರಲ್ಲಿ ವಿಜಯಕ್ಕ (೧೭ನೆಯ ಶತಮಾನ) ಅಗ್ರಗಣ್ಯಳು.[೧] ವಿಜಯನಗರದ ಬುಕ್ಕರಾಯನ ಸೊಸೆಯಾದ ಗಂಗಾದೇವಿ (೧೪ನೇ ಶತಮಾನ) **ಮಧುರಾವಿಜಯಂ** ಎಂಬ ಮಧುರ ಕಾವ್ಯಕೃತಿಯಿಂದ ಸಂಸ್ಕೃತ ಸಾಹಿತ್ಯದಲ್ಲಿ ಚಿರಕೀರ್ತಿಯನ್ನು ಪಡೆದಿರುವಳು. ಇದೇ ಸಂದರ್ಭದಲ್ಲಿ ಭಾಸ್ಕರಾಚಾರ್ಯ ಪುತ್ರಿಯಾದ ಲೀಲಾವತಿ (೧೨ನೆಯ ಶತಮಾನ) **ವರದಾಂಬಿಕಾ ಪರಿಣಯಂ**

೧. ಮಿಂಚಿದ ಮಹಿಳೆಯರು (ಪು. ೬೯–೭೨)

ಎಂಬ ಚಂಪೂಕಾವ್ಯದ ಕರ್ತ್ರಿಯಾದ ತಿರುಮಲಾಂಬೆ ಮೊದಲಾದವರು ನಿರ್ದೇಶಾರ್ಹರಾಗಿರುವರು.

ಇನ್ನು ಮತೀಯ ವಾಙ್ಮಯವನ್ನು ಪರಿಶೀಲಿಸುವ. ಜೈನ ಆಚಾರ್ಯ ಮಕುಟಮಣಿಯಾದ ಸಮಂತಭದ್ರರು (೨ನೆಯ ಶತಮಾನ) **ಆಪ್ತಮೀಮಾಂಸಾ ರತ್ನ ಕರಂಡಕ** ಮೊದಾದ ಗ್ರಂಥಗಳನ್ನು ರಚಿಸಿದರು. ಬೌದ್ಧಮತ ದಾವಾನಲವಾದ ಅಕಳಂಕನು (೭ನೆಯ ಶತಮಾನ) **ಅಷ್ಟಶತೀ** ಮುಂತಾದ ಅನೇಕ ಸಿದ್ಧಾಂತ ಗ್ರಂಥಗಳನ್ನು ಬರೆದನು. ಪೂಜ್ಯಪಾದ (೫ನೆಯ ಶತಮಾನ), ರವಿಷೇಣ (೭ನೆಯ ಶತಮಾನ) ಜಿನಸೇನ (೯ನೆಯ ಶತಮಾನ), ಗುಣಭದ್ರ ಮೊದಲಾದ ಜೈನ ಪಂಡಿತಾಚಾರ್ಯರು ಮತವಿವರಣಾತ್ಮಕವಾದ ಶಾಸ್ತ್ರ ಪುರಾಣಾದಿ ಗ್ರಂಥಗಳನ್ನು ರಚಿಸಿದರು.

ಶ್ರೀಪತಿಪಂಡಿತನ (೧೪ನೆಯ ಶತಮಾನ) **ಶ್ರೀಕರಭಾಷ್ಯ** ವೀರಶೈವ ಆಗಮಗಳನ್ನು ಪ್ರತಿಪಾದಿಸುವುದಾಗಿದೆ. ಪಾಲ್ಕುರಿಕೆ ಸೋಮನಾಥನು (೧೨ನೆಯ ಶತಮಾನ) ಕನ್ನಡ, ತೆಲುಗು ಭಾಷೆಗಳಲ್ಲದೆ, ಸಂಸ್ಕೃತದಲ್ಲಿಯೂ ಗ್ರಂಥರಚನೆ ಮಾಡಿ ವೀರಶೈವ ಮತವನ್ನು ಕರ್ನಾಟಕ ಆಂಧ್ರಪ್ರದೇಶಗಳಲ್ಲಿ ಪ್ರಚುರಪಡಿಸಿದನು. ವಿಜಯನಗರ ಕಾಲದಲ್ಲಿಯೂ ಈಚೆಗೂ ವೀರಶೈವ ತತ್ತ್ವಪ್ರದೀಪಕವಾದ ಟೀಕೆ, ವ್ಯಾಖ್ಯಾನ ರೂಪವಾದ ಅನೇಕ ಗ್ರಂಥಗಳು ನಿರ್ಮಾಣವಾದುವು.

ಅದ್ವೈತಮತ ಸಂಸ್ಥಾಪಕರಾದ ಶಂಕರಾಚಾರ್ಯರು (೮ನೆಯ ಶತಮಾನ) **ಬ್ರಹ್ಮಸೂತ್ರಭಾಷ್ಯವೇ** ಮೊದಲಾದ ಹಲವು ಗ್ರಂಥಗಳನ್ನು ಬರೆದರು. ಇವರ ಶಿಷ್ಯಪರಂಪರೆಯಲ್ಲಿ ಉದಯಿಸಿದ ಸುರೇಶ್ವರಾಚಾರ್ಯ, ವಿದ್ಯಾರಣ್ಯ ಮೊದಲಾದ ಅನೇಕ ವಿದ್ವತ್‌ಪ್ರವರರು ವಿವಿಧ ವೇದಾಂತ ಕೃತಿಗಳನ್ನು ನಿರ್ಮಿಸಿ ಅದ್ವೈತ ಮತವನ್ನು ಅಭಿವೃದ್ಧಿಗೊಳಿಸಿದರು. ಇವುಗಳಲ್ಲಿ ಸುರೇಶ್ವರಾಚಾರ್ಯರ **ನೈಷ್ಕರ್ಮ್ಯಸಿದ್ಧಿ,** ವಿದ್ಯಾರಣ್ಯರ **ಪಂಚದಶಿ,** ಸದಾನಂದರ **ವೇದಾಂತಸಾರ** ಇವುಗಳು ಅಗ್ರಗಣ್ಯವಾಗಿರುವುವು.

ಕ್ರಿ.ಶ. ೧೨ನೆಯ ಶತಮಾನದಲ್ಲಿ ಕರ್ನಾಟಕದ ಆಶ್ರಯ ಪಡೆದು ಇಲ್ಲಿ ನೆಲೆಗೊಂಡ ರಾಮಾನುಜರು ಮತ್ತು ಅವರ ಶಿಷ್ಯರು ವಿಶಿಷ್ಟಾದ್ವೈತ ಮತ ಬೋಧಕ ಸಾಹಿತ್ಯವನ್ನು ಸಲ್ಲಿಸಿದರು. ವಿಜಯನಗರ ಅರಸರ ಮತ್ತು ಮೈಸೂರು ಒಡೆಯರ ಪೋಷಣೆಯನ್ನು ಪಡೆದು ಅನೇಕ ಪಂಡಿತರು ಗ್ರಂಥರಚನೆಯನ್ನು ಮಾಡಿದರು. ಇಂತಹವರಲ್ಲಿ ಆಚಾರ್ಯಗ್ರೇಸರರೂ ನೂರಾರು ಗ್ರಂಥಗಳ ಕರ್ತಾರರೂ ಆದ ವೇದಾಂತ ದೇಶಿಕಾಚಾರ್ಯರು (ಕ್ರಿ.ಶ.೧೪ನೆಯ ಶತಮಾನ), ಹಾಗೂ ಅರವೀಡುವಂಶ ಗುರುಗಳೂ ಸಾತ್ವಿಕ ಬ್ರಹ್ಮವಿದ್ಯಾವಿಲಾಸ ಎಂಬ ವೇದಾಂತ ಗ್ರಂಥಕಾರರೂ ಆದ ಕುಮಾರ ತಿರುಮಲೆ ತಾತಾಚಾರ್ಯರು (ಕ್ರಿ.ಶ. ೧೬ನೆಯ ಶ.) ನಾಮಾಂಕಿತರಾಗಿರುವರು.

ಮಧ್ವಚಾರ್ಯರು (ಕ್ರಿ.ಶ. ೧೩ನೆಯ ಶತಮಾನ) ದ್ವೈತಮತ ಸ್ಥಾಪಕವಾದ ಮೂವತ್ತೇಳು ಗ್ರಂಥಗಳನ್ನು ನಿರ್ಮಿಸಿದರು. ಅವರ ಶಿಷ್ಯ ಸಂತತಿಯ ಅಕ್ಷೋಭ್ಯತೀರ್ಥ, ಜಯತೀರ್ಥ ಪ್ರಭೃತಿಗಳು ಈ ಪರಂಪರೆಯನ್ನು ಮುಂದುವರಿಸುವವರಾದರು. ಜಯತೀರ್ಥರ **ನ್ಯಾಯಸುಧೆ** (ಕ್ರಿ.ಶ. ೧೪ನೆಯ ಶ.) ಅಪೂರ್ವವಾದ ವೇದಾಂತ ಗ್ರಂಥವಾಗಿದೆ. ಇದೇ ಕ್ರಮದಲ್ಲಿ ವಿಜಯೀಂದ್ರ, ವ್ಯಾಸರಾಯ, ವಾದಿರಾಜ ಮುಂತಾದ ದಿಗಂತ ಪಂಡಿತರು ನೂರಾರು ಕೃತಿಗಳನ್ನು ರಚಿಸಿದರು.

ಮತವಾಙ್ಮಯದ ನೆರೆಯಲ್ಲಿ ಕಾವ್ಯ, ವ್ಯಾಕರಣ, ಜ್ಯೋತಿಷ್ಯ, ವೈದ್ಯಕ, ನ್ಯಾಯ ಮುಂತಾದ ಲೌಕಿಕವಾಙ್ಮಯ ಮೊದಲಿಂದಲೂ ಹುಟ್ಟುತ್ತಲೇ ಇದ್ದಿತು, ಉದ್ಗೀತಾಚಾರ್ಯನೆಂಬುವನು ಕದಂಬರ ಆಳಿಕೆಯಲ್ಲಿ ಋಗ್ವೇದಕ್ಕೆ ವ್ಯಾಖ್ಯಾನವನ್ನು ಬರೆದನು. ಈಗ ತಿಳಿದಮಟ್ಟಿಗೆ ಇದು ಬಹು ಪ್ರಾಚೀನವಾಧ ವೇದ ವ್ಯಾಖ್ಯಾನವೆಂದು ಹೇಳಬಹುದು. ಪೂಜ್ಯಪಾದನು **ಶಬ್ದಾವತಾರ, ಜೈನೇಂದ್ರ** ಎಂಬ ಘನವಾದ ವ್ಯಾಕರಣ ಗ್ರಂಥಗಳನ್ನು ಬರೆದನು. (ಕ್ರಿ.ಶ.೫ನೆಯ ಶ.) ತ್ರಿವಿಕ್ರಮ ಕವಿಯ **ನಲಚಂಪೂಕಾವ್ಯ** ಹತ್ತನೆಯ ಶತಮಾನದ ಆದಿಯಲ್ಲಿ ಪ್ರಕಟವಾಯಿತು. ಇದು ಸಂಸ್ಕೃತದಲ್ಲಿಯೇ ಪ್ರಥಮ ಚಂಪೂಕಾವ್ಯವಾಗಿದ್ದು ಈ ಸಾಹಿತ್ಯರೂಪಕ್ಕೆ ಪ್ರೇರಣೆಯಿತ್ತ ಮಾನ ಕರ್ನಾಟಕಕ್ಕೆ ಸಲ್ಲುವುದಾಗಿದೆ.[೧] ಆರನೆಯ ವಿಕ್ರಮಾದಿತ್ಯನಿಂದ ಪೋಷಿತನಾದ ಬಿಲ್ಹಣನು **ವಿಕ್ರಮಾಂಕದೇವಚರಿತ** ಎಂಬ ಸರಸ ಚಾರಿತ್ರಕ ಕಾವ್ಯವನ್ನು ಬರೆದನು. (ಕ್ರಿ.ಶ. ೧೨ನೆಯ ಶ.) ಸಾಯಣಾಚಾರ್ಯರ ವಿಶ್ವವಿಖ್ಯಾತವಾದ ಸಮಗ್ರ **ವೇದಭಾಷ್ಯ**ವನ್ನು ಪ್ರಕಾಶಪಡಿಸಿದ ಅಸಾಧಾರಣ ಶ್ರೇಯಸ್ಸು ವಿಜಯನಗರದ ಸಂಸ್ಥಾಪಕರಿಗೆ ಸಲ್ಲುತ್ತದೆ. ಇದಲ್ಲದೆ ಸ್ಮೃತಿ, ದರ್ಶನ, ಯಜ್ಞ, ತಂತ್ರ, ಆಯುರ್ವೇದ, ಅಲಂಕಾರ ಮೊದಲಾದ ವಿವಿಧ ಶಾಸ್ತ್ರಗಳನ್ನು ಕುರಿತು ಸಾಯಣಾಚಾರ್ಯ, ಮೊದಲಾದವರಿಂದ ರಚಿತವಾದ ಅನೇಕ ಗ್ರಂಥಗಳು ಇದೇ ಕಾಲದಲ್ಲಿ ಹುಟ್ಟಿದವು (ಕ್ರಿ.ಶ. ೧೪ನೆಯ ಶ.). ವಿಜಯನಗರದ ಇಳಿಗಾಲದಲ್ಲಿ ಭಟ್ಟಾಕಳಂಕನು **ಕರ್ನಾಟಕ ಶಬ್ದಾನುಶಾಸನಂ** ಎಂಬ ಕನ್ನಡ ಭಾಷೆಯ ಪ್ರೌಢ ವ್ಯಾಕರಣ ಗ್ರಂಥವನ್ನು ಸಂಸ್ಕೃತದಲ್ಲಿ ರಚಿಸಿದನು (ಕ್ರಿ.ಶ. ೧೩ನೆಯ ಶ.).

ಕ್ರಿ.ಶ. ೧೨ನೆಯ ಶತಮಾನದಲ್ಲಿ ಯಾಜ್ಞವಲ್ಕ್ಯನ ಸ್ಮೃತಿಗೆ ಟೀಕಾ ರೂಪವಾದ ಎರಡು ಧರ್ಮಶಾಸ್ತ್ರ ಗ್ರಂಥಗಳು ಪ್ರಕಟವಾದವು. ಒಂದು ವಿಜ್ಞಾನೇಶ್ವರನ **ಮಿತಾಕ್ಷರಾ;** ಇನ್ನೊಂದು ಅಪರಾರ್ಕನ **ಧರ್ಮಶಾಸ್ತ್ರ ನಿಬಂಧ.** ಇವರಲ್ಲಿ ಎರಡನೆಯ ಗ್ರಂಥಕಾರನು ಕೊಂಕಣ ಶಿಲಾಹಾರ ಮನೆತನದವನಾಗಿದ್ದನು. ಸಾಳುವಗೋಪ ತಿಪ್ಪಭೂಪಾಲನ **ಕಾಲದೀಪಿಕೆ,** ರಾಮಾಮಾತ್ಯನ **ಸ್ವರಮೇಲ ಕಲಾನಿಧಿ,** ಕಲ್ಲಿನಾಥನ **ಸಂಗೀತ ರತ್ನಾಕರ** (ಕ್ರಿ.ಶ. ೧೫ನೆಯ ಶ.). ಇವು ವಿಜಯನಗರ ಕಾಲದಲ್ಲಿ ಹುಟ್ಟಿದ ಸಂಗೀತ ಶಾಸ್ತ್ರವನ್ನು ಕುರಿತ ಗ್ರಂಥಗಳಾಗಿವೆ.

---

೧. RK:p.408

ಶಾಸನರೂಪದಿಂದ ಪ್ರಕಟವಾದ ವಾಙ್ಮಯ ವಿಪುಲವಾಗಿದೆ. ಸುಮಾರು ಕ್ರಿ.ಶ. ೭ನೆಯ ಶತಮಾನದವರೆಗೆ ಕಲ್ಲಿನ ಮೇಲೆಯೂ ತಾಮ್ರದ ಹಲಗೆಯ ಮೇಲೆಯೂ ಅನೇಕ ರಾಜಶಾಸನಗಳು ಬರೆಯಲಾದುವು. ಅವುಗಳನ್ನು ರಚಿಸಿದವರು ಉತ್ತಮ ಕವಿಗಳೂ ಪಂಡಿತರೂ ಆಗಿದ್ದರು. ಇಂತಹವರಲ್ಲಿ ಐಹೊಳೆಯ ಸುಪ್ರಸಿದ್ಧ ಜೈನಶಾಸನ ಕವಿಯಾದ ರವಿಕೀರ್ತಿ, ವಿಜಯನಗರದ ಅನೇಕ ಶಾಸನಗಳನ್ನು ಬರೆದ ಐತಾಪುತ್ರ, ಸಭಾಪತಿ, ಮತ್ತು ರಾಮಕೋಟಿ ಇವರು ಪ್ರಖ್ಯಾತರಾಗಿರುವರು.

ಸಂಸ್ಕೃತ ಸಾಹಿತ್ಯದಲ್ಲಿ ಕೀರ್ತಿವೆತ್ತ ಭಾರವಿ ಮತ್ತು ದಂಡಿ ಈ ಕವಿಗಳ ಕಾವ್ಯ ರಚನೆಗೆ ಕರ್ನಾಟಕದಿಂದ ಕೆಲಮಟ್ಟಿಗಾದರೂ ಪ್ರೋತ್ಸಾಹ ಉಂಟಾಯಿತು ಎಂದು ತೋರುತ್ತದೆ. ಭಾಗವತ ಪುರಾಣದಲ್ಲಿ ಕನ್ನಡ ಸಾಹಿತ್ಯದ ನೆಳಲನ್ನು ಕಾಣಬಹುದು ಎಂದು ಪರಿಶೋಧಕರ ಸೂಚನೆ ಇದೆ. ಪೊನ್ನ, ರನ್ನ, ಷಡಕ್ಷರಿ ಮೊದಲಾದ ಕನ್ನಡ ಕವಿಪುಂಗವರು ಸಂಸ್ಕೃತದಲ್ಲಿಯೂ ನಿಷ್ಣಾತರಾಗಿದ್ದು ಗ್ರಂಥರಚನೆ ಮಾಡಿದ್ದಾರೆ.

ತೆಲುಗು ವಾಙ್ಮಯ: ತೆಲುಗು ಸಾಹಿತ್ಯ ಕನ್ನಡ ಸಾಹಿತ್ಯದಿಂದ ಪ್ರಚೋದನೆಯನ್ನು ಪಡೆದು ಮುಂದುವರಿಯಿತು. ಪಂಪಭಾರತದ ಚಂಪೂಶೈಲಿಯನ್ನು ಅನುಸರಿಸಿ ನನ್ನಯ ಕವಿ (೧೨ನೆ ಶತಮಾನ) ಆಂಧ್ರ ಮಹಾಭಾರತವನ್ನು ರಚಿಸಿದನು.[೧] ನೃಪತುಂಗನ **ಕವಿರಾಜಮಾರ್ಗ** ಭೀಮಕವಿಯ **ಕವಿಜನಾಶ್ರಯಮು** ಎಂಬ ತೆಲುಗು ಕೃತಿಗೆ ದಾರಿಯನ್ನು ತೋರಿಸಿತು. ಅನೇಕ ಆಂಧ್ರ ಕವಿಗಳು ಕರ್ನಾಟಕಕ್ಕೆ ಬಂದು ಕನ್ನಡ ಅರಸರಿಂದ ಮನ್ನಣೆ ಪೋಷಣೆಯನ್ನು ಪಡೆದರು. ಮಿಕ್ಕ ಅರಸರಿಗಿಂತ ವಿಜಯನಗರ ಅರಸರಿಂದ ತೆಲುಗಿಗೆ ಹೆಚ್ಚಿನ ಪ್ರೋತ್ಸಾಹ ಲಭಿಸಿತು. ಸುಪ್ರಸಿದ್ಧ ತೆಲುಗು ಕವಿಯಾದ ನಾಚನ ಸೋಮನಾಥನು ಬುಕ್ಕರಾಯನಿಂದ ಮಾನ್ಯ, ಸನ್ಮಾನಗಳನ್ನು ಪಡೆದನು. ಈತನಿಗೆ **ಅಷ್ಟಭಾಷಾ ಕವಿ** ಎಂಬ ಬಿರುದು ಇದ್ದಿತು. ಕೊಂಡವೀಡಿನ ರೆಡ್ಡಿ ಅರಸರ ಆಸ್ಥಾನ ಕವಿಯಾದ ಶ್ರೀನಾಥನು ಪ್ರೌಢದೇವರಾಯನ ಓಲಗದಲ್ಲಿ ಅಸಾಧಾರಣ ಪ್ರಜ್ಞೆಯನ್ನು ಪ್ರಕಟಿಸಿ ಆತನಿಂದ ಕವಿಸಾರ್ವಭೌಮ ಎಂಬ ಬಿರುದನ್ನೂ ಕನಕಾಭಿಷೇಕದ ಗೌರವವನ್ನೂ ಸಂಪಾದಿಸಿ, ರಾಯನನ್ನೂ ಆತನ ವೈಭವವನ್ನೂ ಕರ್ನಾಟ ಕ್ಷಿತಿನಾಥ, ಕರ್ನಾಟ ರಾಜ್ಯಲಕ್ಷ್ಮಿ ಮುಂತಾಗಿ ಸ್ತುತಿಸಿ "ಮಾ ಕವಿತ್ವಮು ಕರ್ನಾಟ ಭಾಷಾ" ಎಂದು ಹೇಳಿದ್ದಾನೆ.

ಕೃಷ್ಣದೇವರಾಯನಿಂದ ಆಂಧ್ರ ಸಾಹಿತ್ಯಕ್ಕೆ ಸಂದ ಉಪಕೃತಿ ಅಪಾರವಾಗಿದೆ, ಅಲ್ಲಸಾನಿ ಪೆದ್ದನ, ನಂದಿ ತಿಮ್ಮಯ್ಯ ಮೊದಲಾದ ಎಂಟು ಕವಿಗಳು **ಅಷ್ಟದಿಗ್ಗಜ**ಗಳೆನಿಸಿ ರಾಯನ ಆಸ್ಥಾನವನ್ನು ಅಲಂಕರಿಸುವವರಾಗಿದ್ದರು. ಸ್ವತಃ ಕೃಷ್ಣದೇವರಾಯನು **ಅಮುಕ್ತಮಾಲ್ಯದ** ಎಂಬ ನಾಮಾಂಕಿತ ತೆಲುಗು ಕಾವ್ಯವನ್ನು ಬರೆದಿರುವನು. ಈ ಗ್ರಂಥ ಹೊಸ ರೀತಿಯದಾಗಿದೆ. ರಾಯನು ತನ್ನ ಆಸ್ಥಾನಕವಿಗಳ ಸಹಾಯದಿಂದ ಇಂತಹ ಕೃತಿಗಳನ್ನು ರಚಿಸಿ ಇದುವರೆಗೆ ಸಂಸ್ಕೃತ ಪುರಾಣಗಳ ಭಾಷಾಂತರದಿಂದ

---

೧. M.J. :p.263

ಹಳೆಯ ಸಂಪ್ರದಾಯಕ್ಕೆ ಸಿಲುಕಿ ತೊಳಲಾಡುತ್ತಿದ್ದ ತೆಲುಗು ಸಾಹಿತ್ಯಕ್ಕೆ ಸ್ವತಂತ್ರವಾದ ಒಂದು ನವೀನ ಮಾರ್ಗವನ್ನೇ ಕಲ್ಪಿಸಿಕೊಟ್ಟನು. ಇದಕ್ಕೆ **ಪ್ರಬಂಧಮಾರ್ಗ** ಎಂಬ ಹೆಸರು. ಪ್ರಭುಲಿಂಗಲೀಲೆ ೧೫ನೆಯ ಶತಮಾನದಲ್ಲಿ ತೆಲುಗಿನಲ್ಲಿಯೂ ತಮಿಳಿನಲ್ಲಿಯೂ ರೂಪಾಂತರ ಪಡೆಯಿತು.

ತಮಿಳು, ಮರಾಠಿ, ಅರಬಿ, ಪರ್ಶಿಯನ್, ಉರ್ದು ವಾಙ್ಮಯ: ತಮಿಳು ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಕೆಲಮಟ್ಟಿಗೆ ಋಣಿಯಾಗಿದೆ. **ಚೂಡಾಮಣಿ** ಮತ್ತು **ಚಿಂತಾಮಣಿ** ಎಂಬ ತಮಿಳು ಕೃತಿಗಳು ಅದೇ ಹೆಸರಿನ ಕನ್ನಡ ಗ್ರಂಥಗಳ ಪ್ರತಿಬಿಂಬವಾಗಿ ತೋರುತ್ತವೆ. ಚೋಳರ ಆಳಿಕೆಯಲ್ಲಿ ಕರ್ನಾಟಕದ ಅನೇಕ ಶಾಸನಗಳು ತಮಿಳು ಭಾಷೆಯಲ್ಲಿ ಬರೆಯಲಾದುವು. ಕರ್ನಾಟಕದಲ್ಲಿ ಸ್ಥಾಯಿಯಾದ ಕೆಲವು ಚೋಳ ನಾಯಕರಿಂದಲೂ ರಾಮಾನುಜ ಮತ ಗ್ರಂಥಗಳಿಂದಲೂ ಕರ್ನಾಟಕ ಸಾಹಿತ್ಯ ಸಂಸ್ಕೃತಿಗಳು ಅನ್ಯೋನ್ಯವಾಗಿ ಕೆಲವು ಸಂಸ್ಕಾರಗಳನ್ನು ಪಡೆದಿವೆ.

ಚಂದ್ರಾತ್ಮಜನೆಂಬ ಮಹಾರಾಷ್ಟ್ರಕವಿ (೧೭ನೆಯ ಶತಮಾನ) ಕುಮಾರವ್ಯಾಸನ ಭಾರತವನ್ನು ಮರಾಠಿ ಭಾಷೆಗೆ ಪರಿವರ್ತಿತಿಸಿದಂತೆ ತಿಳಿಯುತ್ತದೆ. (ಸಾ. ಪ.ಪ. ಸಂಪುಟ ೫, ಪುಟ ೧೮೩)

೧೪ನೆಯ ಶತಮಾನದಿಂದ ಕರ್ನಾಟಕದೊಡನೆ ಮುಸಲ್ಮಾನರ ಸಂಬಂಧ ಬೆಳೆದು ಅನೇಕರು ಇಲ್ಲಿ ಸ್ಥಾಯಿಯಾದರು. ಇವರಿಂದಲೂ ಬಹುಮನಿ, ನಿಜಾಮ, ಹೈದರ, ಟೀಪು ಮೊದಲಾದ ಅರಸರಿಂದಲೂ ಅರಬಿ, ಪರ್ಷಿಯನ್, ಉರ್ದು, ವಾಙ್ಮಯಗಳು ಇಲ್ಲಿ ಪ್ರೋತ್ಸಾಹಗೊಂಡುವು. ಟೀಪುವಿನ ಪರ್ಷಿಯನ್ ಪತ್ರಗಳು **ಸುಲ್ತಾನ ಇ ತವಾರಿಖ** ಎಂಬ ಹೆಸರಿನಿಂದ ಪ್ರಸಿದ್ಧವಾಗಿವೆ. ಟೀಪು ಮತು ಮುಮ್ಮಡಿ ಕೃಷ್ಣರಾಜರಿಂದ ಪೋಷಿತನಾಗಿದ್ದ ಶ್ರೀರಂಗಪಟ್ಟಣ ನಿವಾಸಿ ಮುನ್ಷಿಗುಲಾಮ ಹುಸೇನ ಮುನಜ್ಜಿಮನೆಂಬಾತನು ಜ್ಯೋತಿಷ, ವೈದ್ಯಕ ಮೊದಲಾದ ವಿಷಯಗಳನ್ನು ಕುರಿತು ಫಾರಸಿ ಭಾಷೆಯಲ್ಲಿ ಗ್ರಂಥಗಳನ್ನು ಬರೆದನು. ಇವು ಬಹಳ ಲೋಕಪ್ರಿಯವಾಗಿದ್ದು ಇವುಗಳ ಖ್ಯಾತಿ ಕಾನ್‌ಸ್ಟಾಂಟಿನೋಪಲ್‌ವರೆಗೆ ಹಬ್ಬಿರುವುದು.

೬. ಕನ್ನಡ ನಾಗರಿಕತೆ

ಜನಾಂಗದ ನಾಗರಿಕತೆ ರಾಷ್ಟ್ರೀಯ ಜೀವನದ ಘನತೆಯ ಕೈವಾಡ. ಭಾರತೀಯ ನಾಗರಿಕತೆ ಪ್ರಪಂಚದಲ್ಲಿ ಮಿಗಿಲಾದುದು. ಕನ್ನಡ ನಾಗರಿಕತೆ ಭಾರತೀಯ ಜನಾಂಗಗಳಲ್ಲಿ ಗಣ್ಯವಾದುದು.

ಬಹಳ ಹಿಂದಿನ ಕಾಲದಲ್ಲಿಯೇ ಮಿಕ್ಕ ಜನಾಂಗಗಳನ್ನು ಹಿಂದುಳಿಸಿ ಮುಂದುವರಿದ ಕನ್ನಡ ನಾಗರಿಕತೆಯ ಪ್ರಾಚೀನತೆ ಒಂದು ವಿಧವಾದ ಅದರ ಹೆಚ್ಚುಗಾರಿಕೆಯೆಂದೇ ಹೇಳಬೇಕು. ಕನ್ನಡ ನಾಗರಿಕತೆ ಸುಮಾರು ಎರಡು ಸಾವಿರ ವರುಷಗಳ ಆಚೆಯಿಂದ ಬಾಳಿ ಬಂದುದು. ಕನ್ನಡಿಗರು ಸುಮಾರು ಒಂದು ಸಾವಿರ ವರುಷಗಳವರೆಗೆ ಅರಸರಾಗಿಯೂ ಇನ್ನೊಂದು ಸಾವಿರ ವರ್ಷಗಳವರೆಗೆ ಹಿರಿಯರಸರಾಗಿಯೂ ಸಾಮ್ರಾಜ್ಯವನ್ನು ಆಳಿದರು. ಈ ಎರಡನೆಯ ಕಾಲದಲ್ಲಿ

ಅವರು ಭಾರತದಲ್ಲಿಯಷ್ಟೇ ಅಲ್ಲ, ಪ್ರಪಂಚದ ರಾಷ್ಟ್ರಮಾಲಿಕೆಯಲ್ಲಿ ಅಗ್ರಗಣ್ಯತೆಯನ್ನೂ ಅಗ್ರಮಾನ್ಯತೆಯನ್ನೂ ಪಡೆದರು. ಕ್ರಿ.ಶ.೯ರಿಂದ ೧೨ ಮತ್ತು ೧೪ ರಿಂದ ೧೬ ಈ ಐದಾರು ಶತಮಾನಗಳ ರಾಜಕೀಯ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ಕರ್ನಾಟಕ ಅಖಿಲ ಭಾರತೀಯ ಮಹತ್ವವನ್ನು ಪಡೆಯಿತು. ಬಂಗಾಲ, ಬಿಹಾರ, ಗುಜರಾತ, ಆಂಧ್ರ, ಒರಿಸ್ಸಾ, ನೇಪಾಳ, ಸಿಂಹಳ ಈ ಪ್ರಾಂತಗಳು ಕನ್ನಡ ಅರಸುತನದ ಜ್ಯೋತಿಯಿಂದ ಬೆಳಗಿದುವು. ಕಾಶ್ಮೀರ ಮೊದಲಾದ ಜನಾಂಗಗಳು ಕನ್ನಡ ನಾಗರಿಕತೆಗೆ ಮನಸೋತವು. ಕರ್ನಾಟಕದ ಶಿಲ್ಪ, ಸಾಹಿತ್ಯ, ಕಲೆಗಳು ಅನ್ಯಜನಾಂಗಗಳಿಗೆ ಮಾರ್ಗದರ್ಶಿಯಾದುವು.[೧]

ಕನ್ನಡ ನಾಗರಿಕತೆ ವಿಶಾಲವಾದ ಭಾವನೆ, ಉಚ್ಚವಾದ ಆದರ್ಶ, ಉದಾತ್ತವಾದ ಕೃತಿಗಳಿಂದ ಕೂಡಿದುದಾಗಿದೆ. ಕರ್ನಾಟಕದ ಅರಸರು, ಕರ್ನಾಟಕದ ನಾಯಕರು, ಕರ್ನಾಟಕದ ಧರ್ಮಪ್ರವರ್ತಕರು, ಕರ್ನಾಟಕದ ಕವಿಪುಂಗವರು ಕನ್ನಡ ನಾಗರಿಕತೆಯನ್ನು ಬಹುವಾಗಿ ಕಟ್ಟಿ ಬೆಳಸಿದರು. ಕನ್ನಡ ಅರಸರಲ್ಲಿ ಅನೇಕರು ಸುಸಂಸ್ಕೃತರು, ಉದಾರ ಹೃದಯದವರು, ಪ್ರಜಾಹಿತ ನಿರತರು ಆಗಿದ್ದರು. ಕರ್ನಾಟಕದ ಅನೇಕ ರಾಜ್ಯಗಳ ಸ್ಥಾಪನೆಗೆ ಧರ್ಮಗುರುಗಳೇ ಕಾರಣರಾದರು.[೨] ಅರಸುಮನೆತನವೆಂದರೆ ಆಳುವುದಲ್ಲ. ಪ್ರಜರ ಹಿತಗಳನ್ನು ಅರಳಿಸುವುದು ಎಂಬ ನೀತಿ ಕನ್ನಡ ಅರಸರಿಗೆ ಮೊದಲಿಂದಲೂ ಸುಪರಿಚಿತವಾದುದಾಗಿತ್ತು. ಕನ್ನಡ ರಾಜರು 'ಸ್ವಭುಜ–ಜಯ–ಜನಿತ–ಸುಜನ–ಜನಪದ'ರು ಎಂದರೆ ತಮ್ಮ ಬಾಹು ಪರಾಕ್ರಮದಿಂದ ಸಜ್ಜನರ ರಾಷ್ಟ್ರವನ್ನು ನಿರ್ಮಿಸಿದರು. 'ಸಮ್ಯಕ್–ಪ್ರಜಾ–ಪಾಲನ–ಮಾತ್ರಾಧಿಗತ–ರಾಜ್ಯ–ಪ್ರಯೋಜನ'ರು ಎಂದರೆ ಹಿತವಾಗಿ ಜನರನ್ನು ಸಲಹಲೆಂದೇ ರಾಜಸೂತ್ರ ಹಿಡಿದವರು[೩] ಆಗಿದ್ದರು. ಅವರ ದುಷ್ಟನಿಗ್ರಹ ಶಿಷ್ಟ ಪರಿಪಾಲನ ವ್ರತವನ್ನು ಸಾವಿರಾರು ಶಾಸನಗಳು ಇಂದಿಗೂ ಸಾರುತ್ತ ನಿಂತಿರುವುವು. ಅವರ ಉದಾತ್ತ ವೃತ್ತಿಗೂ ಸೇವಾಭಾವನೆಗೂ ವಿಜಯನಗರದ ವಿರೂಪಾಕ್ಷನು ಸ್ಥಿರಸಾಕ್ಷಿಯಾಗಿರುವನು.[೪] ರಾಜಕೀಯ ಕ್ಷೇತ್ರದಲ್ಲಿ ಕನ್ನಡಿಗರು ಎಸಗಿದ ಮಹಾಕಾರ್ಯಗಳು ಇತರರಿಗೆ ಅನುಕರಣೀಯವಾದುವು.[೫]

೧. ಯವದ್ವೀಪಾದಿ ವಿಶಾಲ ಭಾರತದಲ್ಲಿ ದೊರೆಯುವ ಶಿಲ್ಪಕಲೆ ಕನ್ನಡದ ಮಾದರಿಯಲ್ಲಿದೆ
(ACV : pp493-96)

೨. ಗಂಗ, ಹೊಯ್ಸಳ, ವಿಜಯನಗರ ರಾಜ್ಯಗಳು

೩. ಗಂಗರ ಶಾಸನಗಳಲ್ಲಿ ಗಂಗರಸರನ್ನು ಕುರಿತು ಈ ವಿಶೇಷಣಗಳನ್ನು ಉಪಯೋಗಿಸಲಾಗಿದೆ. "ಸಮ್ಯಕ್–ಪ್ರಜಾ–ಪಾಲನ–ಮಾತ್ರಾಧಿಗತ ರಾಜ ಪ್ರಯೋಜನ" ಎಂಬ ಗಂಗಮಾಧವನ ನೀತಿಯೊಂದಿಗೆ, ೧೬ನೆಯ ಶತಮಾನದ ಉದಾತ್ತವೆಂದು ಎಣಿಸಲಾದ ಶೀರಶಹನ ರಾಜನೀತಿಯ ಈ ಸೂತ್ರವನ್ನು ಹೋಲಿಸಿ ನೋಡಿರಿ

'The essence of royal protection consists in protecting the life and property of the subjects'

೪. 'ವಿರೂಪಾಕ್ಷ ಅಂಕಿತ'ದ ರಹಸ್ಯಕ್ಕಾಗಿ 'ವಿಜಯನಗರ ಸಾಮ್ರಾಜ್ಯ' ಈ ಗ್ರಂಥದ ೨೭೧ನೆಯ ಪುಟವನ್ನು ನೋಡಿರಿ.

೫. ವಿಜಯನಗರ ಮಹಾರಾಷ್ಟ್ರದ ಶಿವಾಜಿಗೆ ಸ್ವರಾಜ್ಯ ಸ್ಥಾಪನೆಗೆ ಪ್ರೇರಣೆ ನೀಡಿತು.

ಇಂತಹ ಕನ್ನಡ ಅರಸರ ಪೋಷಣೆಯಲ್ಲಿ ಕನ್ನಡ ಕುಲ ವಿಸ್ತಾರವಾಯಿತು. ನಾನಾ ಜನ ಜಾತಿಗಳು ಅಭಿವೃದ್ಧಿಪಡೆದುವು. ಸಕಲ ವರ್ಣಾಶ್ರಮ ಧರ್ಮಗಳು ವಿಕಾಸಗೊಂಡವು. ಸಾಮಾಜಿಕ ಸಂಘ ಸಹಕಾರ ಸಬಲವಾಯಿತು. ವ್ಯಾಪಾರೋದ್ಯೋಗಗಳು ಊರ್ಜಿತವಾದುವು. ವಿದ್ಯಾವಂತಿಕೆ ಹೆಚ್ಚಿತು. ವಾಙ್ಮಯ ಹಬ್ಬಿತು. ಸಂಸ್ಕೃತಿ ಅರಳಿತು. ಉದಾರವಾದ ಧರ್ಮಭಾವನೆ ಆಚರಣೆಗೆ ಬಂದಿತು. ಧರ್ಮ, ತತ್ವಜ್ಞಾನ, ಮತಗಳ ವಿಚಾರದಲ್ಲಿ ಕನ್ನಡಿಗರು ಮಾಡಿದ ಸೇವೆ ಅಸಮಾನವಾಗಿದೆ. ನಾನಾಧರ್ಮ, ಮತ, ತತ್ವಜ್ಞಾನಗಳಿಗೆ ಕರ್ನಾಟಕ ಜನ್ಮಭೂಮಿಯೂ ಕರ್ಮಭೂಮಿಯೂ ಆಗಿದೆ. ಅನೇಕ ಶತಮಾನಗಳವರೆಗೆ ಕನ್ನಡಿಗರು ಪಾಲಿಸಿದ ಅನ್ಯಧರ್ಮ ಸಹಿಷ್ಣುತೆಯೂ ಸರ್ವಧರ್ಮ ಬಾಂಧವ್ಯವೂ ಅನ್ಯಾದೃಶವಾದುವು. ಕನ್ನಡಿಗರು ವಿಶ್ವಕ್ಕೆ ಸಲ್ಲಿಸಿದ ಚಿರಂತನ ಆದರ್ಶವಿದು.

ಕನ್ನಡ ನಾಗರಿಕತೆಯ ಘನತೆಯಲ್ಲಿ ಕನ್ನಡತಿಯರೂ ನೆರವಾಗಿರುವರು. ಪರಿಶುದ್ಧವಾದ ಚಾರಿತ್ರ್ಯ, ನಿರ್ಮಲವಾದ ಶೀಲ ಇವುಗಳಿಗಾಗಿ ಕನ್ನಡ ಹೆಂಗಳೆಯರು ಉದಾಹರಣೀಯರಾಗಿದ್ದರು.[೧] ರಾಜಕೀಯ, ಸಾಮಾಜಿಕ, ಧಾರ್ಮಿಕ ಜೀವನ ರಂಗಗಳಲ್ಲಿ ಅವರು ಗೌರವದ ಸ್ಥಾನವನ್ನು ಪಡೆದಿದ್ದರು. ಕೌಶಲ್ಯದಿಂದ ರಾಜ್ಯ ಸೂತ್ರಗಳನ್ನು ನಡೆಸಿದವರು ಹಲವರು. ಕೆಚ್ಚೆದೆಯ ಕಲಿತನದಿಂದ ಕಾಳಗದಲ್ಲಿ ಕಾದಿದವರು ಹಲವರು. ಸಂಸ್ಕೃತ ಕನ್ನಡ ಸಾಹಿತ್ಯಾಕಾಶದಲ್ಲಿ ಪ್ರಕಾಶಿಸಿದವರು ಹಲವರು. ಧರ್ಮಮತ ತತ್ತ್ವಗಳನ್ನು ಪ್ರಚುರಗೊಳಿಸಿದವರು ಹಲವರು. ಆಧ್ಯಾತ್ಮಿಕ ಜೀವನದ ಉಜ್ವಲ ದೀಪ್ತಿಯನ್ನು ಬೆಳಗಿದವರು ಹಲವರು.

ಇಂದಿಗೂ ಕೀಳರಲ್ಲಿ ಕೀಳಾದ ಕನ್ನಡಿಗನ ಹೃದಯ ಉಚ್ಚವಾದ ಆದರ್ಶದಿಂದ ಸ್ಫುರಿಸುತ್ತಿರುವುದು, ಉದಾತ್ತವಾದ ಭಾವನೆಯಿಂದ ಮಿಡಿಯುತ್ತಿರುವುದು, ನೈಜ ಕನ್ನಡತನವನ್ನು ಸಾರುತ್ತಿರುವುದು. ಇದೇ ಕನ್ನಡ ನಾಗರಿಕತೆ!

೭. ಕನ್ನಡ ಸಂಸ್ಕೃತಿ

ನಾಗರಿಕತೆ ಎಂಬುದು ಜನಾಂಗದ ಭವ್ಯಜೀವನ ಮಂದಿರವಾದರೆ, ಸಂಸ್ಕೃತಿ ಎಂಬುದು ಅದರ ಅಂತರಂಗದ ಆಳವಾದ ಅಂತಃಪ್ರಭೆಯಾಗಿದೆ. ನಾಗರಿಕತೆಯಲ್ಲಿ ಜನಾಂಗದ ಬಹಿಃಪ್ರಭಾವದ ಪ್ರತಿಬಿಂಬವನ್ನು ಕಾಣುವುದಾದರೆ, ಸಂಸ್ಕೃತಿಯಲ್ಲಿ ಅದರ ಅಂತರ್ವಿಕಾಸದ ಸ್ವರೂಪವನ್ನು ನೋಡಬೇಕು. ಜೀವನದಷ್ಟೇ ವ್ಯಾಪಕವಾಗಿದ್ದರೂ ಜೀವನದ ವಿಶಿಷ್ಟ ಅಚ್ಚುಪಡಿಯೆ ಸಂಸ್ಕೃತಿಯ ಕುರುಹು.

ಯಾವುದೊಂದು ಮಾನವವಂಶ ರಕ್ತಸಂಕರವಿಲ್ಲದೆ ಅವಿಕೃತವಾಗಿ ಅತಿ ಶುದ್ಧವಾಗಿ ನಡೆದುಬಂದಿದೆ ಎಂದು ವಾದಿಸುವುದು ಹುಸಿ ಹೆಮ್ಮೆ. ಕನ್ನಡ ಸಂಸ್ಕೃತಿಯ ಪರಂಪರೆ ಕೇವಲ ಆರ್ಯವೆಂದಾಗಲಿ, ದ್ರಾವಿಡವೆಂದಾಗಲಿ ವಿವೇಕಿಗಳು

೧. ಹದಿನಾಲ್ಕನೆಯ ಶತಮಾನದ ರಾಜಪುಟಾನದ ಒಂದು ಶಾಸನದಲ್ಲಿ ಸುಪ್ರಸಿದ್ಧ ಹಮ್ಮೀರ ರಾಜನ ಕೀರ್ತಿಯನ್ನು ವರ್ಣಿಸುವಾಗ ಅದು ಚಂದ್ರನಿಗಿಂತಲೂ ಶಿವನ ನಗೆಗಿಂತಲೂ ಬಿಳಿದು ಎಂದು ಹೇಳಿ ಕಾಂತಿಯಲ್ಲಿ ಕನ್ನಡ ಹೆಂಗಳೆಯರ ಶುಭ್ರವಾದ ಹಲ್ಲುಗಳ ಹೋಳಪಿಗೆ ಸರಿಹೋಲುವುದು ಎಂದು ಕಾಣಿಸಿದೆ.! (EI:II, p 413)

ಪ್ರತಿಪಾದಿಸಲಾರರು. ಸುಮಾರು ೩ ಸಾವಿರ ವರುಷಗಳ ಆಚೆಯಲ್ಲಿ ಆರ್ಯರು ಕನ್ನಡ ನಾಡಿನಲ್ಲಿ ಕಾಲೂರುವಾಗ ದ್ರಾವಿಡ, ಪೂರ್ವದ್ರಾವಿಡ ಮುಂತಾದ ಹೆಸರುಗಳಿಂದ ಗುರುತಿಸಲಾಗುವ ಕೆಲವು ಜನಾಂಗದವರು ಇಲ್ಲಿ ನೆಲಸಿದ್ದರು. ಈ ಮೂಲ ಜನಾಂಗಗಳ ನಾಗರಿಕತೆಯಾಗಲಿ ಸಂಸ್ಕೃತಿಯಾಗಲಿ ಹೀನವಾಗಿರಲಿಲ್ಲ. ಭಿನ್ನವರ್ಗದ ಈ ಜನಾಂಗಗಳಲ್ಲಿ ತಿಕ್ಕಾಟ, ತಾಕಲಾಟ, ಮೇಲಾಟಗಳು ನಡೆದುವು. ಬಳಿಕ ಈ ಎರಡು ಸಂಸ್ಕೃತಿಗಳಲ್ಲಿ ಪರಸ್ಪರ ಪರಿಚಯ, ವಿಮರ್ಶೆ, ವಿನಿಮಯವೂ ಮುಂದುವರಿದುವು.

ನಾಗರಿಕತೆಯೇನು ಅಷ್ಟು ಹಿರಿದಾಗದಿದ್ದರೂ ಆರ್ಯರ ಸಾಹಸವೂ ಸಂಘಶಕ್ತಿಯೂ ಸಂಗ್ರಹ ಕೌಶಲವೂ ಪ್ರಬಲವಾದುದರಿಂದ ಅವರು ಜಯಶಾಲಿಗಳಾದರು. ಆರ್ಯರ ಅನೇಕ ರೀತಿ-ನೀತಿಗಳು ಆಚಾರ-ವಿಚಾರಗಳು ಎಲ್ಲೆಲ್ಲಿಯ ಜನತೆಯ ಮೇಲೆ ತಮ್ಮ ಅಚ್ಚೊತ್ತಿದುವು. ಅನೇಕ ಕಡೆಗಳಲ್ಲಿ ವಂಶಗಳು ಬೆರೆತುವು, ಕುಲಗಳು ಕೂಡಿದುವು. ಹೀಗೆ ಆರ್ಯ-ದ್ರಾವಿಡ ಸಂಸ್ಕೃತಿಗಳಿಂದ ಕಸಿಯಾದ ಹೊಸ ಮರವೇ ಕನ್ನಡ ಸಂಸ್ಕೃತಿ.

ಆರ್ಯ ಸಂಸ್ಕೃತಿಯ ಗುಣ ಧರ್ಮಗಳು ಕನ್ನಡ ಸಂಸ್ಕೃತಿಯ ಶಾಖೋಪಶಾಖೆಗಳಲ್ಲಿ ಹೆಚ್ಚಾಗಿ ಕಂಡರೂ ಅದರ ಬೊಡ್ಡೆಯ ತಾಯಿಬೇರು ದ್ರಾವಿಡ, ಪೂರ್ವ ದ್ರಾವಿಡ ಸಂಸ್ಕೃತಿಯ ಜೀವನ ರಸದಿಂದ ಬಲಿತು ಪುಷ್ಟವಾಗಿದೆ. ಕರ್ನಾಟಕ ಧರ್ಮಮತಗಳಿಗೂ ಆಚಾರ ವಿಚಾರಗಳಿಗೂ ಆರ್ಯರ ಧ್ಯೇಯ ಆದರ್ಶಗಳೇ ಅಡಿಗಲ್ಲಾಗಿದ್ದರೂ ಸಾಮಾಜಿಕ ರೀತಿ ನೀತಿಗಳೂ ನಡವಳಿ ಸಂಪ್ರದಾಯಗಳೂ ದ್ರಾವಿಡ ಪರಂಪರೆಯಲ್ಲಿ ಬೆಳೆದು ಬಂದವುಗಳಾಗಿವೆ. ಕನ್ನಡ ವಿದ್ಯಾವಂತಿಗೆ ಆರ್ಯ ಸತ್ತ್ವದಿಂದ ಸ್ಫೂರ್ತಿ ಪಡೆದಿದ್ದರೆ, ಕನ್ನಡಿಗರ ಕಲಾವಂತಿಕೆ ದ್ರಾವಿಡ ತಿರುಳಿನಿಂದ ಕಳೆಗೊಂಡುದಾಗಿದೆ. ಮೂರ್ತಿಪೂಜೆ, ಶಿವ, ಶಕ್ತಿ, ಗಣಪತಿ ಮೊದಲಾದ ದೇವತೋಪಾಸನೆ, ದೊಡ್ಡ ದೊಡ್ಡ ದೇವಾಲಯಗಳನ್ನು ನಿಲ್ಲಿಸಿ ಅವುಗಳಲ್ಲಿ ದೇವತೆಗಳನ್ನು ಅರ್ಚಿಸುವ ರೀತಿ, ಇವು ಮೂಲದಲ್ಲಿ ದ್ರಾವಿಡವಾಗಿದ್ದು ಬಹುಕಾಲ ಹಿಂದೆ ಆರ್ಯರು ಅವುಗಳನ್ನು ಎತ್ತಿಕೊಂಡು ತಮ್ಮವನ್ನಾಗಿ ಮಾಡಿಕೊಂಡರು ಎಂದು ಸಂಶೋಧಕರು ಕಂಡುಹಿಡಿದಿರುವರು.[೧]

ಉಚ್ಚವರ್ಗದ ಧಾರ್ಮಿಕ ಸಾಮಾಜಿಕ ವ್ಯವಹಾರಗಳು, ವಿವಾಹಾದಿ ವಿಧಿ ವಿಧಾನಗಳು ಸಾಮಾನ್ಯವಾಗಿ ಆರ್ಯಪರಂಪರೆಯ ನಿದರ್ಶಕವಾಗಿದ್ದರೆ, ಕೆಳಗಿನ ಕೆಲವು ವರ್ಗಗಳಲ್ಲಿ ಹೆಚ್ಚಾಗಿ ರೂಢವಾಗಿರುವ ಶಕ್ತಿಪೂಜೆ, ಪಶುಬಲಿ, ನಾಗರಹಬ್ಬ, ಬ್ರಾಹ್ಮಣನನ್ನುಳಿದು ಸ್ವಜಾತಿಯನ್ನೇ ಗುರುವಾಗಿ ಪುರೋಹಿತನಾಗಿ ಆರಿಸುವುದು, ಮಾತೃಪ್ರಧಾನ ಸಂತಾನಕ್ರಮ, ವೈವಾಹಿಕ ನೀತಿಯಲ್ಲಿ ಸ್ವತಂತ್ರತೆ, ತೆರವು (ಕನ್ಯಾಶುಲ್ಕ) ಮುಂತಾದ ಪದ್ಧತಿಗಳು ದ್ರಾವಿಡ ಸಂಸ್ಕೃತಿಯ ಕುರುಹುಗಳಾಗಿವೆ. ದಕ್ಷಿಣ ಕನ್ನಡ

೧. "Dravidian Culture"; ABORI:IX-4

ಜಿಲ್ಲೆಯಲ್ಲಿ ಭೂತಗಳ ಆರಾಧನೆ ಪ್ರಚುರವಾಗಿದೆ. 'ಅಮ್ಮ'ಗಳ ಪೂಜೆ ಅನೇಕ ಕಡೆಯಲ್ಲಿ ಪ್ರಬಲವಾಗಿದೆ. ಗ್ರಾಮದೇವತೆ 'ಅಮ್ಮ'ನ ಒಂದು ಸ್ವರೂಪ. ಹಳ್ಳಿ ಹಳ್ಳಿಗೆ ಗ್ರಾಮದೇವತೆಯ ಜಾತ್ರೆಗಳು ನೆರೆದು ಘೋರ ಪಶುವಧೆ ನಡೆಯುವುದು. ಊರುಗಳು ಪಿಡುಗುಗಳಿಗೆ ಈಡಾಗಲು ದ್ಯಾಮವ್ವ, ಮಾರವ್ವ, ಪೋಚವ್ವ ಮೊದಲಾದ ದೇವತೆಗಳ ಸಂತರ್ಪಣೆ ಮಾಡುವರು. ಸಿಡಿ, ಆನೆಯ ಕಾಲಹರಕೆ ಮೊದಲಾದ ಆತ್ಮಹಿಂಸೆಯ ಕ್ರೂರ ಹರಕೆಗಳು ಮೊನ್ನೆಮೊನ್ನೆಯವರೆಗೆ ಅನೇಕ ಕಡೆ ಬಳಕೆಯಿದ್ದುವು. ಸಾಮಾನ್ಯವಾಗಿ ಎಲ್ಲ ಜಾತಿಯ ಹೆಂಗಸರಲ್ಲಿ ಹಚ್ಚೆ ಚುಚ್ಚಿಸಿಕೊಳ್ಳುವ ಪದ್ಧತಿಯಿದೆ. ಕೆಲವೊಂದು ಜಾತಿಗಳಿಗೆ ಕೆಲವೊಂದು ಪ್ರಾಣಿ ವನಸ್ಪತಿಗಳು ಪೂಜ್ಯ ವಸ್ತುಗಳಾಗಿವೆ. ಇವುಗಳಿಗೆ ಬೆಡಗು ಎಂದು ಹೆಸರು. ಈ ಬೆಡಗುಗಳ ಮೇಲಿಂದ ಆಯಾ ಪಂಗಡಗಳನ್ನೂ ಕುಲಗಳನ್ನೂ ವಿಂಗಡಿಸುವರು. ಕುರುಬ, ಒಕ್ಕಲಿಗ ಮೊದಲಾದ ಜಾತಿಗಳಲ್ಲಿ ಎಮ್ಮೆ, ಕುರಿ, ಆಲದಮರ ಮುಂತಾದ ಅನೇಕ ಬೆಡಗುಗಳು ಏರ್ಪಟ್ಟಿವೆ. ಅಶ್ವತ್ಥಪೂಜೆ ಈ ಬೆಡಗಿನ ಶಿಷ್ಟಮಾನ್ಯವಾದ ಉದಾಹರಣೆ ಎಂದು ಹೇಳಬಹುದು. ಕುಂಬಾರ, ಮೀನುಗಾರ ಮೊದಲಾದ ಜಾತಿಗಳು ಗಾಲಿ, ಬಲೆ ಮುಂತಾದ ಉಪಜೀವನ ಸಾಧನಗಳನ್ನು ಭಕ್ತಿಯಿಂದ ಪೂಜಿಸುವರು. ಕುರುಬ, ಬೇಡ, ಮಾದಿಗ ಮೊದಲಾದ ಜಾತಿಗಳಲ್ಲಿ ಬಸವಿ ಬಿಡುವ ಸಂಪ್ರದಾಯವಿದೆ. ಅನೇಕ ಜಾತಿಗಳಲ್ಲಿ ಉಡಿಕೆಯ ರೂಢಿ ಇರುವುದು. ಇವೆಲ್ಲ ದ್ರಾವಿಡ ಇಲ್ಲವೆ ಪೂರ್ವ ದ್ರಾವಿಡ ಸಂಸ್ಕೃತಿಯ ಅವಶೇಷಗಳೆಂದು ಪರಿಗಣಿಸಲಾಗಿದೆ.

ಅಡುಗೆಯ ಪದಾರ್ಥಗಳು ಬೇರೆಬೇರೆಯಿದ್ದರೂ ಅವುಗಳಿಂದ ಸಿದ್ಧವಾದ ಪಾಕ ವಿಶಿಷ್ಟ ರುಚಿಯುಳ್ಳ ಸ್ವತಂತ್ರ ವಸ್ತುವಾಗುವಂತೆ ಆರ್ಯ, ದ್ರಾವಿಡ ಮೊದಲಾದ ಭಿನ್ನ ಭಿನ್ನ ಸಂಸ್ಕೃತಿಗಳ ಸಮ್ಮೇಲನದಿಂದ ರೂಪು ಪಡೆದ ಕನ್ನಡ ಸಂಸ್ಕೃತಿಯೆಂಬುದು ತನ್ನದೇ ಆದ ಕೆಲವು ಲಕ್ಷಣಗಳಿಂದ ಕೂಡಿದ ಸ್ವತಂತ್ರ ರಚನೆಯೆ ಆಗಿರುವುದು. ಈ ಕನ್ನಡ ಸಂಸ್ಕೃತಿ ಬಹು ಪ್ರಾಚೀನ ಕಾಲದಿಂದ ವಿಕಾಸಗೊಳ್ಳುತ್ತ ರಾಜಕೀಯ ಮೊದಲಾದ ಜೀವನರಂಗಗಳಲ್ಲಿ ಅಸಾಮಾನ್ಯ ಘಟನೆಗಳನ್ನು ಪ್ರಕಟಿಸಿತು.

ಕನ್ನಡ ಸಂಸ್ಕೃತಿಯ ಅಂತಃಶಕ್ತಿಯೂ ಆತ್ಮಸ್ಫೂರ್ತಿಯೂ ಅಮಿತವಾದುದು. ಉನ್ನತ ಆಶೆ, ಉತ್ತುಂಗಭಾವನೆ, ಮಹತ್ತರ ಆಕಾಂಕ್ಷೆ ಅದರ ಹೆಗ್ಗುರುತು. ಕನ್ನಡಿಗರು ಯಾವುದನ್ನು ಮಾಡಿದರೂ ಹಿರಿದಾಗಿ ಮಾಡುವರು. ಮಿಗಿಮಿಗಿಲಾಗಿ ಮಾಡುವರು. ಅಲ್ಪತೆ, ಕ್ಷುದ್ರತೆ, ಸಂಕೋಚ ಇವು ಅವರಿಗೆ ಅರಿಯದಾದ ಒಡವೆಗಳು. ಅಂತೆಯೆ ಅವರು ರಾಜಕೀಯ ಕ್ಷೇತ್ರದಲ್ಲಿ ಅತುಲವಾದ ಶೌರ್ಯ ಸಾಹಸಗಳನ್ನು ಮೆರೆಸಿ ಘನವಾದ ಸಾಮ್ರಾಜ್ಯಗಳನ್ನು ಸುದೀರ್ಘವಾದ ರಾಜಕೀಯ ಪರಂಪರೆಯನ್ನು ಸ್ಥಾಪಿಸಲು ಸಮರ್ಥರಾದರು. ಅಂತೆಯೆ ಉಜ್ವಲವಾದ ವಿದ್ಯಾಗೌರವದಿಂದಲೂ ಅಪೂರ್ವವಾದ ಕಲಾಪ್ರೌಢಿಮೆಯಿಂದಲೂ ರಾರಾಜಿಸುವ ಕನ್ನಡ ನಾಗರಿಕತೆ ಪ್ರಪಂಚದಲ್ಲಿ ಮಿಗಿಲಾದ ಮನ್ನಣೆಯನ್ನು ಪಡೆಯಿತು.

ನಿಷ್ಕಪಟ ವೃತ್ತಿ ಕನ್ನಡ ಸಂಸ್ಕೃತಿಯ ಒಂದು ಸಂಸ್ಕಾರ. ಕನ್ನಡಿಗರ ಮನಸ್ಸು ಶುದ್ಧವಾದುದು. ಅಂತಃಕರಣ ನಿರ್ಮಲವಾದುದು. ಇದರ ಮೂಲಕ ಅವರ ಲೌಕಿಕ ವ್ಯವಹಾರಗಳು ಸರಳವಾದುವು. ಧರ್ಮ ಮಾರ್ಗಗಳು ಉನ್ನತಿಪ್ರದವಾದುವು. ಅಚಲವಾದ ವಿಶ್ವಾಸ, ಉತ್ಕಟವಾದ ಶ್ರದ್ಧೆ ಕನ್ನಡ ಸಂಸ್ಕೃತಿಯ ಇನ್ನೊಂದು ಸಂಸ್ಕಾರ. ಕನ್ನಡಿಗರ ಪ್ರಾಪಂಚಿಕ ಕಾರ್ಯಕಲಾಪಗಳ ಚರಿತ್ರೆಯನ್ನಾಗಲಿ, ಆಧ್ಯಾತ್ಮಿಕ ಮತ ಸಂಪ್ರದಾಯಗಳ ಇತಿಹಾಸವನ್ನಾಗಲಿ ಪರಿಶೀಲಿಸಿದಲ್ಲಿ ಒಂದೇ ಒಂದು ಆಚಾರ ಸೂತ್ರ ಒಡೆದು ಮೂಡುತ್ತದೆ. ಇದನ್ನು ಪುರಂದರದಾಸರ ಒಂದು ಕವನದ ಪಲ್ಲವಿಯಿಂದ ವಿಶದಗೊಳಿಸಬಹುದು:

> ನಂಬಿ ಕೆಟ್ಟವರಿಲ್ಲವೋ ರಂಗಯ್ಯ ನಿನ್ನ।
> ನಂಬದೆ ಕೆಟ್ಟರೆ ಕೆಡಲಿ॥

ಕನ್ನಡಿಗರ ಉತ್ಕಟವಾದ ಶ್ರದ್ಧೆಯ ಮೂಲಕವೆ ನಾನಾ ಧರ್ಮ ಮತ ಸಂಪ್ರದಾಯಗಳು ನಾಡಿನಲ್ಲಿ ಬೇರೂರಿ ಬಾಳಿದುವು.

ನಿರ್ದುಷ್ಟವಾದ ಶೀಲ ಕನ್ನಡ ಸಂಸ್ಕೃತಿಯ ಮತ್ತೊಂದು ಸಂಸ್ಕಾರ. ನಡೆಯಂತೆ ನುಡಿ, ನುಡಿಯಂತೆ ನಡೆ, ನಡೆ ನುಡಿಗಳಲ್ಲಿ ಕೊಂಕು ಬೇಡ, ಹಸನವಿರಲಿ; ಎಂಬುದರಲ್ಲಿ ಕನ್ನಡಿಗರು ಬಹು ಜಾಗರೂಕರಾಗಿರುತ್ತಿದ್ದರು. ಸದಾಚಾರವೆ ಶೀಲ, ಶೀಲವೆ ಕುಲ, ಶೀಲಹೀನನು ಶ್ವಾನನಿಗಿಂತ ಕಡೆ; ಎಂಬುದು ಅವರ ನೀತಿಯ ಮರ್ಮವಾಗಿದ್ದಿತು. ಶೀಲವನ್ನು ಬಿಡಲಾರದೆ, ಶೂಲವನ್ನಾದರೂ ಏರಲು ಸಿದ್ಧರಾದ ಪುರುಷರ ಅದಕ್ಕೂ ಹೆಚ್ಚಾಗಿ ಸ್ತ್ರೀಯರ ಉದಾಹರಣೆಗಳು ಅಸಂಖ್ಯವಾಗಿವೆ. ಕನ್ನಡಿಗರ ಉಚ್ಚವಾದ ಈ ಚಾರಿತ್ರ ನಿಷ್ಠೆಯ ರಹಸ್ಯ ಸಿಂಹನಂದಿ ಆಚಾರ್ಯರು ಗಂಗವಂಶ ಸ್ಥಾಪಕನಾದ ಮಾಧವನಿಗೆ ಬೋಧಿಸಿದ ಈ ಮಾತುಗಳಲ್ಲಿ ಆಳವಾಗಿ ಪ್ರತಿಬಿಂಬಿತವಾಗಿದೆ –

> "ಮಾತು ಕೊಟ್ಟುದನ್ನು ಮರೆಯದಿರು; ಮದ್ಯ, ಮಾಂಸ ಮತ್ತು
> ಹೆರವರ ಹೆಣ್ಣಿಗೆ ಮನಸೋಲದಿರು, ಕೀಳುತನಕ್ಕೆ ಇಳಿಯದಿರು, ಕಾಳಗದಲ್ಲಿ
> ಕಾಲ್ದೆಗೆಯದಿರು, ಗತಿಯಿಲ್ಲದವರಿಗೆ ಕೈಯೆತ್ತಿ ನೀಡುವವನಾಗು (ಜೈನ)
> ಧರ್ಮಕ್ಕೆ ಎರವಾಗದಿರು, ಇದಕ್ಕೆ ತಪ್ಪಿದರೆ ನಿನ್ನ ಕುಲ ಹಾಳಾಗುವುದು,
> ಹಾಳಾಗುವುದು ಖಂಡಿತ."[೧]

ಹೃದಯ ವಿಶಾಲತೆ ಕನ್ನಡ ಸಂಸ್ಕೃತಿಯ ಘನವಾದ ವೈಶಿಷ್ಟ್ಯ. ಕನ್ನಡಿಗರು ಧಾರಾಳಿಗಳು. ಇವರ ಔದಾರ್ಯ ಅಪಾರವಾದುದು. ಮನೆ ಕಿರಿಯದಾಗಿದ್ದರೂ ಮನಸ್ಸು ಹಿರವಾದುದು. ವಿಶ್ವವನ್ನೇ ಸುಸ್ವಾಗತಿಸುವಷ್ಟು ವ್ಯಾಪಕವಾದುದು. ತಮ್ಮ

---

೧. ನುಡಿದುದನಾರೊಳಂ ನುಡಿದು ತಪ್ಪಿದೊಡಂ ಜಿನಶಾಸನಕ್ಕೊಡಂ
ಬಡದೊಡಮನ್ಯನಾರಿಗೆರೆದಟ್ಟಿದೊಡಂ ಮಧು ಮಾಂಸ ಸೇವೆಗೆ
ಯ್ದಡಮಕುಲೀನರಪ್ಪವರ ಕೊಳ್ಕಡೆಯಾದೊಡಮರ್ಥಿಗರ್ಥಮಂ
ಕುಡುದೊಡಮಾಹವಾಂಗಣದೊಳೋಡಿದೊಡಂ ಕಿಡುಗುಂ ಕುಲವ್ರತಂ
EC : VIII. Sk. 421.

ನಾಡಿಗೆ, ತಮ್ಮ ಮನೆಗೆ ಕನ್ನಡಿಗರು ಎಲ್ಲರನ್ನೂ ಬೌದ್ಧರನ್ನು, ಜೈನರನ್ನು ತಮಿಳರನ್ನು, ತೆಲುಗರನ್ನು, ಮರಾಠರನ್ನು, ಗ್ರೀಕರನ್ನು, ರೋಮನ್ನರನ್ನು, ಇರಾಣಿಗಳನ್ನು, ಅರಬರನ್ನು, ಮುಸಲ್ಮಾನರನ್ನು, ಕ್ರೈಸ್ತರನ್ನು ಬರಮಾಡಿಕೊಂಡರು. ಅವರಿಗೆ ಅನ್ನ ಆಶ್ರಯಗಳನ್ನು ಕಲ್ಪಿಸಿಕೊಟ್ಟರು. ವಿಜಯನಗರ ಕಾಲದಲ್ಲಿಯೂ ಮೈಸೂರು ರಾಜ್ಯದಲ್ಲಿಯೂ ಮುಸಲ್ಮಾನ, ಕ್ರೈಸ್ತ ಮೊದಲಾದವರಿಗೆ ದೊರೆತ ಜೀವನ ಸೌಕರ್ಯ, ಧಾರ್ಮಿಕ ಸ್ವಾತಂತ್ರ್ಯ ನಾಗರಿಕತ್ವದ ಅಧಿಕಾರ ಇವುಗಳ ವೃತ್ತಾಂತ ಸುವಿಶ್ರುತವೇ ಆಗಿದೆ. ಕನ್ನಡಿಗರ ಅತಿಥಿ ಪ್ರೇಮ ಇಂದಿಗೂ ಉದಾಹರಣೀಯವಾಗಿದೆ.

ಈ ಮೊದಲಾದ ಗುಣ ಸಂಸ್ಕಾರಗಳು ಅಳವಟ್ಟು ಉದಾರವಾದ ಒಂದು ಮನೋವೃತ್ತಿ ಸಮಾಜದಲ್ಲಿ ನೆಲೆಗೊಂಡು ನೂರಾರು ವರ್ಷಗಳವರೆಗೆ ಬಾಳಿ ಬೆಳಗಿತು. ಇದನ್ನು **ಕರ್ನಾಟಕ ಧರ್ಮ**ವೆಂದು ಕರೆಯಬಹುದು. ಇದನ್ನು ಆಚರಿಸಿದ ಕನ್ನಡಿಗರು ಜೈನ, ಶೈವ, ವೈಷ್ಣವಾದಿ ಬೇರೆ ಬೇರೆ ಒಂದೊಂದು ಪಂಗಡಕ್ಕೆ ಸೇರಿದವರಾಗಿದ್ದರು. ಅನ್ಯಮತದಲ್ಲಿ ಮತ್ಸರರಹಿತರೂ, ಸಹಾನುಭೂತಿಯುಳ್ಳವರೂ ಆಗಿದ್ದರು. ಈ ಸರ್ವಧರ್ಮ ಸಮದೃಷ್ಟಿಯೂ ವಿಶ್ವಬಾಂಧವ್ಯವೂ ಅನೇಕ ಶತಮಾನಗಳವರೆಗೆ ಕನ್ನಡಿಗರ ನಿತ್ಯಕ್ರಮವಾಗಿದ್ದಿತು. ಧಾರ್ಮಿಕ ಕ್ರಾಂತಿಗಳಿಂದಲೂ ಮತಮತಾಂತರಗಳ ಆಂದೋಲನಗಳಿಂದಲೂ ಇದಕ್ಕೆ ಚ್ಯುತಿಯುಂಟಾಗಲಿಲ್ಲ. ಅಪೂರ್ವವಾದ ಈ 'ಕರ್ನಾಟಕ ಧರ್ಮ'ದ ಮಹಾಘೋಷ ಹಲವು ಶತಮಾನಗಳವರೆಗೆ ಬಲಗೊಂಡು ಮೊಳಗುತ್ತಿರುವುದನ್ನು ಆಲಿಸುವ:

> ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
> ಬೌದ್ಧಾ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ
> ಅರ್ಹನ್ನಿತ್ಯಥ ಜೈನಶಾಸನ ಮತಾಃ ಕರ್ಮೇತಿ ಮೀಮಾಂಸಕಾಃ
> ಸೋಯಂ ವೋ ವಿದಧಾತು ವಾಂಛಿತಫಲಂ ಶ್ರೀ ಕೇಶವಃ ಸರ್ವದಾ॥ [೧]

ಇದೇ ಶತಮಾನದಲ್ಲಿ (೧೪ನೆಯ ಶತಮಾನ) ವಿಜಯನಗರದ ಬುಕ್ಕರಾಯನು ಜೈನ ರಾಮಾನುಜರಲ್ಲಿ ಉಂಟಾದ ವ್ಯಾಜ್ಯವನ್ನು ಅಲೌಕಿಕ ನ್ಯಾಯಬುದ್ಧಿಯಿಂದ ತೀರ್ಮಾನಿಸಿ ಈ 'ಕರ್ನಾಟಕ ಧರ್ಮ' ಮಂತ್ರದ ಸಿದ್ಧಿಯನ್ನು ಪ್ರತ್ಯಕ್ಷವಾಗಿ ಅನುಷ್ಠಾನಕ್ಕೆ ತಂದು ಕನ್ನಡಿಗರ ಕೀರ್ತಿಪತಾಕೆಯನ್ನು ಪ್ರಪಂಚದಲ್ಲಿಯೇ ಮಿಗಿಲಾಗಿ ಮೆರೆಸಿ ನಿಲ್ಲಿಸಿದನು.

ಈ ಮೇರೆಗೆ ಕನ್ನಡ ಸಂಸ್ಕೃತಿ ಭಾರತೀಯ ಸಂಸ್ಕೃತಿಯ ಅಂಗವೇ ಆಗಿದ್ದರೂ ಅದು ತನ್ನದೇ ಆದ ಕೆಲವೊಂದು ಶಕ್ತಿ, ಸಾಮರ್ಥ್ಯ, ವೈಶಿಷ್ಟ್ಯಗಳ ಮೂಲಕ ಭಾರತೀಯ ಜೀವನದ ಕೆಲವು ಆದರ್ಶಗಳನ್ನು ಅತ್ಯಂತ ಆಸಕ್ತಿಯಿಂದಲೂ ಅತ್ಯಧಿಕ ನಿಷ್ಠೆಯಿಂದಲೂ ಪರಿಪೋಷಿಸಿ ಅವುಗಳಿಗೆ ಉಜ್ವಲವಾದ ನೂತನ ರೂಪ ಸಂಪತ್ತಿಯನ್ನೂ ಉನ್ನತವಾದ ವಿಕಾಸ ವೈಭವವನ್ನೂ ನೀಡುವುದಾಯಿತು. ಅದರಿಂದ ಅದಕ್ಕೆ ತನ್ನದೆ ಆದ ಒಂದು ಸ್ವತಂತ್ರ ಸ್ಥಾನವೂ ಪ್ರಾಪ್ತವಾಯಿತು.

---

೧. Ec:Belur 3.

೮. ಜನಜೀವನ

ರಾಜಕೀಯ ಕ್ರಾಂತಿಗಳು, ಸಾಮಾಜಿಕ ಪರಿವರ್ತನಗಳು. ಧರ್ಮ ಮತಗಳ ಸ್ಥಿತ್ಯಂತರಗಳು, ಇವುಗಳ ಅಸಂಖ್ಯ ಅಲೆಗಳಿಗೆ ಈಡಾಡುತ್ತಿರುವಾಗಲೂ ಜನ ಸಾಮಾನ್ಯರ ನಿತ್ಯಜೀವನದ ತಾಯಿನೆಲ ಹೆಚ್ಚಾಗಿ ಅದುರದೆ ಅಳುಕದೆ ಒಂದು ವಿಧವಾದ ಸ್ಥಿರತೆಯಿಂದ ನೆಲೆಸುವುದಾಗಿತ್ತು. ಭಿನ್ನ ಭಿನ್ನ ಆಂದೋಲನಗಳ ಪರಿಣಾಮಗಳನ್ನು ಅನುಭವಿಸುವವರಾದರೂ ಕನ್ನಡಿಗರ ಜೀವನ ಆಮೂಲಾಗ್ರ ಕ್ರಾಂತಿಗೆ ಒಳಗಾದುದಿಲ್ಲ. ಅವರ ಜೀವನದ ಅಂತಃಸತ್ತ್ವ ಮಾರ್ಪಟ್ಟುದಿಲ್ಲ.

ಕನ್ನಡಿಗರು ಆರೋಗ್ಯಸಂಪನ್ನರು, ದೃಢಕಾಯರು, ಶೂರರು, ಸಾಹಸ ಪ್ರಿಯರು. ಕನ್ನಡಿಗರು ಬಳಗಸ್ಥರು, ದೊಡ್ಡ ಕುಟುಂಬವಾಗಿ ಇರಲು ಬಯಸುವವರು. ಪರಾಂಪರಗತ ಉದ್ಯೋಗ, ವೃತ್ತಿ, ಹೋರೆಗಳಿಗೆ ಅಂಟಿಕೊಂಡಿರಲು ಎಳಸುವವರು. ಪರಿಶುದ್ಧವಾದ ವಿಚಾರ, ನಿರ್ದುಷ್ಟವಾದ ಆಚಾರ, ನಿರ್ಮಲವಾದ ನೀತಿ, ಆಳವಾದ ಆಸ್ತಿಕ್ಯ, ಉತ್ಕಟವಾದ ಶ್ರದ್ಧೆ ಅವರ ಜೀವನದ ತಿರುಳಾದುದು. ಅವರ ಸ್ವಾಮಿನಿಷ್ಠೆ ಅಚಲವಾದುದು. ಬಾಂಧವ್ಯ ವಿಸ್ತಾರವಾದುದು. ಹೃದಯ ಉದಾರವಾದುದು. ಅಂತೆಯೆ ಅವರ ಜೀವನದ ಜ್ಯೋತಿ ಬಹುಕಾಲ ಜಯಶೀಲವಾಯಿತು. ವಿಶ್ವದಲ್ಲಿ ಅಮರವಾದ ಒಂದು ಸಾಂಸ್ಕೃತಿಕ ಪ್ರಭೆಯನ್ನು ಪ್ರಕಾಶಿಸಿತು.

ನಾನಾ ಪ್ರವೃತ್ತಿಯ ಅರಸರ ಆಡಳಿತಕ್ಕೆ ಆಳಾದ ಕನ್ನಡಿಗರ ಜೀವನಸ್ಥಿತಿ ಕೇವಲ ಸುಖಮಯವಾಗಿದ್ದಿತು ಎಂದು ಹೇಳಲಾಗದು. ಆದೆ ಅರಸರು ಸಾಮಾನ್ಯವಾಗಿ ಸುಸಂಸ್ಕೃತರೂ ಉದಾರ ಹೃದಯಿಗಳೂ ಇದ್ದುದರಿಂದ ಅವರ ಆಳಿಕೆಯಿಂದ ಜನರಿಗೆ ಅಹಿತಕ್ಕಿಂತ ಹಿತವೇ, ಅನ್ಯಾಯಕ್ಕಿಂತ ನ್ಯಾಯವೇ ಹೆಚ್ಚಾಯಿತು ಎಂದು ಹೇಳಬಹುದು. ಧಾರ್ಮಿಕ ಸಾಮಾಜಿಕ ವಿಷಯಗಳಲ್ಲಿ ಜನರಿಗೆ ಪೂರ್ಣ ಸ್ವತಂತ್ರತೆ ಇದ್ದಿತು. ಮಾತ್ರವಲ್ಲ, ರಾಜಕೀಯ ಕ್ಷೇತ್ರದಲ್ಲಿಯೂ ಪ್ರಜೆಗಳು ಹಲವು ಬಗೆಯ ಸ್ವಾತಂತ್ರ್ಯವನ್ನೂ ಅಧಿಕಾರಗಳನ್ನೂ ಉಪಭೋಗಿಸುವವರಾಗಿದ್ದರು.

ಅರಸರು ಅಧಿಕಾರಿಗಳು ಜೀವನದ ಅಗತ್ಯಗಳನ್ನು ಮನದಂದು ಜನಗಳಿಗೆ ಸುಖ ಸೌಲಭ್ಯಗಳನ್ನು ಒದಗಿಸುತ್ತಿದ್ದರು. ಕೆರೆ ಬಾವಿಗಳನ್ನು ಕಟ್ಟಿಸಿ, ಕಾಲುವೆಗಳನ್ನು ಅಗೆಸಿ ನೀರಿನ ಪೂರೈಕೆ ಮಾಡುತ್ತಿದ್ದರು. ಹೀಗೆ ಕಾವೇರಿ, ತುಂಗಭದ್ರಾ, ಹರಿದ್ರಾ, ಪಾಲಾರು, ಪೆನ್ನಾರು ಮೊದಲಾದ ಹೊಳೆಗೆಳಿಗೆ ಅಣೆಕಟ್ಟುಗಳನ್ನು ಹಾಕಿಸಿ ನೀರಾವರಿಯ ಯೋಜನೆ ಮಾಡಿದರು. ಅಲ್ಲಲ್ಲಿ ಅನೇಕ ವೈದ್ಯರಿದ್ದರು. ನಿರಾಧಾರ ರೋಗಿಗಳಿಗಾಗಿ ಉಪಚಾರಗೃಹಗಳೂ ಇದ್ದುವು.[೧]

ಮೈಸೂರು ದೊಡ್ಡದೇವರಾಜ ಒಡೆಯರು ಮಾರ್ಗಮಾರ್ಗಕ್ಕೆ ಕೆರೆ ಬಾವಿಗಳನ್ನು ಕಟಿಸಿದರು; ಗ್ರಾಮಗ್ರಾಮಕ್ಕೆ ಅನ್ನಸತ್ರ, ಸದಾವರ್ತಗಳನ್ನು ಏರ್ಪಡಿಸಿದರು. ಬಹು

---

೧. MCI:p.188

ಪ್ರಾಚೀನ ಕಾಲದಿಂದಲೂ ನಮ್ಮ ಅರಸರು ಮಾಡಬೇಕಾದ ಕರ್ತವ್ಯವೇ ಇದು ಆಗಿದ್ದಿತು. ವಿದ್ಯಾರಣ್ಯರ ಸೋದರಳಿಯನೂ ವಿಜಯನಗರದ ಒಂದನೆಯ ದೇವರಾಯನ ಮಹಾಪ್ರಧಾನಿಯೂ ಆದ ಲಕ್ಷ್ಮೀಧರನು ಈ ವಿಷಯಗಳನ್ನು ಬಾಲಬೋಧೆಯಾಗಿ ತಾಯ ಮಡಿಲಲ್ಲಿಯೇ ಕಲಿತಿದ್ದನು:

ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿ ಸ
ಜ್ಜೆರೆಯೊಳ್ ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗಿಂಬುಗೆಯ್ ನಂಬಿದ
ರ್ಗೆರೆವಟ್ಟಾಗಿರು ಶಿಷ್ಯರಂ ಪೊರೆ ಎನುತ್ತಿಂತೆಲ್ಲಮಂ ಪಿಂತೆ ತಾ
ನೆರೆದಳ್ ಪಾಲೆರೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ॥

(ಕ. ಸಾಹಿತ್ಯ ಪರಿಷತ್ಪತ್ರಿಕೆ: ಸಂ. ೧೪, ಸಂ. ೧, ಪು.೧)

ಅರಸರು ಯಾವಾಗಲೂ ಸಮರನಿರತರಿರಬೇಕಾದುದರಿಂದ ಅವರಿಗೆ ಹಣದ ಅಗತ್ಯವಿದ್ದಿತು. ಅದಕ್ಕಾಗಿ ಜನರ ಮೇಲೆ ನಾನಾ ವಿಧವಾದ ಕರಗಳನ್ನು ಹೇರಬೇಕಾಗುತ್ತಿತ್ತು. ಈ ಸ್ಥಿತಿ ವಿಜಯನಗರ ಕಾಲದಲ್ಲಿ ಹೆಚ್ಚಾಗಿ ಅನುಭವಕ್ಕೆ ಬಂದಿತು. ಈ ಕಾಲದಲ್ಲಿ ಕೆಲವು ಕಡೆ ಕರಗಳು ತೀರ ಅಸಹ್ಯವಾಗಿ ಜನರ ಅಸಂತೋಷ ಮಿತಿಮೀರಿದುದರಿಂದ ಅಂತಹ ಕರಗಳನ್ನು ಕಿತ್ತುಹಾಕಬೇಕಾಯಿತು. ಇಂತಹ ಸಂದರ್ಭಗಳಲ್ಲಿ ಅಧಿಕಾರಿಗಳ ಅನ್ಯಾಯದ ವಿರುದ್ಧವಾಗಿ ಜನತೆಯಲ್ಲಿ ಪ್ರತೀಕಾರ ಬುದ್ಧಿ ಜಾಗೃತವಾದ ಉದಾಹರಣೆಗಳಿವೆ. ಈ ಮಾದರಿಯ ಜನತೆಯ ಭಾವನೆ ಒಂದು ಶಾಸನದಲ್ಲಿ ಪ್ರಕಟವಾಗಿದೆ. "ನಮ್ಮ ಮೇಲೆ ಅನ್ಯಾಯದ ಕರಗಳನ್ನು ಹೇರಿದರು. ಅದಕ್ಕೆ ನಾವು ಹೆದರಿ ಅಸಂಘಟಿತರಾಗಿ ಓಡಿಹೋದೆವು. ಆದರೆ ಈಗ ನಮಗೆ ನಮ್ಮ ತಪ್ಪು ತಿಳಿದಿದೆ. ಇನ್ನು ಮೇಲೆ ನಾವು ಅನ್ಯಾಯದ ಕರವನ್ನು ಎಂದಿಗೂ ತೆರಲಾರೆವು. ನ್ಯಾಯವೂ ಸಮಂಜಸವೂ ಆದುದನ್ನೇ ಕೊಡುವೆವು."[೧]

ಹೆಂಡತಿಯಾದವಳು ಗಂಡನ ಮರಣಾನಂತರ ಪ್ರಾಣತ್ಯಾಗ ಮಾಡುವ ಪದ್ಧತಿ ಬಹಳ ಹಿಂದಿನ ಕಾಲದಿಂದ ಬಳಕೆಯಿದ್ದಿತು. ಇದಕ್ಕೆ ಸಹಗಮನ ಇಲ್ಲವೆ ಸತಿಯಾಗುವುದು ಎಂದು ಹೆಸರು. ಹೀಗೆ ಜೀವನಯಾತ್ರೆಯನ್ನು ಮುಗಿಸಿದವಳ ಪವಿತ್ರ ನೆನವರಿಕೆಗಾಗಿ ಸ್ಮಾರಕಶಿಲೆಯನ್ನು ನಿಲ್ಲಿಸುವ ಸಂಪ್ರದಾಯವಿದ್ದಿತು. ಇವುಗಳನ್ನು **ಮಾಸ್ತಿಕಲ್ಲು** (ಮಹಾಸತಿ ಕಲ್ಲು) ಎಂದು ಕರೆಯುವರು. ಇಂತಹ ಮಾಸ್ತಿ ಕಲ್ಲುಗಳನ್ನು ದೇಶದ ಎಲ್ಲ ಭಾಗಗಳಲ್ಲಿ ಇಂದಿಗೂ ಕಾಣಬಹುದು.

ಇದೇ ಪ್ರಕಾರ ಕಾಳಗದಲ್ಲಿ ಹೋರಾಡಿ ಮಡಿದ ವೀರರ ಸ್ಮಾರಕ ಶಿಲೆಗಳನ್ನು ಸ್ಥಾಪಿಸುತ್ತಿದ್ದರು. ಇವುಗಳಿಗೆ **ವೀರಗಲ್ಲುಗಳೆಂದು** ಹೆಸರು. ಇವಾದರೂ ನಮ್ಮ ನಾಡಿನಲ್ಲಿ ಹೇರಳವಾಗಿ ದೊರೆಯುತ್ತವೆ. ಈ ಎರಡು ಬಗೆಯ ನೆನವರಿಕೆಗಳು– ವೀರಗಲ್ಲು ಮತ್ತು ಮಾಸ್ತಿಗಲ್ಲು – ಕನ್ನಡಿಗರ ವೈಶಿಷ್ಟ್ಯವಾಗಿದೆ.

---

೧. MER:1918,68

ದುರ್ಧರವಾದ ರೋಗ, ದುಸ್ತರವಾದ ವಿಪತ್ತಿ, ಅನಿವಾರ್ಯದ ಅಂತ್ಯ ಸಮಯ ಒದಗಿ ಬಾಳಿನ ಆಸೆ ನಂದಿಹೋಗಲು, ನಿರಾಹಾರ ವ್ರತದಿಂದ ನಮೆದುನಮೆದು ಸಾಯುವ ಧಾರ್ಮಿಕ ವಿಧಿಯೊಂದು ಜೈನರಲ್ಲಿ ಪ್ರಚುರವಾಗಿತ್ತು. ಇದಕ್ಕೆ ಸಲ್ಲೇಖನ ಇಲ್ಲವೆ ಸನ್ಯಸನ ಎಂದು ಹೆಸರು. ಈ ವಿಧಿಯಿಂದ ಮುಡುಪಿದವರ (ಮಡಿದವರ) ನೆನವರಿಕೆಗಾಗಿ ಶಿಲಾವಿಗ್ರಹಗಳನ್ನು ಕೊರೆಸುತ್ತಿದ್ದರು. ಇವುಗಳಿಗೆ **ನಿಷಧಿ** (ನಿಸದಿಗೆ) ಎನ್ನುವರು. ಶ್ರವಣಬೆಳಗೊಳ, ಕೊಪ್ಪಳ ಮುಂತಾದ ಜೈನ ಸ್ಥಳಗಳಲ್ಲಿ ಇಂತಹ ಅನೇಕ ನಿಷಧಿಗಳು ಸಿಕ್ಕುತ್ತವೆ.

ಸ್ವಾಮಿಯೇ ತಮ್ಮ ಜೀವನ ಸರ್ವಸ್ವವಾಗಿ ಬಗೆದು, ಜೀವನಾವಧಿ ಆತನ ಸೇವೆಯಲ್ಲಿದ್ದು ಆತನನ್ನು ಕಾಪಾಡುತ್ತ ಆತನ ಜೀವಪಾಕದೊಂದಿಗೆ ತಮ್ಮ ಪ್ರಾಣ ವಿಸರ್ಜನೆಯ ಪ್ರತಿಜ್ಞೆಯಿಂದ ಬದ್ಧರಾದ ರಕ್ಷಾಭಟರ ಒಂದು ಪಂಥವಿದ್ದಿತು. ಇವರಿಗೆ **ಗರೂಡ** ಎಂದು ಹೆಸರು. ಹೊಯ್ಸಳರ ಕಾಲದಲ್ಲಿ ಬಾಳಿದ ಈ ವರ್ಗದ ಉದಾಹರಣೆಗಳು ದೊರೆತಿವೆ. ಕೆಲವು ಸಲ ಇಂತಹ ವೀರಭಟರ ಹೆಂಡಂದಿರೂ ಸೇವಕ ಸೇವಕಿಯರೂ ಈ ಬಲಿದಾನದಲ್ಲಿ ಭಾಗಿಯಾಗುತ್ತಿದ್ದರು. ಇಮ್ಮಡಿ ವೀರಬಲ್ಲಾಳನ ಪ್ರಾಣಸಹಾಯಕರಾದ ಕೆಚ್ಚೆದೆಯ ಸಾವಿರ ವೀರರಿದ್ದರು. ಇವರ ನಾಯಕಮಣಿ ಕುವರಲಕ್ಷ್ಮ. ವೀರಬಲ್ಲಾಳನು ಮಡಿದ ಕೂಡಲೆ ಈ ಸಾವಿರ ಯೋಧರು ತಮ್ಮ ಪ್ರಾಣಗಳನ್ನು ಈಡಾಡಿದರು. ಕುವರಲಕ್ಷ್ಮನ ಜೊತೆಗೆ ಆತನ ಅರ್ಧಾಂಗಿ ಸುಗ್ಗಲೆಯೂ ಸಾವನಪ್ಪಿಕೊಂಡಳು.

ಜೀವನ ಸಮಾಪ್ತಿಯಲ್ಲಿಯೂ ಕಾಯಕ್ಲೇಶದಲ್ಲಿಯೂ ಕೊನೆಗಾಣುವ ವಿಚಿತ್ರವಾದ ಕೆಲವು ಹರಕೆಗಳು ರೂಢಿಯಲ್ಲಿದ್ದವು. ಇಂತಹ ಕೆಲವು ಉದಾಹರಣೆಗಳನ್ನು ನೋಡುವ. ತನ್ನ ಅರಸನಿಗೆ ಪುತ್ರೋತ್ಸಾಹವಾಗಲು ದೇವರ ಮುಂದೆ ತಮ್ಮ ಪ್ರಾಣವನ್ನು ನೀಗಿ ಪ್ರತಿಜ್ಞಾಪೂರ್ತಿ ಮಾಡುವವರು ಕೆಲವರು. ಹೀಗೆಯೆ ತಮ್ಮ ಅಭೀಷ್ಟ ಪೂರ್ಣವಾದುದಕ್ಕೆ ಆನೆ ಕಾಲಿಗೆ ತುತ್ತಾಗುವವರು ಕೆಲವರು. ಈ ರೀತಿ ಸಾಯುವವರು ಒಮ್ಮೊಮ್ಮೆ **ಸಿಡಿತಲೆ**ಗೊಡುತ್ತಿದ್ದರು. ಅದರ ವಿಧಾನ ಇಂತು: ಸಾಯಬೇಕಾದವನು ಒಂದು ಸೆಳೆಗಂಬದ ಬಳಿಯಲ್ಲಿ ಕುಳಿತುಕೊಳ್ಳುವನು. ಆ ಕಂಬದ ತುದಿಯನ್ನು ಬಾಗಿಸಿ ಅದಕ್ಕೆ ಆತನ ತಲೆಗೂದಲನ್ನು ಬಿಗಿಯಾಗಿ ಕಟ್ಟುವರು. ಬಳಿಕ ಇನ್ನೊಬ್ಬನು ಕತ್ತಿಯಿಂದ ಅವನ ಕತ್ತನ್ನು ಹಾರಿಸಿದ ಕೂಡಲೆ ಅದು ಪುಟನೆಗೆದು ಆ ಕಂಬಕ್ಕೆ ನೇತಾಡುವುದು. ಸಮರದಲ್ಲಿ ಸೇನೆಗೆ ಜಯವಾಗಲೆಂದು ನಾಯಕನೊಬ್ಬನು ತನ್ನ ತಲೆ ಕೊಟ್ಟನು. (೧೨ನೆ ಶತಮಾನ).

ದೇವರ ಮುಂದೆ ಸಿಡಿಯಾಡುವುದು ಹರಕೆಯ ಒಂದು ಪ್ರಕಾರವಾಗಿದ್ದಿತು. ಅದರ ಕ್ರಮ ಹೀಗೆ: ಗುಡಿಯ ಮುಂದಿನ ಬಯಲಲ್ಲಿ ಕಂಬವನ್ನು ನೆಟ್ಟು ಅದರ ಮೇಲೆ ಅಡ್ಡವಾಗಿ ಒಂದು ತೊಲೆಯನ್ನು ಕೀಲಿಸುತ್ತಿದ್ದರು. ಆ ತೊಲೆಗೆ ಜೋತುಬಿಟ್ಟ ಮೊನೆಯಾದ ಕೊಂಡೆಗಳನ್ನು ಮೈಯಲ್ಲಿ ಚುಚ್ಚಿಕೊಂಡು ದುಂಡಾಗಿ ತಿರುಗುವರು.

ಅಮಾನುಷ ವಿಧಾನದಿಂದ ತಪ್ಪಿತಸ್ಥನ ಅಪರಾಧವನ್ನು ನಿರ್ಣಯಿಸುವ ಕೆಲವು 'ದಿವ್ಯ' ಪದ್ಧತಿಗಳು ಕೆಲವು ಕಡೆ ನಡೆಯುತ್ತಿದ್ದುವು. ಆರೋಪಿತನು ದೇವರ ಮುಂದೆ ಆಣೆಮಾಡಿ ಅಭಿಮಂತ್ರಿಸಿದ ಪದಾರ್ಥವನ್ನು ತಿನ್ನುವುದು, ಕೆಂಪಾಗಿ ಕಾದ ಕಂಬಿಯನ್ನು ಹಿಡಿಯುವುದು, ಮರಳುವ ತುಪ್ಪದಲಿ ಕೈ ತುಡುಕುವುದು ಮುಂತಾದ ಕೃತಿಗಳಿಂದ ಅಪರಾಧಿಗಳನ್ನು ಪರೀಕ್ಷಿಸುತ್ತಿದ್ದರು. ಇವುಗಳನ್ನು ಧೈರ್ಯವಾಗಿ ಎದುರಿಸಿ ಉಳಿದವರನ್ನು ನಿರ್ದೋಷಿಯೆಂದು ನಿರ್ಧರಿಸುತ್ತಿದ್ದರು.[೧]

ದೈವವಾದ, ಅತೀಂದ್ರಿಯ ಶಕ್ತಿ, ಮಂತ್ರ – ತಂತ್ರ, ಜ್ಯೋತಿಷ, ಶಕುನ, ಭೂತ, ಪಿಶಾಚ, ಮಾಟ ಮುಂತಾದ ವಿಷಯಗಳಲ್ಲಿ ಜನರಿಗೆ ವಿಶ್ವಾಸವಿದ್ದಿತು. ಹುರುಳಿಲ್ಲದ ಅನೇಕ ಮೂಢನಂಬಿಕೆಗಳೂ ಜನಮನದಲ್ಲಿ ಮನೆಮಾಡಿಕೊಂಡಿದ್ದುವು.

ಕನ್ನಡಿಗರು ಕುಲರಸಿಕರು, ಸೌಂದರ್ಯೋಪಾಸಕರು, ಬಾಳಿನಲ್ಲಿ ತುಂಬ ಆಸಕ್ತಿಯುಳ್ಳವರು ಆಗಿದ್ದರು. ಆಟ, ನೋಟ, ಹಬ್ಬ, ಊಟ, ಉತ್ಸವ ಸಮಾರಂಭವೆಂದರೆ ಅವರಿಗೆ ಹೆಚ್ಚಿನ ಉತ್ಸಾಹ, ಪ್ರೀತಿ. ಧರ್ಮ ಪ್ರವಣವಾದ ಅವರ ಹೃದಯ ಇವೆಲ್ಲವುಗಳಲ್ಲಿ ಧಾರ್ಮಿಕತೆಯ ಸೊಗಸನ್ನು ಬೆರೆಸಿ ಅವುಗಳನ್ನು ಸವಿಯುವುದಾಗಿತ್ತು.

ಚೈತ್ರ, ಆಶ್ವಿನ, ಮಾಘ ಮೊದಲಾದ ತಿಂಗಳಲ್ಲಿ ಶಿವ, ವಿಷ್ಣು ಮುಂತಾದ ದೇವತೆಗಳನ್ನು ಕುರಿತು ಅನೇಕ ಕಡೆಗಳಲ್ಲಿ ಜಾತ್ರೆ ರಥೋತ್ಸವ, ತೆಪ್ಪೋತ್ಸವ ಮುಂತಾದ ಸಮಾರಂಭಗಳು ವಿಜೃಂಭಣೆಯಿಂದ ನಡೆಯುತ್ತಿದ್ದುವು. ವಸಂತೋತ್ಸವ, ಕಾರಹುಣ್ಣಿಮೆ, ನಾಗರಪಂಚಮಿ, ಬೆನಕಚೌತಿ, ಮಾನೋಮಿ, ದೀವಳಿಗೆ, ಮಕರ ಸಂಕ್ರಮಣ, ಶಿವರಾತ್ರಿ, ಹೋಳಿಗೆಹುಣ್ಣಿಮೆ ಇವು ಪ್ರಮುಖ ಹಬ್ಬಗಳಾಗಿದ್ದವು. ಮಾನೋಮಿ ಕನ್ನಡಿಗರ ರಾಷ್ಟ್ರೀಯ ಮಹೋತ್ಸವವಾಗಿದ್ದು, ಇದನ್ನು ಎಲ್ಲ ಕಡೆಯಲ್ಲಿ ಬಹು ವೈಭವದಿಂದ ಆಚರಿಸುತ್ತಿದ್ದರು. ವಿಜಯನಗರ ಕಾಲದಲ್ಲಿ ಇದಕ್ಕೆ ಅತಿಶಯ ಪ್ರಶಸ್ತಿಯುಂಟಾಗಿ ಅದೊಂದು ರಾಷ್ಟ್ರದ ಸರ್ವಶಕ್ತಿ, ವಿದ್ಯೆ, ಕಲೆಗಳ ಮಹಾ ಸಮ್ಮೇಳನವಾಗಿ ರೂಪುಗೊಂಡಿತು. ರತ್ನಾಕರವರ್ಣಿ (೧೬ನೆಯ ಶತಮಾನ) ವರ್ಣಿಸಿದ ಇದರ ಬಗೆಯನ್ನು ಆಲಿಸುವ :

ಒಂದೊಂದು ದಿನಕೆ ಬೇರೊಂದೊಂದು ಪರಿಯ ತೇ
ರೊಂದೊಂದು ಪರಿಯ ವಿದ್ಯಾರ್ಥಿ
ಒಂದೊಂದು ಪರಿಯ ಪ್ರಭಾವನೆಯಿಂದರ್ತಿ
ಸಂದೆಸಗಿತು ಮಹಾನವಮಿ॥

ಶಾಂತಿಗಳಿಂದ ದಾನಗಳಿಂದ ತ್ಯಾಗ ಭೋ
ಗಾಂತರಾಳದ ಲೀಲೆಯಿಂದ

೧. MCI:p177

ಅಂತರಾಯವ ರಾಯನರೆಯಟ್ಟ ಮಂತ್ರಿ ಪೇ
ಳ್ದಂತೆ ವರ್ತಿಸಿದನುತ್ಸವವಾ॥

ರಾಜರ ರಾಜ ಮಾನ್ಯಗಳಿಂದ ಸಕಲ ವಿ
ದ್ಯಾ ಜನಗಳ ಗೋಷ್ಠಿಯಿಂದ
ಭೂಜನ ಪುರಜನ ಪರಿಜನ ಲಾಲನೆ
ರಾಜಿಸಲರ್ತಿ ಮಾಡಿದನು॥

– ನವರಾತ್ರಿ ಸಂಧಿ,೭೮–೮೦

ಈ ಸಮಾರಂಭಗಳಲ್ಲಿ ನೃತ್ಯ, ಗಾಯನ, ಕೋಲಾಟ, ಯಕ್ಷಗಾನ ಮೊದಲಾದ ಜಾನಪದ ಕಲಾಪ್ರದರ್ಶನಗಳು ಜನತೆಗೆ ರಂಜನೆಯೊಂದಿಗೆ ಶಿಕ್ಷಣ ಸಂಸ್ಕಾರವನ್ನು ನೀಡುವಂತಹವಾಗಿದ್ದುವು.

ಈಜುವುದು, ಕುದುರೆ ಸವಾರಿ, ಗರಡಿ, ಮಲ್ಲಗಂಬ, ಕಾದಾಟ, ಚೆಂಡಿನಾಟ, ಪಂದ್ಯಾಟ ಮುಂತಾದುವು ಬಲವರ್ಧಕ ವಿನೋದ ವ್ಯಾಯಾಮಗಳಾಗಿದ್ದುವು. ಪಗಡೆ, ಚದುರಂಗ ಮೊದಲಾದುವು ಸುಖ ಕ್ರೀಡಾ ಕೇಲಿಗಳಾಗಿದ್ದವು.

ಪ್ರಕರಣ ೨

ಆರ್ಥಿಕ ಪರಿಸ್ಥಿತಿ

೧. ಪ್ರಾಕೃತಿಕ ಸಂಪತ್ತು

ಕರ್ನಾಟಕ ನಿಸರ್ಗದ ಸೌಕರ್ಯಗಳಿಂದ ಸಂಪನ್ನವಾದ ನಾಡು. ಇಲ್ಲಿಯ ಕಪ್ಪು ಮಣ್ಣು, ಎರೆ ಫಲವತ್ತಾದುವು. ಗುಡ್ಡಗಳು ಬಹುಮೂಲ್ಯ ಧಾತುಗರ್ಭಿತವಾದುವು. ವಿಸ್ತಾರವಾದ ಕಾಡುಗಳು ವನಸ್ಪತಿ ವೈಭವದಿಂದ ಸಮೃದ್ಧವಾದುವು. ಹೊಳೆಗಳು ನೀರಾವರಿ ಮೊದಲಾದ ಉದ್ಯಮಕ್ಕೆ ಅನುಕೂಲವಾದುವು. ಸುದೀರ್ಘವಾದ ಕರಾವಳಿ ಜಲಸಂಚಾರಕ್ಕೂ ವ್ಯಾಪಾರಕ್ಕೂ ಸಹಾಯಕವಾದುವು. ವಾಯುಗುಣ ಆರೋಗ್ಯ ಬಲಸಂವರ್ಧಕವಾದುದು. ಚಾರಿತ್ರಿಕ ಕಾಲದಿಂದ ಇಂದಿನವರೆಗೂ ಈ ಪ್ರಾಕೃತಿಕ ಸಾಧನಸಾಮಗ್ರಿ ಸಾಕಷ್ಟು ಸಂಶೋಧಿತವಾಗಿ ವಿನಿಯೋಗಕ್ಕೆ ಬಂದಿಲ್ಲ.

ಮೈಸೂರು, ಸೇಲಂ. ಕೊಯಮತ್ತೂರು ಪ್ರದೇಶಗಳಲ್ಲಿ ಬಹು ಪ್ರಾಚೀನ ಕಾಲದಲ್ಲಿ ಪಚ್ಚೆಯ ಗಣಿಗಳು ಇದ್ದುವು.[೧] ಗೋವಳಕೊಂಡದ ರತ್ನದ ಗಣಿಗಳು ಸುವಿಖ್ಯಾತವಾದುವು. ವಿಜಯನಗರ ಕಾಲದಲ್ಲಿಯೂ ಆಮೇಲೆ ಟೀಪುಸುಲ್ತಾನನ ಕಾಲದವರೆಗೂ ಬಳ್ಳಾರಿ ಜಿಲ್ಲೆಯ ವಜ್ರಕರೂರು ಎಂಬಲ್ಲಿಯ ಗಣಿಯಿಂದ ಬೆಲೆಯುಳ್ಳ ರತ್ನಗಳು ಹುಟ್ಟುತ್ತಿದ್ದುವು. ಕೋಲಾರ, ರಾಯಚೂರು, ಧಾರವಾಡ, ಬೆಳಗಾವಿ, ಶಿವಮೊಗ್ಗ ಮೊದಲಾದ ಭಾಗಗಳಲ್ಲಿ ಚಿನ್ನ ಹೊರಡುವಂತಹದಾಗಿದೆ. ಕಬ್ಬಿಣ ಸಾಮಾನ್ಯವಾಗಿ ಎಲ್ಲ ಭಾಗಗಳಲ್ಲಿ ಸಿಕ್ಕುವುದು. ಬೆಳ್ಳಿ, ತಾಮ್ರ, ಹಿತ್ತಾಳೆ, ಅಭ್ರಕ, ಲೋಹಮಂಡೂರ, ಸೋರುಪ್ಪು, ಪಟಗ, ಸಂಗಮರವರಿ ಕಲ್ಲು, ಸುಣ್ಣದ ಕಲ್ಲು, ಬಣ್ಣದ ಮಣ್ಣು ಮೊದಲಾದ ಪದಾರ್ಥಗಳು ಅನೇಕ ಸ್ಥಳಗಳಲ್ಲಿ ದೊರೆಯುವುವು. ಕರಾವಳಿಯಲ್ಲಿ ಹವಳ ಸಿಕ್ಕುತ್ತದೆ. ಪಡುವಣಘಟ್ಟದ ಅಡವಿಗಳಲ್ಲಿ ತೇಗ, ಮತ್ತಿ, ದೇವದಾರು, ಶ್ರೀಗಂಧ, ಆಲ, ಇಪ್ಪೆ, ಹೊನ್ನಿ, ಹಲಸು, ಹುಣಿಸೆ, ಮಾವು, ಗೋಡಂಬೆ, ಜಾಜಿ, ಕದಿರ, ತೇರು, ಕರಿಮರ, ಜಾಲಿ, ಸೀಗೆ, ಬಿದಿರು ಮೊದಲಾದ ಉಪಯುಕ್ತ ಗಿಡಮರಗಳೂ ಔಷಧಿಗಳೂ ಹೇರಳವಾಗಿ ಬೆಳೆಯುವುವು.

೨.ಕೃಷಿ

ಕೃಷಿಕರ್ಮ ಸುಸ್ಥಿತಿಯಲ್ಲಿದ್ದಿತು. ಹಿಂಗಾರು ಮುಂಗಾರು ಮಳೆಗಳು ಅನುಕೂಲವಾಗಿ ಕರೆಯುತ್ತಿದ್ದುವು. ಹೊಲ ಗದ್ದೆಗಳು ಸರಿಯಾದ ಸಾಗುವಳಿಯಿಂದ ವಿವಿಧ ಸಸ್ಯಗಳನ್ನು ರಸವತ್ತಾಗಿಯೂ ಸಮೃದ್ಧಿಯಾಗಿಯೂ ಬೆಳೆಯುತ್ತಿದ್ದುವು.

---

೧. EHI: p.461

ದವಸ ಧಾನ್ಯಗಳೂ ಹಣ್ಣುಹಂಪಲುಗಳೂ ಬಹು ಅಗ್ಗವಾಗಿದ್ದುವು. ಅನೇಕ ಕಡೆಯ ಪ್ರಾಚೀನ ಶಾಸನಗಳಲ್ಲಿ ಕೆರೆ ತೋಟ ಗದ್ದೆಗಳ ಮತ್ತು ಅವುಗಳಲ್ಲಿ ಹುಟ್ಟುವ ಬೇರೆ ಬೇರೆ ಬೆಳೆಗಳ ನಿರ್ದೇಶ ದೊರೆಯುತ್ತದೆ. ಆದರೆ ಇಂತಹ ಕೆಲವು ಸ್ಥಳಗಳಲ್ಲಿ ಈಗ ಕುಡಿಯಲು ನೀರು ಕೂಡ ಸಿಕ್ಕುವುದಿಲ್ಲ. ಇದರಿಂದ ಹಿಂದು ಹಿಂದಿನ ಕಾಲದಲ್ಲಿ ಈಗಿಗಿಂತ ಹೆಚ್ಚು ಮಳೆ ಆಗುತ್ತಿದ್ದಿತು ಎಂದು ಸ್ಪಷ್ಟವಾಗುತ್ತದೆ. ನಮ್ಮ ಕವಿಗಳೂ ವಿಜಯನಗರ ಕಾಲದ ಬರ್ಬೊಸಾ, ಪೇಸ್, ನ್ಯೂನಿಝ್ ಮೊದಲಾದ ಪಾಶ್ಚಾತ್ಯ ಪ್ರವಾಸಿಗರೂ ಇಲ್ಲಿಯ ಧನಧಾನ್ಯ ವಿಪುಲತೆಯನ್ನು ಬಣ್ಣಿಸಿರುವುದರಿಂದಲೂ ಮೇಲಿನ ಸಂಗತಿ ಬಲಪಡುತ್ತದೆ.

ಕ್ಷಾಮ ಪ್ರದೇಶಗಳಲ್ಲಿ ದೊಡ್ಡ ದೊಡ್ಡ ಕೆರೆ ಕಾಲುವೆಗಳನ್ನು ಕಟ್ಟಿಸಿ ನೀರಾವರಿಯ ಮೂಲಕ ಕೃಷಿ ಸೌಕರ್ಯಗಳನ್ನು ಒದಗಿಸಲಾಗುತ್ತಿದ್ದಿತು. ವಿಜಯನಗರದ ಒಂದನೆಯ ದೇವರಾಯನ ಆಳಿಕೆಯಲ್ಲಿ ಹರಿಹರದ ಹತ್ತಿರ ಹರಿದ್ರಾ ನದಿಗೆ ಹಾಕಿದ ಅಣೆಕಟ್ಟಿನಿಂದ ಒಕ್ಕಲತನಕ್ಕೆ ಬಹಳ ಸಹಾಯವಾಯಿತು. ಕೃಷ್ಣದೇವರಾಯ ಮತ್ತು ಚಿಕ್ಕದೇವರಾಜರು ಹೊಸಪೇಟೆ, ಕೋಲಾರ ಮೊದಲಾದ ಕಡೆಗಳಲ್ಲಿ ಕೆರೆಗಳನ್ನೂ ಕಾಲುವೆಗಳನ್ನೂ ಮಾಡಿಸಿ ಕೃಷಿಗೆ ಬಹಳ ಅನುಕೂಲ ಮಾಡಿದರು.

ಇಂತಹ ಉಪಚಾರಗಳಿಂದ ಸಂಪ್ರೀತಳಾದ ಭೂದೇವಿ ಬಗೆಬಗೆಯ ಸರಸ ಸಸ್ಯಫಲಗಳನ್ನು ದಯಪಾಲಿಸಿದಳು. ಭತ್ತ, ಕಬ್ಬು, ಅಡಕೆ, ತೆಂಗು, ಬಾಳೆ, ಯಾಲಕ್ಕಿ, ಮೆಣಸು ಮುಂತಾದ ನೀರುಬೆಳೆ ಹೇರಳವಾಗಿ ಹುಟ್ಟುತ್ತಿದ್ದಿತು. ಎರೆಭೂಮಿಯಲ್ಲಿ ಜೋಳ, ರಾಗಿ, ಗೋಧಿ, ತೊಗರಿ, ಕಡಲೆ, ಹೆಸರು, ಉದ್ದು, ಅವರೆ ಮೊದಲಾದ ಒಣಧಾನ್ಯಗಳು ರಾಶಿ ರಾಶಿಯಾಗಿ ಉತ್ಪತ್ತಿಯಾಗುತ್ತಿದ್ದವು. ಕುಸುಬೆ, ಹರಳು, ಎಳ್ಳು ಮುಂತಾದ ಎಣ್ಣೆಕಾಳುಗಳು ಸಾಕಷ್ಟು ಬೆಳೆಯುತ್ತಿದ್ದುವು. ಹೂವು, ಹಣ್ಣು, ವೀಳ್ಯದೆಲೆ ಬೇಕಾದಷ್ಟು ದೊರೆಯುತ್ತಿದ್ದುವು.

೩. ಉದ್ಯೋಗಗಳು

ರಾಷ್ಟ್ರ ಸಿರಿಯ ನೆಲೆವೀಡಾಗಿತ್ತು. ಅರಸರೂ ಸಿರಿವಂತರೂ ರಸಿಕರಾಗಿದ್ದು ಬಗೆಬಗೆಯ ಸೊಗಸುಗಳನ್ನು ಬಯಸುವವರಾಗಿದ್ದರು. ಜನರು ಬುದ್ಧಿವಂತರೂ ಪ್ರಕೃತಿಯ ಸೌಲಭ್ಯಗಳನ್ನು ಒದಗಿಸಿಕೊಳ್ಳುವ ಕೌಶಲ್ಯವುಳ್ಳವರೂ ಆಗಿದ್ದರು. ಆದುದರಿಂದ ನಾಗರಿಕ ಜನಾಂಗದ ನಿತ್ಯೋಪಯೋಗದ ಮತ್ತು ವಿಲಾಸದ ಬಗೆ ಬಗೆಯ ವಸ್ತು ಒಡವೆಗಳನ್ನು ಸಿದ್ಧಪಡಿಸುವ ಉದ್ಯೋಗಗಳೂ ಕೈಗಾರಿಕೆಗಳೂ ಅನೇಕ ಕಡೆಯಲ್ಲಿ ನಡೆಯುತ್ತಿದ್ದುವು.

ಅರಳೆಯ ಮತ್ತು ಉಣ್ಣೆಯ ನೆಯ್ಗೆಯ ಉದ್ಯೋಗ ಸಾರ್ವತ್ರಿಕವಾಗಿದ್ದಿತು. ಇಲ್ಲಿ ಹುಟ್ಟುವ ಬಟ್ಟೆಗಳು ಜಿನುಗಿನಲ್ಲಿಯೂ ಅಂದಚೆಂದದಲ್ಲಿಯೂ ಮಿಗಿಲಾಗಿದ್ದುವು. ರೇಶಿಮೆಯ ವಸ್ತ್ರಗಳೂ ಆಗುತ್ತಿದ್ದವು. ಕರಾವಳಿಯಲ್ಲಿಯೂ ಒಳನಾಡಿನಲ್ಲಿಯೂ ಉಪ್ಪಿನ ಮಾಳಿಗಳಿಂದ ಸಾಕಷ್ಟು ಉಪ್ಪು ಹೊರಡುತ್ತಿದ್ದಿತು. ಹೊಲ ಮನೆಯ

ಉಪಯೋಗದ ಸಾಧನಗಳನ್ನೂ ಆಯುಧಗಳನ್ನೂ ರಚಿಸುವ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು ಊರೂರಲ್ಲಿ ನಡೆಯುತ್ತಿದ್ದುವು. ತಾಮ್ರ, ಹಿತ್ತಾಳೆ, ಬಂಗಾರದ ಬಗೆಬಗೆಯ ಪಾತ್ರೆಗಳೂ ಅಲಂಕಾರಗಳೂ ಅಲ್ಲಲ್ಲಿ ತಯಾರಾಗುತ್ತಿದ್ದುವು. ಗಾಜು, ಗಂಧದ ಕಟ್ಟಿಗೆ, ದಂತ ಇವುಗಳ ಕೆಲಸ, ಬಣ್ಣಗಾರಿಕೆ, ಚರ್ಮ ಹದಮಾಡುವುದು, ತಂತಿ ಎಳೆಯುವುದು ಮುಂತಾದ ಉದ್ಯೋಗಗಳು ಅನೇಕ ಸ್ಥಳಗಳಲ್ಲಿ ನಡೆಯುತ್ತಿದ್ದವು. ಕಾಗದದ ಉದ್ಯೋಗವೂ ಕೆಲಮಟ್ಟಿಗೆ ನಡೆಯುತ್ತಿದ್ದಿತು. ಇದಲ್ಲದೆ ಮುತ್ತು ರತ್ನಗಳ ಆಭರಣ ಮಾಡುವುದು, ಧಾತುಲೇಪನ, ಕಸೂತಿಯ ಕೆಲಸ, ಮೂರ್ತಿ ಪೂಜಾ–ಸಾಧನಗಳ ರಚನೆ, ಹೀನಧಾತುವಿನ ಪಾತ್ರೆಗಳ ಮೇಲೆ ಬೆಳ್ಳಿ, ಚಿನ್ನ ಮುಂತಾದ ಉತ್ತಮ ಧಾತುಗಳ ಸಂಯೋಗದಿಂದ ಚೆಂದದ ಒಡವೆಗಳನ್ನು ನಿರ್ಮಿಸುವುದು, ಅರಗಿನ ಕೆಲಸ, ಬಣ್ಣದ ಆಟದ ಪದಾರ್ಥಗಳನ್ನು ಮತ್ತು ಸುಗಂಧ ದ್ರವ್ಯಗಳನ್ನು ಸಿದ್ಧಪಡಿಸುವುದು ಮುಂತಾದ ಕುಸುರಿನ ಕೈಗಾರಿಕೆಗಳು ಸಾಕಷ್ಟು ನಡೆಯುತ್ತಿದ್ದವು.

೪. ವ್ಯಾಪಾರಾಭಿವೃದ್ಧಿ

ಕರ್ನಾಟಕದ ವ್ಯಾಪಾರ – ವ್ಯವಹಾರದ ಚರಿತ್ರೆ ಬಹು ವಿಸ್ತಾರವಾದುದು. ಪ್ರಾಚೀನತೆಯಿಂದಲೂ ಘನತೆಯಿಂದಲೂ ಕೂಡಿದುದು ಆಗಿದೆ. ಕ್ರಿ.ಪೂ. ಅನೇಕ ಶತಮಾನಗಳ ಆಚೆಯಿಂದ ಏಷಿಯ, ಯುರೋಪು ಮೊದಲಾದ ಖಂಡಗಳೊಡನೆಯೂ ಇರಾಣ, ಅರಬಸ್ತಾನ, ಗ್ರೀಸ್, ಇಟಲಿ, ಇಜಿಪ್ತ ಮುಂತಾದ ಅನೇಕ ರಾಷ್ಟ್ರಗಳೊಡನೆಯೂ ಪಶ್ಚಿಮ ಕರಾವಳಿಯಿಂದ ದುರಂಧರ ವ್ಯಾಪಾರ ನಡೆಯುತ್ತಿದ್ದಿತು. ಯಹೂದಿ ಜನಾಂಗದ ಸಾಲೋಮನ್ ಅರಸನ ಕಾಲದಲ್ಲಿ (ಕ್ರಿ.ಪೂ. ೧೦೦೦) ಚಿನ್ನ, ದಂತ, ಮಂಗ, ನವಿಲು ಮುಂತಾದ ಸರಕುಗಳು ವಿದೇಶಗಳಿಗೆ ಹೋಗುತ್ತಿದ್ದುದಾಗಿ ತಿಳಿಯುತ್ತದೆ. ಪೆರಿಪ್ಲಸ್, ತೊಲೆಮಿ (೧ ಮತ್ತು ೨ನೆಯ ಶತಮಾನ) ಮುಂತಾದ ಲೇಖಕರು ಇಲ್ಲಿ ನಡೆಯುತ್ತಿದ್ದ ಸಮೃದ್ಧವಾದ ವ್ಯಾಪಾರವನ್ನು ವರ್ಣಿಸಿರುವರು. ಮುತ್ತು, ರತ್ನ, ಶ್ರೀಗಂಧ, ಮೆಣಸು, ಯಾಲಕ್ಕಿ, ಅಡಕೆ, ಕಬ್ಬಿಣ, ಬಟ್ಟೆ ಮುಂತಾದ ಪದಾರ್ಥಗಳು ಹಡಗುಗಳಲ್ಲಿ ತುಂಬಿ ತುಂಬಿ ದ್ವೀಪಾಂತರಗಳಿಗೆ ಸಾಗಿ ಹೋಗುತ್ತಿದ್ದವು. ಈ ವ್ಯಾಪಾರದಿಂದ ರೋಮ್ ಸಾಮ್ರಾಜ್ಯ ಕೋಟ್ಯಂತರ ಹಣಕ್ಕೆ ಎರವಾಗುತ್ತಿದ್ದಿತು.

ಫಿನಿಶಿಯನರು, ಅರಬರು, ರೋಮನ್ ಮತ್ತು ಗ್ರೀಕ್ ಜನರು ಈ ವ್ಯಾಪಾರದ ಸಂಚಾಲಕರೂ ಆಗಿದ್ದರು. ಈ ನಿಮಿತ್ತವಾಗಿ ಈ ಜನರು ಕರ್ನಾಟಕದ ಕೆಲ ಭಾಗಗಳಲ್ಲಿ ಒಕ್ಕಲಾಗಿ ನೆಲೆಸಿದುದರ ಕುರುಹುಗಳೂ ಸಿಕ್ಕುತ್ತವೆ. ಮೈಸೂರು ಭಾಗದಲ್ಲಿ ಬೆಳ್ಳಿಯ ಮತ್ತು ಬಂಗಾರದ ಅನೇಕ ಪ್ರಾಚೀನ ರೋಮನ್ ಮತ್ತು ಇತರ ನಾಣ್ಯಗಳು ದೊರೆತಿವೆ. ಭಡೋಚ, ಮಿರಜಾನ, ಹೊನ್ನಾವರ, ಭಟಕಳ, ಬಾರಕೂರು, ಕಲ್ಲಿಕೋಟೆ ಮೊದಲಾದುವು ಪ್ರಾಚೀನ ಕಾಲದ ನಾಮಾಂಕಿತ ಬಂದರುಗಳಾಗಿದ್ದುವು.

ಕರಾವಳಿಯ ಮತ್ತು ಒಳನಾಡಿನ ವ್ಯಾಪಾರ ಕನ್ನಡಿಗರ ಕೈಯಲ್ಲಿಯೆ ಇದ್ದಿತು. ಕನ್ನಡಿಗರು ನಾವೆಗಳನ್ನು ಕಟ್ಟಲೂ ನೂತಾಡಲೂ ಬಲ್ಲವರಾಗಿದ್ದರು. ಶಾತವಾಹನ ನಾಣ್ಯಗಳ ಮೇಲೆ ನಾವೆಯ ಚಿತ್ರ ಸಿಕ್ಕುತ್ತದೆ. ಬಾದಾಮಿಯ ಚಾಳುಕ್ಯರು, ಗೋವೆಯ ಕದಂಬರು, ವಿಜಯನಗರದ ಅರಸರು ಹಡಗು ಪಡೆಯನ್ನು ಇಟ್ಟಿದ್ದರು. ಬನವಾಸಿ, ತಗರ (ತೇರ, ಉಸ್ಮಾನಬಾದು ಜಿಲ್ಲೆ) ಪ್ರತಿಷ್ಠಾನ ಮುಂತಾದ ಅನೇಕ ಪಟ್ಟಣಗಳು ಒಳನಾಡಿನ ವ್ಯಾಪಾರದ ಪಡುಮೂಲೆಗಳಾಗಿದ್ದವು. ಸ್ವದೇಶಿ, ಪರದೇಶಿ, ಉಭಯ, ನಾನಾದೇಸಿ ಪಂಗಡದವರು ಇಡಿಯು ವ್ಯಾಪಾರವನ್ನು ತೂಗಿಸುವ ವರ್ತಕವರ್ಗವಾಗಿದ್ದರು.

ರಾಷ್ಟ್ರಕೂಟ ಮತ್ತು ವಿಜಯನಗರ ಸಾಮ್ರಾಜ್ಯದ ವಿಸ್ತಾರ ಕಾಲದಲ್ಲಿ ಕರ್ನಾಟಕ ವ್ಯಾಪಾರ ಬಹಳವಾಗಿ ಅಭಿವೃದ್ಧಿಗೊಂಡಿತು. ಅದರಲ್ಲಿಯೂ ವಿಜಯನಗರ ಕಾಲದಲ್ಲಿ ಸಾಮ್ರಾಜ್ಯದ ಎಲ್ಲೆಗಳು ಪೂರ್ವ ಪಶ್ಚಿಮ ದಕ್ಷಿಣ ಸಮುದ್ರಗಳಿಗೆ ಚಾಚಿದ್ದುದರಿಂದ ನಾಲ್ಕು ದಿಕ್ಕಿಗೆ ವ್ಯಾಪಾರದ ಪ್ರಸಾರವಾಗಲು ಅನುಕೂಲವಾಯಿತು. ಚೀನಾ, ಪೂರ್ವ ದ್ವೀಪಕಲ್ಪ, ಲಂಕೆ, ಅರಬಿಸ್ಥಾನ, ಇಟಲಿ, ಪೋರ್ತುಗಾಲ ಮುಂತಾದ ರಾಷ್ಟ್ರಗಳೊಡನೆ ಅನಿರ್ಬಂಧವಾಗಿ ವ್ಯಾಪಾರದ ಚಟುವಟಿಕೆಗಳು ನಡೆಯತೊಡಗಿದುವು. ಪಶ್ಚಿಮ ವ್ಯಾಪಾರದ ಸ್ವಾಮಿತ್ವಕ್ಕಾಗಿ ಅರಬ ವರ್ತಕರೊಡನೆ ಪ್ರತಿಭಟಿಸುತ್ತ ಪೋರ್ತುಗೀಸರು ಮುಂದುವರಿದರು. ಅಂಕೋಲಾ, ಬಸರೂರು, ಮಂಗಳೂರು ಮೊದಲಾದ ಬಂದರುಗಳು ಊರ್ಜಿತ ಪಡೆದುವು. ವಿಜಯನಗರದ ವಶದಲ್ಲಿ ಉತ್ತಮವಾದ ಮೂರು ನೂರು ಬಂದರುಗಳು ಇದ್ದುವು ಎಂದು ಅಬ್ದುಲ್‌ರಜಾಕ್ ಹೇಳುವನು. ಈ ವ್ಯಾಪಾರಾಭಿವೃದ್ಧಿಯಿಂದ ವಿಜಯನಗರ, ಪೆನುಗೊಂಡ, ಶ್ರೀರಂಗಪಟ್ಟಣ, ಬಂಕಾಪುರ, ಇಕ್ಕೇರಿ, ಗೇರುಸೊಪ್ಪೆ, ಉದಯಗಿರಿ, ತಿರುಪತಿ, ಪುಲಿಕತ, ಕುಂಭಕೋಣ ಮೊದಲಾದ ಪಟ್ಟಣಗಳು ಹೆಚ್ಚಳ ಪಡೆದುವು. ಮುಂದೆ ವಿಜಯನಗರ ಪಟ್ಟಣವೊಂದು ಹಾಳಾದುದುರಿಂದ ಪೋರ್ತುಗೀಜರ ಇಡಿಯ ವ್ಯಾಪಾರವೇ ಕುಗ್ಗಿ ಹೋದುದನ್ನು ವಿಮರ್ಶಿಸಿದರೆ, ಈ ಕಾಲದ ವ್ಯಾಪಾರದ ಘನತೆಯ ಕಲ್ಪನೆಯಾಗುವಂತಿದೆ.

೫. ವ್ಯಾಪಾರ ಸಾಧನಗಳು

ಕಾಲಕಾಲಕ್ಕೆ ನೆರೆಯುವ ಸಂತೆ, ಜಾತ್ರೆ, ಉತ್ಸವ, ಸಮಾರಂಭ ಇವುಗಳಿಂದ ವ್ಯಾಪಾರಕ್ಕೆ ಉತ್ತೇಜನ ದೊರೆಯುತ್ತಿದ್ದಿತು. ಈಗಿನ ಕಾಲದ ಪ್ರದರ್ಶನದಂತೆ ಇವುಗಳ ಪ್ರಯೋಜನವಿದ್ದಿತು. ಎತ್ತಿನ ಬಂಡಿಗಳು, ಎತ್ತು, ಕತ್ತೆ, ಒಂಟೆ, ಆನೆ, ಕುದುರೆ ಮೊದಲಾದ ಪ್ರಾಣಿಗಳು ಒಳನಾಡಿನ ಸರಕುಗಳನ್ನು ಹೊತ್ತು ಒಯ್ಯುತ್ತಿದ್ದುವು. ಹೊಳೆ ಹಳ್ಳಗಳು ಅಡ್ಡಾದಲ್ಲಿ – ಓಡ, ತೆಪ್ಪ, ಹರಗೋಲುಗಳ ಅನುಕೂಲತೆಯಿದ್ದಿತು. ಅನೇಕ ಸಣ್ಣ ದೊಡ್ಡ ಮಾರ್ಗಗಳು ಊರೂರನ್ನು ಕೂಡಿಸಿದ್ದುವು. ಬನವಾಸಿ, ಬಾದಾಮಿ, ವಿಜಯನಗರ ಮೊದಲಾದ ರಾಜಧಾನಿಗಳಿಗೂ ದೊಡ್ಡ ದೊಡ್ಡ ಪಟ್ಟಣಗಳಿಗೂ ಬಂದರುಗಳಿಗೂ ವಿಸ್ತಾರವಾದ ರಾಜಮಾರ್ಗಗಳು ಏರ್ಪಟ್ಟಿದ್ದವು.

ವಿಜಯನಗರ ಕಾಲದಲ್ಲಿ ವಿಜಯನಗರದಿಂದ ಹೊರಟು ಬಂಕಾಪುರದ ಮೇಲೆ ಹಾಯ್ದು ಗೋವೆಯವರೆಗೆ ಒಂದು ರಾಜಮಾರ್ಗ ಹೋಗಿತ್ತು. ಬಂಕಾಪುರದಿಂದ ಹೊನ್ನಾವರಕ್ಕೆ ತಳಕಿ, ಭಟಕಳದವರೆಗೆ ಇನ್ನೊಂದು ಮಾರ್ಗ ಹಬ್ಬಿತ್ತು. ವಿಜಯನಗರ, ಪೆನುಗೊಂಡ, ಚಂದ್ರಗಿರಿ, ತಿರುಪತಿ, ಪುಲಿಕತ ಈ ಪಟ್ಟಣಗಳನ್ನು ಬಳಸಿಕೊಂಡು ಮೇಲಾಪುರಕ್ಕೆ ಮುಟ್ಟುವ ಮತ್ತೊಂದು ಮಾರ್ಗವಿದ್ದಿತು.

೬. ಆಯಾತ–ನಿರ್ಯಾತ

ಒಳನಾಡಿನ ವ್ಯಾಪಾರದಂತೆ ಹೊರನಾಡಿನ ವ್ಯಾಪಾರದ ಬಳಕೆಯೂ ಸರಕುಗಳ ಸಂಚಾರವೂ ವಿಶೇಷವಾಗಿದ್ದುವು. ಮುತ್ತು, ರತ್ನ, ದಂತ, ಮೆಣಸು, ಅರಳೆ ಮತ್ತು ರೇಶಿಮೆಯ ಬಟ್ಟೆ, ಚರ್ಮ, ಸುಗಂಧದ್ರವ್ಯ, ಅಡಕೆ, ತೆಂಗು, ತಮಾಲಪತ್ರ, ಚಂದನ, ತೇಗು, ಅಕ್ಕಿ, ಕಬ್ಬಿಣ, ಸೋರುಪ್ಪು, ಸಕ್ಕರೆ ಇವು ಸಾಮಾನ್ಯವಾಗಿ ನಿರ್ಗಮ ಸರಕುಗಳಾಗಿದ್ದವು. ಚಿನ್ನ, ಬೆಳ್ಳಿಯ ನಾಣ್ಯಗಳು, ಹವಳ, ತಾಮ್ರ, ತವರ, ಸೀಸ, ಮದ್ಯ, ಕಜ್ಜೂರು, ಮಖಮಲಿ, ಕುದುರೆ, ಆನೆ, ಚೀನಾ ರೇಶಿಮೆ ಮುಂತಾದವು ಆಯಾತ ಸರಕುಗಳಾಗಿದ್ದುವು. ನಾಡಿನ ಒಂದು ಭಾಗದಲ್ಲಿ ಹುಟ್ಟಿ ಬೆಳೆಯುವ, ಮಾಡಿ ತೆಗೆಯುವ, ಗೋಧಿ, ಬೇಳೆ, ಉಪ್ಪು, ಬೆಲ್ಲ, ಪಲ್ಯ, ಕಾಯಿ,ತೆಂಗು, ತುಪ್ಪ, ಕಬ್ಬಿಣ ಮುಂತಾದ ಪದಾರ್ಥಗಳು ಇನ್ನೊಂದು ಭಾಗಕ್ಕೆ ಹೋಗಿ ಮಾರಾಟವಾಗುತ್ತಿದ್ದುವು.

ಲಕ್ಷಾಧೀಶ, ಕೋಟ್ಯಧೀಶರಾಗಿ ಒಳಹೊರ ವ್ಯಾಪಾರದ ಸೂತ್ರಗಳನ್ನು ನಡೆಸುವ ಅನೇಕ ವ್ಯಾಪಾರ ಧುರೀಣರೂ ವರ್ತಕ ಸಾಮ್ರಾಟರೂ ಇದ್ದರು. ಹೊಯ್ಸಳರ ಕಾಲದಲ್ಲಿ ಬಲ್ಲಾಳ ಅರಸರ ಮಿತ್ರನಾದ ಅಪಾರ ಧನಪತಿ ವ್ಯವಹಾರಿಯೊಬ್ಬನಿದ್ದನು. ಈತನು ಎಲ್ಲ ವಿಧದ ರತ್ನಗಳನ್ನು ಪರೀಕ್ಷಿಸುವಲ್ಲಿ ಕುಶಲನಾಗಿದ್ದನು. ಈತನು ಮಾಳವ, ಕಳಿಂಗ, ಚೋಳ, ಪಾಂಡ್ಯ ಅರಸರ ಬೇಡಿಕೆಗಳನ್ನು ಏಕಕಾಲಕ್ಕೆ ಪೂರಯಿಸಲು ಶಕ್ತನಾಗಿದ್ದನಂತೆ. ಅರಸಿಯಕೆರೆಯ ಬ್ರಾಹ್ಮಣ ವರ್ತಕನೊಬ್ಬನು ದ್ವೀಪಾಂತರಗಳಿಂದ ಆನೆ, ಕುದುರೆ, ಮುತ್ತುಗಳನ್ನು ತರಿಸಿ ಅರಸರಿಗೆ ಮಾರುತ್ತಿದ್ದನು.[೧]

೭. ನಾಣ್ಯ–ಚಲನ

ತಾಮ್ರ, ಬೆಳ್ಳಿ ಮತ್ತು ಬಂಗಾರದ ನಾಣ್ಯಗಳು ವಿನಿಮಯ ಸಾಧನಗಳಾಗಿದ್ದುವು. ಶಾತವಾಹನರಿಂದ ಮೈಸೂರು ಅರಸರ ಕಾಲದವರೆಗೆ ಕಾರ್ಷಾಪಣ, ನಿಷ್ಕ, ದ್ರಮ್ಮ, ಸುವರ್ಣ, ಪಣ, ವರಾಹ, ಪ್ರತಾಪ (ಅರ್ಧ ವರಾಹ) ಮುಂತಾದ ನಾಣ್ಯಗಳ ಬೆಲೆಯನ್ನು ಅವುಗಳ ಬಂಗಾರದ ಬೆಲೆಯ ಪ್ರಮಾಣದಲ್ಲಿ ನಿರ್ಧರಿಸುತ್ತಿದ್ದರು. ಅನೇಕ ಊರು ಪಟ್ಟಣಗಳಲ್ಲಿ ಸೆಟ್ಟಿಗಳೂ ಉದ್ಯಮ ಶ್ರೇಣಿ ಮತ್ತು ವರ್ತಕ ಸಂಘಗಳ ಕಾರ್ಯಾಲಯಗಳೂ ಇದ್ದವು. ಇವುಗಳ ಮುಖಾಂತರ ಹುಂಡಿ,

೧. KK: p.284

ಸಾಲ, ಅಡವು, ಒತ್ತೆ ಮುಂತಾದ ಹಣಕಾಸಿನ ವ್ಯವಹಾರ ನಡೆಯುತ್ತಿದ್ದಿತು. ವರಾಹ ಕರ್ನಾಟಕದ ಸಾರ್ವತ್ರಿಕ ಚಿನ್ನದ ನಾಣ್ಯವಾಗಿತ್ತು. ಅದರ ತೂಕ ಸುಮಾರು ೫೨.೭ ಗ್ರೇನ್ ಎಂದರೆ ಸುಮಾರು ೨೬ ಗುಂಜಿಯಾಗಿದ್ದು, ಬೆಲೆ ಸುಮಾರು ೪ ರೂಪಾಯಿ ಆಗುತ್ತಿತ್ತು.

೮. ಔದ್ಯೋಗಿಕ ಸಹಕಾರ ಸಂಘಟನೆ

ಸಹಕಾರ ಸಂಘಟನೆ ಔದ್ಯೋಗಿಕ ಉನ್ನತಿಯ ಮೂಲವೆಂಬುದನ್ನು ಕನ್ನಡಿಗರು ಬಹಳ ಮೊದಲಿನಿಂದಲೂ ಅರಿತು ಅನುಷ್ಠಾನಕ್ಕೆ ತಂದಿದ್ದರು. ಇದರ ಕುರುಹುಗಳು ಕ್ರಿಪೂ. ಕಾಲದಿಂದ ಸಿಕ್ಕುತ್ತವೆ. ಶಾತವಾಹನರ ಕಾಲದಲ್ಲಿಯೇ ಊರೂರಲ್ಲಿ ನೇಕಾರ, ಅಕ್ಕಸಾಲಿಗ, ಕಮ್ಮಾರ, ಕುಂಬಾರ ಮೊದಲಾದ ಹೋರೆಗಾರರೂ ಗಾಣಿಗ, ಮೇದಾರ, ಹೂಗಾರ, ಹಣ್ಣು ಮಾರುವವ ಮೊದಲಾದ ವ್ಯಾಪಾರಿಗರೂ ಸಾಂಘಿಕವಾಗಿ ತಮ್ಮ ತಮ್ಮ ವ್ಯವಹಾರಗಳನ್ನು ಸಾಗಿಸುತ್ತಿದ್ದರು. ಇಂತಹ ಸಂಘಗಳಿಗೆ ಶ್ರೇಣಿಗಳೆಂದು ಹೆಸರು. ಈ ಸಂಘಗಳು ಬಹು ಜಾಗರೂಕವಾಗಿಯೂ ಜಯಶೀಲವಾಗಿಯೂ ತಮ್ಮ ಕಾರ್ಯಕಲಾಪಗಳನ್ನು ನೀಗಿಸುತ್ತಿದ್ದುವು. ಈ ಸಂಸ್ಥೆಗಳಿಗೆ ಅಚ್ಚುಕಟ್ಟಾದ ಘಟನೆಯೂ ವ್ಯವಹಾರ ನಿಯಮಗಳೂ ಏರ್ಪಟ್ಟಿದ್ದುವು.

ಉದ್ಯೋಗ ವ್ಯವಹಾರಗಳನ್ನು ಕ್ರಮಪಡಿಸುವುದು, ಉದ್ಯಮಕಾಂಕ್ಷಿಗಳಿಗೆ ವ್ಯಾವಹಾರಿಕ ಶಿಕ್ಷಣವನ್ನು ಕೊಟ್ಟು ವಿಶಾರದರನ್ನು ಮಾಡುವುದು, ಸಂತೆ ಪೇಟೆ ಜಾತ್ರೆಗಳನ್ನು ನೆರೆಸುವುದು, ಮಾರಾಟದ ಬೆಲೆ, ಕೂಲಿಗಾರರ ವೇತನ ಇವುಗಳನ್ನು ನಿರ್ಧರಿಸುವುದು ಮುಂತಾದವು ಈ ಸಂಘಗಳ ಕಾರ್ಯಕಲಾಪಗಳಾಗಿದ್ದುವು. ಇದಲ್ಲದೆ ಪೇಢಿ ಇಲ್ಲವೆ ಬ್ಯಾಂಕಿನಂತೆ ಸಾರ್ವಜನಿಕ ಹಣಕಾಸಿನ ವ್ಯವಹಾರವಾದರೂ ಇವುಗಳಲ್ಲಿ ನಡೆಯುತ್ತಿದ್ದಿತು. ಈ ಸಂಘಗಳಿಗೆ ಕಾವಲು ಪಡೆಯನ್ನು ಇಟ್ಟುಕೊಳ್ಳುವ ಮತ್ತು ನ್ಯಾಯನಿರ್ಣಯದ ಅಧಿಕಾರ ಇದ್ದಿತು. ಈ ಸಂಘಗಳ ಕಟ್ಟಳೆಗಳಿಗೆ ಸಮಯ ಧರ್ಮವೆನ್ನುವರು. ಇವುಗಳನ್ನು ಮೀರುವವರು ಬಹಿಷ್ಕಾರವಾಗಿ ಶಾಸನಗಳಿಗೆ ಗುರಿಯಾಗುತ್ತಿದ್ದರು.[೧]

ಈ ವಿಧವಾದ ಸಕಲ ಶ್ರೇಣಿ ಸಂಘಗಳಿಗೆ ಪ್ರಾಚೀನ ಕಾಲದಿಂದ ನಡೆದುಬಂದ ಬಲಿಷ್ಠವಾದ ಒಂದು ಕೇಂದ್ರ ಸಂಘವಿದ್ದಿತು. ಇದರ ಶಾಖೆಗಳು ಕನ್ನಡವಲ್ಲದೆ ತಮಿಳು ಮುಂತಾದ ನಾಡುಗಳಲ್ಲಿಯೂ ಹಬ್ಬಿದ್ದುವು. ಕಾಶ್ಮೀರ, ಬಂಗಾಲ, ಗುಜರಾತ ಮೊದಲಾದ ಪ್ರಾಂತಗಳ ಇಂತಹ ಸಂಘಗಳೊಡನೆ ಇದರ ಬಳಕೆ ಇದ್ದಿತು. ಇದರ ಹೆಸರು ವೀರಬಣಂಜು, ಐಹೊಳೆಯ ಐನೂರ್ವರು ಎಂಬ ಮಹಾಗಣ ಈ ಸಂಘದ ಪ್ರಧಾನ ಕಾರ್ಯಮಂಡಲಿ ಆಗಿದ್ದಿತು. ಬಳ್ಳಿಗಾವೆ, ಮುಳಗುಂದ, ಲಕ್ಷ್ಮೇಶ್ವರ ಮುಂತಾದ ಅನೇಕ ನಗರ ಸಂಘಗಳು ಆ ಮಹಾಸಂಘಕ್ಕೆ ಅಂಗಸಂಸ್ಥೆಗಳಾಗಿ ಸೇರಿದ್ದುವು. ನಾನಾದೇಸಿ, ನಕರ, ಮುಮ್ಮುರಿ ದಂಡುಗಳು

---

೧. GT: p. 283

ಮುಂತಾದ ಸ್ಥಳೀಯ ವರ್ತಕ ಕೂಟಗಳು ಈ ಮಹಾಸಂಘದ ಆಡಳಿತಕ್ಕೆ ಒಳಪಟ್ಟಿದ್ದುವು.[೧] ಈ ಸಂಘೋಪಸಂಘಗಳಿಗೆ ವಿಶಿಷ್ಟ ಘಟನೆಗಳೂ ಧ್ವಜ ಛತ್ರ ಚಾಮರಾದಿ ಸಾಂಕೇತಿಕ ಚಿಹ್ನೆಗಳೂ ಏರ್ಪಟ್ಟಿದ್ದುವು. ಅಲ್ಲಲ್ಲಿ ಈ ಸಂಘದ ಸ್ಥಳೀಯ ಅಧಿಕಾರಿಗಳು ಇದ್ದು ಅವರಿಗೆ ಪಟ್ಟಣಸ್ವಾಮಿ, ಮಹಾಪ್ರಭು, ವಡ್ಡವ್ಯವಹಾರಿ ಮುಂತಾದ ಪದವಿಗಳು ಇದ್ದುವು. ಇವೆಲ್ಲವುಗಳಿಗೆ ಪೃಥ್ವಿಸೆಟ್ಟಿ ಎಂಬುದು ಮಿಗಿಲಾದ ಪದವಿ.

ವಜ್ರದ ಬಯಸನಿಕೆ ಎಂಬುದು ಈ ಸಂಘದ ಅಧಿಕಾರ ಸೂಚಕ ಆಯುಧವಾಗಿದ್ದಿತು.[೨] ಇದರ ಸಾಕ್ಷಿಯಾಗಿ ಸಂಘದ ಕಾರ್ಯಕಲಾಪಗಳು ನಡೆಯುತ್ತಿದ್ದವು. ಈ ಸಂಘದ ಬಹುಮಾನವನ್ನು ರಾಜ್ಯಾಧಿಕಾರಿಗಳೂ ಹಾರೈಸುವವರಾಗಿದ್ದರು.

ರಾಜ್ಯಗಳು ಉರುಳಿಹೋಗುತ್ತಿರುವುದನ್ನು ಸಾಮ್ರಾಜ್ಯಗಳು ಅಳಿದು ಮಾಯವಾಗುತ್ತಿರುವುದನ್ನು ನೋಡುತ್ತ, ಸಾವಿರಾರು ವರ್ಷದವರೆಗೆ ಕುಗ್ಗದೆ ಕುಸಿಯದೆ ಅವಿರತವಾಗಿ ಬಾಳಿ, ಸುಯಂತ್ರಿತವಾಗಿ ತಮ್ಮ ವ್ಯವಹಾರಗಳನ್ನು ನಡೆಸಿಕೊಂಡು ಬಂದ ಈ ಸಂಘಗಳ ಚರಿತ್ರೆ ರಹಸ್ಯಮಯವಾಗಿದ್ದರೂ ಇದರಿಂದ ಔದ್ಯೋಗಿಕ ಸಹಕಾರ ಸಂಘಟನೆ ಹಿಂದಣ ಕನ್ನಡಿಗರಲ್ಲಿ ಹೇಗೆ ಆಳವಾಗಿ ಬೇರುವರಿದು ಅವರ ರಾಷ್ಟ್ರೀಯ ಜೀವನ ಜಯಶೀಲವಾಗಲು ಸಹಾಯವಾಯಿತು ಎಂಬುದು ಮನವರಿಕೆಯಾಗದಿರದು.

೯. ರಾಷ್ಟ್ರೀಯ ಧನ

ಇದುವರೆಗೆ ವಿವರಿಸಿದಂತೆ ಪ್ರಾಕೃತಿಕ ಸಾಮಗ್ರಿಯಿಂದಲೂ ಕೃಷಿ, ಉದ್ಯೋಗ ವ್ಯವಹಾರ, ಕೈಗಾರಿಕೆ ಮೊದಲಾದ ಆರ್ಥಿಕ ಸಾಧನಗಳಿಂದಲೂ ಕನ್ನಡನಾಡು ಸಿರಿ, ಸಂಪತ್ತು, ವೈಭವದ ನೆಲೆವೀಡಾಗಿತ್ತು. ಕರ್ನಾಟಕದ ಚಕ್ರಾಧಿಪತಿಗಳ ಬೊಕ್ಕಸ ಚಿನ್ನ ಹರಳು ಮಾಣಿಕ್ಯಗಳಿಂದ ತುಂಬಿರುತ್ತಿದ್ದಿತು. ಕೃಷ್ಣದೇವರಾಯನಲ್ಲಿ ಅಪಾರವಾದ ಗುಪ್ತಧನ ಸಂಗ್ರಹವಿದ್ದಿತೆಂದು ಪೇಸನು ಹೇಳುವನು. ವಿಜಯನಗರದಲ್ಲಿ ಒಟ್ಟುಗೂಡಿದ ಅತುಲವಾದ ಐಶ್ವರ್ಯ ರಾಶಿ ಪ್ರಪಂಚದ ಇತರ ರಾಷ್ಟ್ರಗಳ ಕಣ್ಣುಗಳನ್ನು ಕುಕ್ಕಿಸುವಂತಹದಾಗಿತ್ತು. ವಿಜಯನಗರ ಸಾಮ್ರಾಜ್ಯದ ಒಟ್ಟು ಆದಾಯ ಸುಮಾರು ೪೦ ಕೋಟಿ ರೂಪಾಯಿ ಇದ್ದು ಅದರಲ್ಲಿ ಸುಮಾರು ೫ ಕೋಟಿ ನೆಲದ ಆದಾಯವಾಗಿತ್ತು ಎಂದು ಚರಿತ್ರಕಾರರು ತರ್ಕಿಸಿರುವರು.[೩] ಕರ್ನಾಟಕ ಸಾಮ್ರಾಜ್ಯ ಕಾಲದ ಸುಮಾರು ಸಾವಿರ ವರ್ಷಗಳವರೆಗೆ ರಾಷ್ಟ್ರೀಯ ಉತ್ಪತ್ತಿ ಸ್ವಲ್ಪ ಹೆಚ್ಚು

೧. ವೀರಬಣಂಜುಗಳು ವೀರಶೈವ ಇಲ್ಲವೆ ಲಿಂಗಾಯತ ಮತದವರಾಗಿರಲಿಲ್ಲ. ಬಸವೇಶ್ವರನಿಗೆ ಬಹುಕಾಲ ಮುಂಚಿನಿಂದ ಈ ಸಂಘ ಬಾಳಿದ್ದು ಜೈನ ಮೊದಲಾದ ನಾನಾ ಜಾತಿ ಮತೀಯರು ಇದರಲ್ಲಿ ಸೇರಿದ್ದರು. ಇದು ಕೇವಲ ಔದ್ಯೋಗಿಕ ಸಂಘವಾಗಿದ್ದಿತು.

೨. ಇದರ ಸ್ವರೂಪದ ಕಲ್ಪನೆ ಸ್ಪಷ್ಟವಾಗುವಂತೆ ಇಲ್ಲ. ದಂಡಿಗೆ, ಬೆಳ್ಳಿಯ ಬೆತ್ತ, ಗದೆ ಮೊದಲಾದುವುಗಳಂತೆ ಇದೊಂದು ಅಲಂಕಾರವಾದ ಸಾಧನ ವಿಶೇಷವಾಗಿರಬೇಕು.

೩. SPL: I.p.241

ಕಡಮೆ ಸಾಧಾರಣವಾಗಿ ಇಷ್ಟಕ್ಕೆ ಇದ್ದಿತು ಎಂದು ಊಹಿಸಬಹುದು. ಇದರಿಂದ ಇಡಿಯ ಕನ್ನಡನಾಡಿನ ಆರ್ಥಿಕ ವಿಸ್ತಾರದ ಕಲ್ಪನೆ ಮಾಡಿಕೊಳ್ಳಬಹುದು.

೧೦. ಜನಸಂಖ್ಯೆ

ಚಾರಿತ್ರಿಕ ಕಾಲದ ಕರ್ನಾಟಕದ ಜನಸಂಖ್ಯೆಯನ್ನು ನಿರ್ಧರಿಸಲು ಸಾಕಷ್ಟು ಸಮರ್ಪಕವಾದ ಪ್ರಮಾಣಗಳು ಸಿಕ್ಕುವುದಿಲ್ಲ. ಸೈನ್ಯಬಲದ ಮೇಲಿಂದ ಜನಸಂಖ್ಯೆಯನ್ನು ಪರಿಗಣಿಸುವ ಪದ್ಧತಿಯೊಂದಿದೆ. ಕಳೆದ ಮಹಾಯುದ್ಧದಲ್ಲಿ. ಜರ್ಮನಿ, ಫ್ರಾನ್ಸ್ ಮೊದಲಾದ ರಾಷ್ಟ್ರಗಳು ಉತ್ತಮವಾದ ಸೇನಾಸನ್ನಾಹದಿಂದ ಸಜ್ಜುಗೊಂಡಿದ್ದುವು. ಈ ಸೇನಾ ಸಂಖ್ಯೆ ಅಲ್ಲಿಯ ಜನಸಂಖ್ಯೆಗೆ ಸುಮಾರು ೩೦ ರಲ್ಲಿ ಒಂದರಂತೆ ಆಗುತ್ತದೆ. ಕರ್ನಾಟಕ ಯಾವಾಗಲೂ ಸೇನಾಬಲ ಸಂಪನ್ನವಾದ ರಾಷ್ಟ್ರ. ಕರ್ನಾಟಕದ ಈ ಸೈನ್ಯಶಕ್ತಿ ಇಂದಿನ ಸನ್ನದ್ಧ ರಾಷ್ಟ್ರಗಳಷ್ಟು ಆಗಿದ್ದಿತು ಎಂದು ಗ್ರಹಿಸಿ ಗುಣಿಸಿದಲ್ಲಿ ಕರ್ನಾಟಕದ ಜನಸಂಖ್ಯೆಯ ಸಾಧಾರಣ ಲೆಕ್ಕ ಸಿಕ್ಕುವುದು. ರಾಷ್ಟ್ರಕೂಟ ಮತ್ತು ವಿಜಯನಗರದ ಕಾಲದಲ್ಲಿ ಕರ್ನಾಟಕದ ಸೇನಾಬಲ ಸುಮಾರು ೧೦ ಲಕ್ಷದವರೆಗೆ ಇದ್ದಿತು ಎಂದು ತಿಳಿಯುತ್ತದೆ.[೧] ಈ ಅಂಕೆಯಿಂದ ಮೇಲಿನ ರೀತಿಯಂತೆ ಲೆಕ್ಕ ಹಾಕಿದರೆ ಕರ್ನಾಟಕದ ಜನಸಂಖ್ಯೆ ಸುಮಾರು ಮೂರು ಕೋಟಿಯಷ್ಟು ಆಗುತ್ತದೆ.

ಈ ಜನಸಂಖ್ಯೆ ಹಳ್ಳಿ ಪಟ್ಟಣಗಳಲ್ಲಿ ಹಂಚಿಹೋಗಿತ್ತು. ಪಟ್ಟಣಕ್ಕಿಂತ ಹಳ್ಳಿಯ ಸಂಖ್ಯೆ ಬಹಳ ಹೆಚ್ಚಾಗಿದ್ದರೂ ಪಟ್ಟಣಗಳು ಬಹಳ ಕಡಮೆಯಾಗಿರಲಿಲ್ಲ. ರಾಷ್ಟ್ರೀಯ ಐಸಿರಿಗೆ ಅನುಗುಣವಾಗಿಯೂ ವ್ಯಾಪಾರೋದ್ಯಮಗಳ ಅಭಿವೃದ್ಧಿಯ ಫಲವಾಗಿಯೂ ರಾಜಕೀಯ, ಧಾರ್ಮಿಕ ಆಂದೋಳನಗಳ ಕೇಂದ್ರವಾಗಿಯೂ ಬನವಾಸಿ, ತಳಕಾಡು, ಹಲಸಗಿ, ಹಾನಗಲ್ಲು, ಸವದತ್ತಿ, ಬಾದಾಮಿ, ಮಳಖೇಡ, ಕಲ್ಯಾಣ, ದೇವಗಿರಿ, ದೋರಸಮುದ್ರ (ಹಳೆಯಬೀಡು), ವಿಜಯನಗರ, ಪೆನುಗೊಂಡ, ಶ್ರೀರಂಗಪಟ್ಟಣ, ಬಾರಕೂರು, ಬಂಕಾಪುರ, ರಾಯಚೂರು, ಮುದುಗಲ್ ಮೊದಲಾದ ನೂರಾರು ಪಟ್ಟಣಗಳು ಅಭ್ಯುದಯ ಪಡೆದವು. ವಿಜಯನಗರವನ್ನು ಸರಿಗಟ್ಟುವ ನಗರಗಳು ಆ ಕಾಲದ ಪೃಥ್ವೀತಲದಲ್ಲಿಯೆ ಇರಲಿಲ್ಲ. ಕರಾವಳಿಯನ್ನೊಳಗೊಂಡು ಎಲ್ಲ ಪ್ರದೇಶಗಳು ಹಳ್ಳಿ, ಪಟ್ಟಣ, ನಗರಗಳಿಂದ ಕಿಕ್ಕಿರಿದು ಜನ ಪ್ರಪೂರ್ಣವಾಗಿದ್ದುವು.

೧೧. ಆರ್ಥಿಕ ತರಗತಿ

ಮೊದಲಿನ ಕಾಲದಲ್ಲಿ ಕರಕಂದಾಯಗಳನ್ನು ಪದಾರ್ಥರೂಪದಿಂದ ಎತ್ತುವ ಪದ್ಧತಿಯಿದ್ದಿತು. ಈಚೆಯ ಕಾಲಕ್ಕೆ ಬರಬರುತ್ತ ನಾಣ್ಯರೂಪದಿಂದ ಎತ್ತುವ ರೂಢಿ ಬಳಕೆಗೆ ಬಂದಿತು. ನೆಲದ ತರಗತಿ ಮತ್ತು ಹುಟ್ಟುವಳಿ ಇವುಗಳಿಗೆ ಅನುಗುಣವಾಗಿ

---

೧. ರಾಯಚೂರು ಯುದ್ಧದಲ್ಲಿ ವಿಜಯನಗರದ ಸೈನ್ಯ ೭ ಲಕ್ಷ ಇದ್ದಿತು ಎಂದು ನ್ಯೂನಿಝನು ಹೇಳುವನು. ಸಾಮ್ರಾಜ್ಯದ ಇಡಿಯ ಸೈನ್ಯ ಇದಕ್ಕೂ ಹೆಚ್ಚಾಗಿ ಸುಮಾರು ೧೦ ಲಕ್ಷವೆಂದು ಇಟ್ಟುಕೊಂಡರೆ ತಪ್ಪಾಗಲಾರದು.

ತೆರಿಗೆಯನ್ನು ನಿರ್ಧರಿಸುತ್ತಿದ್ದರು. ದೇವಾಲಯ, ಮಠ ಮುಂತಾದ ಧರ್ಮ ಕಾರ್ಯಗಳಿಗೆ ದಾನವಾಗಿ ನೀಡಿದ ನೆಲಗಳಿಗೆ ತೆರಿಗೆ ಇರುತ್ತಿರಲಿಲ್ಲ. ಹಿಂದಿನ ಕಾಲದಲ್ಲಿ ನೆಲ ತೆರಿಗೆ ಬಹಳ ಕಡಮೆ ಇದ್ದಿತು. ರಾಷ್ಟ್ರಕೂಟರ ಕಾಲದಲ್ಲಿ ಅದು ನೂರಕ್ಕೆ ಇಪ್ಪತ್ತರವರೆಗೆ ಆಯಿತು. ಮುಂದೆ ವಿಜಯನಗರ ಕಾಲದಲ್ಲಿ ಕೆಲವು ಸಲ ನೂರಕ್ಕೆ ಐವತ್ತರವರೆಗೆ ಏರಿತು.

ಒಕ್ಕಲಿಗನೂ ವರ್ತಕನೂ ಅನೇಕ ಕರ, ಸುಂಕ, ಕಾಣಿಕೆಗಳನ್ನು ಕೊಡಬೇಕಾಗುತ್ತಿತ್ತು. ಹೊಯ್ಸಳರ ಕಾಲದಲ್ಲಿ ಒಂದು ಶಾಸನದಲ್ಲಿ ನೇಗಿಲ ಕರ, ದಂಡಿನ ಕರ, ಉತ್ಸವ ಸಮಾರಂಭಗಳ ಕರ, ಊರ ಮಾರಾಟ, ಅರಮನೆ ಕಾಣಿಕೆ ಮುಂತಾದ ಕರಗಳ ನಿರ್ದೇಶ ಬರುವುದು.[೧] ವಿಜಯನಗರ ಕಾಲದಲ್ಲಿ ಕರಗಳ ಸಂಖ್ಯೆ ಇನ್ನೂ ಹೆಚ್ಚಾಗಿದ್ದಿತು. ಜಂಗಮರು, ಜೀಯರು, ಮಠಗಳು, ಕೂಟಗಳು, ಮಾದಿಗರು, ಸೂಳೆಯರು, ಮದುವೆ ಮುಂತಾದುವುಗಳ ಮೇಲೆ ಕರವಿದ್ದಿತು. ಇವುಗಳಲ್ಲಿ ಕೆಲವು ತಲೆಭಾರವಾಗಿ ಜನತೆಯ ಅಸಂತೋಷ ಹೆಚ್ಚಾಗಲು ಅವುಗಳನ್ನು ತೆಗೆದುಹಾಕಲಾಯಿತು.

ತೆರಿಗೆಗಳ ಸಂಖ್ಯೆ ಹೆಚ್ಚಾಗಿದ್ದರೂ ಅವುಗಳಿಂದ ಜನರ ಸುಖ ಸೌಕರ್ಯಗಳಿಗೆ ಹೆಚ್ಚಾಗಿ ಆತಂಕವಾಗುತ್ತಿರಲಿಲ್ಲ. ಜೀವನಕ್ಕೆ ಬೇಕಾಗುವ ಪದಾರ್ಥಗಳು ಎಲ್ಲ ಕಡೆಯಲ್ಲಿ ವಿಪುಲವಾಗಿಯೂ ಸುಲಭವಾಗಿಯೂ ದೊರೆಯುತ್ತಿದ್ದವು. ರಾಷ್ಟ್ರಕೂಟರ ಕಾಲದಲ್ಲಿ ಈಗಿನ ಪರಿಮಾಣದಂತೆ ಒಂದು ರೂಪಾಯಿಗೆ ೩೨ ಸೇರು ಅಕ್ಕಿ, ೨೫ ಸೇರು ಬೇಳೆ, ೭೫ ಸೇರು ಉಪ್ಪು ಸಿಗುತ್ತಿತ್ತು. ಆಕಳ ಮತ್ತು ಎಮ್ಮೆಯ ಬೆಲೆ ಸುಮಾರು ೨ ಮತ್ತು ೪ ರೂ ಇದ್ದಿತು. ಸಾಮಾನ್ಯವಾಗಿ ೯ ರೂಪಾಯಲ್ಲಿ ಒಬ್ಬ ಬಡವನು ಒಂದು ವರ್ಷದವರೆಗೆ ಉದರನಿರ್ವಾಹ ಮಾಡಬಹುದಾಗಿತ್ತು. ಶ್ರಮಜೀವಿಗಳಿಗೆ ಚೆನ್ನಾಗಿ ಪ್ರತಿಫಲ ದೊರೆಯುತ್ತಿತ್ತು. ಒಬ್ಬ ಕೂಲಿಗಾರನು ವರ್ಷಕ್ಕೆ ಸುಮಾರು ೩೦ ರೂಪಾಯಷ್ಟು ಗಳಿಸುತ್ತಿದ್ದನು.[೨]

ವಿಜಯನಗರ ಕಾಲದಲ್ಲಿ ದೇಶ ಧನಧಾನ್ಯ ಸಮೃದ್ಧವಾಗಿದ್ದಿತು. ವಿಜಯನಗರ ಮೊದಲಾದ ಪಟ್ಟಣಗಳಲ್ಲಿ ದೇಶವಿದೇಶಗಳಿಂದ ಬಂದ ನಾನಾ ವಿಧ ಸುಖವಿಲಾಸ ವಸ್ತುಗಳು ದೊರೆಯುತ್ತಿದ್ದುವು. ವಿಜಯನಗರದಷ್ಟು ಸಲಕರಣೆ ಸಾಮಗ್ರಿಯಿಂದ ಸಂಪೂರ್ಣವಾದ ನಗರ ಲೋಕದಲ್ಲಿ ಬೇರೊಂದು ಇಲ್ಲವೆಂದು ಪೇಜನು ಹೇಳಿರುವನು. ವಿಜಯನಗರ ಪೇಟೆಯಲ್ಲಿ ಪದಾರ್ಥಗಳು ಬಹಳ ಅಗ್ಗವಾಗಿ ಕ್ರಯಕ್ಕೆ ದೊರೆಯುತ್ತಿದ್ದುವು. ಒಂದಾಣೆಗೆ ಎರಡು ಕೋಳಿ, ಇಲ್ಲವೆ ೮ ಪಾರಿವಾಳಗಳು ದೊರೆಯುತ್ತಿದ್ದುವು. ಒಂದು ಕುರಿಯ ಬೆಲೆ ೫ ರಿಂದ ೮ ಆಣೆ ಆಗುತ್ತಿತ್ತು. ಒಂದು ತಿಂಗಳಿಗೆ ೨೦–೨೫ ರೂ. ಗಳಿಸುವ ಒಬ್ಬ ಕುದುರೆ ಸವಾರನು ತಾನು,

೧. RK.p.398

೨. SPL: I.pp.151-152

ತನ್ನ ಕುದುರೆ, ಒಬ್ಬ ಸೇವಕಿ ಇಷ್ಟು ಜನರನ್ನು ಸುಖವಾಗಿ ಸಲಹಿಕೊಂಡು ಬಾಳುತ್ತಿದ್ದನು.[೧] ಈ ಅಗ್ಗಳಿಕೆ ವಿಜಯನಗರದ ತರುವಾಯ ಸುಮಾರು ಎರಡು ಶತಮಾನಗಳವರೆಗೆ ಹೆಚ್ಚು ಕಡಮೆ ತಾಳಿತು.

ಸಿರಿವಂತರು, ಸಾಮಾನ್ಯರು ಮತ್ತು ಬಡವರು ಹೀಗೆ ಜನರನ್ನು ಮೂರು ಆರ್ಥಿಕ ತರಗತಿಗಳಲ್ಲಿ ವಿಂಗಡಿಸಬಹುದಾಗಿತ್ತು. ಸಿರಿವಂತರ ಬಾಳಿಕೆ ವಿಲಾಸ ಸಡಗರಗಳಿಂದ ಕೂಡಿದುದಾಗಿದ್ದರೂ ಇತರರನ್ನು ತಿರಸ್ಕರಿಸುವಂತಹ ವೈಷಮ್ಯದಿಂದ ದೂಷಿತವಾಗಿರಲಿಲ್ಲ. ಆರ್ಥಿಕ ಸ್ಪರ್ಧೆ ಮತ್ತು ಜೀವನಾರ್ಥ ಕಲಹದ ಮೇಲೆ ಉಗ್ರತೆಯ ಗಾಳಿ ಸುಳಿಯಲು ಅವಕಾಶವಿಲ್ಲದುದರಿಂದ ಸುಖ ಸಮಾಧಾನ ಮತ್ತು ಅಲ್ಪಸಂತುಷ್ಟಿಯೇ ಸಾಮಾನ್ಯರ ಮತ್ತು ಬಡವರ ಜೀವನದ ಬೇರು ಆಗಿದ್ದಿತು. ❑

---

೧. VCV: p. 225 ಮಾಂಸಾಹಾರಿಯಾದ ಪರಕೀಯ ಪ್ರವಾಸಿಯ ಮಾತುಗಳು ಮೇಲಿನ ಸಂಗತಿಗಳಿಗೆ ಆಧಾರವಾಗಿರುವುದರಿಂದ ಕೋಳಿ ಮುಂತಾದ ಪ್ರಾಣಿಗಳ ವಿಚಾರ ಇಲ್ಲಿ ಬಂದಿರುವುದು.

ಸಂದರ್ಭ ಗ್ರಂಥಗಳು

(ಅವುಗಳ ಸಂಕ್ಷೇಪದೊಡನೆ)

೧. **Education in Ancient India** by Dr. Altekar (EAI)

೨. **Rashtrakutas and their times** by Dr. Altekar (RK)

೩. **Antiquities of India** by Dr. Bernett (AI)

೪. **Early History of the Deccan** by Dr. Bhandarkar (EHD)

೫. **Gangas of Talkad** by Krishna Rao (GT)

೬. **Kadamba Kula** by Moreas (KK)

೭. **Mysore and Coorg from Inscriptions** by Rice (MCI)

೮. **Early History of India** by Smith (EHI)

೯. **Medieval Jainism** by Dr. Saletore (MJ)

೧೦. **Social & Political Life in Vijayanagar** by Dr. Saletore (SPL)

೧೧. **Aiyengar Commemoration Volume** (ACV)

೧೨. **Vijayanagar Commemoration Volume** (VCV)

೧೩. **Epigraphia Carnatica** (EC)

೧೪. **Epigraphia Indica** (EI)

೧೫. **Annals of the Bhandarkar Oriental Research Institute** (ABORI)

೧೬. **Indian Culture through Ages** by Venkateswara

೧೭. **Pre- Aryan Tamil Culture** by P.T. Srinivasa Aiyengar

೧೮. **Arts & Cratfs of India & Ceylon**

೧೯. **Buchanan's Travels**

೨೦. **Medieval Hindu India** by Vaidya

೨೧. **Corporate Life in Ancient India** by Mazumdar

೨೨. **Forgotten Empire** by Sewell

೨೩. **Castes and Tribes of Southern India** by Thurston

೨೪. **Hindu Castes and Tribes** by Sherring

೨೫. **Mysore Gazetteer** by Hayavadana Rao

೨೬. **Imperical Gazetteers of India**

೨೭. **District Gazetteers**

೨೮. **Census Reports**

೨೯. **Jain Antiquary Journal**

೩೦. **Mythic Society Journal**

೩೧. ಕವಿಚರಿತೆ (ಮಹಾಮಹೋಪಾಧ್ಯಾಯ.ರಾ. ನರಸಿಂಹಾಚಾರ್ಯ)
೩೨. ಕವಿರಾಜಮಾರ್ಗ (ನೃಪತುಂಗ)
೩೩. ವಿಜಯನಗರ ಸಾಮ್ರಾಜ್ಯ (ಪಾಂ. ಭಿ. ದೇಸಾಯಿ)
೩೪. ಮಿಂಚಿದ ಮಹಿಳೆಯರು(ಪಾಂ. ಭಿ. ದೇಸಾಯಿ)
೩೫. ಭರತೇಶ ವೈಭವ (ರತ್ನಾಕರವರ್ಣಿ)
೩೬. ಅರುಣೋದಯ: ವಿಜಯನಗರ ಸಂಚಿಕೆ
೩೭. ಸಾಹಿತ್ಯ ಪರಿಷತ್ ಪತ್ರಿಕೆ
೩೮. ಮುಂಬಯಿ ಕರ್ನಾಟಕ ಗೆಜೆಟಿಯರ್ (ವೆಂಕಟರಂಗೋ ಕಟ್ಟಿ)

ಕನ್ನಡ ಸಾಹಿತ್ಯ ಪರಿಷತ್ತಿನಿಂದ
ಮರುಮುದ್ರಣಗೊಳ್ಳುತ್ತಿರುವ ಮತ್ತು ಹೊಸದಾಗಿ
ಮುದ್ರಿತವಾಗುತ್ತಿರುವ ವಿವಿಧ ಪ್ರಕಾರಗಳ
ಪುಸ್ತಕಗಳನ್ನು ಸಹೃದಯರು ಮೆಚ್ಚಿ ಸ್ವೀಕರಿಸಲು
ಯೋಗ್ಯವಾಗುವಂತೆ ಆಕರ್ಷಕ ವಿನ್ಯಾಸಗಳಲ್ಲಿ
ಸಿದ್ಧಪಡಿಸಿದ ಮೇಲೆ ಅವುಗಳ ಮಾರಾಟದ ಪ್ರಮಾಣ
ಹೆಚ್ಚುತ್ತಿರುವುದನ್ನು ಕಂಡು ನನಗೆ ಸಂತೋಷವಾಗಿದೆ.
ಓದುಗರು ಬಯಸುವ ಪುಸ್ತಕಗಳನ್ನು ಅವರ ಕೈಗೆ
ತಲಪುವಂತೆ ಮಾಡುವುದೇ ಪುಸ್ತಕೋದ್ಯಮದ
ಪ್ರಾಥಮಿಕ ಆಶಯ.

ಈ ಉದ್ಯಮವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ,
ಕಾಲಕಾಲಕ್ಕೆ ಬದಲಾಗುತ್ತಿರುವ ಓದುಗರ ಅಭಿರುಚಿಗೆ
ಸ್ಪಂದಿಸುತ್ತ, ಆ ಕ್ಷೇತ್ರದಲ್ಲಿ ಬಹುವೇಗವಾಗಿ
ಸಾಗುತ್ತಿರುವ ಪ್ರಕಾಶಕರ ನಡುವೆ ಕನ್ನಡ ಸರಸ್ವತಿಯ
ಆರಾಧನೆ ಮಾಡುತ್ತಿದ್ದೇವೆಂದು ಭಾವಿಸುವುದರ
ಜೊತೆಗೆ ಹೊಸಕಾಲದ ಅಗತ್ಯಕ್ಕೆ ಅನುಗುಣವಾಗಿ
ಬದಲಾಗುವುದೇ ಜೀವಂತಿಕೆಯ ಲಕ್ಷಣ ಎಂದು
ಕನ್ನಡ ಸಾಹಿತ್ಯ ಪರಿಷತ್ತು ಪರಿಗಣಿಸಿದೆ.

ಪುಂಡಲೀಕ ಹಾಲಂಬಿ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮